prajavani.net prajavani | ಬುಧವಾರ, ಫೆಬ್ರುವರಿ 18, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 49 | ಪುಟ 16 | www.prajavani.net

ಸಮ್ರಾ ದಾಖಲೆ
ಕೆನಡಾದ ಯುವರಾಜ್ ಸಮ್ರಾ ಮಂಗಳವಾರ ನ್ಯೂಜಿಲೆಂಡ್ ವಿರುದ್ಧ 110 ರನ್ ಬಾರಿಸಿದರು. ಈ ಮೂಲಕ ಟಿ20 ವಿಶ್ವಕಪ್‌ನಲ್ಲಿ ಶತಕ ಹೊಡೆದ ಅತಿ ಕಿರಿಯ ಆಟಗಾರ ಎನಿಸಿದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 83,450 | ನಿಫ್ಟಿ 25,725 | $/₹ 90.72 | ಚಿನ್ನ (Std. 10g) ₹1,59,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,52,300 (ಬೆಂಗಳೂರು)

‘ಮುಂದೆ ಸಿದ್ದರಾಮಯ್ಯ ಹೇಳ್ತಾರೆ’

ಮಹದೇವಪ್ಪ, ಬೇರೆಯವರಿಗೆಲ್ಲ ನಾನು ಉತ್ತರ ಕೊಡುವುದಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: ‘ನಾಯಕತ್ವ ವಿಚಾರದಲ್ಲಿ ನಾನು, ಸಿದ್ದರಾಮಯ್ಯ ಮತ್ತು ಹೈಕಮಾಂಡ್ ಎಲ್ಲರೂ ಸೇರಿ ತೆಗೆದುಕೊಂಡಿರುವ ತೀರ್ಮಾನ ಏನು ಎಂಬುದನ್ನು ಸಮಯ ಬಂದಾಗ ಸಿದ್ದರಾಮಯ್ಯ ಅವರೇ ತಿಳಿಸುತ್ತಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಈ ತೀರ್ಮಾನ ಕದ್ದುಮುಚ್ಚಿ ಮಾಡಿಕೊಂಡಿರುವ ಗುಟ್ಟಿನ ವ್ಯವಹಾರವಲ್ಲ’ ಎಂದೂ ಹೇಳಿದರು.

ಆ ಮೂಲಕ, ‘ಅಧಿಕಾರ ಹಂಚಿಕೆ’ ವಿಚಾರದಲ್ಲಿ ತಮ್ಮ ಮತ್ತು ಸಿದ್ದರಾಮಯ್ಯ ಮಧ್ಯೆ ಪಕ್ಷದ ವರಿಷ್ಠರ ಸಮ್ಮುಖದಲ್ಲಿ ಒಪ್ಪಂದ ಆಗಿರುವುದು ನಿಜ ಎಂದು ಡಿ.ಕೆ. ಶಿವಕುಮಾರ್ ಪುನರುಚ್ಚರಿಸಿದ್ದಾರೆ. ‘ಆ ಒಪ್ಪಂದ ಏನು ಎಂಬುದು ಸಮಯ ಬಂದಾಗ ತಿಳಿಯುತ್ತದೆ. ಸಿದ್ದರಾಮಯ್ಯ ಅವರೇ ಸಮಯ ಬಂದಾಗ ರಾಜ್ಯದ ಜನಕ್ಕೆ ಆ ಸಂದೇಶ ನೀಡುತ್ತಾರೆ’ ಎಂದೂ ಹೇಳುವ ಮೂಲಕ ಅವರು ಕುತೂಹಲ ಮೂಡಿಸಿದ್ದಾರೆ.

ಬೆಳಗಾವಿಯಲ್ಲಿ ಡಿಸೆಂಬರ್‌ನಲ್ಲಿ ನಡೆದ ಅಧಿವೇಶನದ ವೇಳೆ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಶಾಸಕರು ಮತ್ತು ಸಿದ್ದರಾಮಯ್ಯ ನಡುವೆ ಬಿಸಿಬಿಸಿ ಚರ್ಚೆಯ ಮಧ್ಯೆ ‘ನಾಯಕತ್ವ ಬದಲಾವಣೆ’ ವಿಷಯ ಪ್ರಸ್ತಾಪವಾದಾಗ, ‘ಮುಖ್ಯಮಂತ್ರಿ ಸ್ಥಾನಕ್ಕೆ ಎರಡೂವರೆ ವರ್ಷದ ಒಪ್ಪಂದ ಆಗಿಲ್ಲ. ನಾನು ಐದು ವರ್ಷಕ್ಕೆ ಆಯ್ಕೆಯಾಗಿದ್ದೇನೆ. ಹೈಕಮಾಂಡ್ ನನ್ನ ಪರ’ ಎಂದು ಸಿದ್ದರಾಮಯ್ಯ ಸ್ಪಷ್ಟ ಧ್ವನಿಯಲ್ಲಿ ಹೇಳಿದ್ದರು.

ಅದೇ ದಿನ ಅಂಕೋಲಾದಲ್ಲಿ ಮಾತನಾಡಿದ್ದ ಡಿ.ಕೆ.ಶಿವಕುಮಾರ್, ‘ನನ್ನ ಮತ್ತು ಸಿದ್ದರಾಮಯ್ಯ ನಡುವೆ ಒಪ್ಪಂದ ಆಗಿದೆ. ಅದರಂತೆ ಇಬ್ಬರೂ ಸೇರಿ ಹೈಕಮಾಂಡ್ ಅನ್ನು ಒಪ್ಪಿಸಿದ್ದೇವೆ’ ಎಂದು ವಾದ ಮುಂದಿಟ್ಟಿದ್ದರು.

ಅಧಿಕಾರ ಹಂಚಿಕೆ ವಿಚಾರವಾಗಿ ಸಚಿವ ಎಚ್‌.ಸಿ. ಮಹದೇವಪ್ಪ ನೀಡಿರುವ ಹೇಳಿಕೆ ಬಗ್ಗೆ ಸುದ್ದಿಗಾರರು ಕೇಳಿದಾಗ, ‘ಮಹದೇವಪ್ಪ ಬಹಳ ದೊಡ್ಡವರು. ಈಗ ಅವರೂ ನಮ್ಮ ಹೈಕಮಾಂಡ್ ಭಾಗ. ಅವರ ಬಗ್ಗೆ ನಾನು ಏನನ್ನೂ ಮಾತನಾಡುವುದಿಲ್ಲ. ಈ ಬಗ್ಗೆ ಪಕ್ಷವೇ ತೀರ್ಮಾನ ಮಾಡಲಿ’ ಎಂದರು.

‘ನಾಯಕರ ಹೇಳಿಗೆ ಬಗ್ಗೆ ಮುಖ್ಯಮಂತ್ರಿ ಹಾಗೂ ಹೈಕಮಾಂಡ್ ನಾಯಕರು ಕ್ರಮ ತೆಗೆದು ಕೈಗೊಳ್ಳುತ್ತಾರೆ. ಮಹದೇವಪ್ಪನಿಗೆ ಹಾಗೂ ಬೇರೆಯವರಿಗೆ ನಾನು ಉತ್ತರ ನೀಡುವುದಿಲ್ಲ’ ಎಂದು ಹೇಳಿದರು.

▸13

ಕಟ್ಟಾ ಕಾಂಗ್ರೆಸಿಗರು ನಿಯತ್ತಿನ ನಾಯಿಗಳು: ಡಿ.ಕೆ. ಸುರೇಶ್

‘ಕಟ್ಟಾ ಕಾಂಗ್ರೆಸಿಗರು ಬೀದಿ ನಾಯಿಗಳಲ್ಲ. ನಿಯತ್ತಿನ ನಾಯಿಗಳು’ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಅವರು ಸಚಿವ ಎಚ್‌.ಸಿ. ಮಹದೇವಪ್ಪ ಅವರಿಗೆ ತಿರುಗೇಟು ನೀಡಿದರು.

ಡಿ.ಕೆ.ಸುರೇಶ್

ಅಧಿಕಾರ ಹಂಚಿಕೆ ವಿಚಾರವಾಗಿ ಮಾತನಾಡಿದ್ದ ಮಹದೇವಪ್ಪ, ‘ಬಾಲ ನಾಯಿಯನ್ನೇ ಅಲ್ಲಾಡಿಸಬಾರದು’ ಎಂದು ಸೋಮವಾರ ಹೇಳಿಕೆ ನೀಡಿದ್ದರು.

ಈ ಬಗ್ಗೆ ಸುದ್ದಿಗಾರರು ಮಂಗಳವಾರ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸುರೇಶ್, ‘ಅವರು ಯಾರನ್ನು ಉಲ್ಲೇಖಿಸಿ ಈ ರೀತಿ ಹೇಳಿದ್ದಾರೆ ಎಂಬ ಮಾಹಿತಿ ಇಲ್ಲ. ಆದರೆ, ಕಟ್ಟಾ ಕಾಂಗ್ರೆಸಿಗರು ಯಜಮಾನನ ಋಣ ಸ್ಮರಣೆ ಮಾಡಿಕೊಂಡು, ಅದನ್ನು ತೀರಿಸುವ ನಾಯಿಗಳು’ ಎಂದರು.

‘ಹಾಗಾದರೆ ಹೊರಗಡೆಯಿಂದ ಬಂದವರು ಬೀದಿ ನಾಯಿಗಳೇ’ ಎಂದು ಕೇಳಿದಾಗ, ‘ನಾನು ಹಾಗೆಂದು ಹೇಳಿಲ್ಲ. ಕಟ್ಟಾ ಕಾಂಗ್ರೆಸಿಗರು ಋಣ ತೀರಿಸುವ ವ್ಯಕ್ತಿತ್ವ ಹೊಂದಿರುವವರು. ಈ ನಾಯಿಗಳು ಬೀದಿ ನಾಯಿಗಳೇ ಆಗಿರಲಿ, ಸಾಕಿದ ನಾಯಿಗಳೇ ಆಗಿರಲಿ, ಯಜಮಾನನ ಋಣ ತೀರಿಸುತ್ತವೆಯೇ ಹೊರತು, ಬೇರೆ ರೀತಿ ಮಾಡುವುದಿಲ್ಲ. ಅದು ನಿಯತ್ತಿನ ನಾಯಿಗಳ ಸ್ವಭಾವ’ ಎಂದರು.

> ಮುಖ್ಯಮಂತ್ರಿ ಬದಲಾವಣೆ ಕುರಿತ ವಿಷಯದಲ್ಲಿ ಹೈಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೆ ಬದ್ಧ. ರಾಜ್ಯದಲ್ಲಿ ಈ ಬಗ್ಗೆ ಚರ್ಚಿಸುವುದು ಅಕ್ಷಮ್ಯ ಅಪರಾಧ
> **ಲಕ್ಷ್ಮಿ ಹೆಬ್ಬಾಳಕರ,** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

> ಸಿದ್ದರಾಮಯ್ಯ ಬಜೆಟ್ ಮಂಡಿಸುತ್ತಿದ್ದಾರೆಂದರೆ ಯಥಾಸ್ಥಿತಿ ಎಂದೇ ಅರ್ಥ. ಮಹತ್ವದ ರಾಜಕೀಯ ಬದಲಾವಣೆಯಾಗುತ್ತದೆ ಎಂದು ಅಂದುಕೊಂಡರೆ ಸುಳ್ಳು
> **ಕೆ.ಎನ್. ರಾಜಣ್ಣ,** ಶಾಸಕ

ಇನ್ನೇನೂ ಹೇಳಲಾರೆ: ಯತೀಂದ್ರ

ಯತೀಂದ್ರ ಸಿದ್ರಾಮಯ್ಯ

ಮೈಸೂರು: ‘ಮುಖ್ಯಮಂತ್ರಿ ಬದಲಾವಣೆ ಕುರಿತು ಸಾಕಷ್ಟು ಮಾತನಾಡಿದ್ದೇನೆ. ಇನ್ನೇನೂ ಹೇಳಲಾರೆ. ಬೇರೆಯವರ ಹೇಳಿಕೆಗಳಿಗೆ ಉತ್ತರಿಸುವುದಿಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಂಚಿಕೆ ಕುರಿತು ಪ್ರತಿಕ್ರಿಯಿಸಲು ನಿರಾಕರಿಸಿದರು.

‘ಯತೀಂದ್ರ ವರ್ಗಾವಣೆ ಸಚಿವ’ ಎಂಬ ಬಿಜೆಪಿ ಮುಖಂಡರ ಆರೋಪಕ್ಕೆ ಸಿಟ್ಟಾದ ಅವರು, ‘ಹಾದಿ ಬೀದಿಯಲ್ಲಿ ಹೋಗುವವರೆಲ್ಲ ಆಧಾರವಿಲ್ಲದೆ ಮಾತನಾಡಿದರೆ ಉತ್ತರಿಸಲಾಗದು. ಮಾಜಿ ಸಂಸದ ಪ್ರತಾಪ ಸಿಂಹ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಬಿಜೆಪಿಯಲ್ಲಿ ಕೆಲಸವಿಲ್ಲ. ಏನೇನೊ ಹೇಳುತ್ತಿರುತ್ತಾರೆ’ ಎಂದರು.

ಕೋಲಾರದ ವೇಮಗಲ್‌ನಲ್ಲಿ ನಿರ್ಮಿಸಿರುವ ಏರ್‌ಬಸ್ ಎಚ್ 125 ಹೆಲಿಕಾಪ್ಟರ್ ಅಂತಿಮ ಜೋಡಣಾ ಘಟಕದ ಉದ್ಘಾಟನೆ ವೇಳೆ ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರಿನ್ ವಾಟ್ರಿನ್, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪಾಲ್ಗೊಂಡಿದ್ದರು –ಎಎಫ್‌ಪಿ ಚಿತ್ರ ▸6

ಸಹಕಾರ ವೃದ್ಧಿಗೆ ಶಪಥ

ವ್ಯಾಪಾರ, ರಕ್ಷಣಾ ಕ್ಷೇತ್ರದ ಬಗ್ಗೆ ಮೋದಿ–ಮ್ಯಾಕ್ರನ್ ಮಾತು

ನವದೆಹಲಿ (ಪಿಟಿಐ): ಭೌಗೋಳಿಕ ರಾಜಕೀಯ ಪ್ರಕ್ಷುಬ್ಧತೆ ಹೆಚ್ಚುತ್ತಿರುವ ಸಂದರ್ಭದಲ್ಲಿ, ವ್ಯಾಪಾರ, ರಕ್ಷಣೆ, ಇಂಧನ ಸುರಕ್ಷತೆ, ಅತ್ಯಾಧುನಿಕ ತಂತ್ರಜ್ಞಾನ ವಲಯಗಳಿಗೆ ಸಂಬಂಧಿಸಿ ಭಾರತ ಮತ್ತು ಫ್ರಾನ್ಸ್ ನಡುವೆ ಸಹಕಾರ ವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಶಪಥ ಮಾಡಿದರು.

ಮೋದಿ ಅವರು ಮ್ಯಾಕ್ರನ್ ಅವರೊಂದಿಗೆ ಮುಂಬೈನ ಲೋಕಭವನದಲ್ಲಿ ಮಂಗಳವಾರ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಮಾತುಕತೆ ವೇಳೆ ರಕ್ಷಣಾ ಸಹಕಾರ ಮತ್ತು ಅತ್ಯಾಧುನಿಕ ತಂತ್ರಜ್ಞಾನ ವಲಯಗಳ ದ್ವಿಪಕ್ಷೀಯ ಒಪ್ಪಂದಕ್ಕೆ ಹೆಚ್ಚು ಒತ್ತು ನೀಡಲಾಗಿದೆ ಎಂದು ತಿಳಿದುಬಂದಿದೆ.

ಮೋದಿ ಅವರು ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿದ್ದು, ‘ಭಾರತ–ಫ್ರಾನ್ಸ್ ವಿಶೇಷ ಬಾಂಧವ್ಯ ಹಂಚಿಕೊಂಡಿವೆ’ ಎಂದಿದ್ದಾರೆ. ▸6

> ಭಾರತವು ಫ್ರಾನ್ಸ್‌ನ ನಂಬಿಕಸ್ಥ ಪಾಲುದಾರ. ರಫೇಲ್ ವಿಮಾನಗಳಿಂದ ಜಲಾಂತರ್ಗಾಮಿಗಳವರೆಗೆ ರಕ್ಷಣಾ ಸಹಕಾರವನ್ನು ವಿಸ್ತರಿಸಿದ್ದೇವೆ
> **ಇಮ್ಯಾನುವೆಲ್ ಮ್ಯಾಕ್ರನ್,** ಫ್ರಾನ್ಸ್ ಅಧ್ಯಕ್ಷ

> ಫ್ರಾನ್ಸ್ ಜೊತೆಗೂಡಿ ಮೌಂಟ್ ಎವರೆಸ್ಟ್ ತುತ್ತತುದಿವರೆಗೆ ಹಾರುವ ಹೆಲಿಕಾಪ್ಟರ್‌ಗಳನ್ನು ಭಾರತದಲ್ಲಿ ತಯಾರಿಸುತ್ತೇವೆ, ರಫ್ತು ಮಾಡುತ್ತೇವೆ ಎಂಬುದು ಹೆಮ್ಮೆಯ ವಿಚಾರ
> **ನರೇಂದ್ರ ಮೋದಿ,** ಪ್ರಧಾನಿ

ಬಾಂಗ್ಲಾ ಪ್ರಧಾನಿಯಾಗಿ ತಾರಿಕ್ ಪ್ರಮಾಣ

ಢಾಕಾ (ಪಿಟಿಐ): ಬಾಂಗ್ಲಾದೇಶದ ನ್ಯಾಷನಲಿಸ್ಟ್ ಪಾರ್ಟಿಯ (ಬಿಎನ್‌ಪಿ) ಮುಖ್ಯಸ್ಥ ತಾರಿಕ್ ರೆಹಮಾನ್ ಅವರು ದೇಶದ ನೂತನ ಪ್ರಧಾನಿಯಾಗಿ ಮಂಗಳವಾರ ಪ್ರಮಾಣವಚನ ಸ್ವೀಕರಿಸಿದರು. ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಪ್ರಮಾಣವಚನ ಬೋಧಿಸಿದರು.

ಬಹಳ ವರ್ಷಗಳ ಸಂಪ್ರದಾಯದಂತೆ ಪ್ರಮಾಣವಚನ ಸ್ವೀಕಾರ ಸಮಾರಂಭವು ಅಧ್ಯಕ್ಷರ ಭವನದಲ್ಲಿ ನಡೆಯದೆ ಸಂಸತ್ತಿನ ಮುಂದಿನ ಬಯಲಲ್ಲಿ ನಡೆಯಿತು. ಇದಕ್ಕೂ ಮುನ್ನ ತಾರಿಕ್ ಅವರನ್ನು ಸಂಸದೀಯ ಪಕ್ಷದ ನಾಯಕನನ್ನಾಗಿ ಬಿಎನ್‌ಪಿ ಸಂಸದರು ಆಯ್ಕೆ ಮಾಡಿದರು. ತಾರಿಕ್ ಅವರೊಂದಿಗೆ 25 ಸಚಿವರು, 24 ರಾಜ್ಯ ಖಾತೆ ಸಚಿವರು ಮತ್ತು ಎಲ್ಲ ಸಂಸದರು ಪ್ರಮಾಣವಚನ ಸ್ವೀಕರಿಸಿದರು.

ಇನ್ನೊಂದು ಸುದ್ದಿ ▸12

₹18 ಲಕ್ಷ ಕೋಟಿ ಹೂಡಿಕೆ ನಿರೀಕ್ಷೆ

ನವದೆಹಲಿ (ಪಿಟಿಐ/ಎಎಫ್‌ಪಿ): ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವು ಮುಂದಿನ ಎರಡು ವರ್ಷಗಳಲ್ಲಿ 200 ಶತಕೋಟಿ ಡಾಲರ್ (ಅಂದಾಜು ₹18.13 ಲಕ್ಷ ಕೋಟಿ) ಹೂಡಿಕೆಯನ್ನು ನಿರೀಕ್ಷಿಸುತ್ತಿದೆ ಎಂದು ಕೇಂದ್ರ ಐ.ಟಿ ಸಚಿವ ಅಶ್ವಿನಿ ವೈಷ್ಣವ್ ಅವರು ಮಂಗಳವಾರ ಹೇಳಿದರು.

ಇಲ್ಲಿ ನಡೆಯುತ್ತಿರುವ ಎ.ಐ ಶೃಂಗದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘90 ಶತಕೋಟಿ ಡಾಲರ್ (₹8.16 ಲಕ್ಷ ಕೋಟಿ) ಹೂಡಿಕೆ ಮಾಡಲು ಕೆಲವು ಕಂಪನಿಗಳು ಈಗಾಗಲೇ ಬದ್ಧವಾಗಿವೆ’ ಎಂದರು. ▸4B

‘ಮಕ್ಕಳಿಗೆ ನಿರ್ಬಂಧ: ಚರ್ಚೆ’

ಅಶ್ವಿನಿ ವೈಷ್ಣವ್

‘ಸಾಮಾಜಿಕ ಮಾಧ್ಯಮಗಳ ಬಳಕೆಯನ್ನು ಮಕ್ಕಳಿಗೆ ನಿರ್ಬಂಧಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ’ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು. ‘ಸಾಮಾಜಿಕ ಮಾಧ್ಯಮಗಳ ಬಳಕೆಗೆ ಭಾರತ ಕೂಡಾ ವಯಸ್ಸಿನ ಆಧಾರದಲ್ಲಿ ನಿರ್ಬಂಧ ಹೇರುವ ಬಗ್ಗೆ ವಿವಿಧ ಸಾಮಾಜಿಕ ಮಾಧ್ಯಮ ಕಂಪನಿಗಳೊಂದಿಗೆ ಚರ್ಚಿಸುತ್ತಿದೆ’ ಎಂದರು.

ಬಳಕೆ ಆಗದ 269 ಕೋಟಿ

ನವದೆಹಲಿ: ವಿರಳ ಕಾಯಿಲೆಯಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಕೇಂದ್ರ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯವು 2025–26ನೇ ಸಾಲಿನಲ್ಲಿ ಮೀಸಲಿಟ್ಟಿದ್ದ ₹300 ಕೋಟಿಯಲ್ಲಿ ₹30 ಕೋಟಿಯಷ್ಟೇ ಬಳಕೆಯಾಗಿದೆ.

ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಔಷಧ ಲಭ್ಯವಿದ್ದರೂ ರೋಗಿಗಳಿಗೆ ಸಿಗುತ್ತಿಲ್ಲ. ಡಿಸೆಂಬರ್ ಅಂತ್ಯದ ವೇಳೆಗೆ, ಶೇ 80ರಷ್ಟು ಅನುದಾನ ಬಳಕೆಯೇ ಆಗಿಲ್ಲ ಎಂದು ಆರೋಗ್ಯ ಸಚಿವಾಲಯವೇ ಒಪ್ಪಿಕೊಂಡಿದೆ. ಈ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಪಡೆಯಲಾಗಿದೆ. ಮಾರ್ಚ್ 31ಕ್ಕೆ ಆರ್ಥಿಕ ವರ್ಷ ಮುಗಿಯಲಿದ್ದು, ಅದರೊಳಗೆ ಅನುದಾನ ಬಳಕೆ ಮಾಡದಿದ್ದರೆ ವ್ಯರ್ಥ ಆಗಲಿದೆ. ▸4B

ಜಾಹೀರಾತು

ಮಂಡಿ ನೋವು ಮುಕ್ತ ಜೀವನಕ್ಕೆ ಸರ್ಜರಿ ಇಲ್ಲದೇ ಸುಲಭ ಚಿಕಿತ್ಸೆ

ಸ್ಟೀರಾಯ್ಡ್ ಎಂಬ ಹಾನಿಕಾರಕ ಶಾರ್ಟ್‌ಕಟ್ ಬೇಡ | ದೇಹದ ಆಂತರಿಕ ಶಕ್ತಿಯೇ ಪರಮ ಔಷಧ

ಬೆಂಗಳೂರು: ಮೊಣಕಾಲಿನ ನೋವು (Knee Pain) ಇಂದು ಅನೇಕ ಜನರ ಜೀವನವನ್ನು ತುಂಬಾ ಕಷ್ಟಕರವಾಗಿಸಿದೆ. ವಯಸ್ಸಾದವರು, ಕ್ರೀಡಾಪಟುಗಳಿಂದ ಹಿಡಿದು ಗೃಹಿಣಿಯರ ವರೆಗೆ, ಹಲವರು ಗಾಯ, ಕೀಲು ಸವೆತ ಮತ್ತು ಸಂಧಿವಾತದಿಂದ ತೀವ್ರ ನೋವಿನ ಹಿಡಿತದಲ್ಲಿ ನರಳುತ್ತಿದ್ದಾರೆ.

ಮೆಟ್ಟಿಲು ಹತ್ತಲು ತೊಂದರೆ, ಸರಳ ಕೆಲಸವೂ ಕಷ್ಟ, ಪೇನ್ ಕಿಲ್ಲರ್ಸ್ ಮೇಲೆ ಅತಿಯಾದ ಅವಲಂಬನೆ, ಕುಳಿತಿದ್ದ ಜಾಗದಿಂದ ಎದ್ದೇಳಲು ಕಷ್ಟಕರ ಇವೆಲ್ಲವೂ ಅಸ್ಥಿಸಂಧಿವಾತದ ಲಕ್ಷಣಗಳಾಗಿವೆ.

ನೀವು ಗಮನಿಸಬೇಕಾದ ವಿಷಯ: 'ನೋವು' ನಿಮ್ಮ ದೇಹದೊಳಗೆ ಅಡಗಿರುವ ಸಮಸ್ಯೆ ಸೂಚಿಸುವ ಒಂದು 'ಎಚ್ಚರಿಕೆ ಸಂದೇಶ' ವಷ್ಟೇ.

ನೋವು ಕಂಡಾಗ, ಬೇಗ ಪರಿಹಾರ ಸಿಗಲಿ ಎಂದು ನಾವು ಬಾಮ್ ಹಚ್ಚುತ್ತೇವೆ, ಪೇನ್ ಕಿಲ್ಲರ್ ಮಾತ್ರೆ ನುಂಗುತ್ತೇವೆ. ಇಂತಹ ತಾತ್ಕಾಲಿಕ ಪರಿಹಾರಗಳನ್ನು ಬಳಸಿದಾಗ, ನೋವಿನ 'ಎಚ್ಚರಿಕೆ ಸಂದೇಶ' ಸ್ವಲ್ಪ ಕಾಲಕ್ಕೆ ಮಾಯವಾದಂತೆ ಅನಿಸಿದರೂ, ಸಮಸ್ಯೆಯ ಮುಖ್ಯ ಕಾರಣ (ಕೀಲುಗಳ ಹಾನಿ) ಹಾಗೆಯೇ ಬುಡದಲ್ಲಿ ಉಳಿದುಬಿಡುತ್ತದೆ.

ಬೆಂಗಳೂರಿನಲ್ಲಿರುವ ಸುಪ್ರಸಿದ್ಧ ಅಲಿವಿಯೇಟ್ ಪೇನ್ ಕ್ಲಿನಿಕ್‌ನಲ್ಲಿ ಲಭ್ಯವಿರುವ, ನೈಸರ್ಗಿಕವಾಗಿ ನೋವನ್ನು ಕಡಿಮೆ ಮಾಡುವ 'PRP' ಚಿಕಿತ್ಸೆಯನ್ನು ಆರಿಸಿಕೊಳ್ಳುವುದು ಉತ್ತಮ ಆಯ್ಕೆಯಾಗಿದೆ.

ಪಿಆರ್‌ಪಿ ಥೆರಪಿ: ನಿಮ್ಮ ದೇಹದ ಸ್ವಯಂ ಗುಣಪಡಿಕೆಯ ಸಾಮರ್ಥ್ಯ ಉತ್ತೇಜಿಸಿ ನೋವು ಮಾಯ

ಪಿಆರ್‌ಪಿ ಹೇಗೆ ಕೆಲಸ ಮಾಡುತ್ತದೆ?

ನಿಮ್ಮ ಕೈಮೇಲಾದ ಸಣ್ಣ ಗಾಯ ತನ್ನಷ್ಟಕ್ಕೆ ತಾನೇ ವಾಸಿಯಾಗುವುದನ್ನು ನೀವು ಗಮನಿಸಿರಬಹುದು. ಇದಕ್ಕೆ ಕಾರಣ ನಮ್ಮ ರಕ್ತದಲ್ಲಿರುವ 'ನೈಸರ್ಗಿಕ ಬೆಳವಣಿಗೆಯ ಅಂಶಗಳು' (Natural Growth Factors).

PRP ಚಿಕಿತ್ಸೆ ಇದೇ ತತ್ವವನ್ನು ಬಳಸಿ **ದೇಹದ ಗುಣಪಡಿಕೆಯ ಸ್ವಯಂ ಸಾಮರ್ಥ್ಯ ಉತ್ತೇಜಿಸಿ** ಮೊಣ ಕಾಲಿಗೆ ಆಗಿರುವ ಹಾನಿ ಗುಣಪಡಿಸುತ್ತದೆ.

ಪಿಆರ್‌ಪಿ ಚಿಕಿತ್ಸೆಯ ವಿಶೇಷತೆ:

- **ಮೂಲಕ್ಕೆ ಚಿಕಿತ್ಸೆ:** ಹಾನಿಗೊಳಗಾದ ಅಂಗಾಂಶಗಳನ್ನು ಸರಿಪಡಿಸುವ ಮೂಲಕ ನೋವನ್ನು ಬುಡದಿಂದಲೇ ಉಪಶಮಿಸುತ್ತದೆ.
- **ದೀರ್ಘಕಾಲೀನ ಆರಾಮ:** ಇದು ತಾತ್ಕಾಲಿಕವಲ್ಲದೆ, ದೀರ್ಘಕಾಲದ ನೋವುಮುಕ್ತ ಜೀವನಕ್ಕೆ ಪೂರಕವಾದ ಸುರಕ್ಷಿತ ಮಾರ್ಗ.
- **ಶಸ್ತ್ರಚಿಕಿತ್ಸೆಗೆ ಸೂಕ್ತ ಪರ್ಯಾಯ:** ಆಪರೇಷನ್ ಬೇಡ ಎನ್ನುವವರಿಗೆ ಅಥವಾ ಶಸ್ತ್ರಚಿಕಿತ್ಸೆ ಸಾಧ್ಯವಿಲ್ಲದವರಿಗೆ ಈ ಚಿಕಿತ್ಸೆ ಒಂದು ವರದಾನ.

- ಚಿಕಿತ್ಸೆ ಪಡೆದ ದಿನವೇ ಡಿಸ್ಚಾರ್ಜ್
- 30-60 ನಿಮಿಷದ ಪ್ರಕ್ರಿಯೆ
- ಸ್ಟೀರಾಯ್ಡ್ ಬಳಕೆ ಇಲ್ಲ
- 48 ಗಂಟೆಯಲ್ಲಿ ಕೆಲಸಕ್ಕೆ ಮರಳಿ

ಇನ್ನೇಕೆ ವಿಳಂಬ? ಇದೀಗಲೇ ಕರೆ ನೀಡಿ ನಿಮ್ಮ ಅನುಕೂಲಕ್ಕೆ ತಕ್ಕಂತೆ ಡಾಕ್ಟರ್ ಅಪಾಯಿಂಟ್‌ಮೆಂಟ್ ಪಡೆದು, ನೋವಿಲ್ಲದ ಆರೋಗ್ಯಕರ ಜೀವನವನ್ನು ನಿಮ್ಮದಾಗಿಸಿಕೊಳ್ಳಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿದೆ

ಅಲಿವಿಯೇಟ್
ನೋವು ನಿವಾರಣಾ ಕೇಂದ್ರಗಳು

ಬೆಂಗಳೂರಿನಲ್ಲಿ ಇವರ ಕ್ಲಿನಿಕ್ಸ್ ಇಲ್ಲಿವೆ
ಪೀಣ್ಯಾ, ದಾಸರಹಳ್ಳಿ | ಸದಾಶಿವನಗರ | ಜಯನಗರ | ಇಂದಿರಾನಗರ | ವೈಟ್‌ಫೀಲ್ಡ್

080 25256878
080 23614888

ಮನೆಗೆ ಕಲ್ಲು: ಬಿಗುವಿನ ಪರಿಸ್ಥಿತಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಗರದ ವಿಜಯಪುರ ಬಡಾವಣೆಯ ಮನೆಯೊಂದರ ಮೇಲೆ ಕಲ್ಲು ತೂರಿ, ನುಗ್ಗಲು ಯತ್ನಿಸಿದ ಆರೋಪದಲ್ಲಿ ಇಬ್ಬರು ಮುಸ್ಲಿಂ ಯುವಕರನ್ನು ಗುಂಪೊಂದು ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದೆ. ಈ ಕುರಿತು ದೂರು–ಪ್ರತಿ ದೂರು ದಾಖಲಾಗಿವೆ.

ವಿಜಯಪುರ ಬಡಾವಣೆಯ ತಾಲ್ಲೂಕು ಪಂಚಾಯಿತಿ ವಸತಿಗೃಹದ ನಿವಾಸಿ, ಸಿಡಿಪಿಒ ಕಚೇರಿಯ ಮೇಲ್ವಿಚಾರಕಿ ಸುಧಾ ಎಚ್‌.ಜಿ. ಅವರು ನೀಡಿರುವ ದೂರಿನ ಆಧಾರದಲ್ಲಿ ಆರು ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಬಾಲಕರು, ಅವರ ಪೋಷಕರು ಪ್ರತಿದೂರು ನೀಡಿದ್ದು, ಬಿಜೆಪಿ ಯುವ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷ ಸಂತೋಷ್ ಕೋಟ್ಯಾನ್ ಮತ್ತು ಬಜರಂಗದಳ ಕಾರ್ಯಕರ್ತ ಶ್ಯಾಂ ಗೌಡ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ‘ಸುಧಾ ಅವರ ಮನೆ ಎದುರಿನ ರಸ್ತೆಯಲ್ಲಿ ಪದೇ ಪದೇ ಸಂಚರಿಸುತ್ತಿದ್ದ ಯುವಕರು ಮನೆಯ ಮೇಲೆ ಕಲ್ಲು ತೂರಾಟ ನಡೆಸಿದ್ದರು’ ಎಂಬುದು ಮುಸ್ಲಿಂ ಬಾಲಕರ ಮೇಲಿರುವ ಆರೋಪ.

ಸೋಮವಾರ ರಾತ್ರಿಯೂ ಬಾಲಕರು ರಸ್ತೆಯಲ್ಲಿ ಸಾಗಿದಾಗ ಸ್ಥಳೀಯರು ಅಡ್ಡಗಟ್ಟಿದ್ದಾರೆ. ಆರು ಜನರಲ್ಲಿ ನಾಲ್ವರು ಓಡಿಹೋಗಿದ್ದು, ಇಬ್ಬರು ಸಿಕ್ಕಿಕೊಂಡಿದ್ದಾರೆ. ಇಬ್ಬರನ್ನು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಎಲ್ಲರೂ ವಿದ್ಯಾರ್ಥಿಗಳಾಗಿದ್ದು, ಇಬ್ಬರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ನಾವು ಪರಿಶಿಷ್ಟ ಜಾತಿಗೆ ಸೇರಿದ್ದು, ಮನೆಯಲ್ಲಿ ಮಗಳು ಒಬ್ಬಳೇ ಇದ್ದಾಗ ಮೇಲೆ ಕಲ್ಲು ತೂರಾಟ ನಡೆಸಿ ನುಗ್ಗಲು ಯತ್ನಿಸಿದ್ದರು. ಒಂದು ವಾರದಿಂದ ಇದೇ ರೀತಿ ನಡೆಯುತ್ತಿದೆ. ಅವರನ್ನು ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಎಲ್ಲರ ವಿರುದ್ಧ ಎಸ್‌ಸಿ., ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು’ ಎಂದು ಸುಧಾ ಅವರು ದೂರು ನೀಡಿದ್ದು, ಬಸವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ▸6

> ಘಟನೆ ಸಂಬಂಧ ಪೊಲೀಸರು ಕಾನೂನು ಕ್ರಮ ಕೈಗೊಂಡಿದ್ದಾರೆ. ಸಂತ್ರಸ್ತೆಯು ಪರಿಶಿಷ್ಟ ಜಾತಿಯವರಾಗಿದ್ದು ನಾಗರಿಕ ಹಕ್ಕುಗಳ ರಕ್ಷಣೆ (ಪಿಸಿಆರ್) ಕಾಯ್ದೆಯಡಿ ಪೊಲೀಸರು ಕ್ರಮ ವಹಿಸುತ್ತಾರೆ
> **ಜಿ.ಪರಮೇಶ್ವರ,** ಗೃಹಸಚಿವ

ಚಿನಕುರುಳಿ | ಪ್ರಕಾಶ್ ಶೆಟ್ಟಿ

28ರಿಂದ ಪಿಯು ಪರೀಕ್ಷೆ ಶುರು

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ ಫೆ.28ರಿಂದ ಆರಂಭವಾಗಲಿದ್ದು, 1,217 ಕೇಂದ್ರಗಳಲ್ಲಿ 7.10 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಈ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ‘ಪ್ರತಿ ಪರೀಕ್ಷಾ ಕೇಂದ್ರವೂ ಸಿಸಿಟಿವಿ ಕ್ಯಾಮೆರಾ ಒಳಗೊಂಡಿದೆ. ವಿವಿಧ ಹಂತದ ಅಧಿಕಾರಿಗಳು ವೆಬ್‌ಕಾಸ್ಟಿಂಗ್ ಮೂಲಕ ಪರೀಕ್ಷಾ ಚಟುವಟಿಕೆಗಳ ಮೇಲೆ ನಿರಂತರ ನಿಗಾವಹಿಸಲಿದ್ದಾರೆ. ಪರೀಕ್ಷಾ ಕೇಂದ್ರದ ಹೊರಗೂ ಕಟ್ಟುನಿಟ್ಟಿನ ಕಣ್ಗಾವಲಿಗೆ ವ್ಯವಸ್ಥೆ ಮಾಡಲಾಗುತ್ತಿದೆ’ ಎಂದರು.

ವಿವರ ▸5

Late B.M.Sreenivasaiah
Founder



Late B.S.Narayan
Former Donor Trustee

BMS EDUCATIONAL TRUST® (BMSET)
Bull Temple Road, BENGALURU-560019.

ADMISSIONS OPEN 2026-27

Applications are invited for **Admission (MANAGEMENT SEATS) in various branches** for the **Academic Year 2026-27** in the following institutions:

BMS College of Engineering (BMSCE)
Basavanagudi. www.bmsce.ac.in

BMS College of Architecture, Design and Planning (BMSCAD&P)
Basavanagudi. www.bmsca.org

BMS Institute of Technology & Management (BMSIT&M)
Yelahanka. www.bmsit.ac.in

BMS School of Architecture (BMSSA)
Yelahanka. www.bmssa.ac.in

Admissions are subject to VTU Rules & Regulations (Engineering Programs), COA Norms (Architecture Programs).
Detailed fee structure and eligibility criteria are available on the websites of the respective institutions.

Applications may be downloaded from college websites.
Application forms shall be submitted in person to Director (Admissions).

Contact: Ph: 080-26611636
Email: contact@bmsetadmission.org
Director (Admissions), BMS Educational Trust
Time: 10.30 AM to 04.30 PM (Monday to Friday)

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಗಸ ಇರಲಿದೆ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ನಗರದ ತ್ಯಾಜ್ಯ ವಿಲೇವಾರಿಗೆ ತಡೆ

ಮೂಲಸೌಕರ್ಯದ ಭರವಸೆ ಈಡೇರಿಲ್ಲ ಬೆಳ್ಳಹಳ್ಳಿ ಗ್ರಾಮಸ್ಥರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಟ್ಟಗಾನಹಳ್ಳಿ–ಕಣ್ಣೂರು– ಬೆಳ್ಳಹಳ್ಳಿ ಭೂ ಭರ್ತಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿಗೆ ಗ್ರಾಮಸ್ಥರು ತಡೆ ಹಾಕಿದ್ದಾರೆ.

ಗ್ರಾಮದ ಸಮಸ್ಯೆಗಳನ್ನು ಪರಿಹರಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ನೀಡಿರುವ ಭರವಸೆ ಈಡೇರಿಸಲ್ಲ. ಹೀಗಾಗಿ, ಇಲ್ಲಿ ತ್ಯಾಜ್ಯ ವಿಲೇವಾರಿ ಮಾಡಬಾರದು ಎಂದು ಲಾರಿಗಳು ಭೂಭರ್ತಿ ಪ್ರದೇಶಕ್ಕೆ ಹೋಗದಂತೆ ಟ್ರ್ಯಾಕ್ಟರ್‌ಗಳನ್ನು ಅಡ್ಡ ನಿಲ್ಲಿಸಿದ್ದಾರೆ.

ನಗರದಿಂದ ತ್ಯಾಜ್ಯ ತುಂಬಿಕೊಂಡು ವಿಲೇವಾರಿಗೆ ಹೋಗಿರುವ ಲಾರಿಗಳು ಮಂಗಳವಾರ ಬೆಳಿಗ್ಗೆಯಿಂದ ಸಾಲುಗಟ್ಟಿ ನಿಂತಿವೆ. ಹೀಗಾಗಿ, ನಗರದಲ್ಲಿ ಬುಧವಾರ ಸಂಗ್ರಹವಾಗುವ ತ್ಯಾಜ್ಯ ವಿಲೇವಾರಿಗೆ ಲಾರಿಗಳು ಲಭ್ಯವಿರುವುದಿಲ್ಲ. ಆದ್ದರಿಂದ ನಗರದ ರಸ್ತೆಗಳಲ್ಲೇ ಕಸ ತುಂಬಿದ ಆಟೊಗಳು ನಿಲ್ಲುವ ಸಾಧ್ಯತೆ ಇದೆ.

ಬೆಳ್ಳಹಳ್ಳಿ ಮುಖ್ಯರಸ್ತೆಯಲ್ಲಿ ಸಾಲುಗಟ್ಟಿ ನಿಂತಿರುವ ತ್ಯಾಜ್ಯ ತುಂಬಿದ ಲಾರಿಗಳು

‘ತ್ಯಾಜ್ಯ ವಿಲೇವಾರಿಯಿಂದ ಸ್ಥಳೀಯ ನಿವಾಸಿಗಳಿಗೆ ಸಾಕಷ್ಟು ಸಮಸ್ಯೆಗಳಾಗುತ್ತಿವೆ. ಇವುಗಳೆಲ್ಲವನ್ನೂ ನಿವಾರಿಸಿ, ಅಭಿವೃದ್ಧಿ ಕಾರ್ಯ ಕೈಗೊಳ್ಳುತ್ತೇವೆ ಎಂದು ಕಳೆದ ವರ್ಷ ಮಾರ್ಚ್‌ನಲ್ಲಿ ಭರವಸೆ ನೀಡಿದ್ದರು. 2025ರ ಮಾರ್ಚ್ 11ರಿಂದ ತ್ಯಾಜ್ಯ ವಿಲೇವಾರಿಗೆ ಅವಕಾಶ ನೀಡಿರಲಿಲ್ಲ. ಅಂದಿನ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸ್ಥಳಕ್ಕೆ ಬಂದು ಎಲ್ಲ ರೀತಿಯ ಮೂಲಸೌಕರ್ಯ ಕಲ್ಪಿಸುವ ಭರವಸೆ ನೀಡಿದ್ದರು. ಹೀಗಾಗಿ, ಮಾರ್ಚ್ 15ರಿಂದ ತ್ಯಾಜ್ಯ ವಿಲೇವಾರಿ ಆರಂಭವಾಗಿತ್ತು. ಆದರೆ, ನಂತರ ಅವರು ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ’ ಎಂದು ಗ್ರಾಮಸ್ಥರು ಆರೋಪಿಸಿದರು.

ಭೂ ಭರ್ತಿ ಪ್ರದೇಶಕ್ಕೆ ಲಾರಿ ಹೋಗದಂತೆ ಟ್ರ್ಯಾಕ್ಟರ್‌ಗಳನ್ನು ಅಡ್ಡ ನಿಲ್ಲಿಸಲಾಗಿತ್ತು

ಮುಖ್ಯಾಂಶಗಳು

- ಸಾಲುಗಟ್ಟಿ ನಿಂತಿದ್ದ ತ್ಯಾಜ್ಯ ತುಂಬಿದ ಲಾರಿಗಳು
- ‘ಶಾಸಕರ ಜೊತೆ ಅಧಿಕಾರಿಗಳ ಮಾತುಕತೆ’

‘ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿರುವ ದ್ರವತ್ಯಾಜ್ಯವನ್ನು ಹೊರಹಾಕಬೇಕು, ಸುತ್ತಮುತ್ತಲಿನ ಕೆರೆಗಳಲ್ಲಿರುವ ದ್ರವತ್ಯಾಜ್ಯದ ಜೊತೆಗೆ ಹೂಳು ತೆಗೆದು ಅಭಿವೃದ್ಧಿ ಮಾಡಿಕೊಡಬೇಕು, ಭೂಭರ್ತಿ ಪ್ರದೇಶದ ಸುತ್ತಮುತ್ತಲಿನ ಹಳ್ಳಿಗಳಿಗೆ ಮೂಲಸೌಕರ್ಯ ಕಲ್ಪಿಸಬೇಕು ಎಂದು ಒತ್ತಾಯಿಸಲಾಗಿತ್ತು. ಆದರೆ ಈ ಬಗ್ಗೆ ಯಾವ ರೀತಿಯ ಕಾಮಗಾರಿಗಳನ್ನೂ ಆರಂಭಿಸಿಲ್ಲ’ ಎಂದು ದೂರಿದರು.

‘ಭೂಭರ್ತಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿ ಸ್ಥಗಿತಕ್ಕೆ ಸಂಬಂಧಿಸಿದಂತೆ, ಮಹದೇವಪುರ ವಿಧಾನಸಭೆ ಕ್ಷೇತ್ರದ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ಮಾಜಿ ಶಾಸಕ ಅರವಿಂದ ಲಿಂಬಾವಳಿ ಅವರೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಮಂಗಳವಾರ ಸಂಜೆ ಮಾತುಕತೆ ನಡೆಸಿದರು. ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವ ಭರವಸೆ ನೀಡಿದರು’ ಎಂದು ಮೂಲಗಳು ತಿಳಿಸಿವೆ.

ನದಾಫ್ ಸಂಘ ಇನಾಯತ್ ಉಲ್ಲಾ ಜಿಲ್ಲಾಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ನದಾಫ್ (ಪಿಂಜಾರ) ಸಂಘದ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷರಾಗಿ ಜಗಳೂರು ಇಮಾಂ ಸಾಹೇಬರ ವಂಶಸ್ಥ ಬೆಸ್ತರಹಳ್ಳಿ ಹಯಾತ್ ಇನಾಯುತ್ ಉಲ್ಲಾ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಇನಾಯತ್ ಉಲ್ಲಾ ಅವರ ಅವಿರೋಧ ಆಯ್ಕೆಯನ್ನು ಬೆಂಗಳೂರು ಜಿಲ್ಲಾ ಘಟಕದ ಜಿಲ್ಲಾ ಚುನಾವಣಾ ಅಧಿಕಾರಿ ಮುಬಿನಾ ಬೇಗಂ ಘೋಷಿಸಿದ್ದಾರೆ.

ಕೆವಿಎಸ್ ಶಿಕ್ಷಕರಿಗೆ ಸೌಲಭ್ಯ ಒದಗಿಸಲು ಕ್ರಮ- ಪ್ರಧಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರೀಯ ವಿದ್ಯಾಲಯ ಶಿಕ್ಷಕರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು’ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಭರವಸೆ ನೀಡಿದ್ದಾರೆ.



ಧರ್ಮೇಂದ್ರ ಪ್ರಧಾನ್

ಅಖಿಲ ಭಾರತ ಕೇಂದ್ರೀಯ ವಿದ್ಯಾಲಯ ಶಿಕ್ಷಕರ ಸಂಘಟನೆಯ (ಎಐಕೆವಿಟಿಎ) ರಾಷ್ಟ್ರೀಯ ಕಾರ್ಯದರ್ಶಿ ಕೆ.ಪಿ.ಸಿಂಗ್ ನೇತೃತ್ವದ ಶಿಕ್ಷಕರ ನಿಯೋಗ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಈ ವೇಳೆ ಮಾತನಾಡಿದ ಸಚಿವರು, ‘ಕೇಂದ್ರೀಯ ವಿದ್ಯಾಲಯ ಸಂಘಟನೆ (ಕೆವಿಎಸ್) ಶಿಕ್ಷಣ ಸಚಿವಾಲಯದ ಪ್ರಮುಖ ಸಂಸ್ಥೆಯಾಗಿದೆ. ಶಿಕ್ಷಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಲು ವಿಳಂಬ ಮಾಡುವುದಿಲ್ಲ. ಮುಖ್ಯವಾಗಿ ಮಾಡಿಫೈಡ್ ಅಶ್ಯೂರ್‌ಡ್ ಕೆರಿಯರ್ ಪ್ರೋಗ್ರೆಸ್ಸನ್ (ಎಂಎಸಿಪಿ) ಜಾರಿ ಕುರಿತು ವಿಸ್ತೃತ ವರದಿ ನೀಡಿ’ ಎಂದು ಕೆವಿಎಸ್ ಆಯುಕ್ತ ವಿಕಾಸ್ ಗುಪ್ತ ಅವರಿಗೆ ಸೂಚನೆ ನೀಡಿದರು.

‘ಕೆವಿಎಸ್ ಶಿಕ್ಷಕರು 12 ವರ್ಷ ಸೇವೆ ಸಲ್ಲಿಸಿದ ನಂತರ ಹಿರಿಯ ಶ್ರೇಣಿ ವೇತನ ಹಾಗೂ 24 ವರ್ಷದ ಬಳಿಕ ಆಯ್ಕೆ ಶ್ರೇಣಿ ವೇತನ ಪಡೆಯುತ್ತಾರೆ. 1987ರಿಂದಲೂ ಈ ಪದ್ಧತಿ ಜಾರಿಯಲ್ಲಿದೆ. ಆದರೆ ಈ ಪದ್ಧತಿಯು ವೃತ್ತಿ ಪ್ರಗತಿಗೆ ಪೂರಕವಾಗಿಲ್ಲ. ಅಲ್ಲದೇ ಎಂಎಸಿಪಿ ಅಡಿ ವೇತನ ನೀಡುವಂತೆ 2009ರಿಂದಲೂ ಮನವಿ ಸಲ್ಲಿಸುತ್ತಿದ್ದರೂ ಕ್ರಮ ಕೈಗೊಂಡಿಲ್ಲ’ ಎಂದು ಕೆ.ಪಿ.ಸಿಂಗ್ ಮಾಹಿತಿ ನೀಡಿದರು.

ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಕಾರ್ಯದರ್ಶಿ ಸಂಜಯ್‌ಕುಮಾರ್, ಕೆವಿಎಸ್ ಉಪಾಧ್ಯಕ್ಷ ಪ್ರಾಚಿ ಪಾಂಡೆ ಉಪಸ್ಥಿತರಿದ್ದರು.

‘ಬದಲಾವಣೆಗೆ ಶ್ರಮಿಸಿದ ಪಿ.ರಾಮಯ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್‌.ಡಿ.ದೇವೇಗೌಡ ಅವರು ಪ್ರಧಾನಿಯಾಗಿದ್ದಾಗ ಮಾಧ್ಯಮ ಸಲಹೆಗಾರರಂತಹ ಪ್ರಮುಖ ಹುದ್ದೆ ಅರಸಿ ಬಂದರೂ ಅದನ್ನು ಸುತಾರಾಂ ಒಪ್ಪದ ಪಿ.ರಾಮಯ್ಯ ಪತ್ರಕರ್ತರಾಗಿ ಅಷ್ಟೇ ಅಲ್ಲದೆ, ಸಮಾಜದ ಪ್ರಗತಿಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು’ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಮಾಧ್ಯಮ ಅಕಾಡೆಮಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು ಪ್ರೆಸ್‌ಕ್ಲಬ್, ವರದಿಗಾರರ ಕೂಟ ಜಂಟಿಯಾಗಿ ಮಂಗಳವಾರ ಗಾಂಧಿಭವನದಲ್ಲಿ ಆಯೋಜಿಸಿದ್ದ ಪಿ. ರಾಮಯ್ಯ ಅವರಿಗೆ ಶ್ರದ್ಧಾಂಜಲಿ, ‘ನಾನು ಹಿಂದೂ ರಾಮಯ್ಯ’ ಪುಸ್ತಕದ ಎರಡನೇ ಮುದ್ರಣದ ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಪಿ.ರಾಮಯ್ಯ ಅವರು ಪತ್ರಿಕಾ ವೃತ್ತಿಯನ್ನು ಸಮಾಜದ ಬದಲಾವಣೆಗೆ ಇರುವ ಅಸ್ತ್ರ ಎಂದುಕೊಂಡು ಅದೇ ರೀತಿ ಬದುಕಿದರು. ಆದಿಚುಂಚನಗಿರಿ ಮಠದ ಕಷ್ಟದ ಕಾಲದಲ್ಲೂ ಅವರು ಜತೆಗಿದ್ದರು. ಮಠದ ಬೆಳವಣಿಗೆಯಲ್ಲಿ ಅವರ ಪಾತ್ರವೂ ಇದೆ’ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಮಾತನಾಡಿ, ‘ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ರಾಮಯ್ಯ ಅವರು ಹಲವು ಶಿಕ್ಷಣ ಸಂಸ್ಥೆಗಳೊಂದಿಗೆ ಒಡನಾಟ ಹೊಂದಿದ್ದರು. ಸರಳ ಭಾಷೆಯಿಂದಲೇ ಅವರು ಬರೆದ ವಿಶೇಷ ವರದಿ, ಲೇಖನಗಳು ಸಮಾಜದಲ್ಲಿ ಬದಲಾವಣೆಗೆ ದಾರಿ ಮಾಡಿಕೊಟ್ಟಿವೆ. ಬೆಂಗಳೂರಿಗೆ ಕಾವೇರಿ ನೀರು ಬರಲು ರಾಮಯ್ಯ ಅವರ ಪಾತ್ರವೂ ಇದೆ’ ಎಂದರು.

ಕೃಷಿ ಸಚಿವ ಎನ್‌.ಚಲುವರಾಯ ಸ್ವಾಮಿ ಮಾತನಾಡಿ, ‘ರಾಜಕೀಯ ವಿಚಾರವಾಗಿ ಬರೆಯುತ್ತಲೇ ನನ್ನಂತಹ ಹಲವು ರಾಜಕಾರಣಿಗಳಿಗೆ ಅವರು ಮಾರ್ಗದರ್ಶನ ಮಾಡಿದ್ದಾರೆ. ಹಲವು ಪಾಠವನ್ನು ಅವರಿಂದ ಕಲಿತಿದ್ದೇನೆ ಎಂದು ನುಡಿದರು.

ಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮಾತನಾಡಿ, ‘ಮೇಲ್ಮನೆಯಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ಗಂಭೀರತೆ ಮತ್ತು ಮೌಲ್ಯಗಳನ್ನು ತರುವಲ್ಲಿ ರಾಮಯ್ಯ ಶ್ರಮಿಸಿದರು. ತಾವು ತೊಡಗಿಸಿಕೊಂಡಿದ್ದ ಎಲ್ಲಾ ಕ್ಷೇತ್ರಗಳ ಘನತೆ ಹೆಚ್ಚಿಸಿ ಮಾದರಿಗಳನ್ನು ನಮ್ಮೆದುರಿಗೆ ಬಿಟ್ಟು ಹೋಗಿದ್ದಾರೆ. ಈ ಮಾದರಿಗಳನ್ನು ಈಗಿನ ಪತ್ರಕರ್ತರು ಮುಂದುವರಿಸಬೇಕು’ ಎಂದು ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನಂ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ವರದಿಗಾರರ ಕೂಟದ ಅಧ್ಯಕ್ಷ ಆರ್. ಟಿ.ವಿಠ್ಠಲಮೂರ್ತಿ, ಪ್ರೆಸ್ ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಪತ್ರಕರ್ತರಾದ ಅರಕೆರೆ ಜಯರಾಂ, ಆಶಾ ಕೃಷ್ಣಸ್ವಾಮಿ ಮಾತನಾಡಿದರು. ರಾಮಯ್ಯ ಅವರ ಪುತ್ರ ಡಾ.ಬಾಲಾಜಿ, ಎಚ್‌.ಬಿ.ದಿನೇಶ್ ಉಪಸ್ಥಿತರಿದ್ದರು.

ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಎಚ್‌.ಬಿ.ದಿನೇಶ್, ಟಿ.ವೆಂಕಟೇಶ್, ಶಿವಾನಂದ ತಗಡೂರು, ನಿರ್ಮಲಾನಂದನಾಥ ಸ್ವಾಮೀಜಿ, ವೂಡೇ ಪಿ.ಕೃಷ್ಣ ಮತ್ತು ಕೆ.ವಿ.ಪ್ರಭಾಕರ್ ಅವರು ಪಿ.ರಾಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಭವನಕ್ಕೆ ಸರ್ಕಾರಿ ಜಾಗ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಭವನಗಳ ನಿರ್ಮಾಣಕ್ಕೆ ನಿಯಮ ಬಾಹಿರವಾಗಿ ಸರ್ಕಾರಿ ನಿವೇಶನ ಕಬಳಿಸಲಾಗುತ್ತಿದೆ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ರಾಜ್ಯ ಸರ್ಕಾರ ಬಡವರಿಗೆ ಮನೆ ನೀಡಿಲ್ಲ. ಭೂ ರಹಿತರಿಗೆ ಭೂಮಿ ನೀಡಿಲ್ಲ. ಆದರೆ, ತಾನೇ ಭೂಮಿ ಕಬಳಿಸುವ ಕೆಲಸ ಮಾಡುತ್ತಿದೆ. ಮುಧೋಳ, ಬಾದಾಮಿ, ಚಿಕ್ಕಬಳ್ಳಾಪುರ, ತುಮಕೂರು, ಚಾಮರಾಜನಗರ, ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಹಲವೆಡೆ ನಿವೇಶನಗಳನ್ನು ನಿಯಮ ಉಲ್ಲಂಘಿಸಿ ಅತ್ಯಂತ ಕಡಿಮೆ ಬೆಲೆಗೆ ಪಡೆದುಕೊಂಡಿದ್ದಾರೆ. ಹುಬ್ಬಳ್ಳಿ- ಧಾರವಾಡದಲ್ಲಿ ನಿವೇಶನಕ್ಕೆ ದರವನ್ನೇ ನಮೂದಿಸಿಲ್ಲ ಎಂದು ದೂರಿದರು.

> **ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಾಗ ಬಳಸಿಕೊಳ್ಳುತ್ತಿದ್ದೇವೆ. ಬಿಜೆಪಿಯವರು ಏನಾದರೂ ಆರೋಪ ಮಾಡಿಕೊಳ್ಳಲಿ. ಈ ಬಗ್ಗೆ ಯಾರಾದರೂ ನ್ಯಾಯಾಲಯದ ಮೆಟ್ಟಿಲೇರುವುದಾದರೆ ಏರಲಿ**
> **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಸಚಿವ ಸಂಪುಟದ ಅನುಮೋದನೆ ಪಡೆದು ನಾಗರಿಕ ಸೌಲಭ್ಯದ ನಿವೇಶನಗಳನ್ನು ಮಂಜೂರು ಮಾಡಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಕೊಟ್ಟ ಮಾಹಿತಿಯನ್ನು ಛಲವಾದಿ ಬಿಡುಗಡೆ ಮಾಡಿದರು.

‘ಎಲ್ಲ ನಿವೇಶನಗಳನ್ನು ಸರ್ಕಾರ ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಭೂಕಬಳಿಕೆಯಿಂದ ಜೈಲಿಗೆ ಹೋಗುವ ಪರಿಸ್ಥಿತಿ ಬರಲಿದೆ. ಕಾಂಗ್ರೆಸ್ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು’ ಎಂದರು.

ಒಳಮೀಸಲಾತಿ ಮಸೂದೆ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಅಬಕಾರಿ ಸಚಿವ ಆರ್. ಬಿ.ತಿಮ್ಮಾಪುರ ನೇತೃತ್ವದ ನಿಯೋಗ ಒಳ ಮೀಸಲಾತಿ ಮಸೂದೆಗೆ ಅನುಮೋದನೆ ನೀಡುವಂತೆ ಕೋರಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಿತು.

ಪರಿಶಿಷ್ಟ ಜಾತಿ ಎಡಗೈ ಸಮುದಾಯದ ಶಾಸಕರು, ವಿಧಾನಪರಿಷತ್ ಸದಸ್ಯರು ಹಾಗೂ ಸಮುದಾಯ ಮುಖಂಡರನ್ನು ಒಳಗೊಂಡ ನಿಯೋಗ ಲೋಕಭವನದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ, ‘ಸಂವಿಧಾನದ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಮೌಲ್ಯಗಳಿಗೆ ಅನುಗುಣವಾಗಿ ಪರಿಶಿಷ್ಟ ಜಾತಿಯ 101 ಒಳ ಸಮುದಾಯಗಳಿಗೆ ನ್ಯಾಯಸಮ್ಮತ ಮೀಸಲಾತಿ ಕಲ್ಪಿಸಲು ಮಸೂದೆ ಮಹತ್ವದ ಹೆಜ್ಜೆಯಾಗಿದೆ’ ಎಂದು ಮನವರಿಕೆ ಮಾಡಿಕೊಟ್ಟರು.

ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಸಹಮತದಿಂದ ಎರಡೂ ಸದನಗಳಲ್ಲಿ ಅಂಗೀಕರಿಸಲ್ಪಟ್ಟ ಒಳಮೀಸಲಾತಿ ಮಸೂದೆಗೆ ಅನುಮೋದನೆ ನೀಡಬೇಕು ಎಂದು ಕೋರಿದರು.

ಸಚಿವರಾದ ಕೆ.ಎಚ್‌.ಮುನಿಯಪ್ಪ, ಆರ್‌.ಬಿ.ತಿಮ್ಮಾಪುರ ನೇತೃತ್ವದ ನಿಯೋಗ ಒಳ ಮೀಸಲಾತಿ ಮಸೂದೆಗೆ ಅನುಮೋದನೆ ನೀಡುವಂತೆ ಕೋರಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿತು

ಆಹಾರ ಉತ್ಸವಕ್ಕೆ ಚಾಲನೆ

ಬೆಂಗಳೂರು: ಪ್ಯಾರಡೈಸ್‌ನ ಪಾಕಶಾಲೆಯು ನಗರದ ಜನತೆಗೆ ‘ಹೈದರಾಬಾದ್ ಹಲೀಮ್’ ಉಣಬಡಿಸಲು ಮುಂದಾಗಿದೆ. ಹಲೀಮ್ ಆಹಾರ ಉತ್ಸವ–2026 ಆರಂಭವಾಗಿದ್ದು ಪ್ಯಾರಡೈಸ್‌ನ ಮಳಿಗೆಗಳಲ್ಲಿ ಅಷ್ಟೇ ಅಲ್ಲದೆ, ಸ್ವಿಗ್ಗಿ ಮತ್ತು ಜೊಮ್ಯಾಟೊದಲ್ಲಿ ಆನ್‌ಲೈನ್ ಮೂಲಕ ಹಲೀಮ್ ತರಿಸಿಕೊಳ್ಳಬಹುದು.

ಪ್ಯಾರಡೈಸ್ ಪಾಕಶಾಲೆಯು ಕ್ಲಾಸಿಕ್ ಮಟನ್ ಹಲೀಮ್, ಪ್ಯಾರಡೈಸ್ ಬಿರಿಯಾನಿ ಜೊತೆಗೆ ವಿಶೇಷವಾಗಿ ತಯಾರಿಸಿದ ಚಿಕನ್ ಹಲೀಮ್ ಅನ್ನು ಪರಿಚಯಿಸಿದೆ ಎಂದು ಪ್ಯಾರಡೈಸ್ ಫುಡ್ ಕೋರ್ಟ್ ಪ್ರೈವೇಟ್ ಲಿಮಿಟೆಡ್‌ನ ಸಿಇಒ ಅಭಿಕ್ ಮಿತ್ರಾ ತಿಳಿಸಿದ್ದಾರೆ.

‘ಹಲೀಮ್ ಖಾದ್ಯವನ್ನು ಉತ್ತಮ ಗುಣಮಟ್ಟದ ಪದಾರ್ಥಗಳಿಂದ ತಯಾರಿಸಲಾಗುತ್ತದೆ. ಎಲ್ಲ ಕಡೆ ಒಂದೇ ರೀತಿಯ ವಿಶಿಷ್ಟವಾದ ರುಚಿಯನ್ನು ಕಾಪಾಡಿಕೊಳ್ಳಲಾಗುತ್ತಿದೆ. ಗ್ರಾಹಕರ ವಿಶ್ವಾಸವೇ ನಮಗೆ ಮುಖ್ಯ’ ಎಂದು ಪ್ಯಾರಡೈಸ್ ಪಾಕಶಾಲೆಯ ಉಪಾಧ್ಯಕ್ಷ ಸ್ವತಂತ್ರ ಗೌತಮ್ ಹೇಳಿದ್ದಾರೆ.

ಪ್ಯಾರಡೈಸ್ ಪ್ರಸ್ತುತ ನಗರದಲ್ಲಿ 11 ಮಳಿಗೆಗಳನ್ನು ಹೊಂದಿದ್ದು, ಈ ವರ್ಷದ ಅಂತ್ಯದ ವೇಳೆಗೆ 22ಕ್ಕೆ ವಿಸ್ತರಿಸುವ ಉದ್ದೇಶವಿದೆ ಎಂದು ತಿಳಿಸಿದ್ದಾರೆ.

ನೇರಳೆ ಹಬ್ಬ ಮುಂದೂಡಲು ಮನವಿ

ಬೆಂಗಳೂರು: ಪರೀಕ್ಷಾ ಸಮಯದಲ್ಲಿ ಆಯೋಜಿಸಿರುವ ನೇರಳೆ ಹಬ್ಬವನ್ನು (ಪರ್ಪಲ್ ಫೆಸ್ಟ್) ಮುಂದೂಡುವಂತೆ ಕೋರಿ ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಪದಾಧಿಕಾರಿಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಫೆ.27, 28 ಹಾಗೂ 1ರಂದು ನೇರಳೆ ಹಬ್ಬವನ್ನು ಆಯೋಜಿಸಲಾಗಿದೆ. ಪರೀಕ್ಷಾ ಸಮಯ ಆಗಿರುವ ಕಾರಣ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ. ಹಬ್ಬದ ಉದ್ದೇಶವೂ ಈಡೇರುವುದಿಲ್ಲ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಶೈಕ್ಷಣಿಕ, ಆರ್ಥಿಕ ಹಾಗೂ ವೈದ್ಯಕೀಯ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಹಬ್ಬವನ್ನು ಆಯೋಜಿಸಲಾಗಿದೆ. ನಿಗದಿಯಂತೆ ಹಬ್ಬ ನಡೆದರೆ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅಂಗವಿಕಲ ಮಕ್ಕಳು ಹಾಗೂ ಅವರ ಪೋಷಕರಿಗೆ ಆ ಹಬ್ಬದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ. ಪರೀಕ್ಷಾ ಕಾಲ ಮುಗಿದ ಮೇಲೆ ಅಂದರೆ ಏಪ್ರಿಲ್– ಮೇ ತಿಂಗಳಲ್ಲಿ ನೇರಳೆ ಹಬ್ಬವನ್ನು ಆಯೋಜಿಸಬೇಕು ಎಂದು ಕಾರ್ಯಾಧ್ಯಕ್ಷ ಚಂದ್ರಶೇಖರ್ ಪುಟ್ಟಪ್ಪ ಕೋರಿದ್ದಾರೆ.

IN THE COURT OF THE XXXVIII ADDL. CITY CIVIL & SESSIONS JUDGE, AT BANGALORE
O.S NO. 4241/2025 (CCH-39)

Plaintiff : Infiniti Research Marketing Solutions India Private Limited, A company incorporated under the Companies Act, 1956 Having its registered office at:Cessna Business Park, Embassy Signet, 1st Floor, Kadubeesanahalli, Bangalore-560103, Represented by its Authorised Representative: Mr. Shitikantha Chand -V/s-

Defendants: 1. Mr. Faizan Akthar
2. Beige Market Intelligence LLP
3. Ms. Falak Erfan Randerian
4. Ms. Shahnaz Akhtar
5. Mr. Imran Mushtaq

SUMMONS TO THE DEFENDANT UNDER ORDER V RULE 20 OF THE CIVIL PROCEDURE CODE, 1908

To : 1.Mr. Faizan Akhtar, S/o Mr. Shad Akther, Aged about 37 years, Residing at No 201, Sravanthi Classic, 4th A Main, 6th Cross, NS Palya, BTM 2nd Stage, Bangalore 560076.
2. Beige Market Intelligence LLP, A Limited Liability Partnership Having its registered office at #575, 2nd Main, Off 7th Cross, MICO Layout, BTM Layout 2nd Stage, Bangalore- 560076. Represented by its Designated Partners
3. Ms. Falak Erfan Randerian, W/o Faizan Akhtar, Aged about 37 years, The designated partner of Defendant No. 2 Residing at No 201, Sravanthi Classic, 4th A Main, 6th Cross, NS Palya, BTM 2nd Stage, Bangalore 560076
4. Ms. Shahnaz Akhtar, D/o Mohammed Omerdaraz, Aged about 60 years, The designated partner of Defendant No. 2 Residing at No 201, Sravanthi Classic, 4th A Main, 6th Cross, NS Palya, BTM 2nd Stage, Bangalore 560076
5. Mr. Imran Mushtaq, Aged about 32 years, S/o Mr. Mushtaq Ahmad Mir Residing at Building No. 960, F1, 21st Cross, 9th Main, HSR Sector 7, Bangalore-560102.

Whereas the above named plaintiff instituted a suit against you seeking permanent injunction restraining you from divulging the confidential and proprietary information of the plaintiff, permanent injunction restraining you from soliciting employees and clients of the plaintiff, permanent injunction restraining you from publishing or selling reports prepared on the basis of confidential information extracted from the plaintiff, direction ordering take down of all reports prepared on the basis of the plaintiff's proprietary information from the defendant's website, return of confidential information, production of accounts, payment of losses and damages and other consequent reliefs.

You are hereby summoned to appear before this Court **on 10.03.2026 at 11:00 AM** in person or through an advocate/ pleader to answer the questions to the same, failing which the suit will be heard and determined ex-parte.

Given under my hand & seal of the court, this 9th day of February 2026.

By Order of the Court, Asst. Registrar, City Civil Court, Bangalore.

Sharan A. Kukreja,
Cyril Amarchand Mangaldas,
3rd Floor, Prestige Falcon Tower, 19, Brunton Road, Bangalore 560025.

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಿಂದ ಪಾರ್ಸೆಲ್ ಸ್ಥಳ, ಪಾರ್ಕಿಂಗ್ ಮತ್ತು ಜಾಹೀರಾತು ಮತ್ತು ವಿವಿಧ ಗುತ್ತಿಗೆಗಳಿಗಾಗಿ ಇ–ಹರಾಜು

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ದಿನಾಂಕಗಳ ಇ–ಹರಾಜುಗಳಿಗೆ ಬಿಡ್ಡುದಾರರನ್ನು ಆಹ್ವಾನಿಸಿದ್ದಾರೆ.

1. ಊಟೋಪಹಾರ : 03.03.2026, 04.03.2026, 09.03.2026
2. ಪಾರ್ಕಿಂಗ್ : 20.02.2026, 25.02.2026, 04.03.2026, 10.03.2026
3. ಜಾಹೀರಾತು : 20.02.2026, 04.03.2026, 09.03.2026
4. ಪಾರ್ಸೆಲ್‌ಗಳು : 18.02.2026, 26.02.2026, 05.03.2026, 10.03.2026
5. ಪಾವತಿ & ಬಳಕೆ : 17.02.2026, 05.03.2026, 09.03.2026
6. ವಿವಿಧ : 18.02.2026, 23.02.2026, 27.02.2026, 05.03.2026, 06.03.2026, 10.03.2026

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಭೇಟಿ ನೀಡಿ

[illegible]

RailOne [illegible]

South Western Railway [illegible] @SWRailwayOfficial @sw_railways

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್
TeamLease Putting India to Work
CIN: L74140KA2000PLC118395
[illegible]
ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001
corporateaffairs@teamlease.com / https://group.teamlease.com/

ಅಂಚೆ ಮತದಾನ ಸೂಚನೆ, ರಿಮೋಟ್ ಇ-ವೋಟಿಂಗ್ ವಿವರಗಳು ಮತ್ತು ಅಂತಿಮ ದಿನಾಂಕ

[illegible]

ಕ್ರ. ಸಂ.	ನಿರ್ಣಯದ ವಿವರ	ನಿರ್ಣಯದ ಬಗೆ
1	[illegible]	ಸಾಮಾನ್ಯ
2	[illegible]	ಸಾಮಾನ್ಯ
3	[illegible]	ವಿಶೇಷ
4	[illegible]	ಸಾಮಾನ್ಯ

[illegible]

ಇ-ವೋಟಿಂಗ್ ಪ್ರಾರಂಭ	ಇ-ವೋಟಿಂಗ್ ಮುಕ್ತಾಯ
ಫೆಬ್ರುವರಿ 18, 2026 ಭಾ.ಕಾ. ಬೆಳಗ್ಗೆ 09.00	ಮಾರ್ಚ್ 19, 2026 ಭಾ.ಕಾ. ಸಂಜೆ 05.00

[illegible]

ದಿನಾಂಕ: ಫೆಬ್ರುವರಿ 17, 2026
ಸ್ಥಳ: ಬೆಂಗಳೂರು
ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/–
ಅಲೋಕ ಚಂದ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲೈಯನ್ಸ್ ಆಫೀಸರ್
(M. No. F10911)

ಕೇಂದ್ರೀಯ ವಿದ್ಯಾಲಯ ಡೀಸೆಲ್ ಲೋಕೋ ಶೆಡ್, ಕೃಷ್ಣರಾಜಪುರಂ, ಬೆಂಗೂರು–36
केन्द्रीय विद्यालय डीज़ल लोको शेड कृष्णाराजपुरम बेंगलूरू 560 036
KENDRIYA VIDYALAYA
DIESEL LOCO SHED, KRISHNARAJAPURAM, BENGALURU-560036 Ph. 080-25616000
Website: https://krishnarajapuram.kvs.ac.in E-mail ID: kvkrpuramdls@gmail.com
F.13049/ಕೆ.ವಿ.ಕೆ.ಆರ್.ಪುರಂ/2025- 26/ Date: 17/02/2026

ವಾಕ್–ಇನ್–ಸಂದರ್ಶನ

2026–27ನೇ ಶೈಕ್ಷಣಿಕ ವರ್ಷಕ್ಕೆ ಅರೆಕಾಲಿಕ/ಗುತ್ತಿಗೆ ಶಿಕ್ಷಕರ ಫಲಕವನ್ನು ಸಿದ್ಧಪಡಿಸಲು, ಈ ಕೆಳಗಿನ ಹುದ್ದೆಗಳಿಗೆ ವಾಕ್–ಇನ್–ಸಂದರ್ಶನವನ್ನು 24.02.2026 ರಂದು ಬೆಳಿಗ್ಗೆ 9.00ಕ್ಕೆ ಬೆಂಗಳೂರಿನ ಕೆ.ವಿ. ಕೃಷ್ಣರಾಜಪುರಂನಲ್ಲಿ ನಡಸಲಾಗುವುದು. ನೊಂದಣಿ ಸಮಯ : ಬೆಳಿಗ್ಗೆ 8.00 ರಿಂದ 10.00 ರವರೆಗೆ.

ದಿನಾಂಕ	ಪೋಸ್ಟ್
24.02.2026	1. ಸ್ನಾತಕೋತ್ತರ ಶಿಕ್ಷಕರು – ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಗಣಿತ, ಕಂಪ್ಯೂಟರ್, ವಿಜ್ಞಾನ, ಇಂಗ್ಲಿಷ್, ಹಿಂದಿ. 2. ತರಬೇತಿ ಪಡೆದ ಪದವೀಧರ ಶಿಕ್ಷಕರು – ಇಂಗ್ಲಿಷ್, ಹಿಂದಿ, ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಸಂಸ್ಕೃತ 3. ಪ್ರಾಥಮಿಕ ಶಿಕ್ಷಕರು
	ಇತರ ಹುದ್ದೆಗಳು – ಕೌನ್ಸಿಲರ್, ಸ್ಟಾಫ್ ನರ್ಸ್, ವಿಶೇಷ ಶಿಕ್ಷಕರು, ಕಂಪ್ಯೂಟರ್ ಬೋಧಕರು, ಕ್ರೀಡಾ ಬೋಧಕರು (ಹಾಕಿ, ಬ್ಯಾಸ್ಕೆಟ್‌ಬಾಲ್), ಯೋಗ ಬೋಧಕರು ಮತ್ತು ಕನ್ನಡ ಭಾಷಾ ಶಿಕ್ಷಕರು
ಪ್ರಮುಖ ಮಾಹಿತಿ	1. ಅಭ್ಯರ್ಥಿಗಳು ನೋಂದಣಿಗೆ ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆ, ಅರ್ಹತೆಯ ಮೂಲ ಪ್ರಮಾಣಪತ್ರಗಳು, ಪ್ರಮಾಣಪತ್ರಗಳ ಸ್ವಯಂ–ದೃಢೀಕೃತ ಪ್ರತಿಗಳ ಒಂದುಸೆಟ್ ಮತ್ತು 2 ಪಾಸ್‌ಪೋರ್ಟ್ ಗಾತ್ರದ ಛಾಯಾಚಿತ್ರಗಳೊಂದಿಗೆ ಹಾಜರಾಗಬೇಕು. 2. ಸಂದರ್ಶನಕ್ಕೆ ಯಾವುದೇ ಪ್ರಯಾಣ ಭತ್ಯೆ (ಟಿಎ/ಡಿಎ) ನೀಡಲಾಗುವುದಿಲ್ಲ 3. ಅರ್ಜಿ ನಮೂನೆ ಡೌನ್‌ಲೋಡ್ ಮಾಡುವುದು, ಅರ್ಹತಾ ಮಾನದಂಡಗಳು, ಕನಿಷ್ಠ ಅರ್ಹತೆ ಇತ್ಯಾದಿಗಳಂತಹ ಹೆಚ್ಚಿನ ವಿವರಗಳಿಗಾಗಿ ಶಾಲೆಯ ವೆಬ್‌ಸೈಟ್‌ಗೆ ಭೇಟಿ ನೀಡಿ. https://krishnarajapuram.kvs.ac.in

ಪ್ರಾಂಶುಪಾಲರು
ಕೇಂದ್ರೀಯ ವಿದ್ಯಾಲಯ ಕೃಷ್ಣರಾಜಪುರಂ, ಬೆಂಗಳೂರು

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560100
E-Mail: ka.konappanaagrahara.tmc@gmail.com
ನಂ.ಪು.ಕಾ.ಕೋ/ತಾಂ.ಶಾ/ಸಿ.ಆರ್/63/2025–26 ದಿನಾಂಕ: 17.02.20526

ಟೆಂಡರ್ ಪ್ರಕಟಣೆ

2025–26ನೇ ಸಾಲಿನ ಪುರಸಭಾ ನಿಧಿಯಡಿ ಕೈಗೊಂಡಿರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ	ವರ್ಗ
01	DMA/2025-26/RD/WORK_INDENT48562/CALL-3 DMA/2025-26/BD/WORK_INDENT48470/CALL-2 DMA/2025-26/OW/WORK_INDENT54632 DMA/2025-26/RD/WORK_INDENT55130 DMA/2025-26/OW/WORK_INDENT55330	Others
02	DMA/2025-26/RD/WORK_INDENT55250 DMA/2025-26/RD/WORK_INDENT55245	Reserved

ಟೆಂಡರ್ ದಿನಾಂಕದ ವಿವರಗಳು: ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 05.03.2026 ಸಂಜೆ 17.00 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ: 06.03.2026ರ ಸಾಯಂಕಾಲ 17.15 ಗಂಟೆಗೆ,** ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು ಯಾವುದೇ ವಾರ್ತೆ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/– ಮುಖ್ಯಾಧಿಕಾರಿ ಪುರಸಭೆ, ಕೋನಪ್ಪನ ಅಗ್ರಹಾರ
ಸಹಿ/– ಆಡಳಿತಾಧಿಕಾರಿಗಳು ಪುರಸಭೆ, ಕೋನಪ್ಪನ ಅಗ್ರಹಾರ

ವಾಸಾಸಂಇ/ವಾಪ್ರ./ಶಿರಡಿಸಾಯಿ/5690/2025–26

ನಗರಸಭಾ ಕಾರ್ಯಾಲಯ, ಶಿಡ್ಲಘಟ್ಟ ಚಿಕ್ಕಬಳ್ಳಾಪುರ ಜಿಲ್ಲೆ.
Phone No: 08158-254404, Fax Line: 08158 - 254405, Website:www.Shidlaghattacity.mrc.gov.in, E- mail:itstaff_ulb_sidlaghatta@yahoo.co.in
ಸಂಖ್ಯೆ:ನಕಾಶಿ/ಸ.ಅ/ಟೆಂಡರ್–03/2025–26 ದಿನಾಂಕ: 13.02.2026

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಶಿಡ್ಲಘಟ್ಟ ನಗರಸಭೆಗೆ ಬಿಡುಗಡೆಯಾಗಿರುವ ಅನುದಾನದಲ್ಲಿ ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವ ಕ್ರಿಯಾಯೋಜನೆ ಅನುಮೋದಿತ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾಗಿರುವ ಅರ್ಹ ಸಿವಿಲ್, ವಿದ್ಯುತ್ ಗುತ್ತಿಗೆದಾರರು/ ಸರಬರಾಜುದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಗಳನ್ವಯ ನಿಗದಿತ ನಮೂನೆಯಲ್ಲಿ ಟೆಂಡರ್‌ಗಳನ್ನು ಏಕ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿದೆ.

(1)DMA/2025-26/SE6591/CALL-3, (2) DMA/2025-26/ SE7272, (3) DMA/2025-26/OW/WORK_INDENT55317, (4) DMA/2025-26/OW/WORK_INDENT55315

ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(www.https://kppp.karnataka.gov.in/)** ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 26.02.2026ರ 17:30 ಘಂಟೆಯೊಳಗೆ** ಹಾಗೂ ಟೆಂಡರ್ ತೆರೆಯುವ **ದಿನಾಂಕ: 28.02.2026 ಬೆಳಗ್ಗೆ 11:00 ಘಂಟೆಗೆ** ಹೆಚ್ಚಿನ ವಿವರಗಳನ್ನು ನಗರಸಭೆಯ ವೆಬ್‌ಸೈಟ್ **www.shidlaghattacity.mrc.gov.in** ನಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ಸೂಚಿಸಿರುವ ದಿನಗಳನ್ನು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ, ಮುಂದಿನ ದಿನಗಳನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– (ಅಮೃತ ಜಿ), ಪೌರಾಯುಕ್ತರು, ನಗರಸಭೆ, ಶಿಡ್ಲಘಟ್ಟ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:424/ಕೆಎಸ್‌ಎಂಸಿಎ/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU–460/4124/2025–26 ದಿನಾಂಕ: 17.02.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ [illegible]

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ರೋಹಿತ್ ಪಿ. & ಕಿಶೋರ್‌ಕುಮಾರ್ ಟಿ. ರವರ ಜಿಪಿಎ & ಜೆಡಿಎದಾರರಾದ [illegible]	ಬೆಂಗಳೂರು ಪೂರ್ವ	ವರ್ತೂರು	ವಾಲೇಪುರ	31/15	0–10.25	ವ್ಯವಸಾಯ	ವಸತಿ
2	[illegible]				31/16	0–10		

ಷರತ್ತು: [illegible]

ಸಹಿ/– ನಗರ ಯೋಜನ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಯಲಹಂಕದಲ್ಲಿ 'ಮೆಗಾ ಕೋಚಿಂಗ್ ಟರ್ಮಿನಲ್'

ದೇವನಹಳ್ಳಿ ಬದಲು ಯಲಹಂಕದಲ್ಲಿ ನಿರ್ಮಾಣ, ಕಾರ್ಯಸಾಧ್ಯತೆ ಅಧ್ಯಯನಕ್ಕೆ ರೈಲ್ವೆ ಮಂಡಳಿ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಲಹಂಕದಲ್ಲಿ ₹5,754 ಕೋಟಿ ವೆಚ್ಚದಲ್ಲಿ 'ಮೆಗಾ ಕೋಚಿಂಗ್ ಟರ್ಮಿನಲ್' ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಇದು ದೇಶದ ಅತಿದೊಡ್ಡ ಕೋಚಿಂಗ್ ಸೆಂಟರ್ ಆಗಲಿದೆ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ನಾಯಂಡಹಳ್ಳಿ ರೈಲು ನಿಲ್ದಾಣದಲ್ಲಿ ನಾಲ್ಕು ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಗೆ ಮಂಗಳವಾರ ಹಸಿರು ನಿಶಾನೆ ತೋರಿದ ಬಳಿಕ ಅವರು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು.

'ದೇವನಹಳ್ಳಿಯಲ್ಲಿ ಮೆಗಾ ಕೋಚಿಂಗ್ ಟರ್ಮಿನಲ್ ನಿರ್ಮಿಸಲು ಆರಂಭದಲ್ಲಿ ಉದ್ದೇಶಿಸಲಾಗಿತ್ತು. ದೂರದ ಕಾರಣಕ್ಕೆ ಯಲಹಂಕಕ್ಕೆ ಸ್ಥಳಾಂತರಿಸಲಾಗಿದೆ. ಕಾರ್ಯಸಾಧ್ಯತೆ ಅಧ್ಯಯನಕ್ಕೆ ರೈಲ್ವೆ ಮಂಡಳಿ ಅನುಮೋದನೆ ನೀಡಿದೆ' ಎಂದು ಮಾಹಿತಿ ನೀಡಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣವನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ₹1,370 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗುವುದು. ಯಶವಂತಪುರ ಹಾಗೂ ಕಂಟೋನ್ಮೆಂಟ್ ರೈಲು ನಿಲ್ದಾಣಗಳ ಆಧುನೀಕರಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಮಾಹಿತಿ ನೀಡಿದರು.

ವೈಟ್‌ಫೀಲ್ಡ್‌ನಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದ ತನಕ ನಾಲ್ಕು ಪಥದ ರೈಲು ಮಾರ್ಗ ನಿರ್ಮಾಣ ಕಾಮಗಾರಿಯು ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ. ತುಮಕೂರು–ಬೆಂಗಳೂರು ನಾಲ್ಕು ಪಥದ ಯೋಜನೆಗೆ ಈಗಾಗಲೇ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿ ಸಚಿವ ಸಂಪುಟಕ್ಕೆ ಸಲ್ಲಿಸಲಾಗಿದೆ ಎಂದು ಹೇಳಿದರು.

ವೈಟ್‌ಫೀಲ್ಡ್‌ನಿಂದ ಕೋಲಾರಕ್ಕೆ ನೇರ ರೈಲು ಸಂಪರ್ಕಕ್ಕಾಗಿ ಸಮೀಕ್ಷೆ ನಡೆಸಲು ಡಿಆರ್‌ಎಂ ಅವರಿಗೆ ಸೂಚನೆ ನೀಡಲಾಗಿದೆ ಎಂದು ಸೋಮಣ್ಣ ಮಾಹಿತಿ ನೀಡಿದರು.

ಸಂಚಾರ ದಟ್ಟಣೆ ತಗ್ಗಿಸಲು ಕೇಂದ್ರ ಸರ್ಕಾರವು ಕೆಳಸೇತುವೆಗಳು ಮತ್ತು ಮೇಲ್ಸೇತುವೆಗಳನ್ನು ನಿರ್ಮಿಸಿ, ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ತೆಗೆದುಹಾಕಲು ಆದ್ಯತೆ ನೀಡುತ್ತಿದೆ. ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ₹7,748 ಕೋಟಿ ಹಂಚಿಕೆ ಮಾಡಲಾಗಿದೆ. ರಾಜ್ಯದಲ್ಲಿ ₹52,950 ಕೋಟಿ ಮೊತ್ತದ ರೈಲ್ವೆ ಯೋಜನೆಗಳು ಪ್ರಗತಿಯಲ್ಲಿವೆ ಎಂದು ಮಾಹಿತಿ ನೀಡಿದರು.

ವಸತಿ ಸಚಿವ ಜಮೀರ್ ಅಹಮದ್ ಖಾನ್ ಮಾತನಾಡಿ, 'ಮೇಲ್ಸೇತುವೆಯನ್ನು ಪೂರ್ಣಗೊಳಿಸುವ ಮೂಲಕ ಜನರ ಬಹುಕಾಲದ ಬೇಡಿಕೆ ಈಡೇರಿದೆ' ಎಂದು ಹೇಳಿದರು.

ಸಂಸದ ಪಿ.ಸಿ.ಮೋಹನ್, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯಾ, ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಆಶುತೋಷ್ ಕುಮಾರ್ ಸಿಂಗ್, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪರೀಕ್ಷಿತ್ ಮೋಹನ್ ಪುರಿಯಾ ಉಪಸ್ಥಿತರಿದ್ದರು.

ನಾಯಂಡಹಳ್ಳಿಯ ರೈಲು ನಿಲ್ದಾಣದಲ್ಲಿ ನಾಲ್ಕು ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಗೆ ಸಚಿವ ವಿ.ಸೋಮಣ್ಣ ಅವರು ಮಂಗಳವಾರ ಹಸಿರು ನಿಶಾನೆ ತೋರಿದರು

ರಾಜ್ಯ ರಾಜಕಾರಣಕ್ಕೆ ಬರುವ ಯೋಚನೆ ಇಲ್ಲ: ಸೋಮಣ್ಣ

'ರಾಜ್ಯ ರಾಜಕಾರಣಕ್ಕೆ ಬರುವ ಯೋಚನೆ ಸದ್ಯಕ್ಕೆ ಇಲ್ಲ' ಎಂದು ಸಚಿವ ವಿ.ಸೋಮಣ್ಣ ಹೇಳಿದರು.

'ಪಕ್ಷ ಯಾವ ಜವಾಬ್ದಾರಿ ವಹಿಸುತ್ತದೊ ಅದನ್ನು ಮಾಡುತ್ತೇನೆ. ವ್ಯಕ್ತಿಗಿಂತ ಪಕ್ಷ ದೊಡ್ಡದು. ಹೈಕಮಾಂಡ್ ಹೇಳಿದಂತೆ ನಾನು ಕೇಳುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾಲ್ಕು ರೈಲುಗಳ ನಿಲುಗಡೆ

ನಾಯಂಡಹಳ್ಳಿಯ ರೈಲು ನಿಲ್ದಾಣದಲ್ಲಿ ಮೈಸೂರು–ಕೆಎಸ್‌ಆರ್ ಬೆಂಗಳೂರು (ಮೈಸೂರು ಚಾಮುಂಡಿ ಎಕ್ಸ್‌ಪ್ರೆಸ್), ಮೈಸೂರು–ಬಾಗಲಕೋಟೆ (ಮೈಸೂರು ಬಸವ ಎಕ್ಸ್‌ಪ್ರೆಸ್), ತೂತ್ತುಕುಡಿ–ಮೈಸೂರು (ತೂತ್ತುಕುಡಿ ಎಕ್ಸ್‌ಪ್ರೆಸ್), ಮೈಸೂರು–ಪಂಢರಪುರ (ಮೈಸೂರು ಗೋಲ್‌ಗುಂಬಜ್ ಎಕ್ಸ್‌ಪ್ರೆಸ್) ರೈಲುಗಳ ನಿಲುಗಡೆಗೆ ಸೋಮಣ್ಣ ಚಾಲನೆ ನೀಡಿದರು.

ಎಕ್ಸ್‌ಪ್ರೆಸ್ ರೈಲುಗಳು ನಾಯಂಡಹಳ್ಳಿ ನಿಲ್ದಾಣದಲ್ಲಿ ನಿಲುಗಡೆ ಮಾಡುವುದರಿಂದ ಸುತ್ತಮುತ್ತಲ ಪ್ರಯಾಣಿಕರಿಗೆ ಅನುಕೂಲ ಆಗಲಿದೆ ಎಂದು ಹೇಳಿದರು.

ಸಾರಿಗೆ ನಿಗಮಗಳ ನೌಕರರ 'ಬೆಂಗಳೂರು ಚಲೊ' ನಾಳೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ನಿಗಮಗಳ ನೌಕರರ ಬೇಡಿಕೆ ಈಡೇರಿಸಲು ಒತ್ತಾಯಿಸಿ ಫೆ.19ರಂದು 'ಬೆಂಗಳೂರು ಚಲೊ' ನಡೆಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ.

'ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಫೆ.19ರಂದು ಬೆಳಿಗ್ಗೆ 11 ಗಂಟೆಯಿಂದ ಶಾಂತಿಯುತ ಪ್ರತಿಭಟನಾ ಸಭೆ ನಡೆಸಲು ತೀರ್ಮಾನಿಸಲಾಗಿದೆ' ಎಂದು ಸಮಿತಿಯ ಸದಸ್ಯರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

'ಪ್ರತಿಭಟನಾ ಸಭೆಯ ತೀರ್ಮಾನವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರಿಗೆ ಪತ್ರ ಬರೆದು ತಿಳಿಸಲಾಗಿತ್ತು. ಆದರೆ, ಈವರೆಗೆ ಸರ್ಕಾರ ಅಥವಾ ಸಾರಿಗೆ ನಿಗಮಗಳ ಆಡಳಿತ ವರ್ಗದಿಂದ ಸ್ಪಂದನೆ ದೊರೆತಿಲ್ಲ' ಎಂದು ಹೇಳಿದರು.

ಜೆಇಇ: ಚೈತನ್ಯ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಉತ್ತಮ ಸಾಧನೆ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ನಡೆಸಿದ 2026ನೇ ಸಾಲಿನ ಜೆಇಇ (ಮೇನ್) ಪರೀಕ್ಷೆಯಲ್ಲಿ ಕರ್ನಾಟಕದ ಶ್ರೀಚೈತನ್ಯ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ.

ರಾಮ್ ನಿಖಿಲ್ (99.99)

ಆದಿತ್ಯ ಸಿಂಗ್ (99.98)

ತನ್ಮಯ್ (99.98)

ರಾಜ್ಯದ ಏಳು ವಿದ್ಯಾರ್ಥಿಗಳು ಶೇ 99.95ಕ್ಕೂ ಹೆಚ್ಚಿನ ಪರ್ಸೆಂಟೈಲ್ ಹಾಗೂ 115 ವಿದ್ಯಾರ್ಥಿಗಳು ಶೇ 99ಕ್ಕಿಂತ ಅಧಿಕ ಪರ್ಸೆಂಟೈಲ್ ಪಡೆದಿದ್ದಾರೆ.

ಜೆಇಇ (ಮೇನ್) ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ನಿರ್ದೇಶಕಿ ಸುಷ್ಮಾ ಬೊಪ್ಪಣ್ಣ ಅವರು ಅಭಿನಂದಿಸಿದ್ದಾರೆ.

ಅರ್ಚಿತ್ ಸಿಂಗ್ (99.96)

ಸುಧನ್ವನ್ (99.95)

ಎರಡು ಹಂತಗಳಲ್ಲಿ 20ಕ್ಕೂ ಹೆಚ್ಚು ಶಾಸಕರು ಆಸ್ಟ್ರೇಲಿಯಾಕ್ಕೆ?

ವಿದೇಶಕ್ಕೆ ಹಾರಿದ ಕಾಂಗ್ರೆಸ್ ಶಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಬಿ.ಎಂ. ನಾಗರಾಜ್, ಹಂಪನಗೌಡ ಬಾದರ್ಲಿ ಸೇರಿದಂತೆ ಎಂಟಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಮಂಗಳವಾರ ರಾತ್ರಿ ವಿದೇಶ ಪ್ರವಾಸಕ್ಕೆ ತೆರಳಿದರು.

ಎರಡು ಹಂತಗಳಲ್ಲಿ 20ಕ್ಕೂ ಹೆಚ್ಚು ಶಾಸಕರು ಆಸ್ಟ್ರೇಲಿಯಾ ಪ್ರವಾಸಕ್ಕೆ ತೆರಳಲಿದ್ದಾರೆ ಎಂದು ಗೊತ್ತಾಗಿದೆ. ಮೊದಲ ದಿನವಾದ ಮಂಗಳವಾರ ಎಂಟಕ್ಕೂ ಹೆಚ್ಚು ಮಂದಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಆಸ್ಟ್ರೇಲಿಯಾಗೆ ಹಾರಿದ್ದಾರೆ. ಉಳಿದವರು, ಬುಧವಾರ ಪ್ರಯಾಣ ಬೆಳೆಸಲಿದ್ದಾರೆ.

ಈ ವೇಳೆ ಮಾತನಾಡಿದ ಪುಟ್ಟರಂಗಶೆಟ್ಟಿ, 'ವಿದೇಶ ಪ್ರವಾಸ ಹೋಗಲು ಹೈಕಮಾಂಡ್ ಅನುಮತಿ ಬೇಕಾಗಿಲ್ಲ. ನಾನು ವಿದೇಶ ಪ್ರವಾಸಕ್ಕೆ ಹೋಗುತ್ತಿದ್ದೇನೆ. ಯಾರೆಲ್ಲಾ ಬರುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ' ಎಂದರು.

'ಕೆಪಿಸಿಸಿ ಅಧ್ಯಕ್ಷರಿಗೆ ಮಾಹಿತಿ ನೀಡಿದ್ದೀರಾ' ಎಂಬ ಪ್ರಶ್ನೆಗೆ, 'ಮುಖ್ಯಮಂತ್ರಿಗೇ ತಿಳಿಸಿಲ್ಲ. ಇನ್ನು ಉಪಮುಖ್ಯಮಂತ್ರಿಗೆ ಯಾಕೆ ಹೇಳಬೇಕು' ಎಂದು ಪ್ರಶ್ನಿಸಿದರು.

ಜಗಳೂರು ಶಾಸಕ ಬಿ. ದೇವೇಂದ್ರಪ್ಪ, ಪರಿಷತ್ ಸದಸ್ಯರಾದ ನಾಗರಾಜ್ ಯಾದವ್, ವಸಂತಕುಮಾರ್ ಅವರೂ ವಿದೇಶ ಪ್ರವಾಸಕ್ಕೆ ಮಂಗಳವಾರ ರಾತ್ರಿ ಹೊರಟ ತಂಡದಲ್ಲಿದ್ದಾರೆ.

ತಪ್ಪು ಎನ್ನುವುದು ಸರಿಯಲ್ಲ: 'ಶಾಸಕರು ಸದುದ್ದೇಶದಿಂದ ಮಾಡುವ ವಿದೇಶ ಪ್ರವಾಸಕ್ಕೆ ಹೋಗಿ ಬರಲಿ. ಅದನ್ನು ತಪ್ಪು ಎನ್ನುವುದು ಸರಿಯಲ್ಲ' ಎಂದು ಶಾಸಕ ಕೆ.ಎನ್. ರಾಜಣ್ಣ ಹೇಳಿದರು.

ವಿದೇಶದಲ್ಲಿ ನಮಗೆ ಒಳ್ಳೆಯದಾಗುವ ಕೆಲವು ಸಂಗತಿಗಳು ಇರುತ್ತವೆ. ಅದನ್ನು ತಿಳಿದುಕೊಂಡು ಬಂದು ಇಲ್ಲಿ ಅಳವಡಿಸಿಕೊಂಡರೆ ಒಳ್ಳೆಯದಲ್ಲವೇ?. ಪ್ರಪಂಚದ ಯಾವ ಯಾವ ದೇಶಗಳಲ್ಲಿ ರೈತರಿಗೆ ಅನುಕೂಲ ಆಗುವ ಪದ್ಧತಿ ಇರುತ್ತದೆಯೋ ಅದನ್ನು ಕಲಿತು ಬರಲಿ. ಯಾಕೆ ಪ್ರವಾಸನ್ನು ತಡೆಯುತ್ತಾರೆ, ಅದು ಸರಿಯಲ್ಲ. ಅದಕ್ಕೆ ಕಠಿಣ ಪದ ಬಳಸಿದರೆ ತಪ್ಪಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಅಪಾರ್ಥ ಕಲ್ಪಿಸುವ ಅಗತ್ಯವಿಲ್ಲ: 'ಶಾಸಕರು ವಿದೇಶಕ್ಕೆ ಹೋಗಿ ಬರುತ್ತಾರೆ. ಅದರಲ್ಲಿ ಅಪಾರ್ಥ ಕಲ್ಪಿಸುವ ಅಗತ್ಯವಿಲ್ಲ. ಕೆಲಸಗಳ ಒತ್ತಡ, ಗೊಂದಲಗಳ ಮಧ್ಯೆ ಕುಟುಂಬ ಹಾಗೂ ಸ್ನೇಹಿತರ ವಿದೇಶ ಪ್ರವಾಸ ಎಲ್ಲರಿಗೂ ನೆಮ್ಮದಿ ನೀಡುತ್ತದೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.

ಶಾಸಕರ ವಿದೇಶ ಪ್ರವಾಸ ಗೊತ್ತಿಲ್ಲ: ಡಿಕೆಶಿ

'ನನಗೆ ಯಾವ ಪ್ರವಾಸದ ಬಗ್ಗೆ ಮಾಹಿತಿಯೂ ಇಲ್ಲ. ಈ ಬಗ್ಗೆ ನನಗೆ ಮಾಧ್ಯಮಗಳಿಂದಷ್ಟೇ ಗೊತ್ತಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹೇಳಿದರು.

ಸಿದ್ದರಾಮಯ್ಯ ಅವರ ಆಪ್ತ ಶಾಸಕರು ಶಾಸಕರು ವಿದೇಶ ಪ್ರವಾಸ ಕೈಗೊಂಡಿರುವ ಬಗ್ಗೆ ಸುದ್ದಿಗಾರರ ಕೇಳಿದಾಗ ಪ್ರತಿಕ್ರಿಯಿಸಿದ ಅವರು, 'ಇದು ಅವರ ವೈಯಕ್ತಿಕ ಪ್ರವಾಸವೊ, ಬೇರೆಯವರು ಅವರನ್ನು ಪ್ರವಾಸಕ್ಕೆ ಕಳುಹಿಸುತ್ತಿದ್ದಾರೊ ಗೊತ್ತಿಲ್ಲ. ಪ್ರವಾಸ ಕಳುಹಿಸುತ್ತಿರುವವರು ಉಂಟು, ಪ್ರವಾಸ ಹೋಗುತ್ತಿರುವವರು ಉಂಟು. ಪಕ್ಷದ ಅಧ್ಯಕ್ಷನಾಗಿ ನಾನು ಇದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ' ಎಂದರು.

ಲೈಬ್ರರಿ ಅಪ್ರೆಂಟಿಸ್ 23ಕ್ಕೆ ಸಂದರ್ಶನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಒಂದು ವರ್ಷದ ಅವಧಿಗೆ ಲೈಬ್ರರಿ ಅಪ್ರೆಂಟಿಸ್ ಟ್ರೈನಿಗಳ ಆಯ್ಕೆಗಾಗಿ ಫೆ.23ರ ಬೆಳಿಗ್ಗೆ 11 ಗಂಟೆಗೆ ಜ್ಞಾನಭಾರತಿಯಲ್ಲಿ ನೇರ ಸಂದರ್ಶನವನ್ನು ಆಯೋಜಿಸಲಾಗಿದೆ.

ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಲೈಬ್ರರಿ ಅಂಡ್ ಇನ್ಫಾರ್ಮೇಶನ್ ಸೈನ್ಸ್‌ನಲ್ಲಿ ಉತ್ತೀರ್ಣರಾಗಿರುವ ಆಸಕ್ತರು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಿರುವ ಅರ್ಜಿಯ ನಮೂನೆಯಲ್ಲಿ ಸ್ವ ವಿವರಗಳನ್ನು ಭರ್ತಿ ಮಾಡಿ ಸೂಕ್ತ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ನೇರವಾಗಿ ಹಾಜರಾಗಬಹುದು.

ಮೆರಿಟ್ ಮತ್ತು ಮೀಸಲಾತಿ ಅನುಸಾರ 20 ಜನ ಅಪ್ರೆಂಟಿಸ್‌ಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರತಿ ತಿಂಗಳು ₹15,000 ಶಿಷ್ಯವೇತನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ವಿಶ್ವವಿದ್ಯಾಲಯ ಜಾಲತಾಣ https://bangaloreuniversity.Karnataka.gov.in ಸಂಪರ್ಕಿಸಬಹುದು.

'ದೌರ್ಜನ್ಯ: ಗುರುತು ಬಹಿರಂಗ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರ ಹೆಸರು, ವಿಳಾಸ ಹಾಗೂ ಯಾವುದೇ ರೀತಿಯ ಗುರುತುಗಳನ್ನು ಸಾರ್ವಜನಿಕವಾಗಿ ಹಾಗೂ ದಾಖಲೆಗಳಲ್ಲಿ ಬಹಿರಂಗ ಪಡಿಸುವಂತಿಲ್ಲ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ.

ಎಂ.ಎ. ಸಲೀಂ

ಮಹಿಳೆ ಹಾಗೂ ಮಕ್ಕಳ ಮೇಲೆ ನಡೆಯುವ ಅತ್ಯಾಚಾರ, ಪೋಕ್ಸೊ ಪ್ರಕರಣಗಳನ್ನು ದಾಖಲಿಸುವ ಸಂದರ್ಭದಲ್ಲಿ ದೂರು ಅರ್ಜಿ, ಪ್ರಥಮ ವರ್ತಮಾನ ವರದಿ (ಎಫ್‌ಐಆರ್) ಹಾಗೂ ತನಿಖಾ ವರದಿಗಳಲ್ಲಿ (ದೋಷಾರೋಪ ಪಟ್ಟಿ) ನೊಂದ ಮಹಿಳೆ ಅಥವಾ ಮಕ್ಕಳ ಹೆಸರು, ವಿಳಾಸದ ಗೋಪ್ಯತೆ ಕಾಪಾಡಿಕೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ಕೆಲವು ಪೊಲೀಸ್ ಠಾಣಾಧಿಕಾರಿಗಳು ಹಾಗೂ ತನಿಖಾಧಿಕಾರಿಗಳು ನ್ಯಾಯಾಲಯದ ಆದೇಶ ಪಾಲಿಸುತ್ತಿಲ್ಲ. ಅತ್ಯಾಚಾರ, ಪೋಕ್ಸೊ ಪ್ರಕರಣಗಳ ಪ್ರಥಮ ವರ್ತಮಾನ ವರದಿಯಲ್ಲಿ ನೊಂದವರ ಹೆಸರು, ವಿಳಾಸ ಸಾರ್ವಜನಿಕಗೊಳಿಸುವ ಹಾಗೂ ತನಿಖಾ ವರದಿಯಲ್ಲಿಯೂ ಸಹ ಗೋಪ್ಯತೆ ಕಾಪಾಡಿಕೊಳ್ಳದೇ ಇರುವುದು ಕಂಡುಬಂದಿದೆ. ನ್ಯಾಯಾಲಯದಲ್ಲಿ ನಡೆಯುವ ಪ್ರಕರಣಗಳ ವಿಚಾರಣೆಯ ವೇಳೆ ಆಕ್ಷೇಪಣೆ ಬರುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಆದೇಶದಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸಬೇಕು. ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನಗಳನ್ನು ಉಲ್ಲೇಖಿಸಿ, ಈ ಹೊಸ ಮಾರ್ಗಸೂಚಿಗಳನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದ್ದಾರೆ.

ಸೂಚನೆಗಳು ಏನೇನು?

- ದೂರಿನ ಮೂಲ ಅರ್ಜಿಯಲ್ಲಿ ನೊಂದ ಮಹಿಳೆ ಹಾಗೂ ಮಕ್ಕಳ ಹೆಸರು, ವಿಳಾಸ ಮತ್ತು ಗುರುತುಗಳ ವಿವರಗಳು ಇರತಕ್ಕದ್ದು
- ದೂರು ಸ್ವೀಕರಿಸಿದ ನಂತರ ಠಾಣಾಧಿಕಾರಿ/ತನಿಖಾಧಿಕಾರಿಯು ಮೂಲ ದೂರಿನಲ್ಲಿ ಇರುವ ನೊಂದವರ ಗುರುತುಗಳ ಗೋಪ್ಯತೆ ಕಾಪಾಡಲು ಮೂಲ ಹೆಸರಿನ ಬದಲು 'ಬೇರೆ ಹೆಸರು' ಅಥವಾ 'ಅಕ್ಷರ'ಗಳನ್ನು ನೀಡಿ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಕೆ ಮಾಡಬೇಕು. ಮೂಲ ದೂರು ಮತ್ತು ಯಾವ ಬದಲಿ ಹೆಸರು ನೀಡಲಾಗಿದೆ ಎಂಬುದನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು
- ಪ್ರಥಮ ವರ್ತಮಾನ ವರದಿಯಲ್ಲಿ ನೊಂದವರ ಮೂಲ ಹೆಸರು ದಾಖಲಿಸದೇ ಬದಲಿ ಹೆಸರು ಅಥವಾ ಅಕ್ಷರಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಹೆಸರು ಬದಲಾಯಿಸಲಾಗಿದೆ ಎಂದು ಟಿಪ್ಪಣಿಯಲ್ಲಿ ನಮೂದಿಸಬೇಕು
- ತನಿಖೆಯ ಯಾವುದೇ ಹಂತದಲ್ಲೂ ಸಂತ್ರಸ್ತರ ವಿವರಗಳು ಸೋರಿಕೆ ಆಗದಂತೆ ತನಿಖಾಧಿಕಾರಿಗಳು ಎಚ್ಚರ ವಹಿಸಬೇಕು

ಬಿಸಿಯೂಟ ತಾರತಮ್ಯಕ್ಕೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಗಳ (ಕೆಪಿಎಸ್) ಪದವಿಪೂರ್ವ ವಿದ್ಯಾರ್ಥಿಗಳಿಗೆ ಮಾತ್ರ ವಿಸ್ತರಿಸಿ, ಇತರ ಸರ್ಕಾರಿ ಮತ್ತು ಅನುದಾನಿತ ಪದವಿಪೂರ್ವ ಕಾಲೇಜುಗಳನ್ನು ಈ ಯೋಜನೆಯಿಂದ ಹೊರಗಿಟ್ಟಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್‌ನ (ಎಐಡಿಎಸ್‌ಒ) ಕರ್ನಾಟಕ ರಾಜ್ಯ ಸಮಿತಿ ಖಂಡಿಸಿದೆ.

'ಹಣಕಾಸಿನ ಅಥವಾ ತಾಂತ್ರಿಕ ಅಡಚಣೆಗಳಿದ್ದಲ್ಲಿ, ಸರ್ಕಾರವು ಅದನ್ನು ಪಾರದರ್ಶಕವಾಗಿ ಪರಿಹರಿಸಬೇಕು. ಇಂತಹ ವಿಭಜಿಸುವ ಕ್ರಮಗಳನ್ನು ಅನುಸರಿಸಬಾರದು' ಎಂದು ಸಮಿತಿಯ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.

ಅಮೆರಿಕ ರಾಯಭಾರಿ ಆಟೊ ಓಡಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತಕ್ಕೆ ನಿಯೋಜನೆಗೊಂಡಿರುವ ಅಮೆರಿಕ ರಾಯಭಾರಿ ಸರ್ಗಿಯೊ ಗೋರ್ ಅವರು ನಗರಕ್ಕೆ ಮಂಗಳವಾರ ಭೇಟಿ ನೀಡಿದ್ದು, ಸಂಸದ ತೇಜಸ್ವಿ ಸೂರ್ಯ ಅವರ ಜತೆಗೆ ಆಟೊದಲ್ಲಿ ಸಂಚರಿಸಿದರು.

ಬಳಿಕ ಇಂದಿರಾನಗರದ ಹೋಟೆಲ್‌ವೊಂದಕ್ಕೆ ಸರ್ಗಿಯೊ ಗೋರ್ ಅವರು ತೆರಳಿ ಮಸಾಲೆ ದೋಸೆ ಹಾಗೂ ಕಾಫಿ ಸವಿದರು.

'ಭಾರತ, ಅಮೆರಿಕದ ಬಾಂಧವ್ಯ, ವ್ಯಾಪಾರ, ತಂತ್ರಜ್ಞಾನ ಹಾಗೂ ಹೊಸ ಸಂಶೋಧನೆಗಳ ಬಗ್ಗೆ ಸರ್ಗಿಯೊ ಗೋರ್ ಅವರೊಂದಿಗೆ ಚರ್ಚಿಸಲಾಯಿತು. ಅವರಿಗೆ 'ನಮ್ಮ ಆಟೊ' ಪರಿಚಯಿಸಲಾಯಿತು. ಅವರೊಂದಿಗೆ ನಡೆಸಿದ ಆಟೊ ಸಂಚಾರವು ಸ್ಮರಣೀಯವಾಗಿತ್ತು' ಎಂದು ತೇಜಸ್ವಿ ಸೂರ್ಯ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಬೆಂಗಳೂರು ತಂತ್ರಜ್ಞಾನ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿದೆ. ಆದರೂ, ಸಂಪ್ರದಾಯವನ್ನು ಮರೆತಿಲ್ಲ. ದೇಶದ ಸಾಫ್ಟ್‌ವೇರ್ ಕ್ಷೇತ್ರದ ರಫ್ತಿನ ಪ್ರಮಾಣದಲ್ಲಿ ಬೆಂಗಳೂರಿನ ಪಾಲು ಶೇ 43ರಷ್ಟು ಇದೆ. ಭಾರತ ಹಾಗೂ ಅಮೆರಿಕದ ಆರ್ಥಿಕ ಸಂಬಂಧ ಗಟ್ಟಿಗೊಳ್ಳಲು ನಗರವು ಮಹತ್ವದ ಕೊಡುಗೆ ನೀಡುತ್ತಿದೆ' ಎಂದು ಹೇಳಿದ್ದಾರೆ.

ಅಮೆರಿಕ ರಾಯಭಾರಿ ಸರ್ಗಿಯೊ ಗೋರ್ ಅವರು ಸಂಸದ ತೇಜಸ್ವಿ ಸೂರ್ಯ ಜತೆ ಬೆಂಗಳೂರಿನಲ್ಲಿ ಮಂಗಳವಾರ ಆಟೊದಲ್ಲಿ ಓಡಾಡಿದರು

ನಗರದಲ್ಲಿ ಇಂದು

ಸಂತ ನಿಳೋಬ ಮಹಾರಾಜ ಅವರ ಸಪ್ತಾಹ ಮಹೋತ್ಸವ: ಸಂತ ನಿಳೋಬ ಮಹಾರಾಜ ಅವರ ಗಾಥಾ ಸ್ಥಾಪನೆ, ಜ್ಞಾನೇಶ್ವರಿ ಗ್ರಂಥ ಪಾರಾಯಣ, ಭಜನೆ, ಕೀರ್ತನೆ, ಪ್ರವಚನ, ಆಯೋಜನೆ ಹಾಗೂ ಸ್ಥಳ: ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ಸುಭೇದಾರ್ ಛತ್ರಂ ರಸ್ತೆ ಕ್ರಾಸ್, ಗಾಂಧಿನಗರ, ಬೆಳಿಗ್ಗೆ 7ರಿಂದ

ಸರ್ವಜ್ಞರ ಜಯಂತಿ: ಆಯೋಜನೆ: ಸರ್ವಜ್ಞ ಹಾಗೂ ತಿರುವಳ್ಳವರ್ ಸೌಹಾರ್ದ ವೇದಿಕೆ, ಸ್ಥಳ: ಕುವೆಂಪು ಪ್ರತಿಮೆ ಬಳಿ, ಮಲ್ಲೇಶ್ವರ ವೃತ್ತ, ಬೆಳಿಗ್ಗೆ 9.30

'ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಬಹುಶಿಸ್ತೀಯ ಅಧ್ಯಯನ' ವಿಷಯದ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಎ.ಸಿ. ಶ್ರೀನಿವಾಸ, ಪುಟ್ಟಣ್ಣ, ನಾಗರಾಜ್ ಯಾದವ್, ಎಚ್.ಎಸ್. ಗೋಪಿನಾಥ್, ಪ್ರಸಾದ್ ರೆಡ್ಡಿ, ಎಸ್.ಎಲ್. ಹೋಟಿ, ಉದ್ಘಾಟನಾ ಭಾಷಣ: ಎಸ್.ಆರ್. ನಿರಂಜನ, ಮುಖ್ಯ ಭಾಷಣ: ಪ್ರೊ. ಗೌರೀಶ, ಅಧ್ಯಕ್ಷತೆ: ಫಜೀಹಾ ಸುಲ್ತಾನ್, ಆಯೋಜನೆ ಹಾಗೂ ಸ್ಥಳ: ಹೊಸ ಅಕಾಡೆಮಿಕ್ ಬ್ಲಾಕ್, ನೃಪತುಂಗ ವಿಶ್ವವಿದ್ಯಾಲಯ, ಬೆಳಿಗ್ಗೆ 10

ಎಂ.ಚಿದಾನಂದಮೂರ್ತಿ ಅವರ ಸಮಗ್ರ ಸಾಹಿತ್ಯ ಸಂಪುಟ ಹಾಗೂ ವಿವಿಧ ಮರು ಮುದ್ರಣ ಕೃತಿಗಳ ಬಿಡುಗಡೆ: ಹಂಪ ನಾಗರಾಜಯ್ಯ, ಅತಿಥಿಗಳು: ಬಸವರಾಜ ಕಲ್ಗುಡಿ, ಮಂಜುನಾಥ ಟಿ., ವಿನಯ್ ಎಂ. ಚಿದಾನಂದಮೂರ್ತಿ, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 10



ಹಂಪ ನಾಗರಾಜಯ್ಯ

ಬೆಂಗಳೂರು ನಗರ ಜಿಲ್ಲೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರ ಹಾಗೂ ಸಾಂಸ್ಕೃತಿಕ ಸಮ್ಮಿಲನ: ಉದ್ಘಾಟನೆ: ಎಚ್.ಸಿ.ಮಹದೇವಪ್ಪ, ಉಪಸ್ಥಿತಿ: ಡಿ.ರಂದೀಪ್, ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಮೆಮೋರಿಯಲ್ ಟ್ರಸ್ಟ್, ಸಮಾಜ ಕಲ್ಯಾಣ ಇಲಾಖೆಯ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಸಂಘ, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 10.30

ಹಂಪ ನಾಗರಾಜಯ್ಯ ಅವರ 'ಚಾರುವಸಂತ' ಕೃತಿಯ ಜರ್ಮನ್ ಭಾಷಾಂತರ ಪುಸ್ತಕ ಜನಾರ್ಪಣೆ: ಪುರುಷೋತ್ತಮ ಬಿಳಿಮಲೆ, ಕೃತಿ ಬಗ್ಗೆ ಮಾತು: ಡಾ. ಉಮಾಮಹೇಶ್ವರಿ, ಮುಖ್ಯ ಅತಿಥಿ: ಆಯಿಷಾ ಖಾನಂ, ಎಚ್.ಎನ್. ಸುಬ್ರಹ್ಮಣ್ಯ, ಉಪಸ್ಥಿತಿ: ಎನ್. ತಿರುಮಲೇಶ್ವರ ಭಟ್, ವೆಂಕಟ ಶಿವಾರೆಡ್ಡಿ, ನಿತಿನ್ ಶಾ, ಆಯೋಜನೆ: ಕಮಲಾ ಹಂಪನಾ ಸಾಹಿತ್ಯ ವೇದಿಕೆ, ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಸಪ್ನ ಬುಕ್, ಸ್ಥಳ: ಎಚ್.ಎನ್. ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5

'ಸುಮಧ್ವ ವಿಜಯ' ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ ಹಾಗೂ ಸ್ಥಳ: ವಿಜಯ ಮಧ್ವ ಸಂಘ, 37/2, ಗಂಗಾಧರ ಬಡಾವಣೆ, ವಿಜಯನಗರ 2ನೇ ಹಂತ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ವಿದ್ಯಾಭೂಷಣ ಸೇರಿ ಮೂವರಿಗೆ ಪ್ರಶಸ್ತಿ

ಬೆಂಗಳೂರು: ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ ನೀಡುವ ಪ್ರಶಸ್ತಿಗೆ ಗಾಯಕ ವಿದ್ಯಾಭೂಷಣ ಸೇರಿ ಮೂವರು ಆಯ್ಕೆಯಾಗಿದ್ದಾರೆ.



ವಿದ್ಯಾಭೂಷಣ



ಮಾಧವ ಗುಡಿ

'ಜೀವಮಾನ ಸಂಗೀತ ಸಾಧನೆ ಪ್ರಶಸ್ತಿ ಹಾಗೂ 'ರಾಘವೇಂದ್ರ ಹರಿದಾಸ ಸಂಗೀತ ಸೇವಾ ಶಿರೋಮಣಿ' ಬಿರುದಿಗೆ ವಿದ್ಯಾಭೂಷಣರು ಭಾಜನರಾಗಿದ್ದಾರೆ. 'ಶ್ರೀಗುರುರಾಘವೇಂದ್ರ ಸಂಸ್ಮರಣ ಮರಣೋತ್ತರ ಪ್ರಶಸ್ತಿ'ಗೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ದಿವಂಗತ ಪಂಡಿತ್ ಮಾಧವ ಗುಡಿ, 'ಬೆಳಗೆರೆ ಮಹಾಲಕ್ಷ್ಮಮ್ಮ ಸಂಸ್ಮರಣ ಪ್ರಶಸ್ತಿ'ಗೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ತಿಮ್ಮಣ್ಣ ರಾಮಕೃಷ್ಣ ಭಟ್ಟ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಗಳು ತಲಾ ₹20 ಸಾವಿರ ನಗದು ಒಳಗೊಂಡಿವೆ.



ತಿಮ್ಮಣ್ಣ ರಾಮಕೃಷ್ಣ

ಪ್ರತಿಷ್ಠಾನವು 26ನೇ ವಾರ್ಷಿಕೋತ್ಸವ, ಪುರಂದರದಾಸರು, ಕನಕದಾಸರು ಹಾಗೂ ತ್ಯಾಗರಾಜರ ಆರಾಧನಾ ಮಹೋತ್ಸವ ಮತ್ತು ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಸಂಗೀತ–ನೃತ್ಯ ಕಾರ್ಯಕ್ರಮವನ್ನು ಇದೇ 19ರಿಂದ 22ರವರೆಗೆ ಬನಶಂಕರಿ 2ನೇ ಹಂತದಲ್ಲಿರುವ ದೇವಗಿರಿ ವರಪ್ರದ ವೆಂಕಟೇಶ್ವರ ದೇವಸ್ಥಾನದ ವೆಂಕೋಬಾಚಾರ್ಯ ಸ್ಮೃತಿ ಸಾಂಸ್ಕೃತಿಕ ಮಂಟಪದಲ್ಲಿ ಹಮ್ಮಿಕೊಂಡಿದೆ. ಪ್ರತಿನಿತ್ಯ ಸಂಜೆ 5 ಗಂಟೆಯಿಂದ ಕಾರ್ಯಕ್ರಮಗಳು ನಡೆಯಲಿವೆ.

ಸರ್ಕಾರಿ ಕೆಲಸದಲ್ಲಿ ಶೇ 20ರಷ್ಟು ಮೀಸಲಾತಿ: ರೈತ ಸಂಘ ಮನವಿ

ಬೆಂಗಳೂರು: 'ರೈತ ಯುವಕರನ್ನು ವಿವಾಹವಾಗುವ ಹೆಣ್ಣು ಮಕ್ಕಳಿಗೆ ಕನಿಷ್ಠ ₹ 10 ಲಕ್ಷ ಠೇವಣಿ, ಕೃಷಿ ಅಥವಾ ಕೃಷಿ ಪೂರಕ ಸಣ್ಣ ಉದ್ದಿಮೆಗಳನ್ನು ಸ್ಥಾಪಿಸಲು ಸರ್ಕಾರವೇ ಭದ್ರತೆ ನೀಡಿ ಬಡ್ಡಿರಹಿತ ಸಾಲ ಒದಗಿಸಿ ಉತ್ತೇಜನ ನೀಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘ ಮನವಿ ಮಾಡಿದೆ.

ವಿಧಾನಸೌಧದಲ್ಲಿ ಮಂಗಳವಾರ ನಡೆದ ರೈತ ಸಂಘಟನೆಗಳ ಜೊತೆಗಿನ ಬಜೆಟ್ ಪೂರ್ವಭಾವಿ ಸಭೆಯಲ್ಲಿ ರೈತ ಸಂಘಟನೆಗಳು ಸಿದ್ದರಾಮಯ್ಯ ಅವರಿಗೆ ಈ ಮನವಿ ಸಲ್ಲಿಸಿವೆ.

'ರೈತ ಯುವಕರು ಮದುವೆ ಆಗಲು ವಧು ಸಿಗದೇ ಇರುವುದು ಒಂದು ಸಾಮಾಜಿಕ ಪಿಡುಗಾಗಿರುವುದು ವಿಷಾದನೀಯ. ಈ ಸಮಸ್ಯೆಗೆ ಕಾರಣಗಳನ್ನು ಕಂಡುಹಿಡಿಯಬೇಕು. ರೈತನ ಮಗನನ್ನು ಮದುವೆಯಾಗುವ ಹೆಣ್ಣು ಮಗಳಿಗೆ ಸರ್ಕಾರಿ ಕೆಲಸದಲ್ಲಿ ಶೇ 20ರಷ್ಟು ಮೀಸಲಾತಿ ನೀಡುವ ಯೋಜನೆ ಜಾರಿಗೆ ತರಬೇಕು' ಎಂದೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಮನವಿ ಪತ್ರ ಸಲ್ಲಿಸಿದೆ.

15 ಮಂದಿ ಡ್ರಗ್ ಪೆಡ್ಲರ್‌ಗಳ ಬಂಧನ

₹21.50 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶದಿಂದ ದೆಹಲಿ, ಕೇರಳ ಮೂಲಕ ನಗರಕ್ಕೆ ಪೂರೈಕೆ ಆಗುತ್ತಿದ್ದ ವಿವಿಧ ಮಾದರಿಯ ₹21.50 ಕೋಟಿ ಮೌಲ್ಯದ ಮಾದಕ ವಸ್ತುವನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳ ಹಾಗೂ ಸ್ಥಳೀಯ ಪೊಲೀಸರ ತಂಡ ಕಾರ್ಯಾಚರಣೆ ನಡೆಸಿ ನೈಜೀರಿಯಾ ದೇಶದ ಇಬ್ರಾಹಿಂ ಬಕಾಯೋಕು (36), ಕೇರಳದ ಅಜ್ಮಲ್ ಪಿಡಿಯಕ್ಕಲ್ (29), ಮಜೀದ್ ಅಬೂಬಕರ್ (29) ಸೇರಿ 15 ಮಂದಿಯನ್ನು ಬಂಧಿಸಿದೆ.

ದಂಧೆಕೋರರಿಂದ 9 ಕೆ.ಜಿ. 460 ಗ್ರಾಂ ಹೈಡ್ರೊ ಗಾಂಜಾ, 5 ಕೆ.ಜಿ. 677 ಗ್ರಾಂ ಎಂಡಿಎಂಎ, 34 ಕೆ.ಜಿ ಗಾಂಜಾ, 131 ಗ್ರಾಂ ಕೊಕೇನ್, 462 ಮಿಲಿ ಗ್ರಾಂ ಹ್ಯಾಶಿಷ್ ಆಯಿಲ್, 29 ಎಲ್‌ಎಸ್‌ಡಿ ಪಿಲ್ಸ್, ₹24,400 ನಗದು, ಕಾರು, ದ್ವಿಚಕ್ರ ವಾಹನ, ನಾಲ್ಕು ಮೊಬೈಲ್ ವಶಕ್ಕೆ ಪಡೆದಿದ್ದಾರೆ. ಇವುಗಳ ಒಟ್ಟು ಮೌಲ್ಯ ₹10.59 ಕೋಟಿ. ಆದರೆ, ಮಾರುಕಟ್ಟೆ ಮೌಲ್ಯ ₹21.50 ಕೋಟಿ.

> ನಗರದಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ 15 ಮಂದಿ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ. ಮಾದಕ ವಸ್ತು ಎಲ್ಲಿಂದ, ಹೇಗೆ ಸರಬರಾಜು ಆಗುತ್ತಿತ್ತು ಎಂಬುದರ ತನಿಖೆ ನಡೆಯುತ್ತಿದೆ
> **ಸೀಮಾಂತ್‌ಕುಮಾರ್ ಸಿಂಗ್,** ನಗರ ಪೊಲೀಸ್ ಕಮಿಷನರ್

ಪ್ರಕರಣದ ಎಲ್ಲಾ ಆರೋಪಿಗಳಿಗೆ ಮಾದಕ ವಸ್ತುಗಳನ್ನು ಪೂರೈಕೆ ಮಾಡುತ್ತಿದ್ದ ವಿದೇಶಿ ಮತ್ತು ಹೊರ ರಾಜ್ಯದ ವ್ಯಕ್ತಿಗಳ ಪತ್ತೆ ಕಾರ್ಯ ಮುಂದುವರಿದಿದ್ದು, ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಆರೋಪಿಗಳಿಂದ ವಶಪಡಿಸಿಕೊಂಡಿರುವ ಮಾದಕ ವಸ್ತು

ನೈಜೀರಿಯಾ, ಉಗಾಂಡ, ದಕ್ಷಿಣ ಆಫ್ರಿಕಾ ದೇಶದ ಮೂವರು ಹಾಗೂ ಕೇರಳದ 12 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳ ವಿರುದ್ಧ ಅಮೃತಹಳ್ಳಿ, ಹೆಬ್ಬಗೋಡಿ, ಜೆ.ಬಿ.ನಗರ, ಶೇಷಾದ್ರಿಪುರ, ಮಹಾಲಕ್ಷ್ಮೀ ಲೇಔಟ್, ಗೋವಿಂದಪುರ ಸೇರಿ ಹಲವು ಪೊಲೀಸ್ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ನಗರದ ವಿಲ್ಸನ್ ಗಾರ್ಡನ್ ಬಳಿ ಸೆರೆಸಿಕ್ಕ ನೈಜೀರಿಯಾದ ಪೆಡ್ಲರ್ ಇಬ್ರಾಹಿಂ ಬಕಾಯೋಕು ಬಳಿ ₹11.40 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆಯಾಗಿದೆ. ಆರೋಪಿ ಬಿಸಿನೆಸ್ ವೀಸಾದಲ್ಲಿ 2018ರಲ್ಲಿಯೇ ಭಾರತಕ್ಕೆ ಬಂದಿದ್ದು, ನೆಲಮಂಗಲದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದುಕೊಂಡು ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ. ಆರೋಪಿ ವಿರುದ್ಧ ಹಿಮಾಚಲ ಪ್ರದೇಶದಲ್ಲಿ ಹಾಗೂ ನಗರದ ಮಾರತಹಳ್ಳಿ ಪೊಲೀಸ್ ಠಾಣೆಯಲ್ಲಿ ಈಗಾಗಲೇ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಬಸ್, ರೈಲಿನಲ್ಲಿ ಡ್ರಗ್ಸ್ ಸಾಗಣೆ

ದುಬೈ, ಥಾಯ್ಲೆಂಡ್, ದಕ್ಷಿಣ ಆಫ್ರಿಕಾ, ನೈಜೀರಿಯಾ ದೇಶದಲ್ಲಿ ಕಡಿಮೆ ಬೆಲೆಗೆ ದೊರೆಯುವ ಮಾದಕವಸ್ತು ವಿಮಾನದ ಮೂಲಕ ದೆಹಲಿ, ಕೇರಳ ತಲುಪುತ್ತಿತ್ತು. ಅಲ್ಲಿಂದ ಪೆಡ್ಲರ್‌ಗಳು ಬಸ್, ರೈಲಿನಲ್ಲಿ ನಗರಕ್ಕೆ ಸಾಗಣೆ ಮಾಡುತ್ತಿದ್ದರು. ಸ್ಥಳೀಯ ದಂಧೆಕೋರರೊಂದಿಗೆ ಶಾಮೀಲಾಗಿ ಕಾಲೇಜು ವಿದ್ಯಾರ್ಥಿಗಳು, ಐ.ಟಿ, ಬಿ.ಟಿ ಉದ್ಯೋಗಿಗಳು, ಸಾರ್ವಜನಿಕರು ಹಾಗೂ ಹೋಟೆಲ್, ಪಬ್‌ಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ತನಿಖೆ ವೇಳೆ ಗೊತ್ತಾಗಿದೆ.

ಅಪರಿಚಿತ ವ್ಯಕ್ತಿಯಿಂದ ಹಣಕ್ಕಾಗಿ ಬ್ಲ್ಯಾಕ್‌ಮೇಲ್: ಆರೋಪ

ನಟಿಯ ಖಾಸಗಿ ವಿಡಿಯೊ ಚಿತ್ರೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರುತೆರೆ ನಟಿ ಹಾಗೂ ರಿಯಾಲಿಟಿ ಶೋ ಸ್ಪರ್ಧಿಯ ಖಾಸಗಿ ವಿಡಿಯೊ ಚಿತ್ರೀಕರಣ ಮಾಡಿದ ಅಪರಿಚಿತ ವ್ಯಕ್ತಿ, ಕರೆ ಮಾಡಿ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಿರುವ ಘಟನೆ ನಡೆದಿದೆ.

ಈ ಸಂಬಂಧ, 32 ವರ್ಷದ ನಟಿ ನೀಡಿದ ದೂರಿನ ಮೇರೆಗೆ ಸೈಬರ್ ಕ್ರೈಂ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗಾಗಿ ಶೋಧ ಕಾರ್ಯ ಕೈಗೊಂಡಿದ್ದಾರೆ.

ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಸೆಲೆಬ್ರಿಟಿ ಕ್ರಿಕೆಟ್ ಲೀಗ್ ಟೂರ್ನಿ ಆಯೋಜಿಸಲಾಗಿತ್ತು. ಅದರ ಅಂಗವಾಗಿ ಫೆ.6, 7 ಮತ್ತು 8 ರಂದು ನಡೆದ ಕಾರ್ಯಕ್ರಮದಲ್ಲಿ ದೂರುದಾರೆ ಭಾಗಿಯಾಗಿದ್ದರು. ಈ ವೇಳೆ, ಕ್ರೀಡಾಂಗಣದಲ್ಲಿರುವ ಶೌಚಾಲಯಕ್ಕೆ ನಟಿ ಹೋಗಿದ್ದಾಗ, ಅಪರಿಚಿತ ವ್ಯಕ್ತಿ ವಿಡಿಯೊ ಚಿತ್ರೀಕರಣ ಮಾಡಿದ್ದಾನೆ.

‘ಕೆಲ ದಿನಗಳ ಬಳಿಕ ಸ್ವಾನ್ 3704722 ಎಂಬ ಇನ್‌ಸ್ಟಾಗ್ರಾಂ ಖಾತೆಯಿಂದ ತನ್ನ ಸ್ನೇಹಿತೆ ಖಾತೆಗೆ ಕೆಲ ವಿಡಿಯೊಗಳನ್ನು ಕಳುಹಿಸಿ, ಇವುಗಳನ್ನು ಬಹಿರಂಗ ಪಡಿಸದಿರಲು ಹಣ ಕೊಡುವಂತೆ ನಾಲ್ಕೈದು ಬಾರಿ ವಿಡಿಯೊ ಕರೆ ಮಾಡಿ, ಆಕೆಗೂ ಮತ್ತು ತನಗೂ ಬೇಡಿಕೆ ಇಟ್ಟಿದ್ದಾನೆ’ ಎಂದು ನಟಿ ದೂರಿನಲ್ಲಿ ತಿಳಿಸಿದ್ದಾರೆ.

‘ಒಂದು ವೇಳೆ ಹಣ ನೀಡದಿದ್ದರೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊಗಳನ್ನು ಹರಿಯಬಿಡಲಾಗುವುದು ಎಂದು ಬೆದರಿಕೆ ಹಾಕಿದ್ದಾನೆ. ಖಾಸಗಿ ವಿಡಿಯೊ ಸೆರೆ ಹಿಡಿದು ನನ್ನ ಗೌರವಕ್ಕೆ ಧಕ್ಕೆ ತಂದು, ಬ್ಲ್ಯಾಕ್‌ಮೇಲ್ ಮಾಡುತ್ತಿರುವ ಅಪರಿಚಿತ ವ್ಯಕ್ತಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಕೋರಿದ್ದಾರೆ.

ಬೈಕ್ ಡಿಕ್ಕಿ: ಬ್ಯಾಂಕ್ ಉದ್ಯೋಗಿ ಸಾವು

ಬೆಂಗಳೂರು: ರಾಜಾಜಿನಗರದಲ್ಲಿ ರಸ್ತೆ ದಾಟುವ ವೇಳೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಖಾಸಗಿ ಬ್ಯಾಂಕ್‌ನ ಮಹಿಳಾ ಉದ್ಯೋಗಿ ಮೃತಪಟ್ಟಿದ್ದಾರೆ.

ಲಗ್ಗೆರೆ ಸಮೀಪದ ಕೆಂಪೇಗೌಡ ಲೇಔಟ್‌ನ ನಿವಾಸಿ ಯೋಗೇಶ್ವರಿ (27) ಮೃತ ಯುವತಿ. ಘಟನೆಯಲ್ಲಿ ಬೈಕ್ ಸವಾರ ದೀಪಕ್ ಸಹ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಪಘಾತದ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಯೋಗೇಶ್ವರಿ

ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿರುವ ಬ್ಯಾಂಕ್‌ವೊಂದರಲ್ಲಿ ಯೋಗೇಶ್ವರಿ ಉದ್ಯೋಗಿಯಾಗಿದ್ದರು. ಸೋಮವಾರ ಮಧ್ಯಾಹ್ನ ಬ್ಯಾಂಕ್ ಸಮೀಪದಲ್ಲೇ ಇದ್ದ ಕ್ಯಾಂಟೀನ್‌ವೊಂದರಿಂದ ಊಟ ತೆಗೆದುಕೊಂಡು ಬರಲು ರಸ್ತೆ ದಾಟುತ್ತಿದ್ದರು. ಈ ಸಂದರ್ಭದಲ್ಲಿ ಅತಿ ವೇಗವಾಗಿ ಬಂದ ಬೈಕ್ ಸವಾರ, ನಿಯಂತ್ರಣ ತಪ್ಪಿ ಯೋಗೇಶ್ವರಿಗೆ ಡಿಕ್ಕಿ ಹೊಡೆದಿದ್ದು ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ. ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಕೊಂಡೊಯ್ಯಲಾಗಿದೆ. ಘಟನಾ ಸ್ಥಳಕ್ಕೆ ರಾಜಾಜಿನಗರ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆಸ್ತಿ ಕಲಹ: ಬೇಸ್‌ಬಾಲ್ ಬ್ಯಾಟ್, ಹಾಕಿ ಸ್ಟಿಕ್‌ನಿಂದ ಹಲ್ಲೆ

ತಂದೆಯ ಕೊಂದ ಮಕ್ಕಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ಕಲಹಕ್ಕೆ ಮಕ್ಕಳಿಂದಲೇ ಹಲ್ಲೆಗೊಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ತಂದೆ, ಮೃತಪಟ್ಟ ಘಟನೆ ಇಂದಿರಾನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

‘ಧೂಪನಹಳ್ಳಿ ನಿವಾಸಿ ಮುನಿಕೃಷ್ಣಪ್ಪ (70) ಮೃತ ವ್ಯಕ್ತಿ. ಫೆಬ್ರುವರಿ 14ರಂದು ರಾತ್ರಿ ಘಟನೆ ನಡೆದಿದ್ದು, ಆರೋಪಿಯಾಗಿರುವ ಪುತ್ರ ಮೋಹನ್ ಕುಮಾರ್ ಎಂಬಾತನನ್ನು ಬಂಧಿಸಲಾಗಿದ್ದು, ಮತ್ತೊಬ್ಬ ಮಗ ಗಜೇಂದ್ರನಿಗೆ ಹುಡುಕಾಟ ನಡೆಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಎಂಟಿಸಿಯ ನಿವೃತ್ತ ಉದ್ಯೋಗಿ ಆಗಿದ್ದ ಮುನಿಕೃಷ್ಣಪ್ಪ, ಧೂಪನಹಳ್ಳಿಯಲ್ಲಿ ವಾಸವಿದ್ದರು. ಆಸ್ತಿ ವಿಚಾರಕ್ಕೆ ಸಂಬಂಧಿಸಿ ತಂದೆ ಹಾಗೂ ಮಕ್ಕಳ ನಡುವೆ ಆಗಾಗ್ಗೆ ಕಲಹ ನಡೆಯುತ್ತಿತ್ತು. ಎರಡನೇ ಪುತ್ರ ಗಜೇಂದ್ರ ತನ್ನ ತಾಯಿಯೊಂದಿಗೆ ಪ್ರತ್ಯೇಕವಾಗಿ ವಾಸವಿದ್ದರು. ಮೊದಲ ಪುತ್ರ ಮೋಹನ್ ಕುಮಾರ್ ಮನೆಯ ಮೂರನೇ ಮಹಡಿಯಲ್ಲಿ ವಾಸವಿದ್ದರು. ಆಸ್ತಿ ಕಲಹ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ.

ಮೋಹನ್ ಕುಮಾರ್

ಆಸ್ತಿ ವಿಚಾರ ಸಂಬಂಧ ಫೆಬ್ರುವರಿ 14ರ ರಾತ್ರಿ ಮುನಿಕೃಷ್ಣಪ್ಪ ಅವರೊಂದಿಗೆ ಮಕ್ಕಳು ಗಲಾಟೆ ಮಾಡಿಕೊಂಡಿದ್ದರು. ಕೋಪದಲ್ಲಿ ಬೇಸ್‌ಬಾಲ್ ಬ್ಯಾಟ್, ಹಾಕಿ ಸ್ಟಿಕ್‌ನಿಂದ ಅವರ ಮೇಲೆ ಹಲ್ಲೆ ನಡೆಸಿದ್ದರು. ಮುನಿಕೃಷ್ಣಪ್ಪ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಸೊಸೆ ದಿವ್ಯಾ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಯನ್ನು ಬಂಧಿಸಿದ್ದು, ವಿಚಾರಣೆ ನಡೆಯುತ್ತಿದೆ.

ಸರಗಳ್ಳನ ಬೆನ್ನಟ್ಟಿ ಹಿಡಿದ ಕಾನ್‌ಸ್ಟೆಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು ಹೋಗುತ್ತಿದ್ದ ಸರಗಳ್ಳನನ್ನು ಪೊಲೀಸ್ ಕಾನ್‌ಸ್ಟೆಬಲ್ ಸುಮಾರು ಒಂದೂವರೆ ಕಿ.ಮೀ. ಬೆನ್ನಟ್ಟಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಶಾಮಣ್ಣ ಗಾರ್ಡನ್ ನಿವಾಸಿ ಸೈಯದ್ ಜಾಫರ್ (20) ಬಂಧಿತ ಆರೋಪಿ. ಮದ್ಯ ಕುಡಿಯುವ ಚಟ ಹೊಂದಿರುವ ಈತ, ಯೂಟ್ಯೂಬ್‌ನಲ್ಲಿ ಕಳ್ಳತನದ ವಿಡಿಯೊ ನೋಡಿ ಕೃತ್ಯವೆಸಗಿದ್ದ ಎಂದು ಪೊಲೀಸರು ತಿಳಿಸಿದರು.

ಫೆಬ್ರುವರಿ 5ರ ಸಂಜೆ 7.20ರ ಸುಮಾರಿನಲ್ಲಿ ದಾಕ್ಷಾಯಿಣಿ ಎಂಬುವವರು ಕೆಲಸ ಮುಗಿಸಿಕೊಂಡು ವಿಜಯನಗರದ ಹಂಪಿನಗರ 8ನೇ ಮುಖ್ಯರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಆ ವೇಳೆ ಹಿಂಬಾಲಿಸಿಕೊಂಡು ಬಂದಿದ್ದ ಆರೋಪಿ, 40 ಗ್ರಾಂ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದ.

ತಕ್ಷಣ ಮಹಿಳೆ ಸಹಾಯಕ್ಕಾಗಿ ಕೂಗಿಕೊಂಡಿದ್ದಾರೆ. ಅದೇ ಸಮಯಕ್ಕೆ ಮನೆಯಿಂದ ವಿಜಯನಗರ ಠಾಣೆಗೆ ಹೋಗುತ್ತಿದ್ದ ಪೊಲೀಸ್ ಕಾನ್‌ಸ್ಟೆಬಲ್ ಹಣಮಂತ ಪುಟಾಣಿ, ಇದನ್ನು ಗಮನಿಸಿ ಆರೋಪಿಯನ್ನು ಬೆನ್ನಟ್ಟಿ, ಹಿಡಿದು ₹6 ಲಕ್ಷ ಮೌಲ್ಯದ ಸರವನ್ನು ವಶಪಡಿಸಿಕೊಂಡಿದ್ದಾರೆ. ಬಳಿಕ ಸಾರ್ವಜನಿಕರ ಸಹಾಯದೊಂದಿಗೆ ಆರೋಪಿಯನ್ನು ಠಾಣೆಗೆ ಒಪ್ಪಿಸಿದ್ದಾರೆ.

ಹಣಮಂತ ಪುಟಾಣಿ ಅವರ ಕಾರ್ಯಕ್ಷಮತೆಯನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಶ್ಲಾಘಿಸಿ, ಪ್ರಶಂಸನಾ ಪತ್ರ ನೀಡಿದ್ದಾರೆ.

ಆರು ಮಂದಿ ವಿರುದ್ಧ ಪ್ರಕರಣ

ತುಮಕೂರು: ಕಂಪನಿಯ ಲೆಟರ್‌ಹೆಡ್, ಮೊಹರು, ಸಹಿ ನಕಲು ಮಾಡಿ, ಸುಳ್ಳು ಅನುಭವ ಪ್ರಮಾಣ ಪತ್ರ ಪಡೆದ ಆರೋಪದ ಮೇರೆಗೆ ಬೆಂಗಳೂರಿನ ಅಶ್ವಿನ್ ಅಶ್ವತ್ಥರಾಮ ಸೇರಿ 6 ಜನರ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸನ್ ಬಯೋ ಫ್ಯೂಯಲ್ ಪ್ರೈ.ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜಿ.ಭದ್ರಾರಾಧ್ಯ ಅವರು ನೀಡಿದ ದೂರಿನ ಆಧಾರದ ಮೇಲೆ ಬೆಂಗಳೂರಿನ ಅಶ್ವಿನ್ ಅಶ್ವತ್ಥರಾಮ, ಗೋವಿಂದಪ್ಪ, ಶ್ರೀರಾಮಚಂದ್ರ, ಜಯಶ್ರೀ ಅಶ್ವತ್ಥರಾಮ, ಟಿ.ಎಸ್. ಜಗದೀಶ್, ಶ್ರೀನಿವಾಸ ಎಂಬುವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಚಿನ್ನಾಭರಣ ಕಳವು ಮಾಡಿದ್ದ ಮನೆಗೆಲಸದಾಕೆ ಬಂಧನ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲೇ ಚಿನ್ನಾಭರಣ ಕಳ್ಳತನ ಮಾಡಿದ ಯುವತಿಯನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ದೀಪಾ (28) ಎಂಬಾಕೆಯನ್ನು ಬಂಧಿಸಿ, 206 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ.

‘ಕೋಣನಕುಂಟೆ ನಿವಾಸಿ ಜಗದೀಶ್ ಎಂಬುವರ ಮನೆಯಲ್ಲಿ ಎಂಟು ತಿಂಗಳಿಂದ ದೀಪಾ ಕೆಲಸ ಮಾಡುತ್ತಿದ್ದು, ದೊಡ್ಡಕಲ್ಲಸಂದ್ರದಲ್ಲಿ ವಾಸವಾಗಿದ್ದಳು. ಜಗದೀಶ ಅವರ ಮನೆಯಲ್ಲಿದ್ದ ಚಿನ್ನಾಭರಣಗಳನ್ನು ಹಂತ–ಹಂತವಾಗಿ ಕಳವು ಮಾಡಿದ್ದಳು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಫೆಬ್ರುವರಿ 2ರಂದು ಜಗದೀಶ್ ಕುಟುಂಬ ಸದಸ್ಯರು ಕಬೋರ್ಡ್‌ನಲ್ಲಿ ಇರಿಸಿದ್ದ ಚಿನ್ನಾಭರಣ ನೋಡಿದಾಗ ನಾಪತ್ತೆಯಾಗಿರುವುದು ಕಂಡುಬಂದಿದೆ. ದೀಪಾಳನ್ನು ಪ್ರಶ್ನಿಸಿದಾಗ ಗೊಂದಲದ ಉತ್ತರ ನೀಡಿದ್ದಳು. ಅನುಮಾನದ ಮೇಲೆ ಆಕೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾಳೆ. ಬಳಿಕ, ಆಭರಣ ಅಂಗಡಿಯಲ್ಲಿ ಅಡಮಾನ ಇರಿಸಿದ್ದ ಚಿನ್ನಾಭರಣಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದೂ ತಿಳಿಸಿದ್ದಾರೆ.

‘ಕದ್ದ ಚಿನ್ನಾಭರಣಗಳನ್ನು ಅಡಮಾನ ಇರಿಸಿ ಪಡೆದ ಹಣದಲ್ಲಿ ತಮಿಳುನಾಡಿನಲ್ಲಿ ನಿವೇಶನ ಖರೀದಿಸಿದ್ದಾಳೆ ಎಂದು ಹೇಳಲಾಗಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

MODERN PUBLIC ENGLISH SCHOOL, RT.Nagar, Bangalore-32 requires qualified ACADEMIC COORDINATORS and TEACHERS for ALL SUBJECTS for PRIMARY and HIGH SCHOOL. Whatsapp CV:9739981605 www.mpes-edu.com

M.S.RAMAIAH FOUNDATION
RAMAIAH INSTITUTE OF LEGAL STUDIES (RILS)
RILS Justice for All
Affiliated to Karnataka State Law University, Hubballi, Karnataka
Recognized by BAR Council of India, New Delhi
INVITES APPLICATIONS
from eligible candidates for the posts of...
Assistant Professor (Law)
LL.M., with 55% Marks
Guest Faculty (Pre - Law)
MBA / M.Com
Preference will be given to those who have minimum 3 Year Experience, & NET / SLET Qualified candidates
Interested candidates may send the applications / CV through email : director@rimsbangalore.in within 10days
No.23, M S Ramaiah Road, Gokula Extention, Bangalore - 560 054
DIRECTOR

THE REGENCY Institutions Vidyaranyapura, Bengaluru-560097 is Hiring for School. Art and Craft, Western Music Teacher for PUC. Accountancy & English Faculty. Graduation/Master's Degree in the Subject with Minimum 3 Years Experience. Send Resume to faculty22recruit@gmail.com, Phone. 080-29533770

WANTED TEACHER Primary All Subject and High schools Maths, Hindi and Computer Teacher (1 std to 10 Std) for Lewa English High School Woc Road, Mahaganapathinagar Rajajinagar, Bangalore- 10 Email: lewa.bangalore@gmail.com Contact: 9742964160/ 080-23350167/ 9916327680

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2026-27. Nursery, Primary, High-School, English, Mathematics, Science, SocialScience & ComputerTeacher. STATE & ICSE. Qualification: B.A./B.Sc.,B.Ed/ M.A./M.Sc,M.Ed, NTT, CPEd. Only English Medium Candidates need to apply

Swamy Vivekananda Rural Education Society®1963
Chandapura, Anekal Taluk, Bangalore-560099
Mob : 9606009890 / 92 / 94 / 96
website address:www.svres.org Email :hrsvres1963@gmail.com
Invites applications for recruitment to the following posts
SV School (ICSE)/ SVR English Medium School / SVR Kannada Medium School/ SVR First Grade College
Assistant Teachers/Lecturers :
1) English : M.A/B.A, B.Ed
2) Mathematics /Physics/Chemistry : M.Sc/B.Sc, B.Ed
3) Hindi : M.A/B.A, B.Ed
4) Physical Education : M.PEd/B.PEd
Librarian : M.Lib/B.Lib
Note: First Grade College-NET / SLET qualified candidates will be preferred.
Interested and eligible candidates with relevant experience are requested to send Bio Data addressed to the Secretary, SVRES with copies of relevant documents through mail or whatsapp to reach us on or before 25/02/2026.
Attractive salary offered

CAMLIN HIGH School, State Board. 6th 'C' Main, 4th Cross Near 7th Main Bus Stop Hampinagar Bangalore- 560104 080-23301363. Email: camlinschool84@gmail.com. REQUIRES for the academic year 26-27 Coordinator, Student Counselor Teachers for High School, Middle and Primary. Kannada English, Hindi Maths Science, Social Science Drawing Physical Education Computer Science. TCH/ D.ED./ NTT/ MTT. Apply with hand written application OR Send resume. English Medium candidates to apply. Candidates can come to give Demo classes. Bus Driver Security Guard Office Boy Helper Aya.

Accounts & Finance

SUPPLY CHAIN Executive Required Immediately for PVT. LTD. Company in Peenya. Commerce Graduate with Accounting Knowledge with Tally Prime. 3 Years Experience In Materials Handling Contact over Phone 8073782160 or mail Resume to finance@sensarom.com

B.COM GRADUATES with 75% and above Marks having Experience of 1 to 2 Years in Tally and Income Tax/GST.Send Your Resume to: acharyaandcompany@gmail.com. Mob: 9901612959.

General

JOB OPENING- Delivery Boys/ Store Assistant. Vasa Scientific Co., Malleswaram, Bangalore. Qualification: PUC/ SSLC, Salary: Rs.30,000 per month (PF & Insurance deduction applicable). Work: Delivery & Store/ Warehouse Assistance, Preferred Two-wheeler driving with valid License. Contact:- Nicholas Gerard G- 9980073265. Interested Candidates can Call/ Whatsapp.

ಬೇಕಾಗಿದ್ದಾರೆ
ಡೆಲಿವರಿ ಬಾಯ್ಸ್
ಫರ್ನಿಚರ್ ಗೊಡೌನ್‌ನಲ್ಲಿ ಕೆಲಸಕ್ಕೆ. ಕೆಲಸದ ಸಮಯ: ಸೋಮ–ಶನಿ 10–6.30
ಸಂದರ್ಶನಕ್ಕೆ ಆಧಾರ್ ಕಾರ್ಡ್ ಮತ್ತು ಫೋಟೋ ಸಮೇತ ಬನ್ನಿ:
ಫ್ಯಾನ್ ಆಫೀಸ್ ಸಿಸ್ಟಮ್ಸ್ ಪ್ರೈ.ಲಿ.
ನಂ. 5, ಒಂದನೇ "ಅ" ಕ್ರಾಸ್, ಬಿಸ್ಮಿಲ್ಲಾನಗರ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 29.
Ph: 9341221125

HRD & Admin

WANTED FRONT OFFICE ASSISTANT Cum HR, Graduate with Computer Knowledge for Real Estate Company at HSR Layout Contact: 9663207070

Wanted

WANTED TECHNICAL consultant for Manufacturing of HT SF6 breakers and RMU for Existing electrical industry in Bangalore. Contact: 9590132003

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

BUSINESS

Business to Business

Finance

URGENT LOAN avail @ 3.5% per Annum Personal, Business, Educational Takeover All types of Loan Shivganga Finance Call/ WhatsApp: 8826494700.

DH Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9845114560 | +91 9886213331 | +91 9731810277

RENTAL PROPERTIES

Accommodation Available

Commercial

COMMERCIAL SPACE Available FOR RENT on Chamundi Hill Main Road, Mysuru. Prime Location. 2500 sft upto 5000 sft. available Contact: 9035035399

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EPOXY GROUTING for bathroom & balconies. Heat reflecting coating for terraces. Contact Roof & Walls, Bangalore. 9845987989

REAL ESTATE SELLING

House

Anjanapura

ANJANAPURA BDA 4TH BLOCK BRAND NEW DUPLEX HOUSE BUILT ON 700 SQFT WITH LIFT OWNER 9980079792

REAL ESTATE BUYING

General

General

WE DO FUNDING & Solutions/ Settlements for disputed properties under Bank,High Court, Civil/DC/AC/ Tribunal/Tahsildar courts pending cases. Contact Verna Developers, Barton Centre, MG Road,Blr. 9620253180.

PUBLIC NOTICE

ಫಾರಂ ನಂ. ಯುಆರ್‌ಸಿ–2
ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ ನೋಂದಣಿ ಕುರಿತಾದ ಜಾಹೀರಾತು ಪ್ರಕಟಣೆ
[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 374 (ಬಿ) ಮತ್ತು ಕಂಪನಿಗಳ (ನೋಂದಣಿಗೆ ಅಧಿಕೃತ) ನಿಯಮಗಳು, 2014ರ ನಿಯಮ 4(1)ರ ಪ್ರಕಾರ]
ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 366ರ ಸಬ್ ಸೆಕ್ಷನ್ (2)ರ ಪ್ರಕಾರ, ಬೆಂಗಳೂರಿನ ರಿಜಿಸ್ಟ್ರಾರ್‌ಗೆ ಒಂದು ಅರ್ಜಿ ಸಲ್ಲಿಕೆಯಾಗಿದ್ದು, ಸದರಿ ಅರ್ಜಿಯಲ್ಲಿ ಸೂಪರ್‌ಪ್ಯಾಕ್ಸ್ ಬಿಜಿನೆಸ್ ಸೊಲ್ಯೂಷನ್ಸ್ ಎಲ್‌ಎಲ್‌ಪಿ ಎಂಬ ಒಂದು ಸೀಮಿತ ಹೊಣೆಗಾರಿಕೆಯ ಪಾಲುದಾರ ಕಂಪನಿಯನ್ನು, ಕಂಪನಿಗಳ ಕಾಯ್ದೆ, 2013ರ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ, ಅದರ ಷೇರುಗಳ ಮುಖಾಂತರ ಕಂಪನಿ ಲಿಮಿಟೆಡ್ ಎಂಬುದಾಗಿ ನೋಂದಾಯಿಸಬೇಕೆಂದು ಕೋರಲಾಗಿರುತ್ತದೆ.
ಕಂಪನಿಯ ಪ್ರಮುಖ ಉದ್ದೇಶಗಳು ಕೆಳಗಿನಂತಿರುತ್ತವೆ:
ಕೊರುಗೇಟೆಡ್ ಬಾಕ್ಸ್‌ಗಳು, ಕಾರ್ಟನ್‌ಗಳು ಇತ್ಯಾದಿಗಳನ್ನು ಉತ್ಪಾದಿಸುವುದು ಮತ್ತು ಅವುಗಳನ್ನು ಆರೋಗ್ಯ ಆರೈಕೆ, ಐಟಿ, ರಿಟೇಲ್ ಕ್ಷೇತ್ರಗಳು ಸೇರಿದಂತೆ ಇನ್ನಿತರ ಕ್ಷೇತ್ರಗಳಿಗೆ ಪೂರೈಕೆ ಮಾಡುವುದು ಕಂಪನಿಯ ವ್ಯವಹಾರ ಸ್ವರೂಪವಾಗಿರುತ್ತದೆ.
ಉದ್ದೇಶಿತ ಕಂಪನಿಯ ಕರಡು ಮೆಮೊರಾಂಡಮ್ ಹಾಗೂ ಆರ್ಟಿಕಲ್ಸ್ ಆಫ್ ಅಸೋಸಿಯೇಶನ್ ಪ್ರತಿಗಳನ್ನು 4ನೇ ಮಹಡಿ, ಚಿತ್ರಾಪುರ ಭವನ, 8ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ವಿಳಾಸದಲ್ಲಿ ಪರಿಶೀಲನೆಗೆ ಲಭ್ಯವಿರುತ್ತವೆ.
ಆದ್ದರಿಂದ, ಸದರಿ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಸದರಿ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಹನ್ನೆರಡು ದಿನಗಳೊಳಗೆ, ತಮ್ಮ ಆಕ್ಷೇಪಣೆಯನ್ನು ಲಿಖಿತ ರೂಪದಲ್ಲಿ ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಭಾರತೀಯ ಕಾರ್ಪೊರೇಟ್ ವ್ಯವಹಾರಗಳ ಸಂಸ್ಥೆ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್–5, ಐಎಂಟಿ ಮಾನೇಸರ್, ಗುರಗಾಂವ್ ಜಿಲ್ಲೆ (ಹರಿಯಾಣ), ಪಿನ್ ಕ್ರಮಾಂಕ – 122050 ವಿಳಾಸಕ್ಕೆ ಸಲ್ಲಿಸುವುದು ಮತ್ತು ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಚೇರಿ ವಿಳಾಸಕ್ಕೆ ಕೂಡ ರವಾನಿಸುವುದು.
ಅರ್ಜಿದಾರರ ಹೆಸರುಗಳು:
ಅದಿತಿ ಕಡೂರ್
ಉದಯ್ ಮಧುಕರ್ ಬಾಪು
ಅಭಿಷೇಕ ಕಡೂರ್
ಚಂದ್ರಿಕಾ ಕಡೂರ್
ದಿನಾಂಕ: 18.02.2026 ಸ್ಥಳ: ಬೆಂಗಳೂರು

CONNECT

ಕರ್ನಾಟಕದ ಅತಿ ದೊಡ್ಡ OG ಸೀರೆ ಉತ್ಸವ 2.0
100000+ ಸೀರೆಗಳು 10,000+ವಿನ್ಯಾಸ 1000+ವಿಧಗಳು
MYSORE SILKS Weaver's OG Seere Utsava By Sulakshmi Silks
ನೇರ ನೇಕಾರರಿಂದ ಕನಿಷ್ಠ ಬೆಲೆಯ ಖಾತರಿ
100 ವರ್ಷಗಳ ವಿಶ್ವಾಸಾರ್ಹ ಪರಂಪರೆ
SULAKSHMI SILKS
18ನೇ ಯಿಂದ 28ನೇ ಫೆಬ್ರವರಿ 2026
11 AM TO 9 PM
SIGNATURE SILK SAREE COLLECTIONS
• ಶುದ್ಧ ಮೈಸೂರು ಸಿಲ್ಕ್ • ಕಾಂಜೀವರಂ • ಪಟೋಲ
• ಬನಾರಸ್ • ಉಪ್ಪಾದ • ಪೈಠಾನಿ • ಚಂದೇರಿ • ಗದ್ವಾಲ್,
• ಇಳಕಲ್ • ಪೋಚಂಪಲ್ಲಿ • ಭಾಗಲ್ಪುರ್ • ಇಕತ್ • ಆರ್ನಿ
• ಜಮಧಾನಿ • ಮುಗ • ಕ್ರೇಪ್ • ಗಜ್ಜಿ • ಬಂಧನಿ
• ಕಾಟನ್ ಕ್ಲಾಸಿಕ್ಸ್ • ಬೆಂಗಳೂರು ಸಿಲ್ಕ್ ಮತ್ತು ಇತರೆ.
ಶ್ರೀ ಸೂರ್ಯೋದಯ ಕಲ್ಯಾಣ ಮಂಟಪ
ವೆಸ್ಟ್ ಆಫ್ ಕಾರ್ಡ್ ರೋಡ್, ವಿಜಯನಗರ
99727 18898 | 96631 27606
93531 38343 | 98863 06643

PERSONAL

Change of Name

CHANGE OF NAME
I, **H S RENUKAMMA** and **RENUKAMMA HULIYAPURA REVANASIDDAIAH SIDDARAJU,** residing at No.173, 14th Cross, 1st Block, Rajajinagar, Bengaluru- 560010 declare that the above name pertain to me only. Henceforth I shall be known as **HULIYAPURA SIDDARAJU RENUKAMMA**, vide affidavit dt. 16-02-2026 before notary K.S. Giridhar, Bengaluru.

CHANGE OF NAME
I, **SANDHIYA MOHANAVEL ANGAPPA,** residing at # 65, 1st Floor, 3rd Cross, Ramaiah Reddy Colony, B Sector, Basavanagar, Bengaluru- 560037, have changed my name to **SANDHIYA MOHANAVEL** vide affidavit dated 16/02/2026, before notary A.R. Muneer Ahmed, Bengaluru. Henceforth I shall be called as **SANDHIYA MOHANAVEL** only.

I, ANITHA N W/o NAGARAJA G, have changed my name to ANITHA T vide affidavit dated: 17/2/2026 Before Notary Vanajakshi. R Bangalore.

CHANGE OF NAME
I, **Varughese Abraham** (old name) C/o ABRAHAM E V, R/at No 63, Bens Venkateshwara Layout, Yarappanahalli, Doddagubbi, Sr. SRK Nagar post, Bengaluru-560077, Here by declare that I have changed the name as **VARGHESE ABRAHAM** (as per aadhar card) for all purposes vide affidavit dtd: 16.02.2026, before notary D Rajanna, Bengaluru

Lost

DOCUMENT LOST
I, **Mohammed Fuzail Muzammil,** No. 17, 1st Cross, Gospel Street St Thomas Town, Bangalore-84, have lost my **Original Degree Certificate Bachelor of Computer Applications Reg No. 12P4SB6066 of May 2017, on 30-12-2025 Bangalore University. Lost Report No. 2011089/2026, dtd 16-01-2026** while in transit If found please **Contact: 9535538535**

DOCUMENT LOST
I, **Rukmini S R**, residing at Bengaluru, have a lost **my Site Registration papers Doucment No./Identification: BNG(U)-KNGR/15427/ 2006-2007.** While in transit. if found Please contact: **9620841786**

TOURS & TRAVEL

Travel

AYODHYA, PRAYAGRAJ GAYA KASHI 6 DAYS BY FLIGHT, luxury bus FROM: 08.03.2026 05.04.2026 12.04.2026 19.04.2026 ASSAM KAMAKYA KAZIRANGA MEGHALAYA 8 DAYS FROM: 12.4.2026 YAMUNOTRI GANGOTRI KEDARNATH BADRINATH 14 DAYS FROM: 23.04.2026 29.04.2026 7.05.2026 14.05.2026 MANTRALAYA SRISHILAM,AHOBILAM 5 DAYS FROM: 28.03.2026 Nepal Mukathinath 11days From 12.04.2026 29.04.2026 Contact: 26508925 9980993631. SRICHAITANYA TRAVELS Bangalore.18

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ರಸ್ತೆ ದುರಸ್ತಿ: ತಾತ್ಕಾಲಿಕ ಪರಿಹಾರ

ಮಾರಗೊಂಡಹಳ್ಳಿ: ಹದಗೆಟ್ಟಿದ್ದ ರಸ್ತೆಯಿಂದ ಅಪಘಾತ ● ಮಗು ಮೃತಪಟ್ಟ ಘಟನೆ

● ಶಿವರಾಜ್ ಮೌರ್ಯ

ಕೆ.ಆರ್.ಪುರ: ಶಿವರಾತ್ರಿಯಂದು ಮಗುವಿನ ಸಾವಿಗೆ ಕಾರಣವಾಗಿದ್ದ ರಸ್ತೆಯನ್ನು ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿ, ಮಂಗಳವಾರ ತಾತ್ಕಾಲಿಕವಾಗಿ ಜಲ್ಲಿಕಲ್ಲು ಮತ್ತು ಮಣ್ಣು ಹಾಕಿ ರಸ್ತೆ ದುರಸ್ತಿ ಮಾಡಿದೆ.

ಮಾರಗೊಂಡಹಳ್ಳಿಯ ಶಿವನ ದೇವಸ್ಥಾನಕ್ಕೆ ಭಾನುವಾರ ದ್ವಿಚಕ್ರ ವಾಹನದಲ್ಲಿ ತೆರಳಿದ್ದ ಪೋಷಕರೊಂದಿಗೆ ಮಗುವೂ ಇತ್ತು. ಈ ವೇಳೆ, ಕಾರೊಂದು ಹಿಂದಿನಿಂದ ದ್ವಿಚಕ್ರ ವಾಹನಕ್ಕೆ ಗುದ್ದಿದ ಸಮಯದಲ್ಲಿ ಕೆಳಗೆ ಬಿದ್ದ ಮಗು ಮೇಲೆ ಕಾರು ಹರಿದಿತ್ತು.

‘ಈ ಅಪಘಾತಕ್ಕೆ ಆರು ತಿಂಗಳಿಂದ ಅರ್ಧಕ್ಕೆ ನಿಂತಿರುವ ರಸ್ತೆ ಕಾಮಗಾರಿಯೇ ಕಾರಣ’ ಎಂದು ಆರೋಪಿಸಿ, ಸ್ಥಳೀಯರು ಮುಖ್ಯರಸ್ತೆಯನ್ನು ಬಂದ್ ಮಾಡಿ, ಅಧಿಕಾರಿಗಳು ಬರುವವರೆಗೂ ಇಲ್ಲಿಂದ ಕದಲುವುದಿಲ್ಲ’ ಎಂದು ಸೋಮವಾರ ಧರಣಿ ಕುಳಿತಿದ್ದರು.

‘ಸ್ಥಳೀಯ ಗ್ರಾಮ ಪಂಚಾಯಿತಿ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕುಂಟು ನೆಪ ಹೇಳಿ ಸಾರ್ವಜನಿಕರಿಗೆ ತೊಂದರೆ ಮಾಡುತ್ತಿದ್ದಾರೆ’ ಎಂದು ದೂರಿದರು.

ಪ್ರತಿಭಟನೆ ವೇಳೆ ಸ್ಥಳಕ್ಕೆ ಗ್ರಾಮ ಪಂಚಾಯಿತಿ ಅಧಿಕಾರಿಗಳ ತಂಡ ಭೇಟಿ ನೀಡಿ, ‘ಮಂಗಳವಾರದಿಂದಲೇ ರಸ್ತೆ ಅಭಿವೃದ್ಧಿ ಮಾಡುತ್ತೇವೆ. ಲೋಕೋಪಯೋಗಿ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಆದಷ್ಟು ಬೇಗ ಕೆಲಸ ಮುಗಿಸುತ್ತೇವೆ’ ಎಂದು ಹೇಳಿದ ಬಳಿಕ ಪ್ರತಿಭಟನೆ ಹಿಂಪಡೆಯಲಾಗಿತ್ತು.

ಗ್ರಾಮ ಪಂಚಾಯಿತಿ ಸಿಬ್ಬಂದಿ ಮತ್ತು ಸ್ಥಳೀಯ ಮುಖಂಡರ ಸಮ್ಮುಖದಲ್ಲಿ ಮಣ್ಣು ಮತ್ತು ಜಲ್ಲಿ ಸುರಿದು ರಸ್ತೆ ಗುಂಡಿಯನ್ನು ತಾತ್ಕಾಲಿಕವಾಗಿ ಮಂಗಳವಾರ ಮುಚ್ಚಲಾಯಿತು.

ಸಮನ್ವಯ ಕೊರತೆ: ಮಹದೇವಪುರ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಕಿತ್ತಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಈ ರಸ್ತೆಯನ್ನು ಹಿಂದೆ, ಗ್ರಾಮ ಪಂಚಾಯಿತಿಯಿಂದ ಅಭಿವೃದ್ಧಿ ಮಾಡಲಾಗಿತ್ತು. ಪ್ರಮುಖ ರಸ್ತೆ ಆಗಿರುವುದರಿಂದ ಮೇಲ್ದರ್ಜೆಗೇರಿಸಲು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ. ಅಧಿಕಾರಿಗಳ ನಡುವೆ ಸಮನ್ವಯ ಕೊರತೆಯಿಂದ ಕಾಮಗಾರಿ ನಿಧಾನಗತಿಯಲ್ಲಿದ್ದು, ಸಾರ್ವಜನಿಕರು ಪರದಾಡುತ್ತಿದ್ದಾರೆ.

ಕಿತ್ತಗನೂರು ಗ್ರಾಮ ಪಂಚಾಯಿತಿ ಸುತ್ತಮುತ್ತಲಿನ ಹಲವಾರು ಹಳ್ಳಿಗಳಿಗೆ ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಇದಾಗಿದೆ. ಸುಮಾರು 5 ಕಿ.ಮೀ ವ್ಯಾಪ್ತಿಯಲ್ಲಿ ಸಂಚಾರ ಮಾಡದ ರೀತಿಯಲ್ಲಿ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ಇದೇ ರಸ್ತೆಯ ರಾಷ್ಟ್ರೀಯ ಹೆದ್ದಾರಿ 75ಕ್ಕೆ ಸಂಪರ್ಕ ಕಲ್ಪಿಸುತ್ತದೆ. ಸುತ್ತಮುತ್ತಲಿನ ಪ್ರದೇಶಗಳಾದ ಬಿದರಹಳ್ಳಿ, ಮೇಡಹಳ್ಳಿ, ಕೆ.ಆರ್.ಪುರ, ಕನಕನಗರ, ಟಿ.ಸಿ.ಪಾಳ್ಯಕ್ಕೆ ಪ್ರಮುಖ ಮಾರ್ಗವಾಗಿದೆ.

ರಸ್ತೆ ಸರಿಪಡಿಸಲು ಜಲ್ಲಿ ಹಾಕಲಾಯಿತು

‘ಸಿ.ಎಂಗೆ ಮನವಿ: ಪ್ರಯೋಜನವಿಲ್ಲ’

‘ರಸ್ತೆ ಅವ್ಯವಸ್ಥೆ ಕುರಿತು ಮುಖ್ಯಮಂತ್ರಿಯವರಿಂದ ಹಿಡಿದು ಸ್ಥಳೀಯ ನಾಯಕರವರೆಗೂ ಮನವಿ ಪತ್ರ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ’ ಎಂದು ಸಾಮಾಜಿಕ ಕಾರ್ಯಕರ್ತ ವಿ.ಪಿ.ಕೃಷ್ಣ ಆಕ್ರೋಶ ವ್ಯಕ್ತಪಡಿಸಿದರು.

‘ನಿತ್ಯ 20 ರಿಂದ 25 ವಾಹನ ಸವಾರರು ರಸ್ತೆ ಅಪಘಾತಕ್ಕೆ ಕಾರಣವಾಗುತ್ತಿದ್ದಾರೆ. ಶಾಲಾ ಮಕ್ಕಳು, ಮಹಿಳೆಯರು, ಹಿರಿಯರು ಸದಾ ಒಂದಿಲ್ಲೊಂದು ಅಪಘಾತಕ್ಕೆ ಒಳಗಾಗಿ ಆಸ್ಪತ್ರೆ ಸೇರುತ್ತಿದ್ದಾರೆ. ಗುಂಡಿಗಳಿಂದಾಗಿ ಆಸ್ಪತ್ರೆ ಸೇರುವವರ ಸಂಖ್ಯೆ ಹೆಚ್ಚಾಗಿದೆ’ ಎಂದು ಜ್ಯೋತಿ ಹೇಳಿದರು.

‘ಅಧಿಕಾರಿಗಳು ಶೀಘ್ರವಾಗಿ ರಸ್ತೆ ಪೂರ್ಣಗೊಳಿಸದೆ ಇದ್ದರೆ ಮತ್ತಷ್ಟು ಸಾವು ನೋವುಗಳಿಗೆ ಕಾರಣವಾಗಬಹುದು’ ಎಂದು ಹಳೇಹಳ್ಳಿ ನಿವಾಸಿ ನಟರಾಜ್ ಎಚ್ಚರಿಕೆ ನೀಡಿದರು.

‘ಲೋಕೋಪಯೋಗಿ ಇಲಾಖೆ ರಸ್ತೆ ಅಭಿವೃದ್ಧಿಯ ಜವಾಬ್ದಾರಿ ಹೊತ್ತು ಕೊಂಡಿದೆ. ಕೆಲವೊಂದು ಕೆಲಸಗಳು ಬಾಕಿ ಉಳಿದಿವೆ. ಇಲಾಖೆಯೊಂದಿಗೆ ಚರ್ಚಿಸುತ್ತೇವೆ’ ಎಂದು ಗ್ರಾಮ ಪಂಚಾಯಿತಿಯ ಪಿಡಿಒ ನರ್ಮದಾ ಹೇಳಿದರು.

ಅಪ್ರಾಪ್ತ ವಯಸ್ಸಿನವರಿಂದ ವಾಹನ ಚಾಲನೆ ● ಸಂಚಾರ ನಿಯಮ ಉಲ್ಲಂಘನೆ

ಪೋಷಕರ ವಿರುದ್ಧ ಕ್ರಮ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೋಟೆ ಮತ್ತು ನೆಲಮಂಗಲದ ಬಳಿ ಇತ್ತೀಚೆಗೆ ಸಂಭವಿಸಿದ ಅಪಘಾತದ ಹಿನ್ನೆಲೆಯಲ್ಲಿ ವಾಹನ ಚಾಲನೆ ಮಾಡುವ ಅಪ್ರಾಪ್ತ ವಯಸ್ಸಿನವರು ಹಾಗೂ ವಾಹನ ನೀಡುವ ಪೋಷಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಎಚ್ಚರಿಕೆ ನೀಡಿದ್ದಾರೆ.

‘ಕಳೆದ ವರ್ಷ (2025) ನಿಯಮ ಉಲ್ಲಂಘಿಸಿ ವಾಹನ ಚಾಲನೆ ಮಾಡಿದ ಅಪ್ರಾಪ್ತ ವಯಸ್ಸಿನವರ ವಿರುದ್ಧ 414 ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗಿದೆ. ಮಕ್ಕಳಿಗೆ ವಾಹನ ನೀಡುತ್ತಿರುವ ಪರಿಣಾಮ ರಸ್ತೆ ಅಪಘಾತಗಳು ಸಂಭವಿಸಿ ಹಲವರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ನಗರ ಸಂಚಾರ ಪೊಲೀಸರು ಇನ್ನು ಮುಂದೆ ವಿಶೇಷ ಕಾರ್ಯಾಚರಣೆ ನಡೆಸಿ, ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದ್ದಾರೆ. ಮಕ್ಕಳಿಗೆ ಬೈಕ್ ಹಾಗೂ ಕಾರು ಚಾಲನೆಗೆ ಅವಕಾಶ ಕಲ್ಪಿಸಿಕೊಟ್ಟವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಜೈಲಿಗೆ ಕಳುಹಿಸಲಾಗುವುದು’ ಎಂದು ತಿಳಿಸಿದರು.

ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಮಾತನಾಡಿ, ‘ಅಪ್ರಾಪ್ತ ವಯಸ್ಸಿನವರು ವಾಹನ ಚಾಲನೆ ಮಾಡುವುದರಿಂದ ಸಂಚಾರ ನಿಯಮ ಉಲ್ಲಂಘನೆಯಾಗುತ್ತದೆ. ಈ ಬಗ್ಗೆ ಅರಿವು ಮೂಡಿಸುತ್ತಿದ್ದರೂ ವಾಹನಗಳನ್ನು ಚಾಲನೆ ಮಾಡುತ್ತಿರುವುದು ಕಂಡು ಬರುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಅಲ್ಲದೇ, ನಗರದಲ್ಲಿ ಹೆಚ್ಚಾಗಿ ಅಪ್ರಾಪ್ತ ವಯಸ್ಸಿನವರು ವ್ಹೀಲಿ ಮಾಡುತ್ತಿರುವುದು ಕಂಡು ಬರುತ್ತಿದ್ದು, ಅವರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ವ್ಹೀಲಿ ಪ್ರಕರಣಗಳಲ್ಲಿ ಕಳೆದ ವರ್ಷ 159 ಅಪ್ರಾಪ್ತ ವಯಸ್ಸಿನವರು ಹಾಗೂ ಪೋಷಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

60 ಲಕ್ಷ ಮೌಲ್ಯದ ಸಾಮಗ್ರಿ ಕೊಡುಗೆ

ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆ ಹಾಗೂ ಸಂಚಾರ ನಿಯಮ ಉಲ್ಲಂಘನೆ ನಿಯಂತ್ರಣಕ್ಕೆ ಗ್ಲೋಬಲ್ ರೋಡ್ ಸೇಫ್ಟಿ ಖಾಸಗಿ ಸಂಸ್ಥೆಯು ಸುಮಾರು ₹60 ಲಕ್ಷ ವೆಚ್ಚದ ಸಾಮಗ್ರಿಗಳನ್ನು ಸಂಚಾರ ವಿಭಾಗಕ್ಕೆ ನೀಡಿತು.

ಆಲ್ಕೋಮಿಟರ್, ಬಂದೂಕು, ರಾಡಾರ್ ಗನ್, ಲೇಸರ್ ಗನ್, ಕ್ಯಾಮೆರಾ, ಪಿಡಿಎ ಯಂತ್ರ, ಪ್ರಿಂಟರ್, ಎಎನ್‌ಪಿಆರ್ ಕ್ಯಾಮೆರಾ, ಲೈಟ್ ಬ್ಯಾಟಲ್, ರಂಬಲ್ ಪಟ್ಟಿ, ವೈಯರ್‌ಲೆಸ್ ರೇಡಿಯೊ ಸೆಟ್ ಸೇರಿ ಇತರೆ ಉಪಯುಕ್ತ ಸಾಮಗ್ರಿಗಳನ್ನು ನೀಡಲಾಯಿತು.

ಐ.ಎಂ.ವಿ ಕಾಯ್ದೆ ಅಡಿ ದಾಖಲಾಗಿರುವ ಪ್ರಕರಣ ವಿವರ

ಅಪ್ರಾಪ್ತ ವಯಸ್ಕರ ವಿರುದ್ಧ ಪ್ರಕರಣಗಳು

2023	95
2024	197
2025	414

₹25 ಸಾವಿರ ದಂಡ ಪಾವತಿ ಅನಿವಾರ್ಯ

ಜೋಶಿಗೆ ₹1 ಲಕ್ಷ ದಂಡದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಚಾರಣೆ ವೇಳೆ ನಿಮ್ಮ ಮೇಲ್ಮನವಿ ಏನಾದರೂ ಕ್ಷುಲ್ಲಕ ಎಂದು ಕಂಡು ಬಂದಲ್ಲಿ ₹1 ಲಕ್ಷ ದಂಡ ವಿಧಿಸಲಾಗುವುದು’ ಎಂದು ಹೈಕೋರ್ಟ್ ಮೌಖಿಕವಾಗಿ ಎಚ್ಚರಿಸಿದ ಬೆನ್ನಲ್ಲೇ, ಮಹೇಶ ಜೋಶಿ ಅವರು ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ತಮ್ಮ ಮೇಲ್ಮನವಿಯನ್ನು ಹಿಂಪಡೆದಿದ್ದಾರೆ. ಇದರಿಂದಾಗಿ ಮಾಹಿತಿ ನಿರಾಕರಣೆ ಆರೋಪಕ್ಕೆ ಸಂಬಂಧಿಸಿದಂತೆ ₹25 ಸಾವಿರ ದಂಡ ಪಾವತಿಸುವ ಅನಿವಾರ್ಯ ಅವರಿಗೆ ಎದುರಾಗಿದೆ.

ಮಹೇಶ ಜೋಶಿ

‘ಬೆಂಗಳೂರು ದೂರದರ್ಶನ’ಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿ ಕೋರಿ ಬಿ.ಅಶೋಕ್ ಮತ್ತು ಎನ್.ಕೆ. ಮೋಹನ್ ರಾಂ 2008-09ರ ಅವಧಿಯಲ್ಲಿ ಕೇಂದ್ರಕ್ಕೆ ಅರ್ಜಿ ಸಲ್ಲಿಸಿದ್ದರು. ಅಂದಿನ ದೂರದರ್ಶನ ಮಾಹಿತಿ ಅಧಿಕಾರಿ ಹಾಗೂ ಕೇಂದ್ರದ ನಿರ್ದೇಶಕರಾಗಿದ್ದ ಮಹೇಶ ಜೋಶಿ ಮಾಹಿತಿ ನೀಡಲು ನಿರಾಕರಿಸಿದ್ದರಲ್ಲದೆ, ಮಾಹಿತಿ ಒದಗಿಸಬೇಕಾದರೆ ₹50,160 ಪಾವತಿಸುವಂತೆ ಅರ್ಜಿದಾರರಿಗೆ ಸೂಚಿಸಿದ್ದರು.

ಇದನ್ನು ಪ್ರಶ್ನಿಸಲಾಗಿದ್ದ ಅರ್ಜಿದಾರರ ಮನವಿಯನ್ನು ಕೇಂದ್ರ ಮಾಹಿತಿ ಹಕ್ಕು ಆಯೋಗ ಪುರಸ್ಕರಿಸಿತ್ತು. ‘ಮಾಹಿತಿ ನೀಡದ ಮಹೇಶ ಜೋಶಿ ಕ್ರಮ ಸರಿಯಲ್ಲ ಹಾಗೂ ಮಾಹಿತಿ ನಿರಾಕರಿಸುವ ಮೂಲಕ ಅವರು ದಂಡಕ್ಕೆ ಅರ್ಹರು’ ಎಂದು ತೀರ್ಮಾನಿಸಿ ₹25 ಸಾವಿರ ದಂಡ ವಿಧಿಸಿ, ಅದನ್ನು ಅವರ ಸಂಬಳದಿಂದಲೇ ವಸೂಲಿ ಮಾಡುವಂತೆ ಆದೇಶಿಸಿತ್ತು.

ಈ ಆದೇಶ ಪ್ರಶ್ನಿಸಿ ಜೋಶಿ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎನ್.ಎಸ್.ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, ಜೋಶಿ ಮನವಿಯನ್ನು ವಜಾಗೊಳಿಸಿತ್ತು. ‘ಜೋಶಿಯವರ ಧೋರಣೆ ಒಬ್ಬ ಸರ್ಕಾರಿ ಅಧಿಕಾರಿಯ ಗುಣವಲ್ಲ. ಈ ಹಿನ್ನೆಲೆಯಲ್ಲಿ ಆಯೋಗ ನೀಡಿರುವ ಆದೇಶ ಸಮಂಜಸವಾಗಿಯೇ ಇದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಆಯೋಗ ವಿಧಿಸಿದ್ದ ₹25 ಸಾವಿರ ದಂಡದ ಆದೇಶವನ್ನು ಎತ್ತಿ ಹಿಡಿದಿತ್ತು.

ಏಕಸದಸ್ಯ ನ್ಯಾಯಪೀಠದ ಈ ಆದೇಶವನ್ನು ಪ್ರಶ್ನಿಸಿ ಜೋಶಿ ವಿಭಾಗೀಯ ನ್ಯಾಯಪೀಠದಲ್ಲಿ ರಿಟ್ ಮೇಲ್ಮನವಿ ಸಲ್ಲಿಸಿದ್ದರು. ಈ ಮೇಲ್ಮನವಿಯ ವಿಚಾರಣೆಯನ್ನು ಹಿರಿಯ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ನ್ಯಾಯಪೀಠ ಸೋಮವಾರ (ಫೆ.16) ನಡೆಸಿತ್ತು.

ವಿಚಾರಣೆ ವೇಳೆ ನ್ಯಾಯಪೀಠ, ‘ನಿಮ್ಮ ಮೇಲ್ಮನವಿ ವಿಚಾರಣೆಗೆ ಯೋಗ್ಯವಾಗಿಲ್ಲ. ಹಾಗಾಗಿ, ಹಿಂಪಡೆಯಲು ಅವಕಾಶ ನೀಡುತ್ತಿದ್ದೇವೆ. ವಾದ ಮುಂದುವರಿಸಲು ಅವಕಾಶ ನೀಡುತ್ತೇವಾದರೂ, ಮೇಲ್ಮನವಿ ಕ್ಷುಲ್ಲಕ ಎಂದು ಕಂಡುಬಂದಲ್ಲಿ ₹1 ಲಕ್ಷ ದಂಡ ವಿಧಿಸಲಾಗುವುದು’ ಎಂಬ ಮೌಖಿಕ ಎಚ್ಚರಿಕೆ ನೀಡಿತು. ಈ ಎಚ್ಚರಿಕೆ ಹಿನ್ನೆಲೆಯಲ್ಲಿ ಮಹೇಶ ಜೋಶಿ ಮಂಗಳವಾರ ನ್ಯಾಯಪೀಠಕ್ಕೆ ಮೆಮೊ ಸಲ್ಲಿಸುವ ಮೂಲಕ ತಮ್ಮ ಮೇಲ್ಮನವಿ ಹಿಂಪಡೆದಿದ್ದಾರೆ.

ಮೇಲ್ಮನವಿಯಲ್ಲಿ ನವದೆಹಲಿಯ ಕೇಂದ್ರ ಮಾಹಿತಿ ಆಯೋಗದ ರಿಜಿಸ್ಟ್ರಾರ್, ಬಿ.ಅಶೋಕ್, ಎನ್.ಕೆ. ಮೋಹನ್ ರಾಂ ಮತ್ತು ಬೆಂಗಳೂರಿನ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿತ್ತು. ಅಶೋಕ್ ಮತ್ತು ಮೋಹನ್ ರಾಂ ಪರ ಹೈಕೋರ್ಟ್ ವಕೀಲ ಮಂಜುನಾಥ್ ಖಾಂಡೇಕರ್ ವಾದ ಮಂಡಿಸಿದ್ದರು.

ಬಿಡದಿ: ಹಳಿ ತಪ್ಪಿದ ಗೂಡ್ಸ್ ರೈಲು

ರಾಮನಗರ: ತಾಲ್ಲೂಕಿನ ಬಿಡದಿ ಬಳಿ ಗೂಡ್ಸ್ ರೈಲೊಂದು ಮಂಗಳವಾರ ಸಂಜೆ ಹಳಿ ತಪ್ಪಿದ್ದು ಯಾವುದೇ ಅನಾಹುತ ಸಂಭವಿಸಿಲ್ಲ. ಆದರೆ, ಬೆಂಗಳೂರು–ಮೈಸೂರು ನಡುವಣ ರೈಲುಗಳ ಸಂಚಾರದಲ್ಲಿ ಒಂದೂ ಮುಕ್ಕಾಲು ತಾಸು ವ್ಯತ್ಯಯವಾಯಿತು. ಕೆಲವು ರೈಲುಗಳು ವಿಳಂಬವಾದರೆ, ಉಳಿದವು ರದ್ದಾದವು. ಇದರಿಂದ ಪ್ರಯಾಣಿಕರು ತೊಂದರೆ ಅನುಭವಿಸಿದರು.

ಬಿಡದಿ ರೈಲು ನಿಲ್ದಾಣದಿಂದ ಮದ್ದೂರಿಗೆ ಹೊರಟಿದ್ದ ಖಾಲಿ ಇದ್ದ ಎನ್‌ಎಂಜಿ (ಹೊಸ ಮಾರ್ಪಡಿಸಿದ ಸರಕು) ಗೂಡ್ಸ್ ರೈಲಿನ ಒಂದು ಬೋಗಿಯ ಚಕ್ರವು ಸಂಜೆ 5 ಗಂಟೆ ಸುಮಾರಿಗೆ ಹಳಿ ತಪ್ಪಿತು. ಕೂಡಲೇ ಲೋಕೋಪೈಲಟ್ ರೈಲನ್ನು ನಿಲ್ಲಿಸಿ ಸಮಯಪ್ರಜ್ಞೆ ಮೆರೆದರು. ಬಳಿಕ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಹಳಿ ತಪ್ಪಿದ ರೈಲನ್ನು ಮದ್ದೂರು ಕಡೆಗೆ ಕಳುಹಿಸಿದರು.

ಈ ಘಟನೆಯಿಂದಾಗಿ ಮೈಸೂರು ಕಡೆಗೆ ಹೋಗುವ ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಯಿತು. ಬೆಂಗಳೂರಿನಿಂದ ಮೈಸೂರಿಗೆ ಹಾಗೂ ಮೈಸೂರಿನಿಂದ ಬೆಂಗಳೂರಿಗೆ ಬರುವ ರೈಲುಗಳು ಸೇರಿದಂತೆ ನಾಲ್ಕು ರೈಲುಗಳ ಸಂಚಾರ ರದ್ದಾಯಿತು.

ಚಿನ್ನ ಕಳವು: ಛಾಯಾಗ್ರಾಹಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆ ಮನೆ ವಿಚಾರಿಸಲು ಹೋದಾಗ ಮನೆಯ ಹೊರಗೆ ಶೂ ರ್‍ಯಾಕ್‌ನಲ್ಲಿಟ್ಟಿದ್ದ ಕೀ ಬಳಸಿಕೊಂಡು ಸಾಫ್ಟ್‌ವೇರ್ ಎಂಜಿನಿಯರ್ ಮನೆಯಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದ ಛಾಯಾಗ್ರಾಹಕನನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವೈಟ್‌ಫೀಲ್ಡ್ ನಿವಾಸಿ ಕಿರಣ್ ಎಂಬುವವರನ್ನು ಬಂಧಿಸಿ, ₹55 ಲಕ್ಷ ಮೌಲ್ಯದ 348 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ.

ಕಿರಣ್ ಅವರು ಫೋಟೊ ಸ್ಟುಡಿಯೊ ಇಟ್ಟುಕೊಂಡಿದ್ದರು. ಕೋವಿಡ್ ಸಂದರ್ಭದಲ್ಲಿ ಆರ್ಥಿಕ ನಷ್ಟ ಉಂಟಾದ ಪರಿಣಾಮ ಸ್ಟುಡಿಯೊ ಬಂದ್ ಮಾಡಿದ್ದರು. ಕ್ಯಾಮೆರಾ ಇದ್ದ ಕಾರಣ ವಿವಿಧ ಕಾರ್ಯಕ್ರಮಗಳಿಗೆ ಹೋಗುತ್ತಿದ್ದು, ಬಂದ ಹಣದಲ್ಲಿ ಜೀವನ ನಡೆಸುತ್ತಿದ್ದರು.

ನಾಗೊಂಡನಹಳ್ಳಿಯಲ್ಲಿರುವ ಸಾಫ್ಟ್‌ವೇರ್ ಎಂಜಿನಿಯರ್ ಜಗದೀಶ್ ಅವರು ಮನೆಯ ಬೀಗ ಹಾಕಿ, ಶಾಲೆಯಿಂದ ಮಕ್ಕಳು ಬರುತ್ತಾರೆಂದು ಕೀಯನ್ನು ಶೂ ರ್‍ಯಾಕ್‌ನಲ್ಲಿಟ್ಟು ಹೋಗಿದ್ದರು. ಈ ನಡುವೆ ಬಾಡಿಗೆ ಮನೆ ಹುಡುಕುತ್ತಿದ್ದ ಆರೋಪಿ, ಜಗದೀಶ್ ಅವರ ಮನೆ ಎದುರು ‘ಮನೆ ಬಾಡಿಗೆಗೆ ಇದೆ’ ಎಂಬ ಫಲಕ ನೋಡಿದ್ದಾರೆ. ವಿಚಾರಿಸಲು ಮನೆ ಬಳಿ ಹೋದಾಗ ಶೂ ರ್‍ಯಾಕ್‌ನಲ್ಲಿ ಕೀ ಇಟ್ಟಿದ್ದನ್ನು ಗಮನಿಸಿ, ಆ ಕೀ ಯಿಂದ ಮನೆಯ ಬಾಗಿಲು ತೆರೆದು ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದರು.

ಮನೆ ಮಾಲೀಕ ಜಗದೀಶ್ ಅವರ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು.

ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಿ, ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ, ಚಿನ್ನಾಭರಣ ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದು, ಆತನ ಮನೆಯಿಂದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದರು.

ಕಿರಣ್‌ಗೆ ತಾನು ಮಾಡಿದ ಕೃತ್ಯದಿಂದ ಪಶ್ಚಾತ್ತಾಪವಾಗಿ, ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳಿ ದೇವರ ದರ್ಶನ ಪಡೆದಿದ್ದಾರೆ. ವಾಪಸ್ ಬರುವಾಗ ಅವರನ್ನು ಬಂಧಿಸಿದ್ದು ವಿಚಾರಣೆ ಮುಂದುವರಿದಿದೆ ಎಂದರು.

ನ್ಯಾಯಾಂಗ ಅಧಿಕಾರಿಗಳ ನೇಮಕಾತಿ: ‘ಸುಪ್ರೀಂ’ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ನ್ಯಾಯಾಂಗ ಅಧಿಕಾರಿಗಳ (ಸಿವಿಲ್ ನ್ಯಾಯಾಧೀಶರು) ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ.



ಮಲಿಕ್ ಮಜರ್ ಸುಲ್ತಾನ್ ಹಾಗೂ ಉತ್ತರ ಪ್ರದೇಶ ಲೋಕಸೇವಾ ಆಯೋಗದ ನಡುವಿನ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಪಂಚೋಲಿ ಅವರ ಪೀಠವು ಈ ನಿರ್ದೇಶನ ನೀಡಿದೆ.

ಕರ್ನಾಟಕ ಸಿವಿಲ್ ನ್ಯಾಯಾಧೀಶರ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಫಲಿತಾಂಶವನ್ನು ಮಾತ್ರ ಘೋಷಿಸಬೇಕಾಗಿದೆ ಎಂದು ಪೀಠಕ್ಕೆ ತಿಳಿಸಲಾಯಿತು.

ಇದನ್ನು ಪರಿಗಣಿಸಿದ ಪೀಠವು, ‘ನ್ಯಾಯಾಂಗ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸುವ ಸ್ವಾತಂತ್ರ್ಯ ಹೈಕೋರ್ಟ್‌ಗೆ ಇದೆ’ ಎಂದು ಆದೇಶಿಸಿತು.

ಕರ್ನಾಟಕ ಸರ್ಕಾರವು 2024ರ ನವೆಂಬರ್ 15ರಂದು ‘ಕರ್ನಾಟಕ ನ್ಯಾಯಾಂಗ ಸೇವೆ (ನೇಮಕಾತಿ) (ತಿದ್ದುಪಡಿ) ನಿಯಮಗಳು–2024’ ಜಾರಿಗೆ ತಂದಿತ್ತು. ಮೀಸಲಾತಿಗಳಿಗೆ ತಿದ್ದುಪಡಿ ತಂದಿದ್ದರಿಂದ ನೇರ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು. 158 ನ್ಯಾಯಾಂಗ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಕರ್ನಾಟಕ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ 2025ರ ಫೆಬ್ರುವರಿಯಲ್ಲಿ ನಿರ್ದೇಶನ ನೀಡಿತ್ತು.

‘ಪಾರ್ಕಿಂಗ್‌ಗೆ ಆಧುನಿಕ ತಂತ್ರಜ್ಞಾನ’

ಕೆ.ಆರ್. ಮಾರುಕಟ್ಟೆ: ಬಾಕಿ ಕಾಮಗಾರಿ ಪೂರ್ಣಗೊಳಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಮಾರುಕಟ್ಟೆಯಲ್ಲಿ ‘ಅತ್ಯಾಧುನಿಕ ಪಾರ್ಕಿಂಗ್ ತಂತ್ರಜ್ಞಾನ’ ವ್ಯವಸ್ಥೆ ಜಾರಿಗೊಳಿಸುತ್ತಿದ್ದು, ಬಾಕಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಕೆ.ಆರ್. ಮಾರುಕಟ್ಟೆಗೆ ಮಂಗಳವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೆ.ಆರ್. ಮಾರುಕಟ್ಟೆಯ ತಳಮಹಡಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ. ಶೇ 90ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಿ ಸಾರ್ವಜನಿಕರ ಉಪಯೋಗಕ್ಕೆ ಒದಗಿಸಲು ಸೂಚಿಸಿದರು.

ಕೆ.ಆರ್. ಮಾರುಕಟ್ಟೆ

‘ಕೆ.ಆರ್. ಮಾರುಕಟ್ಟೆ ಮುಂಭಾಗ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ಮಾರುಕಟ್ಟೆಯಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ತಿಳಿಸಿದ ಅವರು, ಮೊದಲನೇ ಮಹಡಿಯಲ್ಲಿರುವ ಶೌಚಾಲಯ ಬಳಕೆಯಲ್ಲಿ ಇಲ್ಲದಿರುವುದನ್ನು ಗಮನಿಸಿ, ದುರಸ್ತಿ ಕಾರ್ಯ ಕೈಗೊಂಡು ನಾಗರಿಕರು ಬಳಸುವಂತೆ ಮಾಡಬೇಕು’ ಎಂದರು.

ತಳಮಹಡಿಯಲ್ಲಿ ಮಳೆನೀರು ನಿಲ್ಲುವುದನ್ನು ತಪ್ಪಿಸಲು ಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ವಿದ್ಯುತ್ ಸಂಪರ್ಕ, ಅಗ್ನಿಶಾಮಕ ಸುರಕ್ಷತಾ ಕ್ರಮಗಳು ಸೇರಿದಂತೆ ಇತರೆ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ರೈಟ್ ಪಾರ್ಕಿಂಗ್ ಸಂಸ್ಥೆ ವತಿಯಿಂದ ತಳಮಹಡಿಯಲ್ಲಿ ನವೀಕರಣ ಕಾರ್ಯ ಕೈಗೊಳ್ಳಲಾಗುತ್ತಿದೆ. ಇಲ್ಲಿ 400 ದ್ವಿಚಕ್ರ ವಾಹನಗಳು ಹಾಗೂ 200 ಕಾರುಗಳನ್ನು ನಿಲುಗಡೆ ಮಾಡಲು ವ್ಯವಸ್ಥೆ ಮಾಡಲಾಗುತ್ತಿದೆ. 67 ಎಐ ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ. ಇದರಿಂದ ಎಷ್ಟು ವಾಹನಗಳು ಪ್ರವೇಶಿಸುತ್ತವೆ ಹಾಗೂ ನಿರ್ಗಮಿಸುತ್ತವೆ ಎಂಬ ಸಂಪೂರ್ಣ ಮಾಹಿತಿ ದಾಖಲೆಯಾಗಲಿದೆ. ಇದಲ್ಲದೆ, ಸುರಕ್ಷತಾ ದೃಷ್ಟಿಯಿಂದ 12 ಅಲಾರಂ ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದರು.

461 ಬೀದಿ ನಾಯಿಗಳಿಗೆ ಸಂತಾನಶಕ್ತಿಹರಣ ಶಸ್ತ್ರ ಚಿಕಿತ್ಸೆ

ಜನವರಿಯಲ್ಲಿ 461 ಬೀದಿ ನಾಯಿಗಳಿಗೆ ಸಂತಾನಶಕ್ತಿಹರಣ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಇದರಲ್ಲಿ 190 ಗಂಡು ಹಾಗೂ 271 ಹೆಣ್ಣು ನಾಯಿಗಳು ಸೇರಿವೆ. ಶಸ್ತ್ರ ಚಿಕಿತ್ಸೆಯ ನಂತರ ತೆಗೆದುಹಾಕಲಾದ ಅಂಗಾಂಗಗಳನ್ನು ವೈಜ್ಞಾನಿಕ ವಿಧಾನದಲ್ಲಿ ನಾಶ ಮಾಡಲಾಗಿದೆ ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ಅವರು ತಿಳಿಸಿದರು.

ಮೇಡಿ ಅಗ್ರಹಾರದಲ್ಲಿರುವ ಪ್ರಾಣಿ ಜನನ ನಿಯಂತ್ರಣ (ಎಬಿಸಿ) ಕೇಂದ್ರದಲ್ಲಿ ಬೀದಿ ನಾಯಿಗಳ ಸಂತಾನಶಕ್ತಿಹರಣ ಶಸ್ತ್ರ ಚಿಕಿತ್ಸೆಯನ್ನು ಸರ್ಕಾರದ ಮಾರ್ಗಸೂಚಿಗಳು ಹಾಗೂ ಪ್ರಾಣಿ ಕಲ್ಯಾಣಕ್ಕೆ ಸಂಬಂಧಿಸಿದ ನಿಯಮಾವಳಿಗಳ ಪ್ರಕಾರ ನಡೆಸಲಾಗುತ್ತಿದೆ ಎಂದರು.

ವಿದ್ಯಾರ್ಥಿನಿ ಆತ್ಮಹತ್ಯೆ

ದೊಡ್ಡಬಳ್ಳಾಪುರ: ನಾಗದೇನಹಳ್ಳಿ ಗೀತಂ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯೊಬ್ಬರು ಹಾಸ್ಟೆಲ್ ಕಟ್ಟಡದ ಮೇಲಿಂದ ಬಿದ್ದು ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆನೇಕಲ್ ತಾಲ್ಲೂಕಿನ ಸರ್ಜಾಪುರದ ನಯನಾ (20) 12ನೇ ಮಹಡಿಯಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡವರು.

₹18 ಲಕ್ಷ ಕೋಟಿ ಹೂಡಿಕೆ ನಿರೀಕ್ಷೆ

ಒಂದನೇ ಪುಟದಿಂದ...

‘ಎ.ಐ ತಂತ್ರಜ್ಞಾನದ ಸರಿಯಾದ ಮತ್ತು ನೈತಿಕ ಬಳಕೆಯ ಕುರಿತು ಜಾಗತಿಕ ನಾಯಕರಲ್ಲಿ ಒಮ್ಮತ ಮೂಡಿಸುವ ಕೆಲಸವನ್ನು ಭಾರತವು ಈ ಶೃಂಗದ ಮೂಲಕ ಮಾಡಲಿದೆ. ಹಾಗಾದಲ್ಲಿ, ಕೃತಕ ಬುದ್ಧಿಮತ್ತೆಯನ್ನು ಜನರ ಒಳಿತಿಗಾಗಿ ಬಳಸಬಹುದು ಹಾಗೂ ಅದರ ದುರ್ಬಳಕೆಯನ್ನು ತಡೆಗಟ್ಟಬಹುದು’ ಎಂದರು.

‘ಎ.ಐಗೆ ಸಂಬಂಧಿಸಿದ ‘ಕಾಮನ್ ಕಂಪ್ಯೂಟಿಂಗ್ ಲೇಯರ್’ನಲ್ಲಿ ನಾವು ಈಗಾಗಲೇ 38 ಸಾವಿರ ಗ್ರಾಫಿಕ್ಸ್ ಪ್ರೊಸೆಸಿಂಗ್ ಘಟಕಗಳನ್ನು (ಜಿಪಿಯು) ಬಳಸು ತ್ತಿದ್ದೇವೆ. ಮುಂದಿನ ಒಂದು ವಾರದಲ್ಲಿ, ಸರ್ಕಾರವು 20 ಸಾವಿರ ಜಿಪಿಯುಗಳನ್ನು ಖರೀದಿಸಲಿದೆ. ಅವುಗಳ ಅಳವಡಿಕೆ ಪ್ರಕ್ರಿಯೆ ಆರು ತಿಂಗಳಲ್ಲಿ ನಡೆಯಲಿದೆ’ ಎಂದರು.

ಅದಾನಿ ಸಮೂಹ ಹೂಡಿಕೆ: 2035ರ ವೇಳೆಗೆ ‘ಹೈಪರ್‌ಸ್ಕೇಲ್ ಎ.ಐ-ರೆಡಿ ಡೇಟಾ ಸೆಂಟರ್’ಗಳನ್ನು ಅಭಿವೃದ್ಧಿಪಡಿಸಲು 100 ಶತಕೋಟಿ ಡಾಲರ್ (ಅಂದಾಜು ₹9.06 ಲಕ್ಷ ಕೋಟಿ) ಹೂಡಿಕೆ ಮಾಡಲು ಅದಾನಿ ಸಮೂಹ ಯೋಜಿಸಿದೆ. ಇದು ಜಾಗತಿಕ ಎ.ಐ ಹಬ್ ಆಗಬೇಕೆಂಬ ಭಾರತದ ಪ್ರಯತ್ನಕ್ಕೆ ಬಲ ತುಂಬಲಿದೆ.

‘ನೀರು ಬಳಕೆದಾರರಿಗೆ ಎ.ಐ ಸ್ಮಾರ್ಟ್ ಮೀಟರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಬಳಸುವ ಗ್ರಾಹಕರಿಗೆ ನಿಖರವಾದ ಬಿಲ್ ನೀಡಲು ಎ.ಐ(ಕೃತಕ ಬುದ್ಧಿಮತ್ತೆ) ಆಧಾರಿತ ಸ್ಮಾರ್ಟ್ ವಾಟರ್ ಮೀಟರ್‌ಗಳನ್ನು ಅಳವಡಿಸುವ ಬಗ್ಗೆ ಚಿಂತನೆ ನಡೆದಿದೆ’ ಎಂದು ಜಲಮಂಡಳಿಯ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಡಾ. ವಿ. ರಾಮ ಪ್ರಸಾತ್

ನವದೆಹಲಿಯಲ್ಲಿ ಮಂಗಳವಾರ ನಡೆದ ‘ಎ.ಐ ಇಂಪ್ಯಾಕ್ಟ್ ಶೃಂಗಸಭೆ-2026’ ರಲ್ಲಿ ಮಾಡೆಲ್ ಟೂ ಮಾಸಸ್ ಹವಾಮಾನ ವೈಪರೀತ್ಯ ಎದುರಿಸಲು ಎ.ಐ ಬಳಕೆ ಎಂಬ ಸಂವಾದದಲ್ಲಿ ಅವರು ಮಾತನಾಡಿದರು.

‘ನಗರದ ನೀರು ನಿರ್ವಹಣೆಯಲ್ಲಿ ಎ.ಐ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಬೆಂಗಳೂರು ಜಲಮಂಡಳಿಯು ಜಾಗತಿಕ ಮಟ್ಟದಲ್ಲಿ ಮಾದರಿಯಾಗಿ ಹೊರಹೊಮ್ಮಿದೆ. ನೀರು ಸರಬರಾಜು ವ್ಯವಸ್ಥೆಯ ಮೈಲಿಗಲ್ಲಾದ ಅತ್ಯಾಧುನಿಕ ‘ಎ.ಐ ಸಮಗ್ರ ಸ್ಕಾಡಾ ನಿರ್ವಹಣಾ ವ್ಯವಸ್ಥೆ’ಯನ್ನು ಸದ್ಯದಲ್ಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಘಾಟಿಸಲಿದ್ದಾರೆ’ ಎಂದು ತಿಳಿಸಿದರು.

‘ಪಂಪಿಂಗ್ ಸ್ಟೇಷನ್‌ಗಳು ಮತ್ತು ಎಸ್‌ಟಿಪಿಗಳಲ್ಲಿ ಎ.ಐ ಆಧಾರಿತ ಪಂಪ್‌ಗಳನ್ನು ಅಳವಡಿಸುವ ಮೂಲಕ ಕಾರ್ಯಕ್ಷಮತೆಯನ್ನು ಹೆಚ್ಚಿಸಿದ್ದೇವೆ. ಇದರಿಂದ ವಾರ್ಷಿಕವಾಗಿ ₹40 ಕೋಟಿಗೂ ಅಧಿಕ ವಿದ್ಯುತ್ ವೆಚ್ಚವನ್ನು ಉಳಿತಾಯ ಮಾಡುತ್ತಿದ್ದೇವೆ’ ಎಂದು ತಿಳಿಸಿದರು.

‘ನೀರಿನ ಸೋರಿಕೆ ಪತ್ತೆಹಚ್ಚಲು ಮತ್ತು ಅನಧಿಕೃತ ಸಂಪರ್ಕಗಳನ್ನು ನಿಖರವಾಗಿ ಗುರುತಿಸಲು ಎ.ಐ ಚಾಲಿತ ರೋಬೋಟಿಕ್ಸ್ ಬಳಸುತ್ತಿದ್ದೇವೆ’ ಎಂದು ವಿವರಿಸಿದರು.

ಇಂದಿನಿಂದ ಟಿಬೆಟಿಯನ್ನರ ಹೊಸ ವರ್ಷ

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): ಟಿಬೆಟಿಯನ್ನರ ಹೊಸ ವರ್ಷ ‘ಲೋಸಾರ್’ 2153 ಬುಧವಾರದಿಂದ (ಫೆ.18) ಆರಂಭ ಆಗಲಿದೆ. ‘ಫೈರ್ ಹಾರ್ಸ್’ ಈ ವರ್ಷದ ರಾಶಿ. ಪ್ರತಿಯೊಂದು ರಾಶಿಚಕ್ರವು ಮರ, ಬೆಂಕಿ, ಭೂಮಿ, ಲೋಹ ಮತ್ತು ನೀರು ಈ ಐದು ಅಂಶಗಳನ್ನು ಒಳಗೊಂಡಿರುತ್ತದೆ ಎಂದು ಟಿಬೆಟಿಯನ್ನರು ಹೇಳುತ್ತಾರೆ.

‘ಫೈರ್ ಹಾರ್ಸ್’ ಇದು ಚಲನೆ, ಧೈರ್ಯ ಮತ್ತು ರೂಪಾಂತರವನ್ನು ಸಂಕೇತಿಸುತ್ತದೆ. ಲೋಸಾರ್ ಪ್ರಯುಕ್ತ ಈಗಾಗಲೇ ಟಿಬೆಟಿಯನ್ನರು ಮನೆಗಳನ್ನು ಶುಚಿಗೊಳಿಸಿ, ಸಿಹಿ ಖಾದ್ಯ ಹಾಗೂ ನೂಡಲ್ ಸೂಪ್ ತಯಾರಿಕೆಯಲ್ಲಿ ತೊಡಗಿದ್ದಾರೆ. ಮೊದಲ ಮೂರು ದಿನಗಳು ಹಬ್ಬದ ಪ್ರಮುಖ ದಿನಗಳು. ಹುಣ್ಣಿಮೆಯ ದಿನ ‘ಭೂತ ದಹನ’ ಮಾಡುವ ಮೂಲಕ ಬಿಕ್ಕು ಗಳು ಲೋಸಾರ್ ಆಚರಣೆಗೆ ತೆರೆ ಎಳೆಯು ತ್ತಾರೆ.

ಬಳಕೆ ಆಗದ 269 ಕೋಟಿ

₹300 ಕೋಟಿ	₹30.79 ಕೋಟಿ	103 ಮಂದಿ
2025–26ನೇ ಸಾಲಿನಲ್ಲಿ ಮೀಸಲಿಟ್ಟದ್ದ ಮೊತ್ತ	ಡಿಸೆಂಬರ್ ಅಂತ್ಯದ ವರೆಗೆ ಖರ್ಚು ಮಾಡಿರುವ ಮೊತ್ತ	₹50 ಲಕ್ಷದವರೆಗೆ ಉಚಿತ ಚಿಕಿತ್ಸೆಯ ಪ್ರಯೋಜನವನ್ನು ಇಲ್ಲಿಯವರೆಗೆ ಪಡೆದವರು

ಒಂದನೇ ಪುಟದಿಂದ...

ದೇಶದಲ್ಲಿ ಸುಮಾರು ಏಳು ಸಾವಿರ ವಿರಳ ಕಾಯಿಲೆಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಶೇ 5ರಷ್ಟು ಕಾಯಿಲೆಗಳಿಗೆ ಮಾತ್ರ ನಿಖರ ಚಿಕಿತ್ಸೆಗಳಿದ್ದು, ಉಳಿದ ಶೇ 95ರಷ್ಟು ಕಾಯಿಲೆಗಳಿಗೆ ಜೀವನಪೂರ್ತಿ ಪೂರಕ ಚಿಕಿತ್ಸೆ ಒದಗಿಸಬೇಕಾಗಿದೆ.

ಹಿಮೋಫೀಲಿಯಾ, ತಲಸ್ಸೇಮಿಯಾ, ಪೊಂಪೆ, ಗೌಚರ್, ಸಿಕಲ್-ಸೆಲ್ ಅನೀಮಿಯಾ ಸೇರಿ ಹಲವು ರೋಗಗಳನ್ನು ವಿರಳ ಕಾಯಿಲೆಗಳ ಪಟ್ಟಿಗೆ ಸೇರಿಸಲಾಗಿದೆ. ಈ ಕಾಯಿಲೆಗಳು ಆನುವಂಶಿಕವಾಗಿವೆ.

ಈ ರೋಗಗಳಿಂದ ಬಳಲುತ್ತಿರುವವರಿಗೆ ನೆರವಾಗಲು ಆರೋಗ್ಯ ಸಚಿವಾಲಯವು ‘ವಿರಳ ರೋಗಗಳ ರಾಷ್ಟ್ರೀಯ ನೀತಿ-2021’ರ (ತಿದ್ದುಪಡಿ) ಅಡಿ ತಲಾ ₹50 ಲಕ್ಷದವರೆಗೆ ಉಚಿತ ಚಿಕಿತ್ಸೆ ಹಾಗೂ ಔಷಧ ಒದಗಿಸುತ್ತಿದೆ. ಆದರೆ, ಬಹುತೇಕ ಎಲ್ಲ ರೋಗಿಗಳ ಚಿಕಿತ್ಸಾ ವೆಚ್ಚವು ಅಲ್ಪಾವಧಿಯಲ್ಲಿಯೇ ಗೊತ್ತುಪಡಿಸಿದ ಮೊತ್ತವನ್ನು ಮೀರುತ್ತಿದೆ. ಇದರಿಂದಾಗಿ ರೋಗಿಗಳ ಕುಟುಂಬಗಳು ಚಿಕಿತ್ಸಾ ವೆಚ್ಚ ಭರಿಸಲಾಗದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿವೆ.

ಕಿದ್ವಾಯಿಗೆ ನಾಲ್ಕು ಎಲೆಕ್ಟ್ರಿಕ್ ವಾಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ನಾಲ್ಕು ಎಲೆಕ್ಟ್ರಿಕ್ ವಾಹನಗಳನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಒದಗಿಸಿದೆ.

ನಗರದಲ್ಲಿ ಮಂಗಳವಾರ ಈ ವಾಹನಗಳಿಗೆ ಚಾಲನೆ ನೀಡಿದ ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್, ‘ವಿವಿಧ ಪರೀಕ್ಷೆಗಳ ಸಂಬಂಧ ರೋಗಿಗಳನ್ನು ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ಕರೆದೊಯ್ಯಬೇಕಾಗುತ್ತದೆ. ರೋಗಿಗಳು ವಿವಿಧ ವೈದ್ಯಕೀಯ ವಿಭಾಗಗಳಿಗೆ ತೆರಳಲು ಈ ವಾಹನಗಳು ನೆರವಾಗಲಿವೆ. ಸಂಸ್ಥೆಯಲ್ಲಿ ಮೂಲ ಸೌಲಭ್ಯ ಅಳವಡಿಸಿಕೊಳ್ಳಲು ಸಿಎಸ್‌ಆರ್ ನಿಧಿ ಸಹಕಾರಿಯಾಗಿದೆ’ ಎಂದು ಹೇಳಿದರು.

ಎಲೆಕ್ಟ್ರಿಕ್ ವಾಹನಕ್ಕೆ ಡಾ.ಟಿ.ನವೀನ್ ಚಾಲನೆ ನೀಡಿದರು. ಬ್ಯಾಂಕ್‌ನ ಅಧಿಕಾರಿಗಳಾದ ಪಿ.ಎಸ್.ಮಾರ್ಟಿನ್, ಸಚಿನ್ ಜಾಧವ್, ರಾಜಾ ರಾಜೇಶ್ವರನ್ ಉಪಸ್ಥಿತರಿದ್ದರು

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ (ಸಿಒಒ) ಪಿ.ಎಸ್.ಮಾರ್ಟಿನ್, ಅವರು ಮಾತನಾಡಿ ‘ಸಿಎಸ್‌ಆರ್ ನಿಧಿಯಡಿ ಆಸ್ಪತ್ರೆಗಳಿಗೆ ಹಲವು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಎಲೆಕ್ಟ್ರಿಕ್ ವಾಹನಗಳು ಕ್ಯಾನ್ಸರ್ ರೋಗಿಗಳಿಗೆ ವಿವಿಧ ವಿಭಾಗಗಳಿಗೆ ತೆರಳಲು ಅನುಕೂಲವಾಗಲಿದೆ’ ಎಂದು ಹೇಳಿದರು.

ನಿಧನ ವಾರ್ತೆ

ಕೆ.ಸಿ.ರುದ್ರೇಗೌಡ

ದೊಡ್ಡಬಳ್ಳಾಪುರ: ನಗರದ ರಾಜಕಮಲ್ ಚಿತ್ರಮಂದಿರ ಮಾಲೀಕ ಕೆ.ಸಿ. ರುದ್ರೇಗೌಡ (96) ವಯೋಸಹಜ ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಅವರಿಗೆ ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ನಗರದ ಹೊರವಲಯದ ಮುಕ್ತಿಧಾಮದಲ್ಲಿ ನೆರವೇರಿತು.

ಕನ್ನಡ ಚಲನ ಚಿತ್ರೋದ್ಯಮದಲ್ಲಿ ರಾಜ್‌ಕಮಲ್ ಆರ್ಟ್ಸ್ ಬ್ಯಾನರ್ ಮೂಲಕ ನಿರ್ಮಾಪಕ, ವಿತರಕರಾಗಿ ಹೆಸರಾಗಿದ್ದ ಕೆ.ಸಿ.ಎನ್.ಗೌಡ ಸಹೋದರರಲ್ಲಿ ಒಬ್ಬರಾದ ಕೆ.ಸಿ. ರುದ್ರೇಗೌಡ, ತಮ್ಮ ಹಿರಿಯ ಸಹೋದರ ಕೆ.ಸಿ.ನಂಜುಂಡೇಗೌಡ ಅವರೊಂದಿಗೆ ಕನ್ನಡ ಚಿತ್ರ ನಿರ್ಮಾಪಕ, ವಿತರಕ, ಪ್ರದರ್ಶಕರಾಗಿ ಚಿತ್ರೋದ್ಯಮದಲ್ಲಿ ತೊಡಗಿಸಿಕೊಂಡಿದ್ದರು.

ನಿಗಮ-ಮಂಡಳಿಗೆ ನೇಮಕ ಪ್ರಶ್ನಿಸಿದ್ದ ಅರ್ಜಿ; ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

‘ಸಂಪುಟ ದರ್ಜೆ ಸ್ಥಾನ: ನಿಲುವು ತಿಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘48 ಶಾಸಕರನ್ನು ವಿವಿಧ ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿ, ಸಂಪುಟ ದರ್ಜೆಯ ಸ್ಥಾನ ನೀಡಿರುವುದು ಸಂವಿಧಾನದ ಉಲ್ಲಂಘನೆಯಾಗಿದೆ’ ಎಂದು ಆಕ್ಷೇಪಿಸಿರುವ ಅರ್ಜಿಗೆ ಸಂಬಂಧಿಸಿದಂತೆ ನಿಮ್ಮ ನಿಲುವು ಏನೆಂಬುದನ್ನು ಸ್ಪಷ್ಟಪಡಿಸಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ, ಸೂರಿ ಪಾಯಲ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

‘ಅರ್ಜಿದಾರರು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ನಿಮ್ಮ ನಿಲುವು ಏನೆಂಬುದನ್ನು ತಿಳಿಸಿ’ ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 4 ಮುಂದೂಡಿತು.

ಕೋರಿಕೆ: ‘ಈ ನೇಮಕಾತಿ ಸಂವಿಧಾನದ 102 ಮತ್ತು 192ನೇ ವಿಧಿಗೆ ಮತ್ತು ಪ್ರಜಾಪ್ರತಿನಿಧಿ ಕಾಯ್ದೆ-1951ಕ್ಕೆ ವಿರುದ್ಧವಾಗಿದೆ. ಅಂತೆಯೇ, ಸುಪ್ರೀಂ ಕೋರ್ಟ್‌ನ ಮಾನದಂಡಗಳಿಗೂ ವ್ಯತಿರಿಕ್ತವಾಗಿದೆ. ಲಾಭದಾಯಕ ಹುದ್ದೆಗಳಲ್ಲಿರುವ ಈ ನೇಮಕಾತಿಗಳನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು. ನೇಮಕಗೊಂಡಿರುವವರನ್ನು ತಕ್ಷಣವೇ ಆಯಾ ಸ್ಥಾನಗಳಿಂದ ತೆಗೆದುಹಾಕಬೇಕು. ಎಲ್ಲ ಸೌಲಭ್ಯಗಳನ್ನೂ ಹಿಂಪಡೆಯಲು ಆದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ವೀಸಾ ಅವಧಿ ವಿಸ್ತರಣೆ ಕೋರಿಕೆ: ನೋಟಿಸ್

ಬೆಂಗಳೂರು: ಎರಡು ವರ್ಷಗಳ ಹಿಂದೆಯೇ ಮುಕ್ತಾಯಗೊಂಡ ವೀಸಾ ಅವಧಿ ವಿಸ್ತರಣೆ ಮಾಡುವಂತೆ ಕೋರಿ ಸುಡಾನ್ ಪ್ರಜೆಯೊಬ್ಬರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸುಡಾನ್ ಪ್ರಜೆ ಅವಾಬ್ ಆದಿಲ್ ಅಹಮದ್ ಮೊಹಮದ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಮಾರ್ಚ್ 6ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ಅರ್ಜಿದಾರರು ವಿದ್ಯಾರ್ಥಿ ವೀಸಾದಡಿ ಭಾರತಕ್ಕೆ ಬಂದು ಇಲ್ಲೇ ನೆಲಸಿದ್ದರು. 2023ರ ಆಗಸ್ಟ್ 9ರಂದು ವೀಸಾ ಅವಧಿ ಮುಕ್ತಾವಾಗಿದ್ದು, ವಿಸ್ತರಣೆ ಮಾಡಬೇಕು ಎಂದು ಕೋರಿ ವಿದೇಶಿಗರ ಪ್ರಾದೇಶಿಕ ನೋಂದಣಾಧಿಕಾರಿ ಕಚೇರಿಗೆ (ಎಫ್‌ಆರ್‌ಆರ್‌ಒ) 2025ರ ಸೆಪ್ಟೆಂಬರ್ 11ರಂದು ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ತಿರಸ್ಕರಿಸಿ ಆನ್‌ಲೈನ್ ಹಿಂಬರಹ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

28ರಿಂದ ಪಿಯು ಪರೀಕ್ಷೆ ಶುರು

ವೆಬ್‌ಕಾಸ್ಟಿಂಗ್ ಮೂಲಕ ಪರೀಕ್ಷಾ ಚಟುವಟಿಕೆಗಳ ಮೇಲೆ ನಿರಂತರ ನಿಗಾ

ಏಪ್ರಿಲ್ 7	ದ್ವಿತೀಯ ಪಿಯು ಪರೀಕ್ಷಾ ಫಲಿತಾಂಶ
ಏಪ್ರಿಲ್ 24	ಎಸ್‌ಎಸ್‌ಎಲ್‌ಸಿ ಫಲಿತಾಂಶ
ಪಿಯು ಪರೀಕ್ಷೆ–2	ಏಪ್ರಿಲ್ 25ರಿಂದ ಆರಂಭ
ಎಸ್‌ಎಸ್‌ಎಲ್‌ಸಿ ಪರೀಕ್ಷೆ–2	ಮೇ 18ರಿಂದ ಆರಂಭ

ಎಡ್ಯುವರ್ಸ್ ಪ್ರಿಮಿಯರ್ ಎಜುಕೇಶನ್ ಎಕ್ಸ್‌ಪೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ ಫೆ.28ರಿಂದ ಆರಂಭ ಆಗಲಿದ್ದು, 1,217 ಕೇಂದ್ರಗಳಲ್ಲಿ 7.10 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಈ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, 'ಪ್ರತಿ ಪರೀಕ್ಷಾ ಕೇಂದ್ರವೂ ಸಿ.ಸಿ.ಟಿ.ವಿ ಕ್ಯಾಮೆರಾ ಒಳಗೊಂಡಿದೆ. ವಿವಿಧ ಹಂತದ ಅಧಿಕಾರಿಗಳು ವೆಬ್‌ಕಾಸ್ಟಿಂಗ್ ಮೂಲಕ ಪರೀಕ್ಷಾ ಚಟುವಟಿಕೆಗಳ ಮೇಲೆ ನಿರಂತರ ನಿಗಾವಹಿಸಲಿದ್ದಾರೆ. ಪರೀಕ್ಷಾ ಕೇಂದ್ರದ ಹೊರಗೂ ಕಟ್ಟುನಿಟ್ಟಿನ ಕಣ್ಗಾವಲಿಗೆ ವ್ಯವಸ್ಥೆ ಮಾಡಲಾಗುತ್ತಿದೆ' ಎಂದರು.

ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ನಡೆದರೆ ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನೆಪತ್ರಿಕೆ ಹರಿಬಿಡುವುದು, ಆರ್ಥಿಕ ಲಾಭಕ್ಕಾಗಿ ವಹಿವಾಟು ನಡೆಸುವ ವ್ಯಕ್ತಿಗಳ ಖಾತೆಗಳನ್ನು ನಿರ್ಬಂಧಿಸಲಾಗುವುದು. ಕಾನೂನು ಕ್ರಮ ಜರುಗಿಸಲಾಗುವುದು. ಹಿಂದೆ ಇಂತಹ ಕೃತ್ಯ ಎಸಗಿದ ಅಪರಾಧಿಗಳ ವಿರುದ್ಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷೆ ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ನಿಷೇಧಿತ ಪ್ರದೇಶವಾಗಿರುತ್ತದೆ. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಅಗತ್ಯ ಮುಂಜಾಗ್ರತಾ ಕ್ರಮ, ಬಂದೋಬಸ್ತ್ ಕೈಗೊಳ್ಳುವ ಹೊಣೆ ನೀಡಲಾಗಿದೆ ಎಂದರು.



ಮಧು ಬಂಗಾರಪ್ಪ

ಪರೀಕ್ಷಾ ಕೇಂದ್ರದ ಒಳಗೆ ಮೊಬೈಲ್ ಫೋನ್, ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ನಿಷೇಧಿಸಲಾಗಿದೆ. ಹಿಂದಿನ ವರ್ಷದಂತೆ ಈ ಬಾರಿಯೂ ವಸ್ತ್ರಸಂಹಿತೆ ಇರುತ್ತದೆ ಎಂದು ಮಾಹಿತಿ ನೀಡಿದರು.

ಮಾರ್ಚ್ 18ರಿಂದ ಎಸ್‌ಎಸ್‌ಎಲ್‌ಸಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 18ರಿಂದ ಆರಂಭವಾಗಲಿದ್ದು, ಈ ಬಾರಿ ದಾಖಲೆಯ 9.02 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. ಕಳೆದ ಬಾರಿ 8.96 ಲಕ್ಷ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು.

15,941 ಶಾಲೆಗಳ ವಿದ್ಯಾರ್ಥಿಗಳಲ್ಲಿ 8.12 ಲಕ್ಷ ಹೊಸಬರು, 62,845 ಪುನರಾವರ್ತಿತರು ಹಾಗೂ 27,189 ಖಾಸಗಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದಾರೆ.

2,871 ಪರೀಕ್ಷಾ ಕೇಂದ್ರಗಳಲ್ಲಿ ಏಪ್ರಿಲ್ 2ರವರೆಗೂ ಪರೀಕ್ಷೆ ನಡೆಯಲಿದೆ.

ವಿದ್ಯಾರ್ಥಿಗಳಿಗೆ ಸಹಾಯವಾಣಿ

ವಿದ್ಯಾರ್ಥಿಗಳಿಗೆ ಪರೀಕ್ಷಾ ಒತ್ತಡ ಎದುರಿಸಲು ಸಹಾಯವಾಗುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸಹಾಯವಾಣಿ ಆರಂಭಿಸಿದೆ. ವಿದ್ಯಾರ್ಥಿಗಳು 080-23310075/76 ಸಂಖ್ಯೆಗೆ ಸಂಪರ್ಕಿಸಬಹುದು.

ಉಚಿತ ಬಸ್ ಸೌಲಭ್ಯ: ಪರೀಕ್ಷಾ ದಿನಗಳಲ್ಲಿ ವಿದ್ಯಾರ್ಥಿಗಳು ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಪ್ರವೇಶ ಪತ್ರ ತೋರಿಸಿ, ಉಚಿತ ಪ್ರಯಾಣ ಮಾಡಬಹುದು.

'ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಖಾಸಗಿ ಬಸ್‌ಗಳ ಮಾಲೀಕರು ಸಹಕರಿಸಬೇಕು ಎಂದು ಮನವಿ ಮಾಡಲಾಗುವುದು. ದೂರದ ಪ್ರದೇಶಗಳಿಂದ ಪ್ರಯಾಣಿಸುವ ವಿದ್ಯಾರ್ಥಿಗಳಿಗೆ ಅಗತ್ಯ ಪ್ರಯಾಣ ವ್ಯವಸ್ಥೆ ಕಲ್ಪಿಸಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಮಧು ಬಂಗಾರಪ್ಪ ಹೇಳಿದರು.

ವಿಜ್ಞಾನಕ್ಕೇ ಅಧಿಕ ವಿದ್ಯಾರ್ಥಿಗಳು

ಈ ಬಾರಿ ನಡೆಯುವ ದ್ವಿತೀಯ ಪಿಯು ಪರೀಕ್ಷೆಯಲ್ಲಿ ವಿಜ್ಞಾನ ವಿಷಯದ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆಯೇ ಅಧಿಕ. 5,174 ಕಾಲೇಜುಗಳ ನೋಂದಾಯಿತ 7.10 ಲಕ್ಷ ವಿದ್ಯಾರ್ಥಿಗಳಲ್ಲಿ 2.92 ಲಕ್ಷ ವಿಜ್ಞಾನ ವಿಭಾಗಕ್ಕೆ ಸೇರಿದವರು.

ವಾಣಿಜ್ಯ ವಿಷಯದ ಪರೀಕ್ಷೆಗೆ 2.11 ಲಕ್ಷ ಹಾಗೂ ಕಲಾ ವಿಷಯಗಳಿಗೆ 1.42 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. ಕಲಾ ವಿಭಾಗಕ್ಕೆ ಪ್ರವೇಶ ಪಡೆಯುವವರ ಸಂಖ್ಯೆ ಕಡಿಮೆಯಾಗುತ್ತಿದ್ದು, ಸರ್ಕಾರಿ ಕಾಲೇಜುಗಳಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಹೆಚ್ಚುವರಿ ತರಗತಿಗಳನ್ನು ಆರಂಭಿಸಲು ಸೂಚಿಸಲಾಗಿದೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಪರೀಕ್ಷೆ ಬರೆಯುತ್ತಿರುವವರಲ್ಲಿ 6.46 ಲಕ್ಷ ಹೊಸ ವಿದ್ಯಾರ್ಥಿಗಳು, 50,540 ಪುನರಾವರ್ತಿತರು ಹಾಗೂ 13,022 ಖಾಸಗಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಪರೀಕ್ಷೆ–1ಕ್ಕೆ ಹಾಜರಿ ಕಡ್ಡಾಯ: ಪ್ರತಿ ವರ್ಷದಂತೆ ಈ ಬಾರಿಯೂ ಮೂರು ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಮೂರು ಪರೀಕ್ಷೆಗಳಿಂದ ಯಾವ ವಿಷಯಗಳಲ್ಲಿ ಹೆಚ್ಚು ಅಂಕ ಪಡೆಯುತ್ತಾರೋ ಅದೇ ಅಂಕಗಳನ್ನು ಅಂತಿಮ ಅಂಕಪಟ್ಟಿಯಲ್ಲಿ ನಮೂದಿಸಲಾಗುತ್ತದೆ.

ಪ್ರತಿ ವಿದ್ಯಾರ್ಥಿಯೂ ಪರೀಕ್ಷೆ–1ಗೆ ಹಾಜರಾಗುವುದು ಕಡ್ಡಾಯ. ಮೊದಲ ಪರೀಕ್ಷೆಗೆ ಹಾಜರಾಗದವರಿಗೆ ಎರಡನೇ ಮತ್ತು ಮೂರನೇ ಪರೀಕ್ಷೆಗೆ ಅವಕಾಶ ಇಲ್ಲ ಎಂದು ಮಧು ಬಂಗಾರಪ್ಪ ಹೇಳಿದರು.

'ರೋಹಿತ್ ವೇಮುಲ ಕಾಯ್ದೆ ಜಾರಿಗೊಳಿಸಿ'

ಪ್ರಜಾವಾಣಿ ವಾರ್ತೆ

ಮಾವಳ್ಳಿ ಶಂಕರ್

ಬೆಂಗಳೂರು: 'ರಾಜ್ಯದಲ್ಲಿ ರೋಹಿತ್ ವೇಮುಲ ಕಾಯ್ದೆ ಜಾರಿ ಮಾಡುವ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು' ಎಂದು ರೋಹಿತ್ ಕಾಯ್ದೆಗಾಗಿ ಜನಾಂದೋಲನ ಕರ್ನಾಟಕ ಆಗ್ರಹಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಜನಾಂದೋಲನದ ಪರವಾಗಿ ಮಾತನಾಡಿದ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, 'ಶಿಕ್ಷಣ ವ್ಯವಸ್ಥೆಯಲ್ಲಿ ಜಾತಿ ತಾರತಮ್ಯ ನಿವಾರಣೆಗೆ ಈ ಕಾಯ್ದೆ ಸಹಕಾರಿ. ಕಾಂಗ್ರೆಸ್ ಪಕ್ಷವು 2024ರ ಚುನಾವಣಾ ಪ್ರಣಾಳಿಕೆಯಲ್ಲಿ ಈ ಕಾಯ್ದೆ ಜಾರಿಗೊಳಿಸುವ ಭರವಸೆ ನೀಡಿತ್ತು. 2025ರ ಏಪ್ರಿಲ್‌ನಲ್ಲಿ ರಾಹುಲ್ ಗಾಂಧಿ ಅವರ ಕರೆಗೆ ಸ್ಪಂದಿಸಿದ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ಈ ಕಾಯ್ದೆಯನ್ನು ಜಾರಿಮಾಡು ವುದಾಗಿ ಸಾರ್ವಜನಿಕವಾಗಿ ಭರವಸೆ ನೀಡಿದ್ದರು. ಉನ್ನತ ಶಿಕ್ಷಣದಲ್ಲಿ ಜಾತಿ ತಾರತಮ್ಯ ಎದುರಿಸುತ್ತಿರುವವರಿಗೆ ಹೊಸ ಭರವಸೆ ಮೂಡಿಸಿತ್ತು. ಆದರೆ, ಈವರೆಗೂ ಮಸೂದೆಯ ಕರಡನ್ನು ಸಾರ್ವಜನಿಕವಾಗಿ ಚರ್ಚೆಗೆ ಬಿಡುಗಡೆ ಮಾಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಈ ಕಾಯ್ದೆಯನ್ನು ಜಾರಿಗೊಳಿಸುವಂತೆ ಸಿದ್ದರಾಮಯ್ಯ ಅವರು ಸೂಚಿಸುವ ಜತೆಗೆ, ಬಜೆಟ್ ಅಧಿವೇಶನದಲ್ಲಿ ಘೋಷಿಸಬೇಕು. ವಿಧಾನಸಭೆಯಲ್ಲಿ ಇದನ್ನು ಮಂಡಿಸಲು ಮತ್ತು ಅಂಗೀಕರಿಸಲು ಸ್ಪಷ್ಟವಾದ ವೇಳಾಪಟ್ಟಿ ಘೋಷಿಸಬೇಕು' ಎಂದು ಆಗ್ರಹಿಸಿದರು.

ಪಿಜಿ–ವೈದ್ಯಕೀಯ: ಆಯ್ಕೆ ದಾಖಲಿಸಲು ಇಂದು ಕೊನೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ 3ನೇ ಸುತ್ತಿನ ಸೀಟು ಹಂಚಿಕೆಗೆ ಬೆಂಗಳೂರಿನ ಪಾಲಿಕೆಗಳು ಸೇರಿದಂತೆ ಸರ್ಕಾರದ ಇತರ ಆಸ್ಪತ್ರೆಗಳಲ್ಲಿನ ಸೇವಾ ನಿರತ ಅಭ್ಯರ್ಥಿಗಳಿಗೆ ಡಿಎನ್‌ಬಿ ಸೀಟುಗಳು ಲಭ್ಯವಿದ್ದು, ಆಯ್ಕೆ ದಾಖಲಿಸಲು ಫೆ.18ರಂದು ಮಧ್ಯಾಹ್ನ 12ರವರೆಗೆ ಅವಕಾಶ ನೀಡಲಾಗಿದೆ. ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಕೋರ್ಸ್‌ಗಳ ಪಟ್ಟಿಗಳಿಗೆ ಮಾತ್ರ ಅಭ್ಯರ್ಥಿಗಳು ತಮ್ಮ ಆಯ್ಕೆಗಳನ್ನು ದಾಖಲಿಸಬಹುದು.

ಹೊಸ ಎಎಜಿ ನೇಮಕ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ಹಾಲಿ ಹೆಚ್ಚುವರಿ ಅಡ್ವೊಕೇಟ್ ಜನರಲ್‌ಗಳಾದ (ಎಎಜಿ) ಸಿ.ಎಸ್. ಪ್ರದೀಪ್, ಸಂತೋಷ್ ಎಸ್.ಗೋಗಿ ಮತ್ತು ಎನ್.ದೇವದಾಸ್ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ.

ಈ ತೆರವಾದ ಹುದ್ದೆಗಳಿಗೆ ಕ್ರಮವಾಗಿ ಹೈಕೋರ್ಟ್ ವಕೀಲರಾದ ಪ್ರದೀಪ್ ಗಾಂವಕರ್, ತಾರನಾಥ ಪೂಜಾರಿ ಮತ್ತು ಕೆ.ಶ್ರೀಕಾಂತ ಪಾಟೀಲ ಅವರನ್ನು ನೇಮಕ ಮಾಡಿ ಕಾನೂನು ಇಲಾಖೆ ಆದೇಶ ಹೊರಡಿಸಿದೆ.

'ಜೀವಮಾನ ಸಾಧನೆ'ಗೆ ಕಳಿಂಗಾ ಸಂಸ್ಥೆಯಿಂದ ಗೌರವ

ಶಾಂತಕುಮಾರ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಡಿಶಾದ ಭುವನೇಶ್ವರದ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಕೆಐಐಟಿ) ಹಮ್ಮಿಕೊಂಡಿದ್ದ 22ನೇ ಸಂಸ್ಥಾಪನಾ ದಿನದ ಸಮಾರಂಭದಲ್ಲಿ 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ ನಿರ್ದೇಶಕ ಕೆ.ಎನ್.ಶಾಂತಕುಮಾರ್ ಅವರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೆಐಐಟಿ ಮತ್ತು ಕೆಐಎಸ್‌ಎಸ್ ಸಂಸ್ಥಾಪಕ ಅಚ್ಯುತ ಸಮಂತ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶಾಂತಕುಮಾರ್ ಅವರು, 'ಶಿಕ್ಷಣ ಮತ್ತು ಕ್ರೀಡಾ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಕಳಿಂಗ ಸಂಸ್ಥೆಯು ಇಡೀ ದೇಶಕ್ಕೆ ಯಶಸ್ಸಿನ ಪುನರ್ ವ್ಯಾಖ್ಯಾನ ಮಾಡಿದೆ. ಶಿಕ್ಷಣ ಎಂದರೆ ಕೇವಲ ಪದವಿ ಪಡೆಯುವುದಲ್ಲ, ಘನತೆ, ಅವಕಾಶ ಹಾಗೂ ಬದಲಾವಣೆಯ ಮಾರ್ಗ ಎನ್ನುವುದನ್ನು ಕಳಿಂಗ ಸಂಸ್ಥೆ ತೋರಿಸಿದೆ. ಇಲ್ಲಿ ಒಳಗೊಳ್ಳುವಿಕೆಯ ಬದ್ಧತೆ ಇದೆ. ಮುಖ್ಯವಾಹಿನಿಯಿಂದ ದೂರ ಉಳಿದ, ತಳಮಟ್ಟದ ಜನರನ್ನು ತಲುಪಿರುವುದು ಸಂಸ್ಥೆಯ ಹೆಗ್ಗುರುತಾಗಿದೆ' ಎಂದು ಶ್ಲಾಘಿಸಿದರು.

ಶ್ರೀಲಂಕಾದ ಶ್ರೀ ಜಿನರಥನ ಭಿಕ್ಕು ಶಿಕ್ಷಣ ಮಂಡಳಿಯ ಕುಲಪತಿ ಕಿರಿಂದೆ ಅಸ್ಸಾಜಿ ನಾಯಕ ಥೆರೋ ಮಾತನಾಡಿ, 'ಸಾಕಷ್ಟು ದೇಶಗಳಿಗೆ ಭೇಟಿ ನೀಡಿ, ಹಲವು ಸಂಸ್ಥೆ ನೋಡಿದ್ದೇನೆ. ಆದರೆ, ಕರುಣೆ, ಶಿಸ್ತು, ಮಾನವೀಯತೆ ಮತ್ತು ದೃಷ್ಟಿಕೋನಗಳನ್ನು ಒಂದೇ ಕಡೆ ಸೇರಿಸುವ ಅಪರೂಪದ ಸಂಸ್ಥೆ ಕಳಿಂಗ' ಎಂದು ಶ್ಲಾಘಿಸಿದರು.

ಅಮೆರಿಕದ ಕೊಲಂಬಿಯಾದ ಹಾಸ್ಪಿಟಲಿಟಿ ಅಧ್ಯಕ್ಷ ಜಾನ್ ಎಫ್ ಒಪ್ಪೆನ್ ಹೇಮರ್, ಸ್ವಿಟ್ಜರ್ಲೆಂಡ್‌ನ ರಿಪಾ ಇಂಟರ್ ನ್ಯಾಷನಲ್ ಸೆಂಟರ್‌ನ ಧಾರ್ಮಿಕ ನಿರ್ದೇಶಕ ಗೆಟ್ರುಯೆಲ್ ಜಿಗ್ಮೆರಿನ್‌ಪೋಚೆ ಹಾಗೂ ಅಮೆರಿಕದ ಗ್ಲೋಬಲ್ ಬ್ಯುಸಿನೆಸ್ ಲೀಡರ್ ಡಿಯನ್ನಾ ವಾಟ್ಸನ್ ಒಪ್ಪೆನ್‌ಹೇಮರ್ ಉಪಸ್ಥಿತರಿದ್ದರು.

ಒಡಿಶಾದ ಭುವನೇಶ್ವರದ ಕಳಿಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ 22ನೇ ಸಂಸ್ಥಾಪನಾ ದಿನದ ಸಮಾರಂಭದಲ್ಲಿ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಕೆ.ಎನ್.ಶಾಂತಕುಮಾರ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು

ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿಗೆ ಕಾಂಗ್ರೆಸ್ ಮನವಿ

'ಮತದಾರರ ಪಟ್ಟಿ ಲೋಪ ಸರಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ನಡೆಯಲಿರುವ ಬೆಂಗಳೂರು ನಗರ ವ್ಯಾಪ್ತಿಯ ಐದು ನಗರಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಲೋಪದೋಷ ಸರಿಪಡಿಸಬೇಕು ಎಂದು ಆಗ್ರಹಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದ ನಿಯೋಗ ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದೆ.

'ಮತಪಟ್ಟಿ ಸಿದ್ಧಪಡಿಸುವಾಗ ಬಿಎಲ್‌ಒಗಳು ಅಕ್ರಮ ಎಸಗುತ್ತಿದ್ದಾರೆ. ಕಳೆದ ಬಾರಿ ಒಂದೇ ಕುಟುಂಬದ ಮತಗಳನ್ನು ಬೇರೆ ಬೇರೆ ಬೂತ್‌ಗಳಿಗೆ ಸೇರಿಸಲಾಗಿತ್ತು. ಸಮರ್ಪಕವಾದ ಮ್ಯಾಪಿಂಗ್ ನಡೆಯುವುದಿಲ್ಲ. ಆಯೋಗ ನೇಮಿಸಿರುವ ಬಿಎಲ್‌ಒಗಳ ಜೊತೆಗೆ ರಾಜಕೀಯ ಪಕ್ಷಗಳ ಬೂತ್ ಮಟ್ಟದ ಏಜೆಂಟರನ್ನು (ಬಿಎಲ್‌ಎ) ಕರೆದುಕೊಂಡು ಹೋಗಿ ಪರಿಷ್ಕರಣೆ ಮಾಡಬೇಕು. ಮತದಾರರ ಪಟ್ಟಿಯ ಜೊತೆಗೆ, ಮನೆಗಳು ಹಾಗೂ ಮತಗಳ ಮ್ಯಾಪಿಂಗ್ ಕೂಡ ಆಗಬೇಕು' ಎಂದು ನಿಯೋಗ ಮನವಿ ಮಾಡಿದೆ.

ಜಿ.ಎಸ್ ಸಂಗ್ರೇಶಿ ಅವರಿಗೆ ಡಿ.ಕೆ. ಶಿವಕುಮಾರ್ ಮನವಿ ಸಲ್ಲಿಸಿದರು. ಎ.ಸಿ. ಶ್ರೀನಿವಾಸ್, ಡಿ.ಟಿ. ಶ್ರೀನಿವಾಸ್, ರಿಜ್ವಾನ್ ಅರ್ಷದ್, ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಪುಟ್ಟಣ್ಣ, ಡಿ.ಕೆ. ಸುರೇಶ್ ಜತೆಗಿದ್ದರು

ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, 'ರಾಜ್ಯ ಚುನಾವಣಾ ಆಯೋಗವು ಮುಂಬರುವ ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಚುನಾವಣೆ ನಡೆಸಲಿದೆ. ಆಯೋಗವು ಮತದಾರರ ಪಟ್ಟಿ ಪರಿಷ್ಕರಣೆ ಮಾಡುತ್ತಿದ್ದು, ಈ ಹಿಂದೆ ನೀಡಿದ್ದ ಮತದಾರರ ಪಟ್ಟಿಯನ್ನು ಆಧಾರವಾಗಿ ಇಟ್ಟುಕೊಂಡು ಪರಿಷ್ಕರಣೆ ಮಾಡುತ್ತಿದೆ. ಈಗ ಪ್ರಕಟಿಸಿರುವ ಮತದಾರರ ಕರಡು ಪಟ್ಟಿಯಲ್ಲಿ ಕೆಲವು ಲೋಪಗಳಿವೆ. ಅವುಗಳನ್ನು ಸರಿಪಡಿಸಬೇಕು' ಎಂದು ಆಗ್ರಹಿಸಿದರು.

'ಕಳೆದ ಚುನಾವಣೆಯಲ್ಲಿ ಕೆಲವು ಕ್ಷೇತ್ರಗಳು ಹಾಗೂ ಬೂತ್‌ಗಳಲ್ಲಿ ಆಗಿದ್ದ ಲೋಪಗಳನ್ನು ಸರಿಪಡಿಸಬೇಕು. ನ್ಯಾಯಬದ್ಧವಾಗಿ ಕಾನೂನು ಚೌಕಟ್ಟಿನಲ್ಲಿ ಮತದಾರರ ಪಟ್ಟಿ ಪರಿಷ್ಕರಿಸಬೇಕು. ಈ ಹಿಂದೆ ಮತದಾರರ ಬದಲು, ಬೇರೆಯವರು ಪಟ್ಟಿಯಿಂದ ಹೆಸರು ತೆಗೆದು ಹಾಕಿದ್ದಾರೆ. ಅದನ್ನು ಸರಿಪಡಿಸಬೇಕು. ಮುಂದಿನ ದಿನಗಳಲ್ಲಿ ಜಿಬಿಎ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಲಿದ್ದು, ಮತದಾರರ ಪಟ್ಟಿಯನ್ನು ಈಗಲೇ ಪರಿಷ್ಕರಿಸಬೇಕು. ತಪ್ಪುಗಳಾದರೆ ಆಯೋಗಕ್ಕೂ, ಸರ್ಕಾರಕ್ಕೂ ಕೆಟ್ಟ ಹೆಸರು ಬರಲಿದೆ ಎಂಬುದನ್ನು ಆಯುಕ್ತರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಮತದಾರರ ಪಟ್ಟಿಯಲ್ಲಿ ನಾವು ಗುರುತಿಸಿರುವ ಲೋಪದೋಷಗಳ ಬಗ್ಗೆ ಆಯೋಗಕ್ಕೆ ಮಾಹಿತಿ ನೀಡಿದ್ದೇವೆ' ಎಂದರು.

'ಮತಗಳನ್ನು ಬೇರೆ ಬೂತ್‌ಗಳಿಗೆ ವಿಂಗಡಿಸುವುದು, ಅಲ್ಪಸಂಖ್ಯಾತರು, ಪರಿಶಿಷ್ಟರ ಮತಗಳನ್ನು ಅಕ್ರಮವಾಗಿ ತೆಗೆದಿರುವವರು, ನಕಲಿ ಮತಗಳನ್ನು ಸೇರಿಸಿರುವ ಬಿಎಲ್‌ಒಗಳನ್ನು ಅಮಾನತುಗೊಳಿಸಬೇಕು. ಕಾನೂನು ಚೌಕಟ್ಟಿನಲ್ಲಿ ಮತದಾರರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮನವಿ ಸಲ್ಲಿಸಿದ್ದೇವೆ' ಎಂದರು.

ರಾಹುಲ್ ವಿರುದ್ಧದ ವಿಚಾರಣೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿ ಬಿಜೆಪಿ ವರ್ಚಸ್ಸಿಗೆ ಧಕ್ಕೆ ತಂದ ಆರೋಪದಡಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದ ವಿಚಾರಣೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

'ಈ ಸಂಬಂಧ ಬಿಜೆಪಿಯ ರಾಜ್ಯ ಘಟಕದ ಕಾರ್ಯದರ್ಶಿ ಬಿ.ಎಸ್. ಕೇಶವಪ್ರಸಾದ್ ಸಲ್ಲಿಸಿರುವ ಖಾಸಗಿ ದೂರನ್ನು ರದ್ದುಪಡಿಸಬೇಕು' ಎಂದು ಕೋರಿ ರಾಹುಲ್ ಗಾಂಧಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಪ್ರಕಟಿಸಿದೆ.

'ಬಿಜೆಪಿ ರಾಷ್ಟ್ರೀಯ ಪಕ್ಷವಾಗಿದ್ದು ಅದರ ಮಾನಹಾನಿಯಾಗಿದ್ದರೆ, ಪಕ್ಷದ ರಾಷ್ಟ್ರೀಯ ಪ್ರತಿನಿಧಿ ದೂರು ನೀಡಬೇಕಿತ್ತು. ಆದರೆ, ಈ ಪ್ರಕರಣದಲ್ಲಿ ದೂರು ದಾಖಲಿಸುವ ಅಧಿಕಾರಯುತ ಪತ್ರವನ್ನು ಬಿಜೆಪಿಯ ಕರ್ನಾಟಕದ ರಾಜ್ಯ ಘಟಕದ ಅಧ್ಯಕ್ಷರು, ಕಾರ್ಯದರ್ಶಿಗೆ ನೀಡಿದ್ದಾರೆ. ಹಾಗಾಗಿ, ರಾಜ್ಯ ಘಟಕದ ಅಧ್ಯಕ್ಷರನ್ನು ರಾಷ್ಟ್ರೀಯ ಘಟಕದ ಅಧಿಕಾರಯುತ ಪ್ರತಿನಿಧಿ ಎಂದು ಪರಿಗಣಿಸಲಾಗದು. ದೂರುದಾರರನ್ನು ಸಕ್ಷಮ ಪ್ರತಿನಿಧಿ ಅಲ್ಲದ ಕಾರಣ ವಿಚಾರಣೆ ಅಮಾನ್ಯವಾಗುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ರಾಹುಲ್ ಪರ ಪದಾಂಕಿತ ಹಿರಿಯ ವಕೀಲ ಕೆ.ಶಶಿಕಿರಣ ಶೆಟ್ಟಿ ವಾದ ಮಂಡಿಸಿದ್ದರು.

ಪ್ರಕರಣದಲ್ಲಿ ರಾಹುಲ್ ಗಾಂಧಿ 4ನೇ ಆರೋಪಿಯಾಗಿದ್ದು, ಅವರ ವಿರುದ್ಧದ ವಿಚಾರಣೆ ಮಾತ್ರವೇ ರದ್ದಾಗಿದೆ. ಉಳಿದಂತೆ ಇತರೆ ಆರೋಪಿಗಳಾಗಿರುವ ಕೆಪಿಸಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ವಿಚಾರಣೆ ಮುಂದುವರಿಯಲಿದೆ.

ವಿರಾಟ್ 99.94 ಪರ್ಸೆಂಟೈಲ್

ಪ್ರಜಾವಾಣಿ ವಾರ್ತೆ

ಶಿರಾ (ತುಮಕೂರು): ಜೆಇಇ ಮೇನ್ಸ್ ಮೊದಲ ಹಂತದ ಪರೀಕ್ಷೆಯಲ್ಲಿ ಶಿರಾ ಪ್ರೆಸಿಡೆನ್ಸಿ ಕಾಲೇಜು ವಿದ್ಯಾರ್ಥಿ ವಿರಾಟ್ ಎನ್.ಗೌಡ 99.94 ಪರ್ಸೆಂಟೈಲ್ ಗಳಿಸಿ ಉತ್ತಮ ಸಾಧನೆ ಮಾಡಿದ್ದಾನೆ.

ನೂತನ್‌ಕುಮಾರ್ ಎಲ್. 99.56 ಪರ್ಸೆಂಟೈಲ್ ಹಾಗೂ ಜ್ಞಾನೇಶ್ ಜೆ. ಆರ್. 98.75 ಪರ್ಸೆಂಟೈಲ್ ಗಳಿಸಿದ್ದಾರೆ. 65ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ಡ್ ಪರೀಕ್ಷೆ ಬರೆಯಲು ಅರ್ಹತೆ ಪಡೆಯಲಿದ್ದಾರೆ.

ನೂತನ್ ಕುಮಾರ್

ವಿರಾಟ್ ಎನ್.

ಪ್ರೀತಂಗೆ 99.77 ಪರ್ಸೆಂಟೈಲ್

ಭಾಲ್ಕಿ (ಬೀದರ್ ಜಿಲ್ಲೆ): ಜೆಇಇ ಮೇನ್ಸ್ ಮೊದಲ ಹಂತದ ಪರೀಕ್ಷೆಯಲ್ಲಿ ತಾಲ್ಲೂಕಿನ ಕರಡ್ಯಾಳ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪಿಯು ಕಾಲೇಜಿನ ವಿದ್ಯಾರ್ಥಿ ಪ್ರೀತಂ ಧೂಲಪ್ಪ 99.77 ಪರ್ಸೆಂಟೈಲ್ ಗಳಿಸಿ ಸಾಧನೆ ಮಾಡಿದ್ದಾರೆ.

ಪ್ರೀತಂ

'ಪ್ರಾಧ್ಯಾಪಕರ ಮಾರ್ಗದರ್ಶನ, ಸಲಹೆ ಪಾಲಿಸುತ್ತ ಎರಡು ವರ್ಷಗಳಿಂದ ವಿದ್ಯಾಭ್ಯಾಸದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದೆ. ನಿತ್ಯ ಕನಿಷ್ಠ 50 ಪ್ರಶ್ನೆ ಬಿಡಿಸುತ್ತಿದ್ದೆ. ಎಷ್ಟು ಓದಬೇಕು ಎಂದು ನಿರ್ಧರಿಸಿ ಅದಕ್ಕೆ ತಕ್ಕಂತೆ ಓದುತ್ತಿದ್ದೆ' ಎಂದು ಪ್ರೀತಂ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಕರಡ್ಯಾಳ ಗ್ರಾಮದ ನಿವಾಸಿಯಾದ ಪ್ರೀತಂ ತಂದೆ ಕೃಷಿ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿದ್ದು, ತಾಯಿ ಗೃಹಿಣಿ.

ಉದ್ಯೋಗ ವಾಣಿ

RV UNIVERSITY
Go, change the world
an initiative of RV EDUCATIONAL INSTITUTIONS

We are Hiring
MYSURU Campus
Leadership & Administrative Positions

NEW-AGE GLOBAL UNIVERSITY FOR LIBERAL EDUCATION

Dean / Associate Dean
Psychology & Behavioural Sciences | Pure & Applied Sciences | Engineering
With 15+ years' (Dean) / 8+ years' (Associate Dean) post Ph.D. academic experience and strong administrative abilities.

Deputy Registrar – Compliance / Liaisoning
Master's/Law degree with minimum 8 years' university experience in compliances/Liaisoning / Registrar's office.

Joining: May – July 2026

Faculty Positions
Psychology & Behavioural Sciences | Pure & Applied Sciences | Engineering | Management
Ph.D. preferable. Teaching experience preferred. CA/CS/CWA desirable for School of Management.

Deputy Finance Officer / Manager
CA/CWA/CS withquality experience, SAP proficiency preferred.

Graphic Designer
2–5 years of relevant experience with a strong design portfolio. Proficient in Adobe Illustrator, Photoshop, InDesign, and Adobe Creative Suite.

To apply visit
www.rvu.edu.in/careers
(Only shortlisted candidates will be contacted)

City office: RVU Mysuru, Admissions Office, Brigade Point, 3rd Floor, Gokulam Road, VV Mohalla, Mysuru–570002

RASHTROTTHANA PARISHAT
RASHTROTTHANA VIDYA KENDRA
(A Group of CBSE Schools - Karnataka)
Keshava Shilpa, Kempegowda Nagar, Bengaluru-560004. www.sahityabooks.com
ರಾಷ್ಟ್ರಸೇವೆಯಲ್ಲಿ ರಾಷ್ಟ್ರೋತ್ಥಾನ #Rashtrotthana60 #ರಾಷ್ಟ್ರೋತ್ಥಾನ60

REQUIREMENT - Academic Year 2026 - 27

Rashtrotthana Parishat is a registered society started in the year 1965 running CBSE schools in Bengaluru and across Karnataka. As part of our expansion programme, we invite applications from dynamic and committed professionals for the following positions:

Positions:

1	Principal – Location: Rashtrotthana Vidya Kendra - Thanisandra, Electronic city & Haveri, Eligibility: Postgraduate with B.Ed., 10+ years of teaching, and 5+ years as Principal in a CBSE school are preferred
2	Administrator - Location: Rashtrotthana Vidya Kendra – Haveri. Eligibility: B. Com/BBM/BBA/MBA/M. Com with 5+ years' experience in school administration and strong operational skills.
3	PGT: Physics, Chemistry, Math, Biology, Computer Science, Eligibility: PG in relevant subject with B.Ed., Preference to experienced faculty who can train students for KCET / COMED-K / IIT-JEE / NEET.
4	TGT: English, Kannada, Hindi, Sanskrit, Math, Science, Social Science, Computer Science Eligibility: Postgraduate/Graduate in relevant subject with B.Ed.
5	PRT: English, Kannada, Hindi, Sanskrit, Math, Science, Social Science, Computer Science Eligibility: Graduate in relevant subject with B.Ed./D.Ed.
6	PPT: Kindergarten / Montessori Teachers – NTT / Montessori Diploma
7	PET: M.P.Ed./B.P.Ed. Ladies preferred
8	Performing Arts: Theater, Karate, Dance, Yoga, Vocal Music, Tabla, Keyboard – Relevant Certificate with experience
9	Visual Art: B.F.A./B.V.A.
10	Swimming Coach & Life Guard: Location: Bengaluru Schools, Certificate in relevant area, Lady Coach preferred
11	Computer Instructor: BCA/MCA
12	Librarian: M.L.I.Sc./B.L.I.Sc.
13	Counsellor: M.Sc. in Child & Adult Psychology
14	Special Educator: Certificate from Rehabilitation Council of India
15	Wellness Staff (Staff Nurse): Diploma in Nursing

Remuneration will not be a constraint for deserving candidates.
Immediate joiners will be given preference.

Apply to the respective school email IDs:

SN	School & Location	Email ID	SN	School & Location	Email ID
1	Rashtrotthana Vidya Kendra Thanisandra main road, Arkavathy Layout, Bengaluru	hr.arkbng@rvkcbse.in	10	Rashtrotthana Vidya Kendra Srinagar, Mysuru	hr.srimys@rvkcbse.in
2	Jaigopal Garodia Rashtrotthana Vidya Kendra Ramamurthy Nagar, Bengaluru	hr.rmnbng@rvkcbse.in	11	Rashtrotthana Vidya Kendra Vijayanagar, Mysuru	hr.vijmys@rvkcbse.in
			12	Rashtrotthana Vidya Kendra Sattur, Dharwad	hr.strdwd@rvkcbse.in
3	Rashtrotthana Vidya Kendra Banashankari, Bengaluru	hr.bskbng@rvkcbse.in	13	Rashtrotthana Vidya Kendra Kalaburagi	hr.klbg@rvkcbse.in
4	Rashtrotthana Vidya Kendra Somanahalli, Bengaluru	hr.sombng@rvkcbse.in	14	Rashtrotthana Vidya Kendra Mangaluru	hr.mang@rvkcbse.in
5	Rashtrotthana Vidya Kendra Hurulichikkanahalli, Hesaraghatta, Yelahanka road, Bengaluru	hr.hurulibng@rvkcbse.in	15	Rashtrotthana Vidya Kendra Kerur, Bagalkot	hr.kerurbgkt@rvkcbse.in
			16	Rashtrotthana Vidya Kendra Ballari	hr.blri@rvkcbse.in
6	Rashtrotthana Vidya Kendra Hulimangala, Electronic City, Bengaluru	hr.ecitybng@rvkcbse.in	17	Rashtrotthana Vidya Kendra Hangal	hr.hangalhvr@rvkcbse.in
7	Rashtrotthana Vidya Kendra Garag, Dharwad	hr.dwd@rvkcbse.in	18	Rashtrotthana Vidya Kendra Hassan	hr.hassan@rvkcbse.in
8	Rashtrotthana Vidya Kendra Davangere	hr.dvg@rvkcbse.in	19	Rashtrotthana Vidya Kendra Udupi	hr.udupi@rvkcbse.in
9	Rashtrotthana Vidya Kendra Hagaribomanahalli	hr.hbhvij@rvkcbse.in	20	Rashtrotthana Vidya Kendra Haveri	hr.haveri@rvkcbse.in

Join us in nurturing young minds and shaping future leaders.

2027ಕ್ಕೆ ಮೊದಲ ಹೆಲಿಕಾಪ್ಟರ್ ಸಿದ್ಧ

ವೇಮಗಲ್‌ನಲ್ಲಿ ಹೆಲಿಕಾಪ್ಟರ್ ಜೋಡಣಾ ಘಟಕ ಉದ್ಘಾಟನೆ • ವರ್ಷಕ್ಕೆ 10 ಕಾಪ್ಟರ್ ಜೋಡಣೆ

ಪ್ರಜಾವಾಣಿ ವಾರ್ತೆ

ಕೋಲಾರ: ತಾಲ್ಲೂಕಿನ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ನಿರ್ಮಿಸಿರುವ 'ಏರ್‌ಬಸ್ ಎಚ್ 125' ಲಘು ಹೆಲಿಕಾಪ್ಟರ್‌ನ ಜೋಡಣಾ ಘಟಕಕ್ಕೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಮಂಗಳವಾರ ಚಾಲನೆ ನೀಡಿದರು.

ಮುಂಬೈನಿಂದ ವರ್ಚುವಲ್ ವೇದಿಕೆ ಮೂಲಕ ಚಾಲನೆ ನೀಡಿದ್ದು, ವೇಮಗಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರಿನ್ ವಾಟ್ರಿನ್ ಇದಕ್ಕೆ ಸಾಕ್ಷಿಯಾದರು.

ಉಭಯ ರಕ್ಷಣಾ ಸಚಿವರು ಇದೇ ಸಂದರ್ಭದಲ್ಲಿ ಒಟ್ಟು ₹ 405 ಕೋಟಿ ವೆಚ್ಚದಲ್ಲಿ 17 ಎಕರೆ ಪ್ರದೇಶದಲ್ಲಿ ತಲೆಎತ್ತಿರುವ ಘಟಕದಲ್ಲಿ ಸುತ್ತಾಡಿ ಸೌಲಭ್ಯವನ್ನು ವೀಕ್ಷಿಸಿದರು.

ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್‌ನ ಸಿಇಒ ಸುಕರಣ್ ಸಿಂಗ್ ಮಾತನಾಡಿ, 'ದೇಶದ ರಕ್ಷಣಾ ಇಲಾಖೆಗೆ ಅಗತ್ಯವಿದ್ದಾಗ ಹೆಲಿಕಾಪ್ಟರ್ ಪೂರೈಸಲು ನಾವು ಸಿದ್ಧವಿದ್ದೇವೆ' ಎಂದರು.

ಮುಖ್ಯಾಂಶಗಳು

- ವೈಮಾನಿಕ ಕ್ಷೇತ್ರದಲ್ಲಿ ಭಾರತದ ಮತ್ತೊಂದು ಮಹತ್ವದ ಹೆಜ್ಜೆ
- ಟಾಟಾ ಹಾಗೂ ಏರ್‌ಬಸ್ ಸಂಸ್ಥೆಗಳ ಸಹಭಾಗಿತ್ವ
- ಖಾಸಗಿ ವಲಯದಲ್ಲಿ ದೇಶದ ಮೊದಲ ಹೆಲಿಕಾಪ್ಟರ್ ಜೋಡಣೆ ಘಟಕ

ಖಾಸಗಿ ವಲಯದಲ್ಲಿ ದೇಶದ ಮೊದಲ ಹೆಲಿಕಾಪ್ಟರ್ ಜೋಡಣಾ ಘಟಕ ಇದಾಗಿದೆ. 2027ರ ಆರಂಭದಲ್ಲಿ ಮೊದಲ ಹೆಲಿಕಾಪ್ಟರ್ ಹೊರಬರಲಿದೆ. ನಂತರ ವಾರ್ಷಿಕ 10 ಹೆಲಿಕಾಪ್ಟರ್ ಜೋಡಣೆ ಆಗಲಿದೆ. 20 ವರ್ಷಗಳಲ್ಲಿ ಸುಮಾರು 500 ಹೆಲಿಕಾಪ್ಟರ್ ಸಿದ್ಧವಾಗಲಿವೆ. ಈ ಮೂಲಕ ವೈಮಾನಿಕ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಭಾರತ ಮಹತ್ವದ ಹೆಜ್ಜೆ ಇರಿಸಿದೆ.

ಈ ಘಟಕದಲ್ಲಿ ಟಾಟಾ ಹಾಗೂ ಫ್ರಾನ್ಸ್‌ನ ಏರ್‌ಬಸ್ ಸಹಭಾಗಿತ್ವದಲ್ಲಿ ಏಕ ಎಂಜಿನ್‌ನ ಎಚ್ 125 ಲಘು ಹೆಲಿಕಾಪ್ಟರ್‌ಗೆ ಅಂತಿಮ ಸ್ಪರ್ಶ ನೀಡಿ ಹಾರಾಟಕ್ಕೆ ಸಿದ್ಧಪಡಿಸಲಾಗುತ್ತದೆ. ಗುಣಮಟ್ಟದ ಪರೀಕ್ಷೆ ನಡೆಯಲಿದೆ. ದುರಸ್ತಿ, ನಿರ್ವಹಣೆಗೆ ಒತ್ತು ನೀಡಲಿದ್ದು, ಸ್ಥಳೀಯವಾಗಿ ಉದ್ಯೋಗಾವಕಾಶ ಸೃಷ್ಟಿಯಾಗುವ ನಿರೀಕ್ಷೆ ಇದೆ.

ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು, ರಾಜ್ಯದ ಬೃಹತ್ ಹಾಗೂ ಮಾಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಸಂಸದ ಎಂ.ಮಲ್ಲೇಶ್ ಬಾಬು, ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್, ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್, ಏರ್‌ಬಸ್ ಹೆಲಿಕಾಪ್ಟರ್ ಸಿಇಒ ಬ್ರೂನೋ ಈವನ್, ಜಿಲ್ಲಾಧಿಕಾರಿ ಎಂ.ಆರ್. ರವಿ, ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಹಾಗೂ ಏರ್‌ಬಸ್‌ನ ಅಧಿಕಾರಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರಿನ್ ವಾಟ್ರಿನ್, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಚಿವ ಎಂ.ಬಿ.ಪಾಟೀಲ, ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಇದ್ದರು

ಸಾವಿರ ಕೋಟಿಗೂ ಅಧಿಕ ಹೂಡಿಕೆ

ಹೆಲಿಕಾಪ್ಟರ್ ಜೋಡಣಾ ಘಟಕ ಸ್ಥಾಪನೆಗೆ ₹ 1 ಸಾವಿರ ಕೋಟಿಗೂ ಅಧಿಕ ಹೂಡಿಕೆ ಆಗುವ ನಿರೀಕ್ಷೆ ಇದೆ. ಕೌಶಲ ಹಾಗೂ ಶ್ರಮಿಕ ಯುವಜನತೆಗೆ ಉದ್ಯೋಗಾವಕಾಶ ದೊರಕಲಿವೆ. ರಕ್ಷಣಾ ರಫ್ತು ಕ್ಷೇತ್ರಕ್ಕೆ ಮತ್ತಷ್ಟು ಬಲ ಬರಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ರಕ್ಷಣಾ ರಫ್ತು ಕ್ಷೇತ್ರದಲ್ಲಿ ಭಾರತ ಇತ್ತೀಚಿನ ದಿನಗಳಲ್ಲಿ ವಿಶ್ವದ ಅಗ್ರಮಾನ್ಯ ದೇಶಗಳ ಸಾಲಿಗೆ ಸೇರಿದೆ. ಈಗ ಖಾಸಗಿ ವಲಯದ ಪಾಲು ರಕ್ಷಣಾ ಉತ್ಪಾದನೆಯಲ್ಲಿ ಶೇ 25ರಷ್ಟು ಇದೆ. ಭಾರತ ಹಾಗೂ ಫ್ರಾನ್ಸ್ ನಡುವಿನ ಸಂಬಂಧಕ್ಕೆ ಯಾವುದೇ ಮಿತಿ ಇಲ್ಲ ಎಂದರು.

ಕರ್ನಾಟಕ ದೇಶದ ವೈಮಾನಿಕ ರಾಜಧಾನಿ

'ಹೆಲಿಕಾಪ್ಟರ್ ಅಂತಿನ ಜೋಡಣಾ ಘಟಕಕ್ಕೆ ರಾಜ್ಯ ಸರ್ಕಾರ 17 ಎಕರೆ ಜಾಗ ನೀಡಿದ್ದು, ಒಂದೂವರೆ ವರ್ಷದಲ್ಲಿ ಘಟಕ ತಲೆಎತ್ತಿದೆ. ರಾಜ್ಯದ ಕೈಗಾರಿಕಾ ಸ್ನೇಹಿ ವಾತಾವರಣಕ್ಕೆ ಇದು ಸಾಕ್ಷಿ. ಕರ್ನಾಟಕ ವೈಮಾನಿಕ ಕ್ಷೇತ್ರದಲ್ಲಿ ದೇಶದ ರಾಜಧಾನಿಯಾಗಿ ಮುಂದುವರಿಯಲಿದೆ' ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್‌ನ ಪೈಪೋಟಿ ಎದುರಿಸಿ ರಾಜ್ಯಕ್ಕೆ ಈ ಯೋಜನೆ ಸಿಕ್ಕಿದೆ. ಈ ಘಟಕದಲ್ಲಿ ಏವಿಯಾನಿಕ್ಸ್ ಹೈಡ್ರಾಲಿಕ್ ಸರ್ಕಿಟ್, ಬಿಡಿಭಾಗ, ಇಂಧನ ವ್ಯವಸ್ಥೆ ಮತ್ತು ಎಂಜಿನ್ ತಯಾರಿಕೆ ಸೇರಿ ಮಹತ್ವದ ಚಟುವಟಿಕೆ ನಡೆಯಲಿವೆ ಎಂದು ಹೇಳಿದರು.

ಚಿಟಿಕೆ ಸುದ್ದಿ

ನಟಿ ಉಮಾಶ್ರೀಗೆ ಸುರಭಿ ಬಿಂದುಶ್ರೀ ಪ್ರಶಸ್ತಿ

ಬೈಂದೂರು (ಉಡುಪಿ): ಸುರಭಿ ಬೈಂದೂರು ಸಾಂಸ್ಕೃತಿಕ, ಸಾಹಿತ್ಯ, ಸೇವಾ ಪ್ರತಿಷ್ಠಾನದ ಪ್ರಸಕ್ತ ಸಾಲಿನ 'ಸುರಭಿ ಬಿಂದುಶ್ರೀ' ಪ್ರಶಸ್ತಿಗೆ ನಟಿ ಉಮಾಶ್ರೀ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹25 ಸಾವಿರ ನಗದು, ಚಿನ್ನದ ಪದಕ ಒಳಗೊಂಡಿದೆ. ಫೆ.20ರಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಆನಂದ ಮದ್ದೋಡಿ ತಿಳಿಸಿದ್ದಾರೆ.

ಗೋಪ್ಯ ಮಾಹಿತಿ ಸೋರಿಕೆ: ಮತ್ತೊಬ್ಬನ ಬಂಧನ

ಉಡುಪಿ: ನೌಕಾಪಡೆಯ ಹಡಗುಗಳ ರಹಸ್ಯ ಮಾಹಿತಿ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿ ಐದನೇ ಆರೋಪಿ ಪಶ್ಚಿಮ ಬಂಗಾಳದ ಜಾಲ್ ಪೈಗುರಿ ಜಿಲ್ಲೆಯ, ಪ್ರಸ್ತುತ ಕೇರಳದ ಇಡುಕ್ಕಿ ಜಿಲ್ಲೆಯಲ್ಲಿ ನೆಲೆಸಿದ್ದ ಆಲಿಫ್ ಇಸ್ಲಾಮ್ (21) ಎಂಬಾತನನ್ನು ಮಲ್ಪೆ ಪೊಲೀಸರು ಬಂಧಿಸಿದ್ದಾರೆ.

ಆಲಿಫ್

ಆರೋಪಿಯನ್ನು ಕೋರ್ಟ್ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಬಂಧಿತ ಬಾಂಗ್ಲಾದೇಶದ ಪ್ರಜೆಯಾಗಿರಬಹುದು ಎಂಬ ಶಂಕೆ ಇದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ತಿಳಿಸಿದ್ದಾರೆ. ಆರೋಪಿಗಳು ಹಡಗುಗಳಿಗೆ ಸಂಬಂಧಿತ ಗೋಪ್ಯ ಮಾಹಿತಿಯನ್ನು ಪಾಕಿಸ್ತಾನಕ್ಕೆ ರವಾನಿಸಿರುವುದು ಈ ಹಿಂದೆ ದೃಢಪಟ್ಟಿತ್ತು.

ಮಹಿಳಾ ಐಎಎಸ್ ಅಧಿಕಾರಿ ಅರ್ಜಿ ವಜಾ

ನವದೆಹಲಿ: ಬಹುಕೋಟಿ ಮೌಲ್ಯದ ಓಬಳಾಪುರಂ ಗಣಿ ಕಂಪನಿ ಅದಿರು ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣದಿಂದ ತಮ್ಮನ್ನು ಕೈಬಿಡುವಂತೆ ಐಎಎಸ್ ಅಧಿಕಾರಿ ವೈ.ಶ್ರೀಲಕ್ಷ್ಮಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾ ಮಾಡಿದೆ. ಈ ಮೂಲಕ ಅವರ ವಿಚಾರಣೆಗೆ ಇದ್ದ ಅಡ್ಡಿ ನಿವಾರಣೆ ಆಗಿದೆ.

ನ್ಯಾಯಮೂರ್ತಿ ಎಂ.ಎಂ. ಸುಂದರೇಶ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇದ್ದ ಪೀಠವು, ಹಿರಿಯ ಐಎಎಸ್ ಅಧಿಕಾರಿ ವೈ.ಶ್ರೀಲಕ್ಷ್ಮಿ ಅವರನ್ನು ಪ್ರಕರಣದಿಂದ ಕೈಬಿಡಲು ನಿರಾಕರಿಸಿ ಈ ಹಿಂದೆ ತೆಲಂಗಾಣ ಹೈಕೋರ್ಟ್ ನೀಡಿದ್ದ ಆದೇಶವನ್ನು ಎತ್ತಿಹಿಡಿಯಿತು.

ಸುದ್ದಿ 2 ನಿಮಿಷ

ವೈಚಾರಿಕ ವಿಭಜಕ ವೃತ್ತಿ ಅಪಾಯಕಾರಿ: ಬರಗೂರು

ಹೊಸಪೇಟೆ (ವಿಜಯನಗರ): 'ಸೈದ್ಧಾಂತಿಕ ಭಿನ್ನಾಭಿಪ್ರಾಯದ ಸಹಜ ಪ್ರವೃತ್ತಿಯು ಇಷ್ಟವಾಗದಿದ್ದರೆ ಅದನ್ನು ಖಂಡಿಸಬಹುದು. ಆದರೆ, ದೇಶದಲ್ಲಿ ಇಂದು ವೈಚಾರಿಕ ವಿಭಜಕ ಪ್ರವೃತ್ತಿಯು ವೃತ್ತಿಯಾಗಿ ಕಾಣಿಸಿಕೊಳ್ಳುತ್ತಿದೆ. ಇದು ಬಹಳ ಅಪಾಯಕಾರಿ' ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವು ಹೊರತಂದ 42 ಪುಸ್ತಕಗಳನ್ನು ಮಂಗಳವಾರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಭಿನ್ನಾಭಿಪ್ರಾಯ ಪ್ರಜಾಪ್ರಭುತ್ವದ ಲಕ್ಷಣ. ಅದನ್ನು ಮೀರಿ ರಸ್ತೆ ವಿಭಜಕಗಳಂತೆ ಪರಸ್ಪರ ಚರ್ಚಿಸುವುದನ್ನೇ ಹತ್ತಿಕ್ಕುವ ವಾತಾವರಣ ಸೃಷ್ಟಿ ಆಗುತ್ತಿದೆ. ಈ ಬಗ್ಗೆ ಸಮಾಜ ಎಚ್ಚೆತ್ತುಕೊಳ್ಳಬೇಕಿದೆ' ಎಂದರು.

ಅನುದಾನ ಕೊಡಿ: 'ಕನ್ನಡ ವಿಶ್ವವಿದ್ಯಾಲಯ ಸಂಶೋಧನೆಗೆಂದೆ ಸ್ಥಾಪನೆಗೊಂಡ ಜ್ಞಾನ ಕೇಂದ್ರ. ಇದಕ್ಕೆ ಸರ್ಕಾರ ಸೂಕ್ತ ಅನುದಾನ ಕೊಡಲೇಬೇಕು. ವಿವಿಧ ಅಧ್ಯಯನ ಪೀಠಗಳಿಗೆ ಶಕ್ತಿ ತುಂಬಬೇಕು. ಕೆಲ ಪೀಠಗಳಿಗೆ ವರ್ಷಕ್ಕೆ ₹2 ಕೋಟಿ ಅನುದಾನ ನೀಡಲಾಗುತ್ತಿದೆ, ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡುವ ವಾರ್ಷಿಕ ಅನುದಾನ ₹2 ಕೋಟಿಗಿಂತ ಕಡಿಮೆ ಇದೆ. ಇಂತಹ ತಾರತಮ್ಯ ಧೋರಣೆ ಬಿಡಬೇಕು' ಎಂದು ಒತ್ತಾಯಿಸಿದರು.

'ಅವರವರೇ ಮಾತನಾಡ್ತಾರೆ.. ನಾ ಮಂಗ್ಯಾನ್ ತರ ಕುಂತಿರ್ತೇನೆ'

ಹಾವೇರಿ: 'ಸಭಾಪತಿ ಸ್ಥಾನದಲ್ಲಿ ಕುಳಿತವರಿಗೆ ತಾಳ್ಮೆ ಹೆಚ್ಚಿರಬೇಕು. ಹಿಂದೆ ಶಾಸಕರು ಕೈ ಎತ್ತಿ ಮಾತನಾಡಲು ಅವಕಾಶ ಕೇಳುತ್ತಿದ್ದರು. ಈಗ ಕೈ, ಕಾಲು ಇಲ್ಲ. ನಿಂತು ಅವರವರೇ ಮಾತನಾಡುತ್ತಾರೆ. ನಾನು ಮಂಗ್ಯಾನ್ ತರ ಕುಂತಿರುತ್ತೇನೆ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅನುಭವ ಹಂಚಿಕೊಂಡರು.

ನಗರದಲ್ಲಿ ಮಂಗಳವಾರ ನಡೆದ 'ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ನನಗೂ ತಾಳ್ಮೆಯಿಂದ ಇದ್ದು ಸಾಕಾಗಿತ್ತು. 'ದನ ಕಾಯಲು ಹೋಗಿ' ಎಂದು ಬೈದೆ. ಅಷ್ಟಕ್ಕೆ ಪ್ರಶ್ನಿಸಿದರು. ಅವರಿಗೆ, ನನ್ನ ಮ್ಯಾನೇಜರ್ ಚಿತ್ರೀಕರಿಸಿದ್ದ ದನ ಕಾಯುವವರ ವಿಡಿಯೊ ತೋರಿಸಿ, 'ಅವರಿಗೂ ನಿಮಗೂ ಏನು ವ್ಯತ್ಯಾಸ? ಎಂದು ಪ್ರಶ್ನಿಸಿದಾಗ ವಾಪಸು ಹೋದರು' ಎಂದು ಹೇಳಿದರು.

'ಚುನಾಯಿತರಾದವರು ಸಹ ಜವಾಬ್ದಾರಿ ವಹಿಸಿಕೊಳ್ಳುತ್ತಿಲ್ಲ. ಮೊನ್ನೆ ಅಧಿವೇಶನ ಮುಗಿಯಲು ಎರಡು ದಿನ ಇತ್ತು. ಪ್ರಶ್ನೆಗೆ ಉತ್ತರ ನೀಡಲು ಇಬ್ಬರು ಸಚಿವರಿಗೆ ಹೇಳಿದ್ದೆ. 15 ದಿನ ಸಮಯ ಕೇಳಿದರು. ಎರಡು ದಿನ ಅಧಿವೇಶನ ಇರುವುದು ಗೊತ್ತಿದ್ದರೂ 15 ದಿನ ಸಮಯ ಕೇಳುವ ಅವರಿಗೆ ಏನು ಹೇಳಲಿ' ಎಂದು ಪ್ರಶ್ನಿಸಿದರು.

ಸಹಕಾರ ವೃದ್ಧಿಗೆ ಶಪಥ...

ಒಂದನೇ ಪುಟದಿಂದ...

'ಫ್ರಾನ್ಸ್ ಭಾರತದ ಅತ್ಯಂತ ಹಳೆಯ ಪಾಲುದಾರ ರಾಷ್ಟ್ರ. ಮ್ಯಾಕ್ರನ್ ಅವರೊಂದಿಗೆ ಸೇರಿ ಉಭಯ ದೇಶಗಳ ನಡುವಣ ಕಾರ್ಯತಂತ್ರದ ಸಹಭಾಗಿತ್ವವನ್ನು ಮತ್ತೊಂದು ಮಜಲಿಗೆ ಕೊಂಡೊಯ್ಯುತ್ತೇವೆ' ಎಂದು ಹೇಳಿದ್ದಾರೆ.

'ಆಳವಾದ ನಂಬಿಕೆ ಮತ್ತು ದೂರದೃಷ್ಟಿಯ ಆಧಾರದ ಮೇಲೆ ಎರಡೂ ರಾಷ್ಟ್ರಗಳ ನಡುವೆ 'ವಿಶೇಷ ಜಾಗತಿಕ ಕಾರ್ಯತಂತ್ರದ ಸಹಭಾಗಿತ್ವ'ಕ್ಕೆ ಮುಂದಡಿ ಇಟ್ಟಿದ್ದೇವೆ' ಎಂದಿದ್ದಾರೆ.

'ಭಾರತ ಮತ್ತು ಯುರೋಪ್ ನಡುವಣ ಸಂಬಂಧ ವೃದ್ಧಿಗೆ 2026 ಪರ್ವಕಾಲವಾಗಿದೆ. ಕೆಲವು ದಿನಗಳ ಹಿಂದಷ್ಟೇ ನಾವು 'ಮುಕ್ತ ವ್ಯಾಪಾರ ಒಪ್ಪಂದ'ಕ್ಕೆ ಸಹಿ ಹಾಕಿದ್ದೇವೆ' ಎಂದು ಹೇಳಿದ್ದಾರೆ.

'ಜಗತ್ತು ಅನಿಶ್ಚಿತತೆಯಿಂದ ಸಾಗುತ್ತಿರುವ ಇಂಥ ಸಂದರ್ಭದಲ್ಲಿ ಭಾರತ–ಫ್ರಾನ್ಸ್ ಪಾಲುದಾರಿಕೆಯು ಜಾಗತಿಕ ಸ್ಥಿರತೆಗೂ ಶಕ್ತಿ ತುಂಬಲಿದೆ' ಎಂದು ಬಣ್ಣಿಸಿದ್ದಾರೆ.

ಮೋದಿ ಮತ್ತು ಮ್ಯಾಕ್ರನ್ ಒಂದೇ ಕಾರಿನಲ್ಲಿ ಪ್ರಯಾಣಿಸಿದರು –ಪಿಟಿಐ ಚಿತ್ರ

ಒಂದೇ ಕಾರಲ್ಲಿ ಪ್ರಯಾಣ: ಪ್ರಧಾನಿ ಮೋದಿ ಮತ್ತು ಮ್ಯಾಕ್ರನ್ ಅವರು ಒಂದೇ ಕಾರಿನಲ್ಲಿ ಲೋಕಭವನದಿಂದ ತಾಜ್ ಮಹಲ್ ಪ್ಯಾಲೇಸ್‌ವರೆಗೆ ಪ್ರಯಾಣಿಸಿದರು. ಮರೀನ್ ಡ್ರೈವ್ ಮೂಲಕ ಸಾಗಿದ ಉಭಯ ನಾಯಕರು ಖಾಸಗಿ ಮಾತುಕತೆಯಲ್ಲಿ ತೊಡಗಿದ್ದರು.

ಮೋದಿ ಅವರ ಆಹ್ವಾನದ ಮೇರೆಗೆ ಮ್ಯಾಕ್ರನ್ ಅವರು ಭಾರತಕ್ಕೆ ಆಗಮಿಸಿದ್ದು, ಫೆಬ್ರುವರಿ 17ರಿಂದ 19ರವರೆಗೆ ಭಾರತದಲ್ಲಿ ಇರಲಿದ್ದಾರೆ. ಈ ಸಂದರ್ಭದಲ್ಲಿ ಎ.ಐ ಶೃಂಗದಲ್ಲೂ ಭಾಗವಹಿಸಲಿದ್ದಾರೆ.

114 ರಫೇಲ್ ಯುದ್ಧ ವಿಮಾನಗಳ ಖರೀದಿಗೆ ಭಾರತದ ರಕ್ಷಣಾ ಸಚಿವಾಲಯ ಅನುಮೋದನೆ ನೀಡಿದ ಬೆನ್ನಲ್ಲೇ ಮ್ಯಾಕ್ರನ್ ಭಾರತಕ್ಕೆ ಭೇಟಿ ನೀಡಿದ್ದಾರೆ.

ಮರೀನ್ ಡ್ರೈವ್‌ನಲ್ಲಿ ಮ್ಯಾಕ್ರನ್ ವಿಹಾರ

ಮುಂಬೈ: ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುವೆಲ್ ಮ್ಯಾಕ್ರನ್ ಅವರು ಮಂಗಳವಾರ ಬೆಳಿಗ್ಗೆ ಮುಂಬೈಗೆ ಬಂದಿಳಿದರು.

ಐತಿಹಾಸಿಕ ಮರೀನಾ ಡ್ರೈವ್‌ನಲ್ಲಿ ವಿಹಾರ ಮಾಡುವ ಮೂಲಕ ದಿನವನ್ನು ಆರಂಭಿಸಿದರು. ಈ ಸಂದರ್ಭದಲ್ಲಿ ಅವರ ಭದ್ರತಾ ಸಿಬ್ಬಂದಿಯೂ ಜೊತೆಗಿದ್ದರು. ಮುಂಬೈ ಪೊಲೀಸರೂ ಬಿಗಿ ಭದ್ರತೆ ಒದಗಿಸಿದ್ದರು.

ಮುಂಬೈ ಮೇಲೆ 2008ರಲ್ಲಿ ನಡೆದ ಭಯೋತ್ಪಾದನಾ ದಾಳಿಯಲ್ಲಿ ಮೃತಪಟ್ಟ ಸಂತ್ರಸ್ತರಿಗೆ ಮ್ಯಾಕ್ರನ್ ಮತ್ತು ಅವರ ಪತ್ನಿ ಬ್ರಿಜಿಟ್ ಮ್ಯಾಕ್ರನ್ ಅವರು ನಮನ ಸಲ್ಲಿಸಿದರು.

34 ರೈತರಿಗೆ ₹1.34 ಕೋಟಿ ವಂಚನೆ

ಯಾದಗಿರಿ: ಹುಣಸಗಿ ತಾಲ್ಲೂಕಿನ 34 ರೈತರಿಂದ 10,603 ಭತ್ತದ ಮೂಟೆಗಳನ್ನು ಖರೀದಿಸಿ ₹1.34 ಕೋಟಿ ಕೊಡದೆ ವಂಚಿಸಿದ ಆರೋಪದಡಿ ಐವರ ವಿರುದ್ಧ ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತ ಪ್ರಕಾಶ ಸಣ್ಣ ಭೀಮಪ್ಪ ನೀಡಿದ ದೂರಿನ ಅನ್ವಯ ಕನ್ನೆಳ್ಳಿ ಕ್ಯಾಂಪ್‌ನ ಶ್ರೀನಿವಾಸರೆಡ್ಡಿ, ಪ್ರಸಾದ್, ಟಿ.ಸಿ.ಕೊಂಡಯ್ಯ, ತ್ರಿಮೂರ್ತಿ ಹಾಗೂ ಕರಡಕಲ್ಲ ಕ್ಯಾಂಪ್‌ನ ಪ್ರೇಮಕುಮಾರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಐವರು ವ್ಯಾಪಾರಿಗಳು ಕೆಲ ವರ್ಷಗಳಿಂದ ಪಾಲುದಾರಿಕೆಯಲ್ಲಿ ಭತ್ತದ ವ್ಯಾಪಾರ ಮಾಡುತ್ತಿದ್ದರು. ಬೈಚಬಾಳ ಮತ್ತು ಕರಡಕಲ್ಲ ಗ್ರಾಮಗಳ 34 ರೈತರು 75 ಕೆ.ಜಿ. ತೂಕದ 10,603 ಮೂಟೆಗಳನ್ನು ಇವರಿಗೆ ಮಾರಿದ್ದರು. ₹1.73 ಕೋಟಿ ಪೈಕಿ ₹39.50 ಲಕ್ಷ ಮಾತ್ರ ಕೊಟ್ಟು ಭತ್ತ ಒಯ್ದಿದ್ದರು' ಎಂದು ದೂರಿನಲ್ಲಿ ತಿಳಿಸಲಾಗಿದೆ.

ತಿದ್ದುಪಡಿ

ಕೊಳ್ಳೆಗಾಲದ ಮುಡುಗುಂಡದಿಂದ ಬಿಳಿಗಿರಿ ರಂಗನ ವಡ್ಡುಗೆರೆ ಕಡೆಗೆ ಹೋಗುವ ರಸ್ತೆಬದಿಯ ಜಮೀನಿನಲ್ಲಿ ಅಪರೂಪದ ಕರಿಬಣ್ಣದ ನರಿ ಕಾಣಿಸಿಕೊಂಡಿತ್ತು ಎಂಬ ಚಿತ್ರ ಮಂಗಳವಾರದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಇದು ಪ್ರಮಾದವಶಾತ್ ಪ್ರಕಟವಾಗಿದ್ದ ತಪ್ಪು ಮಾಹಿತಿಯ ಚಿತ್ರವಾಗಿದ್ದು, ಕರಿಬಣ್ಣದ ನರಿಯು ಕಾಣಿಸಿಕೊಂಡಿಲ್ಲ.

ಕುರುವತ್ತಿ ರಥೋತ್ಸವ

ಪ್ರಜಾವಾಣಿ ಚಿತ್ರ: ಕೆ.ಸೋಮಶೇಖರ್

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಕುರುವತ್ತಿ ಕ್ಷೇತ್ರದಲ್ಲಿ ಮಂಗಳವಾರ ಬಸವೇಶ್ವರ ಮತ್ತು ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು

ನಿಧನ ವಾರ್ತೆ

ಸದಾನಂದ ಬಿಳೂರ

ಬೆಳಗಾವಿ: ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸ ಸಂಶೋಧನಾ ಮಂಡಳಿಯ (ಬಾಲ ಭಾರತಿ) ಕನ್ನಡ ವಿಭಾಗದ ವಿಶೇಷ ಅಧಿಕಾರಿಯಾಗಿ ಸುದೀರ್ಘ ಅವಧಿ ಕಾರ್ಯನಿರ್ವಹಿಸಿದ್ದ ಸದಾನಂದ ಬಿಳೂರ (59) ಅವರು ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಸಂಜೆ ನಡೆಯಿತು. ಬಾಗಲಕೋಟೆ ಜಿಲ್ಲೆಯ ಬನಹಟ್ಟಿ ಮೂಲದವರಾದ ಅವರು, ಏಳು ತಿಂಗಳ ಹಿಂದೆ ನಿವೃತ್ತರಾಗಿದ್ದರು. ಬೆಳಗಾವಿಯಲ್ಲಿ ಕುಟುಂಬದೊಂದಿಗೆ ವಾಸವಾಗಿದ್ದರು. ಕೆಲ ದಿನಗಳ ಹಿಂದೆ ಕಾಯಿಲೆ ಬಂದ ಕಾರಣ ಆಸ್ಪತ್ರೆ ಸೇರಿದ್ದರು.
ಕನ್ನಡದ ಜಾಗೃತಿ ಮೂಡಿಸುವಲ್ಲಿ ಅವಿರತ ಶ್ರಮಿಸಿದ್ದ ಅವರು, ಮಹಾರಾಷ್ಟ್ರದಲ್ಲಿ 'ಕನ್ನಡ ಕಾಯಕ ಯೋಗಿ' ಎಂದೇ ಹೆಸರಾಗಿದ್ದರು. ಮಹಾರಾಷ್ಟ್ರ ಗಡಿಯಲ್ಲಿ ಕನ್ನಡಿಗರ ಹೋರಾಟ, ಒಗ್ಗಟ್ಟಿಗೆ ಶ್ರಮಿಸಿದ್ದರು.

ಮನೆಗೆ ಕಲ್ಲು: ಬಿಗುವಿನ ಪರಿಸ್ಥಿತಿ.....

ಒಂದನೇ ಪುಟದಿಂದ...

ಮುಸ್ಲಿಂ ಬಾಲಕರನ್ನು ಥಳಿಸಿ ಪೊಲೀಸರಿಗೆ ಒಪ್ಪಿಸಿರುವ ವಿಷಯ ತಿಳಿದ ಮತ್ತೊಂದು ಗುಂಪು ಜಮಾಯಿಸಿ 'ಬಿಜೆಪಿ, ಬಜರಂಗದಳದ ಕಾರ್ಯಕರ್ತರು ಅಮಾಯಕರನ್ನು ಅಡ್ಡಗಟ್ಟಿ ಹಲ್ಲೆ ನಡೆಸಿದ್ದಾರೆ' ಎಂದು ದೂರಿದರು. ಎರಡೂ ಕಡೆಯವರು ಠಾಣೆ ಎದುರು ಮಧ್ಯರಾತ್ರಿ ಸೇರಿದ್ದರಿಂದ ಬಿಗುವಿನ ಸ್ಥಿತಿ ಮೂಡಿತ್ತು. ಪೊಲೀಸರು ಎರಡೂ ಕಡೆಯವರನ್ನು ಸಮಾಧಾನ ಮಾಡಿ ವಾಪಸ್ ಕಳುಹಿಸಿದರು.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳು ನೀಡಿರುವ ದೂರು ಆಧರಿಸಿ ಸಂತೋಷ್ ಕೋಟ್ಯಾನ್ ಮತ್ತು ಶ್ಯಾಂ ಗೌಡ ವಿರುದ್ಧವೂ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

'ಬೌಲಿಂಗ್ ಅಭ್ಯಾಸದಿಂದ ಆರಂಭ'

ಕಲ್ಲು ತೂರಾಟ ಆರೋಪ ಪ್ರಕರಣವು ಬೌಲಿಂಗ್ ಅಭ್ಯಾಸ ಮಾಡುವ ಪ್ರಯತ್ನದಲ್ಲಿ ಆರಂಭವಾಗಿದೆ ಎನ್ನಲಾಗಿದೆ. ಸದ್ಯ ಎಫ್‌ಐಆರ್ ದಾಖಲಾಗಿರುವ 6 ಜನರಲ್ಲಿ 17 ವರ್ಷದ ನಾಲ್ವರು ಬಾಲಕರು, 18 ವರ್ಷ, ನಾಲ್ಕು ದಿನಗಳಾಗಿರುವ ಒಬ್ಬ ಯುವಕ, 18 ವರ್ಷ ನಾಲ್ಕು ತಿಂಗಳಿನ ಮತ್ತೊಬ್ಬ ಯುವಕ ಇದ್ದಾರೆ. ಎಲ್ಲರೂ ವಿದ್ಯಾರ್ಥಿಗಳು. ಒಟ್ಟಾಗಿ ಬರುವ ದಾರಿಯಲ್ಲಿ ಕಲ್ಲುಗಳನ್ನು ಹಿಡಿದು ಬೌಲಿಂಗ್ ಮಾಡುವ ರೀತಿ ಎಸೆದಿದ್ದಾರೆ. ಅದರಲ್ಲಿ ಒಂದು ಕಲ್ಲು ಮನೆಯ ಮುಂದಿನ ಆವರಣಕ್ಕೆ ಹೋಗಿದೆ. ಈ ವಿಷಯಕ್ಕೆ ಜಗಳ ಆರಂಭವಾಗಿದೆ ಎಂಬುದು ಪೊಲೀಸ್ ಮೂಲಗಳ ಮಾಹಿತಿ.

ವಿಐಎಸ್‌ಎಲ್ ಗಣಿಗೆ ವಿರೋಧ

30ಸಾವಿರ ಮರಗಳ ಕಡಿತಲೆ ಸಾಧ್ಯತೆ • ಭೂ ಪರಿವರ್ತನೆ ಒಪ್ಪದಿರಲು ಶಿಫಾರಸು

• ಹರಿಶಂಕರ್ ಆರ್.

ಬಳ್ಳಾರಿ: ಭದ್ರಾವತಿಯ 'ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (ವಿಐಎಸ್‌ಎಲ್)' ಪುನಶ್ಚೇತನದ ಚರ್ಚೆಗಳು ನಡೆಯುತ್ತಿರುವ ಹೊತ್ತಿನಲ್ಲೇ, ಅದೇ ಕಂಪನಿಯ 'ರಮಣದುರ್ಗ ಕಬ್ಬಿಣದ ಅದಿರು ಗಣಿ'ಗಾಗಿ ಕಾಡಿನ ಜಾಗ ಪರಿವರ್ತಿಸುವುದನ್ನು ಅರಣ್ಯ ಇಲಾಖೆ ವಿರೋಧಿಸಿದೆ.

ಸಂಡೂರು ತಾಲ್ಲೂಕಿನ ರಾಮನಮಲೆ (ರಾಮಗಢ) ಅರಣ್ಯ ಬ್ಲಾಕ್‌ನ 150 ಎಕರೆ (60.70 ಹೆಕ್ಟೇರ್) ದಟ್ಟ ಕಾಡನ್ನು ಗಣಿಗಾರಿಕೆ ಉದ್ದೇಶಕ್ಕೆ ಪರಿವರ್ತಿಸಬೇಕು ಎಂದು ಕೋರಿ ವಿಐಎಸ್‌ಎಲ್ ಪರವಾಗಿ 'ಭಾರತೀಯ ಉಕ್ಕು ಪ್ರಾಧಿಕಾರವು (ಎಸ್‌ಎಐಎಲ್-ಸೈಲ್)' ಸರ್ಕಾರಕ್ಕೆ ಅರ್ಜಿ ಸಲ್ಲಿಸಿತ್ತು. ಅದರಂತೆ, 2025ರ ಸೆ.25 ಮತ್ತು ನ.25ರಂದು ಸ್ಥಳ ಪರಿಶೀಲಿಸಿರುವ ಬಳ್ಳಾರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್), ಹಲವು ಕಾರಣಗಳನ್ನು ಉಲ್ಲೇಖಿಸಿ 'ಸೈಲ್'ನ ಪ್ರಸ್ತಾವನೆ ತಿರಸ್ಕರಿಸಲು ವಲಯ ಅರಣ್ಯ ಸಂರಕ್ಷಣಾಧಿಕಾರಿಗೆ 2025ರ ಡಿ.1ರಂದು ಶಿಫಾರಸು ಮಾಡಿದ್ದಾರೆ.

ಶಿಫಾರಸಿನಲ್ಲಿ ಏನಿದೆ: 'ಉದ್ದೇಶಿತ ಜಾಗವು ಜೀವವೈವಿಧ್ಯವುಳ್ಳ ದಟ್ಟ ಕಾಡು (ವರ್ಜಿನ್ ಅರಣ್ಯ). ಇಲ್ಲಿ ಗಣಿ ಕಾರ್ಯಾಚರಣೆ ನಡೆದರೆ 29,400 ಮರಗಳನ್ನು ಕಡಿಯಬೇಕಾಗುತ್ತದೆ' ಎಂದು ಉಲ್ಲೇಖಿಸಲಾಗಿದೆ.

'ಈ ಸ್ಥಳವು ಚಿರತೆ, ಕರಡಿ, ತೋಳ, ನಾಲ್ಕು ಕೊಂಬಿನ ಹುಲ್ಲೆ ಮತ್ತು ಅಪರೂಪದ ಹಳದಿ ಗಂಟಲಿನ ಬುಲ್‌ಬುಲ್ ಸೇರಿದಂತೆ 160ಕ್ಕೂ ಹೆಚ್ಚು ಪಕ್ಷಿಗಳಿಗೆ ಆಶ್ರಯ ತಾಣವಾಗಿದೆ. ಜಲ ಮೂಲಗಳು, ಸಸ್ಯವರ್ಗ, ವಿವಿಧ ಸರೀಸೃಪ, ಉಭಯಚರಗಳಿವೆ ಎಂಬುದು ಸ್ಥಳ ಪರಿಶೀಲನೆಯಲ್ಲಿ ಗೊತ್ತಾಗಿದೆ' ಎಂದು ಹೇಳಲಾಗಿದೆ.

'ಸುಪ್ರೀಂ ಕೋರ್ಟ್ ಆದೇಶದಂತೆ ಬಳ್ಳಾರಿ ಜಿಲ್ಲೆಯಲ್ಲಿ ವಾರ್ಷಿಕ ಕಬ್ಬಿಣ ಅದಿರು ಉತ್ಪಾದನೆ 35 ದಶಲಕ್ಷ ಟನ್ ದಾಟುವಂತಿಲ್ಲ. ಸಂಡೂರಿನಲ್ಲಿ ಸದ್ಯ ಇರುವ ಗಣಿಗಳಲ್ಲಿ ಉತ್ಪಾದನೆಯು ಸೂಚಿತ ಮಿತಿ ಮೀರಿದೆ. ಈ ಸನ್ನಿವೇಶದಲ್ಲಿ ಹೊಸ ಗಣಿಗಳಿಗೆ ಅನುಮತಿ ನೀಡುವುದು ನ್ಯಾಯಸಮ್ಮತವಲ್ಲ' ಎಂದೂ ತಿಳಿಸಲಾಗಿದೆ.

'ದಟ್ಟ ಅರಣ್ಯದಲ್ಲಿ ಹೊಸ ಗಣಿಗಳಿಗೆ ಅನುಮತಿ ನೀಡದಿರಲು 2016ರ ಮಾರ್ಚ್ 23ರಂದು ನಡೆದಿದ್ದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಧರಿಸಲಾಗಿದೆ. ವಿಐಎಸ್‌ಎಲ್‌ನ ಗಣಿಗೆ ಅರಣ್ಯ ಭೂಮಿಯನ್ನು ಪರಿವರ್ತಿಸುವುದು 2016ರ ನಿಲುವಿಗೆ ವಿರುದ್ಧವಾಗಲಿದೆ' ಎಂದು ಪ್ರತಿಪಾದಿಸಲಾಗಿದೆ.

> ಹವಾಮಾನ ಬದಲಾವಣೆ, ಪ್ರಕೃತಿ ವಿಕೋಪ, ಬೆಟ್ಟ ಕುಸಿತದಂಥ ಘಟನೆಗಳು ನಡೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಅರಣ್ಯ ಇಲಾಖೆಯ ನಿರ್ಧಾರ ಸ್ವಾಗತಾರ್ಹ
> **ಟಿ.ಎಂ.ಶಿವಕುಮಾರ್**, ಜನಸಂಗ್ರಾಮ ಪರಿಷತ್ ರಾಜ್ಯ ಘಟಕದ ಅಧ್ಯಕ್ಷ

> ದಟ್ಟ ಕಾಡಿನಲ್ಲಿ ಹೊಸ ಗಣಿಗೆ ಅನುಮತಿ ನೀಡದಿರಲು 2016ರಲ್ಲಿ ಅರಣ್ಯ ಇಲಾಖೆ ನಿರ್ಧರಿಸಿದೆ. ಇದರ ಜೊತೆಗೆ ಇತರೆ ಅಂಶಗಳನ್ನು ಪರಿಗಣಿಸಿ ಸೂಕ್ತ ಶಿಫಾರಸು ಮಾಡಲಾಗಿದೆ
> **ಬಸವರಾಜ್**, ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ

ಪುನಶ್ಚೇತನಕ್ಕೆ ಹಿನ್ನಡೆ

'ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ'ಯ ಪುನಶ್ಚೇತನಕ್ಕೆ ಭಾರತೀಯ ಉಕ್ಕು ಪ್ರಾಧಿಕಾರ ನಿರ್ಧರಿಸಿದೆ. ₹5,000 ಕೋಟಿ ಹಣಕಾಸು ನೆರವು ನೀಡಲಾಗುವುದು ಎಂದು ಕೇಂದ್ರ ಉಕ್ಕು, ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಇತ್ತೀಚೆಗೆ ಘೋಷಿಸಿದ್ದರು. ಇದಕ್ಕೆ ₹5 ಕೋಟಿ ನೀಡುವುದಾಗಿ ಸಿರಿಗೆರೆಯ ತರಳಬಾಳು ಮಠದ ಶಿವಾಚಾರ್ಯ ಸ್ವಾಮೀಜಿ ಅವರೂ ವಾಗ್ದಾನ ನೀಡಿದ್ದರು. ಆದರೆ, ಗಣಿಯೇ ಇಲ್ಲದೇ ಕಾರ್ಖಾನೆ ಪುನಶ್ಚೇತನ ಹೇಗೆ ಎಂಬ ಪ್ರಶ್ನೆಯೂ ಈಗ ಮೂಡಿದೆ.

'ಎಲ್ಲಾ ತಾಲ್ಲೂಕುಗಳಿಗೂ ಅಕ್ಕ ಪಡೆ ವಿಸ್ತರಣೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮಹಿಳೆಯರ ಶಕ್ತಿ, ಸ್ವಾಭಿಮಾನದ ಪ್ರತೀಕವಾದ 'ಅಕ್ಕ ಪಡೆ'ಯನ್ನು ಶೀಘ್ರವೇ ತಾಲ್ಲೂಕುಮಟ್ಟಕ್ಕೆ ವಿಸ್ತರಿಸಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಇಲ್ಲಿನ ರಾಣಿ ಚನ್ನಮ್ಮನ ವೃತ್ತದಲ್ಲಿ ಮಂಗಳವಾರ ಅಕ್ಕ ಪಡೆಗೆ ಚಾಲನೆ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸದ್ಯ 31 ಎಸ್‌ಪಿ ಕಚೇರಿಗಳು, ಐದು ಪೊಲೀಸ್ ಕಮಿಷನರೇಟ್ ಸೇರಿ 36 ಕಡೆ ಅಕ್ಕ ಪಡೆ ಆರಂಭಿಸಿದ್ದೇವೆ. ಉತ್ತಮ ಸ್ಪಂದನೆ ಇದೆ. ಮುಂದಿನ ಬಜೆಟ್‌ನಲ್ಲಿ ಅಂಗೀಕಾರ ಪಡೆದು, ರಾಜ್ಯದ ಎಲ್ಲ ತಾಲ್ಲೂಕು ಮಟ್ಟಕ್ಕೆ ಇದನ್ನು ವಿಸ್ತರಿಸಲಾಗುವುದು' ಎಂದರು.

'ಅಕ್ಕ ಪಡೆ' ಪ್ರತಿ ತಂಡದಲ್ಲಿ ಗೃಹರಕ್ಷಕ ದಳದ ನಾಲ್ವರು ಮಹಿಳೆಯರು, ಇಬ್ಬರು ಮಹಿಳಾ ಪೊಲೀಸರು, ಒಬ್ಬರು ಚಾಲಕ (ಕಾನ್‌ಸ್ಟೆಬಲ್) ಸೇರಿ ಏಳು ಮಂದಿ ಇರುತ್ತಾರೆ. ಕಮಾಂಡೊ ಸಮವಸ್ತ್ರ ಧರಿಸಿರುತ್ತಾರೆ. ಮಹಿಳೆಯರ ರಕ್ಷಣೆಗೆ ಅಗತ್ಯ ಸಾಮರ್ಥ್ಯ ವೃದ್ಧಿಗೆ ತರಬೇತಿಯನ್ನೂ ಕೊಡಲಾಗಿದೆ. ಮಹಿಳೆಯರಿಗೆ ತೊಂದರೆ ಇರುವ ಕುರಿತು ಕರೆ ಬಂದ ತಕ್ಷಣವೇ ಈ ಪಡೆಯು ರಕ್ಷಣೆಗೆ ಕಾರ್ಯಪ್ರವೃತ್ತವಾಗುತ್ತದೆ' ಎಂದು ಸಚಿವೆ ಈ ಸಂದರ್ಭದಲ್ಲಿ ವಿವರಿಸಿದರು.

ಬೆಳಗಾವಿಯಲ್ಲಿ ಬೀದರ್‌ನ ಅಕ್ಕ ಪಡೆಯ ಸದಸ್ಯೆಯರು ಆತ್ಮರಕ್ಷಣಾ ಕಲೆ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ದಕ್ಷಿಣ ಭಾರತದಲ್ಲಿಯೇ ಅತಿ ಹೆಚ್ಚು ಸಂಖ್ಯೆಯಲ್ಲಿ ಕಂಡ ಬಾನಾಡಿಗಳು

ಮಾಲವಿ ಜಲಾಶಯದಲ್ಲಿ ಕ್ರೌಂಚ ಹಕ್ಕಿಗಳ ಕಲರವ

• ಸಿ.ಶಿವಾನಂದ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಮಾಲವಿ ಜಲಾಶಯದ ಜಲಾನಯನ ಪ್ರದೇಶದಲ್ಲಿ ವಿದೇಶಿ ಡೆಮೊಸೆಲ್ ಕ್ರೇನ್ ಪಕ್ಷಿಗಳು (ಕ್ರೌಂಚ ಪಕ್ಷಿ) 'ಸಮಾವೇಶ' ನಡೆದಿದೆ. ಆಹಾರ ಅರಸಿ ಅಂದಾಜು ಎರಡು ಸಾವಿರ ಪಕ್ಷಿಗಳು ವಲಸೆ ಬಂದಿವೆ. ದಕ್ಷಿಣ ಭಾರತದಲ್ಲೇ ಮೊದಲಿಗೆ ಅತಿ ಹೆಚ್ಚು ಸಂಖ್ಯೆಯಲ್ಲಿ ಇಲ್ಲಿ ಸೇರಿವೆ.

ಜಲಾಶಯದ ಜೌಗು ಪ್ರದೇಶ ಸದ್ಯ ಒಣಗುತ್ತಿದ್ದು, ಈ ಬಾನಾಡಿಗಳಿಗೆ ಆಹಾರದ ಬಟ್ಟಲಾಗಿ ಬದಲಾಗಿದೆ. ಕೃಷಿ ಭೂಮಿ, ಕೆರೆಕಟ್ಟೆಗಳ ಬಳಿಯೇ ಅವು ಹೆಚ್ಚು ಠಿಕಾಣಿ ಹೂಡುತ್ತವೆ.

ಆದರೆ, ನೀರಿನ ಗುಂಡಿಗಳ ಬಳಿ ಮೀನುಗಾರರು ಬಲೆ ಹಾಕಿರುವುದು ಮತ್ತು ಬೀದಿ ನಾಯಿಗಳ ಹಾವಳಿಯ ಕಾರಣದಿಂದ ಈ ಅಪರೂಪದ ಪಕ್ಷಿಗಳಿಗೆ ಅಪಾಯ ಎದುರಾಗಿದೆ.

ಮುಖ್ಯಾಂಶಗಳು

- ಪ್ರೀತಿ ಮತ್ತು ದಾಂಪತ್ಯಕ್ಕೆ ಹೆಸರಾದ ಕ್ರೌಂಚ
- ಸೂಕ್ಷ್ಮ ಸಂವೇದನೆಯ ಸಂಕೋಚದ ಪಕ್ಷಿ
- ಮಂಗೋಲಿಯಾ, ಸೈಬೀರಿಯಾದಿಂದ ವಲಸೆ

'ಮಂಗೋಲಿಯಾ ಮತ್ತು ಸೈಬೀರಿಯಾದಿಂದ ಹಿಮಾಲಯ ದಾಟಿ ಈ ಕ್ರೌಂಚ ಪಕ್ಷಿಗಳು ವಲಸೆ ಬರುತ್ತವೆ. ಚಳಿಗಾಲದಲ್ಲಿ ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಈ ಪಕ್ಷಿಗಳು, 2020ರಲ್ಲಿ ಈ ಭಾಗದಲ್ಲಿ ತುಂಬಾ ಕಡಿಮೆ ಕಾಣಿಸಿದವು. ಸದ್ಯ ದೊಡ್ಡ ಸಂಖ್ಯೆಯಲ್ಲಿ ಬಂದಿವೆ. ಪ್ರೀತಿ ಮತ್ತು ದಾಂಪತ್ಯಕ್ಕೆ ಹೆಸರಾಗಿವೆ. ಅವುಗಳ ರಕ್ಷಣೆ ಹೊಣೆ ಎಲ್ಲರ ಮೇಲಿದೆ' ಎಂದು ಪಕ್ಷಿ ತಜ್ಞ ವಿಜಯ್ ಇಟ್ಟಿಗಿ ಅವರು ತಿಳಿಸಿದರು.

ಕ್ರೌಂಚ ಪಕ್ಷಿ

> ಮಾಲವಿ ಜಲಾಶಯದ ಜಲಾನಯನ ಪ್ರದೇಶದಲ್ಲಿ ಅಪರೂಪದ ಪಕ್ಷಿಗಳು ಕಾಣಿಸಿಕೊಳ್ಳುವ ಸ್ಥಳಗಳಲ್ಲಿ ಕಾವಲುಗಾರರನ್ನು ನಿಯೋಜಿಸಲು ಅಗತ್ಯ ಕ್ರಮ ಜರುಗಿಸಲಾಗುವುದು
> **ಆರ್. ಉಮೇಶ್**, ವಲಯ ಅರಣ್ಯಾಧಿಕಾರಿ, ಹೂವಿನಹಡಗಲಿ

'ಸೂಕ್ಷ್ಮ ಸಂವೇದನೆಯುಳ್ಳ ಈ ಪಕ್ಷಿಗಳು ಆಹಾರ ಇರುವ ಪ್ರದೇಶದಲ್ಲಿ ಜನ, ಜಾನುವಾರು ಮತ್ತು ನಾಯಿ ಸೇರಿ ಯಾವುದೇ ಪ್ರಾಣಿ ಕಂಡು ಬಂದರೂ ನೆಲಕ್ಕೆ ಇಳಿಯುವುದಿಲ್ಲ. ಜಲಾಶಯದ ಬಳಿ ವಲಸೆ ಪಕ್ಷಿಗಳ ರಕ್ಷಣೆಗಾಗಿ ಅರಣ್ಯ ಇಲಾಖೆ ಕೆಲ ತಿಂಗಳಾದರೂ ಕಾವಲುಗಾರರ ನಿಯೋಜಿಸಬೇಕು' ಎಂದು ಪಕ್ಷಿಪ್ರೇಮಿಗಳು ಕೋರಿದ್ದಾರೆ.

'ಅಂತಿಮ ವರದಿ ಬರದೆ ನಿರ್ಧರಿಸಲಾಗದು'

ಧರ್ಮಸ್ಥಳ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಧರ್ಮಸ್ಥಳ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಸದ್ಯ ಮಧ್ಯಂತರ ವರದಿಯನ್ನು ಸಲ್ಲಿಸಿದೆ. ತನಿಖೆಯ ಅಂತಿಮ ವರದಿ ಕೈಸೇರದೇ ಈ ಕುರಿತು ಯಾವುದೇ ನಿರ್ಣಯಕ್ಕೂ ಬರಲಾಗದು' ಎಂದು ಗೃಹಸಚಿವ ಜಿ.ಪರಮೇಶ್ವರ ಮಂಗಳವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಆದಷ್ಟು ಬೇಗ ಅಂತಿಮ ವರದಿ ಸಲ್ಲಿಸುವಂತೆ ಎಸ್‌ಐಟಿ ಮುಖ್ಯಸ್ಥರಿಗೆ ಸೂಚಿಸಿದ್ದೇನೆ. ವರದಿ ಸಲ್ಲಿಕೆಯಾದಂತೆ ಸಂಪುಟ ಸಭೆಯಲ್ಲಿ ಮಂಡಿಸಲಿದ್ದೇನೆ' ಎಂದರು.

'ಕೋಮು ಹಿಂಸಾಚಾರದ ಘಟನೆಗಳ ಕಾರಣ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಕಂಪನಿಗಳು ಕರಾವಳಿಯಲ್ಲಿ ಹೂಡಿಕೆಗೆ ಹಿಂದೇಟು ಹಾಕುತ್ತಿವೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಅವರು ಯಾವ ದೃಷ್ಟಿಕೋನದಲ್ಲಿ ಹೇಳಿದ್ದಾರೋ ತಿಳಿಯದು' ಎಂದು ಗೃಹ ಸಚಿವರು ಹೇಳಿದರು.

'ಈ ಹಿಂದೆ ಕರಾವಳಿಯಲ್ಲಿ ಅಂತಹ ವಾತಾವರಣ ಇದ್ದುದು ಸತ್ಯ. ಈಗ ಬದಲಾಗಿರುವುದು ಸತ್ಯ. ನಾನು ಅಧಿಕೃತ ಅಂಕಿ ಅಂಶಗಳ ಆಧಾರದಲ್ಲಿ ಈ ಮಾತು ಹೇಳುತ್ತೇನೆ. ಕರಾವಳಿಯಲ್ಲಿ ಕೋಮುದ್ವೇಷದ ಕೊಲೆಗಳು, ಡ್ರಗ್ಸ್ ದಂಧೆ ಕಡಿಮೆ ಆಗಿದೆ. ಇಲ್ಲಿ ಶಾಂತಿ ಸ್ಥಾಪನೆ ಆಗುತ್ತಿರುವುದರ ಸೂಚನೆ ಇದು' ಎಂದರು.

'ಶಾಸಕರ ವಿದೇಶಿ ಪ್ರವಾಸ ಅವರ ವೈಯಕ್ತಿಕ ನಿರ್ಧಾರ. ಅವರ ಹಣದಲ್ಲಿ ಎಲ್ಲಿಗೆ ಬೇಕಾದರೂ ಹೋಗಬಹುದು. ಅದು ಅಧ್ಯಯನ ಪ್ರವಾಸವೂ ಆಗಿರಬಹುದು, ತಪ್ಪು ಎನ್ನಲಾಗದು' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಮರಾಠಿ ಎಂ.ಎ: ಚಿನ್ನ ಗೆದ್ದ 78ರ ವೃದ್ಧೆ

ಇಂದೋರ್ (ಪಿಟಿಐ): ದೇವಿ ಅಹಲ್ಯಾ ವಿಶ್ವವಿದ್ಯಾಲಯದ ಮರಾಠಿ ಎಂ.ಎ ಕೋರ್ಸ್‌ನಲ್ಲಿ 78 ವರ್ಷ ವಯಸ್ಸಿನ ಸುಷ್ಮಾ ಮೋಘೆ ಚಿನ್ನದ ಪದಕ ಗೆದ್ದಿದ್ದಾರೆ. ನಿವೃತ್ತಿಯ ನಂತರ ತಮ್ಮ ಶೈಕ್ಷಣಿಕ ಪ್ರಯಾಣವನ್ನು ಮುಂದುವರಿಸಿದ್ದ ಅವರು, ಈ ಮೂಲಕ ಸಾಧನೆಗೆ ವಯಸ್ಸು ಮುಖ್ಯವಲ್ಲ ಎಂಬುದನ್ನು ಸಾಧಿಸಿ ತೋರಿದ್ದಾರೆ.

ಸುಷ್ಮಾ ಅವರಿಗೆ ಮಧ್ಯಪ್ರದೇಶದ ರಾಜ್ಯಪಾಲ ಮಂಗುಭಾಯಿ ಪಟೇಲ್ ಅವರು, ಮಂಗಳವಾರ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಚಿನ್ನದ ಪದಕವನ್ನು ಪ್ರದಾನ ಮಾಡಿದರು.

‘ಈ ವಯಸ್ಸಿನಲ್ಲೂ ಮರಾಠಿ ಎಂ.ಎ ಪಡೆಯಬಹುದು ಎಂದು ತಿಳಿದ ನಂತರ, ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಂಡೆ. ಪದವಿ ಪಡೆಯುವುದಕ್ಕಿಂತ, ಪದವಿಗೆ ದಾಖಲಾಗುವ ವಿಚಾರವೇ ನನಗೆ ದೊಡ್ಡದಾಗಿತ್ತು. ಮಾತೃಭಾಷೆ ಮರಾಠಿ ಯಾವಾಗಲೂ ನನ್ನ ಹೃದಯಕ್ಕೆ ಹತ್ತಿರವಾದ ವಿಷಯ’ ಎಂದು ಸುಷ್ಮಾ ಹೇಳಿದರು.

ತನ್ನ ಶಿಕ್ಷಕರಿಗೆ ಕೃತಜ್ಞತೆ ವ್ಯಕ್ತಪಡಿಸಿದ ಅವರು, ‘ನನ್ನ ಪ್ರಾಧ್ಯಾಪಕರು ನನ್ನನ್ನು ಸಂಪೂರ್ಣವಾಗಿ ಬೆಂಬಲಿಸಿ, ಆಫ್‌ಲೈನ್ ಮತ್ತು ಆನ್‌ಲೈನ್ ಎರಡರಲ್ಲೂ ಕಲಿಸಿದರು’ ಎಂದರು.

ನಿವೃತ್ತಿಯ ನಂತರ ಶೂನ್ಯ ಆವರಿಸಿದ್ದ ಬದುಕು, ಶೈಕ್ಷಣಿಕ ಕ್ಷೇತ್ರಕ್ಕೆ ಮರಳಿದ ನಂತರ ದಿಸೆಯನ್ನೆ ಬದಲಾಯಿಸಿದೆ ಎನ್ನುವ ಅವರು, ಪ್ರಸ್ತುತ ಪ್ರಸಿದ್ಧ ಹಿಂದಿ ಲೇಖಕರ ಕೃತಿಗಳನ್ನು ಮರಾಠಿಗೆ ಅನುವಾದ ಮಾಡುತ್ತಾ, ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕೆಲವು ದೋಷ ಒಪ್ಪಿಕೊಂಡ ಟಿಡಿಬಿ

‘ಕಾರ್ಯಕ್ರಮ ಪ್ರಾಯೋಜಕತ್ವ: ಪಡೆದ ಒಟ್ಟು ಮೊತ್ತ ₹3.85 ಕೋಟಿ’

ಪ್ರಜಾವಾಣಿ ವಾರ್ತೆ

ಅಯ್ಯಪ್ಪ ಸಂಗಮ್

ತಿರುವನಂತಪುರ: ‘ಗ್ಲೋಬಲ್ ಅಯ್ಯಪ್ಪ ಸಂಗಮ್’ ಆಯೋಜನೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳನ್ನು ಸಮರ್ಥಿಸಿಕೊಳ್ಳಲು ಕೇರಳ ಸರ್ಕಾರ ಪ್ರಯತ್ನಿಸುತ್ತಿರುವ ನಡುವೆಯೇ, ತಿರುವಾಂಕೂರು ದೇವಸ್ವಂ ಮಂಡಳಿಯು (ಟಿಡಿಬಿ), ಅಸಮರ್ಪಕ ಪ್ರಾಯೋಜಕತ್ವಗಳು ಸೇರಿದಂತೆ ಕೆಲವು ದೋಷಗಳಿರುವುದನ್ನು ಒಪ್ಪಿಕೊಂಡಿದೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಟಿಡಿಬಿ ಅಧ್ಯಕ್ಷ ಕೆ.ಜಯಕುಮಾರ್, ‘ಕಾರ್ಯಕ್ರಮ ಆಯೋಜಿಸಿದ್ದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫ್ರಾಸ್ಟ್ರಕ್ಚರ್ ಅಂಡ್ ಕನ್‌ಸ್ಟ್ರಕ್ಷನ್ (ಐಐಐಸಿ) ₹7.04 ಕೋಟಿಗೆ ಬಿಲ್ ನೀಡಿದೆ. ₹4.99 ಕೋಟಿಗೆ ಇತ್ಯರ್ಥಗೊಳಿಸಬೇಕೆಂದು ಟಿಡಿಬಿ ಕೇಳಲಿದೆ. ಇದನ್ನು ಅವರು ಒಪ್ಪುವ ವಿಶ್ವಾಸವಿದೆ’ ಎಂದು ತಿಳಿಸಿದರು.

‘ಅದಾನಿ ಗ್ರೂಪ್ ಕಾರ್ಯಕ್ರಮಕ್ಕೆ ನೀಡಲು ಒಪ್ಪಿಕೊಂಡಿದ್ದ ₹1 ಕೋಟಿಯೂ ಸೇರಿ ಕಾರ್ಯಕ್ರಮಕ್ಕೆ ಪಡೆದ ಒಟ್ಟು ಪ್ರಾಯೋಜಕತ್ವದ ಮೊತ್ತ ₹3.85 ಕೋಟಿಯಷ್ಟಾಗಿದೆ. ಇನ್ನೂ ಸುಮಾರು ₹1.15 ಕೋಟಿ ಕೊರತೆಯಿದ್ದು, ಮಂಡಳಿಯು ಮಂಡಳಿಯ ನಿಧಿಯಿಂದ ಹಣವನ್ನು ಪಡೆಯದೆ, ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಲು ಪ್ರಯತ್ನಿಸುತ್ತದೆ. ಈ ಹಿಂದೆ ಹಣ ನೀಡಲು ಒಪ್ಪಿದ್ದ ಅನೇಕ ಪ್ರಾಯೋಜಕರು ಹಿಂದೆ ಸರಿದಿದ್ದಾರೆ’ ಎಂದು ಹೇಳಿದರು.

ಮಂಡಳಿಯ ಸಭೆಯ ನಂತರ ಮಾತನಾಡಿದ ಜಯಕುಮಾರ್, ‘ಕಾರ್ಯಕ್ರಮದ ವೆಚ್ಚಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಕರು ಎತ್ತಿರುವ ಪ್ರಶ್ನೆಗಳಿಗೆ ಟಿಡಿಬಿ ಸ್ಪಷ್ಟೀಕರಣ ನೀಡುವಲ್ಲಿ ವಿಫಲವಾಗಿದೆ. ಹೈಕೋರ್ಟ್‌ಗೆ ಸಲ್ಲಿಸಲಾದ ವರದಿಯಲ್ಲಿ ಅಕ್ರಮಗಳನ್ನು ಲೆಕ್ಕಪರಿಶೋಧಕರು ಗುರುತಿಸಿದ್ದಾರೆ. ಹೈಕೋರ್ಟ್‌ಗೆ ಸಲ್ಲಿಸಲಾದ ಸ್ಪಷ್ಟೀಕರಣವನ್ನು ಉಲ್ಲೇಖಿಸಿ ಟಿಡಿಬಿ ಪ್ರಮಾಣ ಪತ್ರ ಸಲ್ಲಿಸಲಿದೆ ಎಂದರು.

‘ಶಬರಿಮಲೆ: ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಲಿ’

ಪಾಲಕ್ಕಾಡ್: ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶದ ವಿಷಯದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಯಾವುದೇ ಪ್ರತಿಕ್ರಿಯೆ ನೀಡದೇ ಮೌನವಾಗಿದ್ದಾರೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಟೀಕಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸತೀಶನ್, ‘ಈ ವಿವಾದಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ‘ಹೌದು ಅಥವಾ ಇಲ್ಲ’– ಎಂದು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು. ಋತುಮತಿಯಾದ ಮಹಿಳೆಯರಿಗೆ ದೇಗುಲ ಪ್ರವೇಶಿಸುವುದನ್ನು ಬೆಂಬಲಿಸುವ ತನ್ನ ಹಿಂದಿನ ಪ್ರಮಾಣಪತ್ರವನ್ನು ಸರಿಪಡಿಸುವಂತೆ ಆಗ್ರಹಿಸಿದರು.

‘ಈ ವಿಷಯದಲ್ಲಿ ಸರ್ಕಾರವು ತನ್ನ ನಿಲುವನ್ನು ಸ್ಪಷ್ಟವಾಗಿ ಹೇಳದೇ, ಜಾರಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಮುಖ್ಯಮಂತ್ರಿ ಮೌನವಾಗಿದ್ದಾರೆ. ‘ಸರಿಯಾದ ಸಮಯದಲ್ಲಿ ಸರಿಯಾದ ನಿಲುವು ತೆಗೆದುಕೊಳ್ಳುತ್ತೇವೆ’ ಎಂದಷ್ಟೇ ಹೇಳುತ್ತಿದ್ದಾರೆ. ಅವರು ಚುನಾವಣೆ ಮುಗಿಯುವುದನ್ನು ಕಾಯುತ್ತಿದ್ದಾರೆ’ ಎಂದು ಆರೋಪಿಸಿದರು.

‘ಶಬರಿಮಲೆ ದೇಗಲಕ್ಕೆ ಮಹಿಳೆಯರ ಪ್ರವೇಶವನ್ನು ಸರ್ಕಾರ ಒಪ್ಪುತ್ತದೆಯೇ, ಇಲ್ಲವೇ ಎಂಬುದು ನಮಗೆ ಗೊತ್ತಾಗಬೇಕಿದೆ’ ಎಂದು ಸತೀಶನ್ ಹೇಳಿದರು.

5 ರಾಜ್ಯ: ಏಪ್ರಿಲ್‌ನಲ್ಲಿ ಚುನಾವಣೆ?

ಮುಖ್ಯ ಚುನಾವಣಾ ಆಯುಕ್ತರ ತಂಡ ಅಸ್ಸಾಂಗೆ ಭೇಟಿ

ನವದೆಹಲಿ (ಪಿಟಿಐ): ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯ ವಿಧಾನಸಭೆಗಳಿಗೆ ಏಪ್ರಿಲ್‌ನಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಐದು ರಾಜ್ಯಗಳ ವಿಧಾನಸಭೆ ಅವಧಿಯು ಮೇ ಮತ್ತು ಜೂನ್‌ನಲ್ಲಿ ಅಂತ್ಯಗೊಳ್ಳಲಿದೆ. ಆಯೋಗವು ಮಾರ್ಚ್ ಮಧ್ಯಭಾಗದಲ್ಲಿ ಒಟ್ಟಿಗೆ ಚುನಾವಣೆ ನಡೆಸಲು ಅಧಿಸೂಚನೆ ಘೋಷಣೆ ಮಾಡಬಹುದು. ಆಯೋಗದ ಅಧಿಕಾರಿಗಳು ಈಗಾಗಲೇ ಐದೂ ರಾಜ್ಯಗಳಿಗೆ ಪ್ರವಾಸ ಕೈಗೊಂಡಿದ್ದಾರೆ. ಅಸ್ಸಾಂನಲ್ಲಿ ಚುನಾವಣೆ ಸಿದ್ಧತೆ ನಡೆಯುತ್ತಿದೆ.

ಕಳೆದ ಬಾರಿ ಪಶ್ಚಿಮ ಬಂಗಾಳಕ್ಕೆ ಎಂಟು ಹಂತಗಳಲ್ಲಿ ಮತದಾನ ನಡೆದಿತ್ತು, ಅಸ್ಸಾಂನಲ್ಲಿ ಎರಡು ಹಂತ, ತಮಿಳುನಾಡು, ಕೇರಳ ಮತ್ತು ಪುದುಚೇರಿಯಲ್ಲಿ ಒಂದೇ ಹಂತದಲ್ಲಿ ಮತದಾನ ನಡೆದಿತ್ತು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ನೇತೃತ್ವದ ಆಯೋಗದ ತಂಡ ಶೀಘ್ರವೇ ಅಸ್ಸಾಂಗೆ ಭೇಟಿ ನೀಡಿ ಚುನಾವಣೆ ಸಿದ್ಧತೆ ಪರಿಶೀಲನೆ ನಡೆಸಲಿದೆ.

ಅಸ್ಸಾಂನಲ್ಲಿ ಒಂದು ಅಥವಾ ಎರಡು ಹಂತದಲ್ಲಿ ಮತದಾನ ನಡೆಸಿ, ದಿನಾಂಕ ನಿಗದಿ ಮಾಡುವಾಗ ಏಪ್ರಿಲ್ 14ರ ಬಿಹು ಹಬ್ಬವನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಅಲ್ಲಿನ ರಾಜಕೀಯ ಪಕ್ಷಗಳು ಆಯೋಗಕ್ಕೆ ಮನವಿ ಸಲ್ಲಿಸಿವೆ.

ಪುದುಚೇರಿಯಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಭಾಗವಾಗಿ ಫೆಬ್ರುವರಿ 14ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗಿದೆ. ಫೆಬ್ರುವರಿ 10ರಂದು ಅಸ್ಸಾಂನ ಮತದಾರರ ಪಟ್ಟಿ ಪ್ರಕಟಗೊಂಡಿದೆ.

ತಮಿಳುನಾಡಿನಲ್ಲಿ ಮಂಗಳವಾರ ಎಸ್‌ಐಆರ್ ನಂತರದ ಮತದಾರರ ಅಂತಿಮ ಪಟ್ಟಿ ಪ್ರಕಟಗೊಂಡಿದೆ. ಕೇರಳದಲ್ಲಿ ಫೆಬ್ರುವರಿ 21, ಪಶ್ಚಿಮ ಬಂಗಾಳದಲ್ಲಿ ಫೆಬ್ರುವರಿ 28ಕ್ಕೆ ಮತದಾರರ ಅಂತಿಮ ಪಟ್ಟಿ ಪ್ರಕಟಗೊಳ್ಳುವ ಸಾಧ್ಯತೆ ಇದೆ.

ಇ.ಡಿ ಸಮನ್ಸ್: ಟೀನಾ ಅಂಬಾನಿ ಮತ್ತೆ ಗೈರು



ಟೀನಾ

ನವದೆಹಲಿ (ಪಿಟಿಐ): ರಿಲಯನ್ಸ್ ಗ್ರೂಪ್‌ನ ಅಧ್ಯಕ್ಷ ಅನಿಲ್ ಅಂಬಾನಿ ಅವರ ಪತ್ನಿ ಟೀನಾ ಅಂಬಾನಿ ಅವರು ಮಂಗಳವಾರ ಜಾರಿ ನಿರ್ದೇಶನಾಲಯದ (ಇ.ಡಿ) ವಿಚಾರಣೆಗೆ ಗೈರಾಗಿದ್ದಾರೆ.

ಇ.ಡಿ ವಿಚಾರಣೆಗೆ ಅವರು ಗೈರಾಗುತ್ತಿರುವುದು ಇದು 2ನೇ ಬಾರಿಯಾಗಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಫೆ.10ರಂದು ಸಮನ್ಸ್ ಜಾರಿ ಮಾಡಲಾಗಿತ್ತು. ಆದರೂ ಅವರು ಇ.ಡಿ ಮುಂದೆ ಹಾಜರಾಗಿರಲಿಲ್ಲ. ಅದರ ನಂತರ ಅವರಿಗೆ ಮತ್ತೊಂದು ಸಮನ್ಸ್ ಜಾರಿ ಮಾಡಲಾಗಿತ್ತು.

ವಿಚಾರಣೆಗೆ ಹಾಜರಾಗದಿರಲು ಅವರು ನೀಡಿದ ಕಾರಣ ಏನು ಎಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ.

ಮ್ಯಾನ್‌ಹಟನ್‌ನಲ್ಲಿ ಐಷಾರಾಮಿ ಫ್ಲ್ಯಾಟ್ ಖರೀದಿ ವಿಷಯದಲ್ಲಿ ಹಣ ವರ್ಗಾವಣೆಗೆ ಸಂಬಂಧಿಸಿ ಟೀನಾ ಅವರನ್ನು ವಿಚಾರಣೆಗೆ ಕರೆಯಲಾಗಿದೆ ಎಂದು ತಿಳಿದುಬಂದಿದೆ.

ರಿಲಯನ್ಸ್ ಗ್ರೂಪ್‌ನ ಹಲವು ಕಂಪನಿಗಳು ಮತ್ತು ಅವುಗಳ ಬ್ಯಾಂಕ್ ಸಾಲಗಳಿಗೆ ಸಂಬಂಧಿಸಿ ಅನಿಲ್ ಅವರನ್ನು ಬುಧವಾರ 2ನೇ ಬಾರಿಗೆ ಇ.ಡಿ. ಮುಂದೆ ಹಾಜರಾಗುವಂತೆ ಹೇಳಲಾಗಿತ್ತು. ಅದಕ್ಕೂ ಮೊದಲು ಅವರು 2025ರ ಆಗಸ್ಟ್‌ನಲ್ಲಿ ಅವರನ್ನು ಇ.ಡಿ ವಿಚಾರಣೆ ನಡೆಸಿತ್ತು.

‘ರಾಜಕಾರಣಿಗಳು ಭ್ರಾತೃತ್ವ ಬೆಳೆಸಬೇಕು’

ಹೊಸದಾಗಿ ಅರ್ಜಿ ಸಲ್ಲಿಸಲು 12 ಮಂದಿಗೆ ಸುಪ್ರೀಂ ಕೋರ್ಟ್ ಸೂಚನೆ



ನವದೆಹಲಿ (ಪಿಟಿಐ): ‘ರಾಜಕೀಯ ನಾಯಕರು ದೇಶದಲ್ಲಿ ಭ್ರಾತೃತ್ವ ಬೆಳೆಸಬೇಕು’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ರಾಜಕೀಯ ನಾಯಕರ ದ್ವೇಷ ಭಾಷಣಕ್ಕೆ ಸಂಬಂಧಿಸಿದ ಹೊಸ ಮಾರ್ಗಸೂಚಿ ಕುರಿತು ಶಿಕ್ಷಣ ತಜ್ಞೆ ರೂಪ್ ರೇಖಾ ವರ್ಮಾ ಸೇರಿದಂತೆ 12 ಮಂದಿಗೆ ಹೊಸತಾಗಿ ಅರ್ಜಿ ದಾಖಲಿಸಲು ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಭ್ರಾತೃತ್ವ ಹಾಗೂ ಸಾಂವಿಧಾನಿಕ ಮೌಲ್ಯಗಳ ಪರಿಪಾಲನೆ ದೀರ್ಘಾವಧಿ ರಾಜಕಾರಣಿಗಳ ಭಾಷಣದ ಕುರಿತಂತೆ ಹೊಸ ಮಾರ್ಗಸೂಚಿ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಲು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾ.ಜಾಯ್‌ಮಾಲ್ಯ ಬಾಗ್ಚಿ, ನ್ಯಾ. ಬಿ.ವಿ.ನಾಗರತ್ನ ಅವರಿದ್ದ ಪೀಠವು ನಿರಾಕರಿಸಿತು.

ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ಅವರ ಇತ್ತೀಚಿನ ದ್ವೇಷ ಭಾಷಣ ಉಲ್ಲೇಖಿಸಿ ಅರ್ಜಿದಾರರ ಪರವಾಗಿ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿದರು.

‘ವಾತಾವರಣ ತುಂಬಾ ಕಲುಷಿತವಾಗಿದೆ. ಹೀಗಾಗಿ, ದೇಶದ ಭ್ರಾತೃತ್ವ ಕೆಡಿಸುವ ಭಾಷಣಗಳ ಕುರಿತಂತೆ ಮಾರ್ಗಸೂಚಿ ಸಿದ್ಧಪಡಿಸುವ ಅಗತ್ಯವಿದೆ, ಯಾವುದೇ ನಿರ್ದಿಷ್ಟ ನಾಯಕರನ್ನು ಗುರಿಯಾಗಿರಿಸಿಕೊಂಡು ಈ ಹೇಳಿಕೆ ನೀಡುತ್ತಿಲ್ಲ’ ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟರು.

ಈ ಬಳಿಕ ಪೀಠ ಸ್ಪಷ್ಟಪಡಿಸಿತು. ‘ಅರ್ಜಿಯು ನಿರ್ದಿಷ್ಟ ರಾಜಕೀಯ ಪಕ್ಷವನ್ನು ಗುರಿಯಾಗಿರಿಸಿಕೊಂಡಿದೆ. ಇಂತಹ ಅರ್ಜಿಯನ್ನು ಮಾನ್ಯ ಮಾಡುವುದಿಲ್ಲ. ವಸ್ತುನಿಷ್ಠತೆ ಹೊಂದಿರುವ ಯಾವುದಾದರೂ ಒಂದು ನಿರ್ದಿಷ್ಟ ಅರ್ಜಿಯನ್ನು ಸಲ್ಲಿಸಲು ಎದುರು ನೋಡುತ್ತಿದ್ದೇನೆ’ ಎಂದು ಸಿಜೆಐ ತಿಳಿಸಿದರು.

‘ನಟಿ ಪ್ರತ್ಯುಷಾ ಹತ್ಯೆಯಾಗಿಲ್ಲ’



ನವದೆಹಲಿ (ಪಿಟಿಐ): ‘ತೆಲುಗು ನಟಿ ಪ್ರತ್ಯುಷಾ ಅವರ ಮೇಲೆ ಅತ್ಯಾಚಾರವಾಗಿಲ್ಲ, ಅವರ ಕತ್ತು ಹಿಸುಕಿ ಹತ್ಯೆ ಮಾಡಲಾಗಿಲ್ಲ. ವಿಷ ಸೇವಿಸಿ ಅವರು ಮೃತಪಟ್ಟಿದ್ದಾರೆ’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ. ಆತ್ಮಹತ್ಯೆಗೆ ಪ್ರಚೋದಿಸಿದ್ದಕ್ಕಾಗಿ ಗುಡಿಪಲ್ಲಿ ಸಿದ್ಧಾರ್ಥ್ ರೆಡ್ಡಿ ಎಂಬುವರಿಗೆ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿದೆ.

ನಟಿ ಪ್ರತ್ಯುಷಾ ಅವರು 2002ರಲ್ಲಿ ಫೆ.24ರಂದು ಹೈದರಾಬಾದ್‌ನಲ್ಲಿ ಮೃತಪಟ್ಟಿದ್ದರು. ಆಂಧ್ರ ಪ್ರದೇಶ ಹೈಕೋರ್ಟ್ ಇದೇ ಪ್ರಕರಣದಲ್ಲಿ ರೆಡ್ಡಿ ಅವರಿಗೆ 2011ರಲ್ಲಿ 2 ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಈ ಶಿಕ್ಷೆಯನ್ನೇ ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ರೆಡ್ಡಿ ಹಾಗೂ ಪ್ರತ್ಯುಷಾ 6 ವರ್ಷ ಪರಸ್ಪರ ಪ್ರೀತಿಸಿದ್ದರು.

ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ರೆಡ್ಡಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಾಲ್ ಮತ್ತು ಮನಮೋಹನ್ ಅವರ ಪೀಠ ನಡೆಸಿತು. ಮಗಳ ಸಾವಿನ ಕುರಿತು ಹಲವು ಅನುಮಾನಗಳಿವೆ ಎಂದು ತಾಯಿ ಪಿ. ಸರೋಜಿನಿ ದೇವಿ ಅವರು ಸಲ್ಲಿಸಿದ್ದ ಅರ್ಜಿಯನ್ನೂ ಪೀಠ ರದ್ದು ಮಾಡಿತು.

ಏನಾಗಿತ್ತು?: ಇಬ್ಬರ ಪ್ರೀತಿ ಬಗ್ಗೆ ನಟಿ ಮನೆಯವರಿಗೆ ಒಪ್ಪಿಗೆ ಇತ್ತು. ಆದರೆ, ರೆಡ್ಡಿ ಅವರ ತಾಯಿಗೆ ಒಪ್ಪಿಗೆ ಇರಲಿಲ್ಲ. ಆದ್ದರಿಂದ, ರೆಡ್ಡಿ ಮತ್ತು ನಟಿ ಇಬ್ಬರೂ ಆತ್ಮಹತ್ಯೆಗೆ ನಿರ್ಧರಿಸಿದರು. 2002ರ ಫೆ.23ರಂದು ಇಬ್ಬರೂ ವಿಷ ಸೇವಿಸಿದ್ದರು. ಈ ಬಳಿಕ ಬದುಕಬೇಕೆಂಬ ಬಯಕೆ ಇಬ್ಬರಿಗೂ ಮೂಡಿ, ಹತ್ತಿರದ ಆಸ್ಪತ್ರೆಗೆ ತೆರಳಿದರು. ಚಿಕಿತ್ಸೆ ಬಳಿಕವೂ ನಟಿ ಪ್ರತ್ಯುಷಾ ಬದುಕಲಿಲ್ಲ. ಆದರೆ, ರೆಡ್ಡಿ ಬದುಕಿದರು.

ದ್ವಾರಕಾ ರಸ್ತೆ ಅಪಘಾತ: ವಿಡಿಯೊ ಬಹಿರಂಗ

ನವದೆಹಲಿ (ಪಿಟಿಐ): ದ್ವಾರಕಾದಲ್ಲಿ ಈ ತಿಂಗಳು ನಡೆದ ಎಸ್‌ಯುವಿ–ಬೈಕ್ ನಡುವಣ ಅಪಘಾತದ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಅಪಘಾತದಲ್ಲಿ ಬೈಕ್ ಚಾಲಕ 23 ವರ್ಷ ಸಾಹಿಲ್ ಧನೇಶ್ರಾ ಅವರು ಮೃತಪಟ್ಟಿದ್ದಾರೆ.

ಮೃತನ ತಾಯಿ ವಿಡಿಯೊ ಹಂಚಿಕೊಂಡಿದ್ದು, ‘ಪರವಾನಗಿ ಇರದ ಕಾರು ಚಾಲಕ ವೇಗವಾಗಿ ಚಾಲನೆ ಮಾಡಿದ್ದರ ಪರಿಣಾಮವಾಗಿ ದುರಂತ ಸಂಭವಿಸಿದೆ. ಮಗನ ಸಾವಿಗೆ ನ್ಯಾಯ ಒದಗಿಸಿ’ ಎಂದು ಅವರು ಒತ್ತಾಯಿಸಿದ್ದಾರೆ.

‘ಹಾದಿ ತಪ್ಪಿಸಿದ ಮಾಧ್ಯಮ ವರದಿ’

‘ನಟಿಯ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲು ಕರ್ತವ್ಯದಲ್ಲಿ ವೈದ್ಯರೊಬ್ಬರು ಅಂದು ಆಸ್ಪತ್ರೆಯಲ್ಲಿ ಹಾಜರಿದ್ದರು. ಆದರೂ, ಡಾ. ಮುನಿಸ್ವಾಮಿ ಅವರು ಮರಣೋತ್ತರ ಪರೀಕ್ಷೆ ನಡೆಸಿದರು. ಪರೀಕ್ಷೆ ಬಳಿಕ, ಇವರು ಅನುಮಾನ ಮೂಡುವಂತೆ ಹೇಳಿಕೆಗಳನ್ನು ನೀಡಿದ್ದರು. ಇವರು ಈ ಹೇಳಿಕೆಯನ್ನು ಮಾಧ್ಯಮದವರು ಇನ್ನಷ್ಟು ರಂಜಿತವಾಗಿ ಬಿತ್ತರಿಸಿದ್ದರು. ಇದು ತನಿಖೆಯ ಹಾದಿ ತಪ್ಪಿಸಿತು’ ಎಂದು ಪೀಠ ಅಭಿಪ್ರಾಯಪಟ್ಟಿತು.

ಕರ್ನಾಟಕ ಸರ್ಕಾರ
ಕಾರಾಗೃಹ ಮತ್ತು ಸುಧಾರಣಾ ಸೇವೆ
ನಂ.4,ಶೇಷಾದ್ರಿ ರಸ್ತೆ, ಬೆಂಗಳೂರು–560009
ದೂ.ಸಂ.:080–22262263, ಇ–ಮೇಲ್: phq,prisons-kar@gov.in
No: DGPCSB/AD23/MODR/45/2025-ADMN(78525) ದಿನಾಂಕ: 17.02.2026

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ವಿವಿಧ ಕಾರಾಗೃಹಗಳಿಗೆ ಅಗತ್ಯವಿರುವ Body Worn Camera & Docking Station ಉಪಕರಣಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಟೆಂಡರ್‌ಅನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

ಕ್ರ.ಸಂ	ಟೆಂಡರ್‌ಸಂಖ್ಯೆ/ದಿನಾಂಕ	ಅಂದಾಜು ಮೌಲ್ಯ
01	PCSD/2025-26/IND0266, Dt.16.02.2026	Rs.100.00 Lakhs

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪೊಲೀಸ್ ಮಹಾ ನಿರ್ದೇಶಕರು
ಕಾರಾಗೃಹ ಮತ್ತು ಸುಧಾರಣಾ ಸೇವೆ
ಕರ್ನಾಟಕ ರಾಜ್ಯ
ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/5680/2025–26

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಕೃಷಿಪೇಟೆ ಮಾಸಪತ್ರಿಕೆ
ಶ್ರೀ ಆರ್. ಬಿ. ಮಾಮಲೇದೇಸಾಯಿ ಸ್ಮಾರಕ ಭವನ, ಭೈರಿದೇವರಕೊಪ್ಪ, ಹುಬ್ಬಳ್ಳಿ–580 025.
E-mail: gmpp@rediffmail.com, ksamb@rediffmail.com Ph:(0836) 2375078 / 2373726
ಸಂಖ್ಯೆ:ಕೃಮಾಮಂ/ಕೃಪೇ/ಲೇ.ವಿ/636/2025–26 ದಿನಾಂಕ: 17.02.2026

ಟೆಂಡರ್ ಕಂ ಇ–ಹರಾಜು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಕೃಷಿಪೇಟೆ ಕಛೇರಿಯಲ್ಲಿರುವ **ರೂ.12.80 ಕೋಟಿಗಳನ್ನು** (ಹನ್ನೆರಡು ಕೋಟಿ ಎಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಇ–ಪ್ರೊಕ್ಯೂರ್‌ಮೆಂಟ್ ಮೂಲಕ 365 ದಿವಸಗಳ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಆಸಕ್ತ ರಾಷ್ಟ್ರೀಯ ಬ್ಯಾಂಕುಗಳು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ಸ್ಪರ್ಧಾತ್ಮಕ ಟೆಂಡರ್ ಕಂ. ಇ–ಹರಾಜು ಪ್ರಕ್ರಿಯೆ ಮೂಲಕ ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು **http://www.kppp.karnataka.gov.in** ವೆಬ್‌ಸೈಟ್‌ನ ಇಂಡೆಂಟ್ ಸಂಖ್ಯೆ: **APMC/2025-26/AUCTION112** ರಲ್ಲಿ ಮತ್ತು ಕಛೇರಿ ದಿನಗಳಂದು, ಕಛೇರಿ ಸಮಯದಲ್ಲಿ ಕಛೇರಿ ಮುಖ್ಯಸ್ಥರ ಮೊಬೈಲ್ ಸಂಖ್ಯೆ: 9036484002ಗೆ ಸಂಪರ್ಕಿಸಿ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **27.02.2026 ಆಗಿರುತ್ತದೆ.**

ಸಹಿ/–
ವೆಂಕಟೇಶ್.ಜಿ.ಕೆ
ವ್ಯವಸ್ಥಾಪಕ ಸಂಪಾದಕರು, ಕೃಷಿಪೇಟೆ, ಹುಬ್ಬಳ್ಳಿ.
ವಾಸಾಸಂಇ/ಧಾ/ದಿಶಾ/1241/2025–26

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಪ್ರಾದೇಶಿಕ ಕಛೇರಿ: ಶೆಡ್ ನಂ. ಎ–99, 3ನೇ ಮುಖ್ಯರಸ್ತೆ, 2ನೇ ಹಂತ ಪೀಣ್ಯ, ಬೆಂಗಳೂರು–560 058, ದೂ: 9900306365, e-mail: khdcsilk@gmail.com
ಸಂಖ್ಯೆ:ಕಕೈಅನಿನಿ/2025–26/IND0027(2ನೇ ಕರೆ) ದಿನಾಂಕ: 17.02.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ–2ನೇ ಕರೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆಹೆಚ್‌ಡಿಸಿಎಲ್)ರವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಗಳ ಅಧಿನಿಯಮದಡಿ 1999 ಹಾಗೂ ನಿಯಮನುಸಾರ 2000ರನ್ವಯ **ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ನೋಂದಾಯಿತ ಪ್ರತಿಷ್ಠಿತ ರೇಷ್ಮೆ ರೀಲರ್ಸ್ ಟ್ವಿಸ್ಟರ್ಸ್ ಮತ್ತು ರೇಷ್ಮೆ ಟ್ರೇಡರ್ಸ್‌ಗಳಿಂದ** ವಿವಿಧ ನಮೂನೆಯ **2500 ಕೆ.ಜಿ ರೇಷ್ಮೆ ನೂಲು** ಸರಬರಾಜಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಕಮರ್ಷಿಯಲ್ ಬಿಡ್‌ಗಳು) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಅಂತರ್ಜಾಲದಲ್ಲಿ (**https://kppp.karnataka.gov.in**) ಟೆಂಡರನ್ನು ಆಹ್ವಾನಿಸಲಾಗಿದೆ. **ದಿನಾಂಕ:24.02.2026 ಸಂಜೆ 5.30 ಘಂಟೆಯೊಳಗೆ** ಟೆಂಡರ್‌ಗಳನ್ನು ಸಲ್ಲಿಸಬೇಕು.
ಟೆಂಡರ್‌ಗಳನ್ನು ಯಾವುದೇ ಸೂಚನೆಯಿಲ್ಲದೆ ಪೂರ್ತಿ ಅಥವಾ ಭಾಗಶ: ಪರಿಗಣಿಸುವ ಅಥವಾ ತಿರಸ್ಕರಿಸುವ ಪರಿಮಿತಿ/ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

ಸಹಿ/–
ವ್ಯವಸ್ಥಾಪಕರು ಉತ್ಪಾದನೆ (ರೇಷ್ಮೆ)
ವಾಸಾಸಂಇ/ವಾಪ್ರ/ಜೆಎ/5668/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ ಎ' ಮಾನ್ಯತೆ, ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಸಂಖ್ಯೆ.ಇ.ಒ/ಎಸ್.ಪಿ.ಒ/ಕೆಪಿಪಿಪಿ/17/2025–26 ದಿನಾಂಕ: 12–02–2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳು ಸರಬರಾಜು ಮಾಡಲು ಕೆ.ಜಿ.–1, ಕೆ.ಜಿ–2, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 26.02.2026ರ ಸಂಜೆ 4:00 ಘಂಟೆಯವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 28.02.2026ರ ಬೆಳಿಗ್ಗೆ 10:30 ಕ್ಕೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 04.03.2026ರ ಬೆಳಿಗ್ಗೆ 10:30ಕ್ಕೆ. ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. **ಸೂಚನೆ:** ಯಾವುದೇ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಚೇರಿಯನ್ನು, ಕಚೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ: **91-8046010000, + 91-8068948777 support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **23630128** ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು
DIPR/CP/RO5697/AAPL/2025-26

ಶಾಲಾ ಶಿಕ್ಷಣ ಇಲಾಖೆ
ನಿರ್ದೇಶಕರ ಕಛೇರಿ, ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್, ನೃಪತುಂಗ ರಸ್ತೆ, ಬೆಂಗಳೂರು–01, ಇ–ಮೇಲ್: mdmskarnataka@gmail.com
ಸಂ: ಎ05/ಪಿಎಂಪಿ/ಪೌ.ಅ/2025–26/ಇ–1693821 ದಿನಾಂಕ: 17.02.2026

ಪ್ರಕಟಣೆ

ಪಿಎಂ ಪೋಷಣ್ ನಿರ್ದೇಶಕರ ಕಛೇರಿಗೆ **ಒಬ್ಬರು ಪೌಷ್ಠಿಕ ಅಧಿಕಾರಿಯನ್ನು** 3 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕಾಗಿದೆ. ಮಾಸಿಕ ಕ್ರೋಢೀಕೃತ ಸಂಭಾವನೆ **ರೂ. 90,000/–.**
ವಿದ್ಯಾರ್ಹತೆ: ಅಂಗೀಕೃತ ಶಿಕ್ಷಣ ಸಂಸ್ಥೆ/ ವಿಶ್ವವಿದ್ಯಾಲಯದಿಂದ ಗೃಹ ವಿಜ್ಞಾನ (ಆಹಾರ ಮತ್ತು ಪೌಷ್ಠಿಕಾಂಶ)ದಲ್ಲಿ ಮಾಸ್ಟರ್ಸ್ ಪದವಿ (ಪಿಜಿ) ಅಥವಾ ವಿಜ್ಞಾನ ಮತ್ತು ಸಂಬಂಧಪಟ್ಟ ವಿಜ್ಞಾನ ವಿಷಯದಲ್ಲಿ ಮಾಸ್ಟರ್ಸ್ ಪದವಿ (ಪಿಜಿ) ಪಡೆದಿರಬೇಕು ಅಥವಾ ಅಂಗೀಕೃತ ಶಿಕ್ಷಣ ಸಂಸ್ಥೆ/ ವಿಶ್ವವಿದ್ಯಾಲಯದಿಂದ ನ್ಯೂಟ್ರಿಷನ್‌ನಲ್ಲಿ ಸರ್ಟಿಫೈಡ್ ಡಿಪ್ಲೊಮಾ/ ಸಾರ್ವಜನಿಕ ಆರೋಗ್ಯ ನ್ಯೂಟ್ರಿಷನ್‌ನಲ್ಲಿ ಡಿಪ್ಲೊಮಾ/ ಗೃಹ ವಿಜ್ಞಾನದಲ್ಲಿ ಸ್ನಾತಕ ಪದವಿ ಪಡೆದಿರಬೇಕು.
ಅನುಭವ: ಯಾವುದೇ ಆರೋಗ್ಯ ಸಂಸ್ಥೆಯಲ್ಲಿ ಪೌಷ್ಠಿಕ ತಜ್ಞರಾಗಿ ಅಥವಾ ಪೌಷ್ಠಿಕಾಂಶ ಶಿಕ್ಷಣ ಸಂಸ್ಥೆಯಲ್ಲಿ ಬೋಧನಾ ಪ್ರಾಧ್ಯಾಪಕರಾಗಿ 3 ವರ್ಷಗಳ ಅನುಭವ ಹೊಂದಿರಬೇಕು. ಪಿಎಚ್.ಡಿ ಪಡೆದಿರುವ ಮತ್ತು ಪಿಎಂ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯಲ್ಲಿ ಕಾರ್ಯ ನಿರ್ವಹಿಸಿರುವ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಅರ್ಹ ಮತ್ತು ಅನುಭವವುಳ್ಳ ಅಭ್ಯರ್ಥಿಗಳು ಸಂಬಂಧಪಟ್ಟ ದಾಖಲಾತಿಗಳೊಂದಿಗೆ **ದಿನಾಂಕ 27.02.2026 ರಂದು** ಅಥವಾ ಅದಕ್ಕಿಂತ ಮುಂಚಿತವಾಗಿ ಇ–ಮೇಲ್ ಅಥವಾ ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದು.

ಸಹಿ/– ನಿರ್ದೇಶಕರು, ಪಿಎಂ ಪೋಷಣ್ ಶಕ್ತಿ ನಿರ್ಮಾಣ್,
ನೃಪತುಂಗ ರಸ್ತೆ, ಬೆಂಗಳೂರು–01

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ
Pho: 08194-234488 Email:-eerdwsd.chd@gmail.com
ನಂ. ಗ್ರಾ.ನೀ.ಸ.&ನೈವಿ/ತಾಂಶಾ/ಸ್ವಭಾಕೋ/2025–26/1195 ದಿನಾಂಕ:17.02.2026

ಕೊಟೇಷನ್ ಪ್ರಕಟಣೆ

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಚಿತ್ರದುರ್ಗ ವ್ಯಾಪ್ತಿಯ ಹಿರಿಯೂರು ತಾಲ್ಲೂಕಿನ ಧರ್ಮಪುರ ಗ್ರಾಮದಲ್ಲಿ 300KLD ಮತ್ತು ಹೊಸದುರ್ಗ ತಾಲ್ಲೂಕಿನ ಬೆಲಗೂರು ಗ್ರಾಮದಲ್ಲಿ 600KLD ಗ್ರಾಮದಲ್ಲಿ ಸ್ವಚ್ಛ ಭಾರತ್ ಕೋಷ್ ಯೋಜನೆಯಡಿ ಬೂದು ನೀರು ಹಾಗೂ ಮಲ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ನೂತನ ತಾಂತ್ರಿಕತೆಯನ್ನು ಒಳಗೊಂಡಿರುವ Absolute Vermi Filter Technology for Sewage Treatment ಘಟಕಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದರಿಂದ, ಸದರಿ 02 ಕಾಮಗಾರಿಗಳ ವಿಸ್ತ್ರತ ಯೋಜನಾ ವರದಿಗಳನ್ನು ತಯಾರಿಸುವ ಸಲುವಾಗಿ Absolute Vermi Filter ಘಟಕಕ್ಕೆ ಅವಶ್ಯಕವಿರುವ ಕೆಲವು ಐಟಂಗಳ ದರಗಳು ದರಪಟ್ಟಿಯಲ್ಲಿ ಲಭ್ಯವಿಲ್ಲದ ಪ್ರಯುಕ್ತ ದರಗಳನ್ನು ಪಡೆಯಲು ಕೊಟೇಷನ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಆದುದರಿಂದ ಅವಶ್ಯಕವಿರುವ ಐಟಂಗಳ ವಿವರವನ್ನು ಈ ಕಛೇರಿಯಿಂದ ಪಡೆಯತಕ್ಕದ್ದು. ಕೊಟೇಷನ್ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ:21.02.2026, ಮೊಹರಾದ ಲಕೋಟೆಯಲ್ಲಿ ಕೊಟೇಷನ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ:23.02.2026ರಂದು ಸಂಜೆ5.00ಗಂಟೆ. ಹಾಗೂ ನಮೂದಿಸುವ ದರಗಳು ಜಿ.ಎಸ್.ಟಿ, ಸರಕು ಸಾಗಾಣೆ ಹಾಗೂ ಇತರೆ ವೆಚ್ಚಗಳನ್ನು ಒಳಗೊಂಡಿರುತ್ತಕ್ಕದ್ದು.

DIPR/CTA/KSMCA/677/2025-26
ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2025–26/3745
ದಿನಾಂಕ : 16–02–2026

ಕೆಪಿಪಿ ಪೋರ್ಟಲ್ ಅಲ್ಪಾವಧಿ ಟೆಂಡರ ಪ್ರಕಟಣೆ
Standard Bid Document KW-3

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-3 ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 3 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2023–24 ನೇ ಸಾಲಿನ 5054 ಮಾನ್ಯ ಮುಖ್ಯಮಂತಿಗಳ ವಿಶೇಷ ಯೋಜನೆ, 2024–25 ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ 5054 ಯೋಜನೆಯಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.
Indent Nos : 1) WORK_INDENT : 16653/CALL-3, 16730/CALL-3, 16701/CALL-2,

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **62.95** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **75.11** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **17–02–2026** ರಿಂದ **04–03–2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **05–03–2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ,
ವಾಸಾಸಂಇ/ಗದಗ/ಕೆಎಸ್‌ಎಂಸಿಎ/652/2025–26 ಗದಗ

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಜಿಲ್ಲಾ ಪಂಚಾಯತಿ, ವಿಜಯಪುರ
ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಡಾ॥ ಬಿ.ಆರ್.ಅಂಬೇಡ್ಕರ ಕ್ರೀಡಾಂಗಣ ವಿಜಯಪುರ–586101.
ದೂರವಾಣಿ/ಫ್ಯಾಕ್ಸ್ ಸಂ:08352–251085
ಸಂ: ಸನಿವಿ/ಯುಸೇಕ್ರೀಇ/ಕ್ರೀ.ಸಾ/2025–26 ದಿನಾಂಕ:17.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025–26 ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ತರಬೇತಿ ಪಡೆಯುತ್ತಿರುವ ಕ್ರೀಡಾಪಟುಗಳಿಗೆ ದೈನಂದಿನ ತರಬೇತಿಗೆ ಅವಶ್ಯವಿರುವ ಕ್ರೀಡಾ ಸಾಮಗ್ರಿಗಳ ಪೂರೈಕೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ಅನ್ವಯ ಅರ್ಹ ಪೂರೈಕೆದಾರರಿಂದ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ https/Eproc.karnataka.gov.in ನಲ್ಲಿ ಹಾಗೂ ಕಚೇರಿಯ ದೂರವಾಣಿ ಸಂಖ್ಯೆ: 08352–251085 ಗೆ ಸಂಪರ್ಕಿಸಲು ಕೋರಲಾಗಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24.02.2026
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26.02.2026
ಸ್ಯಾಂಪಲ್ ಸಲ್ಲಿಸಲು ಕೊನೆಯ ದಿನಾಂಕ: 23.02.2026
ಆರ್ಥಿಕ ಬಿಡ್ ತೆರೆಯುವ ದಿನಾಂಕ: ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರ
ಟೆಂಡರಿನ ಒಟ್ಟು ಮೊತ್ತ ರೂ. 6,80,000/–.
ಇ.ಎಂ.ಡಿ ಮೊತ್ತ ರೂ. 17,000/–,
ಟೆಂಡರ್ ಅವಧಿ: 90 ದಿನಗಳು

ಸಹಿ/– ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಿಜಯಪುರ
ವಾಸಾಸಂಇ/ವಿಜಯಪುರ/714/ಕೆಎಸ್‌ಎಂಸಿಎ/2025–26

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಟಿಇಸಿ, ವಲಯ 1 ಮತ್ತು 2, ಬೆಂಗಳೂರು ಪಶ್ಚಿಮ ನಗರ ಪಾಲಿಕೆ 19ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010
ಸಂಖ್ಯೆ: ಬೆಂ.ಪ.ನ.ಪಾ/ಕಾಪಾಅ/ಟಿಇಸಿ/ಟೆಂಡರ್/06/2025–26 ದಿನಾಂಕ: 16–02–2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾಯಪಾಲಕ ಅಭಿಯಂತರರು, ಟಿಇಸಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆ (ಬೆಂ.ಪ.ನ.ಪಾ) ಇವರು ಆಯುಕ್ತರ ಪರವಾಗಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯೊಳಗೆ ಗುರುತಿಸಿರುವ ರಸ್ತೆಗಳನ್ನು ಇತ್ತೀಚಿನ ಯಾಂತ್ರೀಕೃತ ರಸ್ತೆಗಳಲ್ಲಿ ಕಸ ಗುಡಿಸುವ ಯಂತ್ರಗಳನ್ನು ಪ್ರತಿ ಕಿಲೋಮೀಟರ್ ಆಧಾರದಲ್ಲಿ ಬಾಡಿಗೆ, ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡಲು ಅರ್ಹ ಮತ್ತು ಅನುಭವವುಳ್ಳ, ಖಾಸಗಿ ಆಪರೇಟರ್‌ಗಳಿಂದ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ವಿವರಣೆ
1	ಬೆಂಗಳೂರು ಪಶ್ಚಿಮ ನಗರ ಪಾಲಿಕೆ (ವಲಯ 1 ಮತ್ತು 2) ವ್ಯಾಪ್ತಿಯಲ್ಲಿ 10 ವಾಹನಗಳಿಗೆ ಪ್ರತಿ ಕಿಲೋಮೀಟರ್ ಪಾವತಿ ಆಧಾರದಲ್ಲಿ ಮಾನವಶಕ್ತಿ, ಇಂಧನ, ನಿರ್ವಹಣೆ ಮತ್ತು ಎಲ್ಲಾ ಬಳಕೆ ವಸ್ತುಗಳನ್ನು ಒಳಗೊಂಡಂತೆ 400 ಕಿಲೋಮೀಟರ್ ಉದ್ದದ ರಸ್ತೆಗಳ ಕಸ ಗುಡಿಸಲು 5 ಕ್ಯೂಬಿಕ್ ಮೀಟರ್ ಸೆಕ್ಷನ್ ಸಾಮರ್ಥ್ಯಕ್ಕಿಂತ ಕಡಿಮೆಯಿಲ್ಲದ ಇತ್ತೀಚಿನ ಯಾಂತ್ರಿಕೃತ ಕಸ ಗುಡಿಸುವ ಯಂತ್ರಗಳನ್ನು ಬಾಡಿಗೆಗೆ ನೀಡುವುದು, ಕಾರ್ಯಾಚರಣೆ ಮತ್ತು ನಿರ್ವಹಣೆ ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ)₹.96,33,55,680.00 ಇಎಂಡಿ ಮೊತ್ತ ₹.1,00,000/– ಇ–ಪಾವತಿ ಮೂಲಕ ಈ ಕೆಳಕಂಡತೆ ಪಾವತಿಸುವುದು ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಒಟಿಸಿ ಮತ್ತು ಉಳಿಕೆ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ಗಳು ನೀಡುವ ₹.95,50,000/– ಇ–ಬ್ಯಾಂಕ್ ಗ್ಯಾರಂಟಿ/ಬ್ಯಾಂಕ್ ಗ್ಯಾರಂಟಿ /ಎಫ್‌ಡಿಆರ್ ಮೂಲಕ.

ಟೆಂಡರ್ ವೇಳಾಪಟ್ಟಿ: (1) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **23–02–2026**ರ ಸಂಜೆ **4:00** ಗಂಟೆಯವರೆಗೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **26–02–2026**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **18–03–2026**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ:**24–03–2026**ರ ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್‌ಗಳನ್ನು ದಿನಾಂಕ: **25–03–2026**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಟಿಇಸಿ ವಿಭಾಗ
ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ವಲಯ–2, ಮಲ್ಲೇಶ್ವರಂ ವಿಭಾಗ, 2ನೇ ಅಡ್ಡರಸ್ತೆ, ಜಲದರ್ಶಿನಿ ಲೇಔಟ್, ಎಂಎಸ್‌ಆರ್ ನಗರ, ಮತ್ತಿಕೆರೆ, ಬೆಂಗಳೂರು – 560054.
ಸಂಖ್ಯೆ: ಕಾಅ/ಎಂಎಲ್‌ಎಂ/ಕೆಪಿಪಿಪಿ/15/2025–26 ದಿನಾಂಕ: 17–02–2026

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗ, ವಲಯ–2, ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬೆಂಪನಪಾಲಿಕೆಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿಸಿರುವ ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ಸ್ – ಕೆಡಬ್ಲ್ಯೂ–3 ಮತ್ತು ಕೆಡಬ್ಲ್ಯೂ–4)

ಕ್ರ ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ಸುಬ್ರಹ್ಮಣ್ಯನಗರದ ವಾರ್ಡ್ ಸಂಖ್ಯೆ. 59 (ಓಲ್ಡ್ 66) ರಲ್ಲಿನ ಸುಬ್ರಹ್ಮಣ್ಯನಗರ ಸುತ್ತಮುತ್ತ ಸಮಗ್ರ ಅಭಿವೃದ್ಧಿ ಕೆಲಸಗಳ ಕಾಮಗಾರಿ. **(ಇತರೆ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 95.61, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,00,000/–**
2	ಮಲ್ಲೇಶ್ವರದ ವಾರ್ಡ್ ಸಂಖ್ಯೆ. 55 (ಓಲ್ಡ್ 45) ರಲ್ಲಿನ ಅಟಲ್‌ಜೀ ಉದ್ಯಾನವನದಲ್ಲಿ ಹೊಸ ಬಿಬಿಎಂಪಿ ಕಟ್ಟಡ ನಿರ್ಮಾಣ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 74.02, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,48,100/–**
3	ಮತ್ತಿಕೆರೆಯ ವಾರ್ಡ್ ಸಂಖ್ಯೆ. 54 (ಓಲ್ಡ್ 36) ರಲ್ಲಿನ ರಸ್ತೆಗಳಲ್ಲಿ ಮರು ಡಾಂಬರೀಕರಣದ ವಾರ್ಷಿಕ ನಿರ್ವಹಣೆ ಕಾಮಗಾರಿ. **(ಇತರೆ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 68.57, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,37,200/–**
4	ಮಲ್ಲೇಶ್ವರಂ ಉಪ ವಿಭಾಗದ ವಾರ್ಡ್ ಸಂಖ್ಯೆ. 57 (ಓಲ್ಡ್ 64) – ರಾಜ್‌ಮಹಲ್ ಗುಟ್ಟಹಳ್ಳಿ, ವಾರ್ಡ್ ಸಂಖ್ಯೆ. 58 (ಓಲ್ಡ್ 65) – ಕಾಡು ಮಲ್ಲೇಶ್ವರ, ವಾರ್ಡ್ ಸಂಖ್ಯೆ. 59 (ಓಲ್ಡ್ 66) – ಸುಬ್ರಹ್ಮಣ್ಯನಗರ ಮತ್ತು ವಾರ್ಡ್ ಸಂಖ್ಯೆ. 60 (ಓಲ್ಡ್ 76) – ಗಾಯತ್ರಿನಗರದಲ್ಲಿ ಗುಂಡಿ ತುಂಬುವ ಕಾಮಗಾರಿ. **(2ನೇ ಕರೆ) – (ಎಸ್.ಟಿ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 64.54, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 64,600/–**
5	ಮಲ್ಲೇಶ್ವರಂ ಉಪ ವಿಭಾಗದ ಮಲ್ಲೇಶ್ವರಂ 16ನೇ ಅಡ್ಡರಸ್ತೆಯಲ್ಲಿರುವ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಕಟ್ಟಡದಲ್ಲಿ ಹೆಚ್ಚುವರಿ ಕೆಲಸದ ದುರಸ್ತಿ ಮತ್ತು ನವೀಕರಣದ ಕಾಮಗಾರಿ. **(ಇತರೆ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 53.29, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,06,600/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **21–02–2026 ರಂದು 16.30 ಗಂಟೆಯ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **25–02–2026 ರಂದು 16.00 ಗಂಟೆಗೆ.** 3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **27–02–2026 ರಂದು 16.30 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **02–03–2026 ರಂದು 12.00 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ಕೆ.ಪಿ.ಪಿ. ಪೋರ್ಟಲ್ ಮೂಲಕ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಲ್ಲೇಶ್ವರಂ ವಿಭಾಗ, ವಲಯ–2, ಬೆಂಪನಪಾ.

ಪ್ಲಗ್ ಬೇಡ ಸಾಕೆಟ್ ಬೇಡ ‘ವೈರ್‌ಲೆಸ್’ ವಿದ್ಯುತ್

• ಪೃಥ್ವಿರಾಜ್

ಯಾವುದೇ ವೈರ್ ಅಥವಾ ತಂತಿ ಇಲ್ಲದೇ ಮೊಬೈಲ್‌ಫೋನ್‌ಗೆ ಈಗ ಧ್ವನಿತರಂಗಗಳು ಪ್ರಸರಣವಾಗುತ್ತಿವೆ. ಯಾವುದೇ ಕೇಬಲ್‌ಗಳ ನೆರವಿಲ್ಲದೆ ವೈ-ಫೈ ತಂತ್ರಜ್ಞಾನದ ಮೂಲಕ ಒಮ್ಮೆಲೇ ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್‌ಫೋನ್‌ಗಳಿಗೆ ಇಂಟರ್‌ನೆಟ್ ಸಂಪರ್ಕ ಸುಲಭವಾಗಿ ಸಿಗುತ್ತಿದೆ. ಅದೇ ರೀತಿ ಯಾವುದೇ ತಂತಿಗಳನ್ನು ಬಳಸದೆ ವಿದ್ಯುತ್ತನ್ನು ಗಾಳಿಯ ಮೂಲಕ ಪೂರೈಸುವ ತಂತ್ರಜ್ಞಾನಕ್ಕೆ ಬೀಜವನ್ನು ಬಿತ್ತಿ ಫಿನ್ಲೆಂಡ್ ಜಗತ್ತಿನ ಗಮನ ಸೆಳೆಯುತ್ತಿದೆ. ಕೇಬಲ್‌ಗಳು, ಸಾಕೆಟ್‌ಗಳು ಅಥವಾ ಯಾವುದೇ ಕನೆಕ್ಟರ್‌ಗಳಿಲ್ಲದೆ ವಿದ್ಯುತ್ ಪೂರೈಸುವ ‘ವೈರ್‌ಲೆಸ್ ವಿದ್ಯುತ್ ಪ್ರಸರಣ’ ಕ್ಷೇತ್ರದಲ್ಲಿ ಫಿನ್ನಿಶ್ ವಿಜ್ಞಾನಿಗಳು ಜಗತ್ತು ನಿಬ್ಬೆರಗಾಗುವ ಕ್ರಾಂತಿಯನ್ನು ಮಾಡುತ್ತಿದ್ದಾರೆ. ಖ್ಯಾತ ವಿಜ್ಞಾನಿ ಮತ್ತು ಸಂಶೋಧಕ ನಿಕೋಲಸ್ ಟೆಸ್ಲಾ ಅವರ ಕನಸನ್ನು ಸಾಕಾರಗೊಳಿಸುವ ಕಾರ್ಯಕ್ಕೆ ಅಡಿಯಿಟ್ಟಿದ್ದಾರೆ.

ಹೇಗೆ ಕೆಲಸ ಮಾಡುತ್ತದೆ?

ಸಾಮಾನ್ಯವಾಗಿ ವಿದ್ಯುತ್ ಪೂರೈಕೆಗೆ ದೊಡ್ಡ ಗಾತ್ರದ ತಂತಿಗಳು ಮತ್ತು ಕೇಬಲ್‌ಗಳ ಅಗತ್ಯವಿರುತ್ತದೆ. ಆದರೆ ಫಿನ್ಲೆಂಡ್‌ನ ವಿಜ್ಞಾನಿಗಳು ಅಲ್ಟ್ರಾಸಾನಿಕ್ ಅಲೆಗಳು (Ultrasonic Waves) ಮತ್ತು ಲೇಸರ್ ತಂತ್ರಜ್ಞಾನವನ್ನು ಬಳಸಿಕೊಂಡು ತಂತಿ ಇಲ್ಲದೆಯೇ ವಿದ್ಯುತ್ತನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕೆ ‘ಅಕೌಸ್ಟಿಕ್ ವೈರ್’ (Acoustic Wire) ಎಂದು ಕರೆಯಲಾಗುತ್ತದೆ. ಈ ತಂತ್ರಜ್ಞಾನದಲ್ಲಿ ಕಣ್ಣಿಗೆ ಕಾಣಿಸದ ಅಲೆಗಳ ಮೂಲಕ ವಿವಿಧ ಸಾಧನಗಳಿಗೆ ವಿದ್ಯುತ್ ಪೂರೈಕೆಯಾಗುತ್ತದೆ.

ಈ ವೈರ್‌ಲೆಸ್ ವಿದ್ಯುತ್ ತತ್ವ ಸರಳ. ವೈ-ಫೈ ತಂತ್ರಜ್ಞಾನ ಹೇಗೆ ಕಾರ್ಯನಿರ್ವಹಿಸುತ್ತದೆಯೋ ಅದೇ ರೀತಿ ವಿದ್ಯುತ್ಕಾಂತೀಯ ಕ್ಷೇತ್ರಗಳ ಮೂಲಕ ವಿದ್ಯುತ್ ವರ್ಗಾಯಿಸಲಾಗುತ್ತದೆ. ವಿಜ್ಞಾನಿಗಳು ಮುಖ್ಯವಾಗಿ ‘ರೆಸೋನೆಂಟ್ ಕಪ್ಲಿಂಗ್’ (Resonant Coupling) ಮತ್ತು ‘ಮ್ಯಾಗ್ನೆಟಿಕ್ ಇಂಡಕ್ಷನ್’ (Magnetic Induction) ತಂತ್ರಜ್ಞಾನದ ಮೇಲೆ ಕೆಲಸ ಮಾಡುತ್ತಿದ್ದಾರೆ. ಆಲ್ಟೊ ಮತ್ತು ಹೆಲ್ಸಿಂಕಿ ವಿಶ್ವವಿದ್ಯಾಲಯದ ಸಂಶೋಧಕರು ಈ ತಂತ್ರಜ್ಞಾನದ ಶಕ್ತಿವ್ಯಯದ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದಾರೆ.

ಲಾಭಗಳು

ವೈ-ಫೈ ಮಾದರಿಯ ವಿದ್ಯುತ್: ಈ ತಂತ್ರಜ್ಞಾನ ಅಭಿವೃದ್ಧಿಯಾದರೆ ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಮತ್ತು ಮನೆಯ ವಿದ್ಯುತ್ ಉಪಕರಣಗಳನ್ನು ಚಾರ್ಜ್ ಮಾಡಲು ಪ್ಲಗ್ ಅಥವಾ ಕೇಬಲ್‌ಗಳ ಅಗತ್ಯವಿರುವುದಿಲ್ಲ; ವೈ-ಫೈ ವ್ಯಾಪ್ತಿಯಲ್ಲಿರುವ ಸಾಧನಗಳು ತಾನಾಗಿಯೇ ಚಾರ್ಜ್ ಆಗಲಿವೆ!

ಆಘಾತ ಸಾಧ್ಯತೆ ಕಡಿಮೆ: ವಿದ್ಯುತ್ ತಂತಿಗಳಿಲ್ಲದ ಕಾರಣ ಶಾರ್ಟ್ ಸರ್ಕೀಟ್ ಅಥವಾ ವಿದ್ಯುತ್ ಸ್ಪರ್ಶದಿಂದ ಸಂಭವಿಸುವ ಸಾವು-ನೋವುಗಳು ಕಡಿಮೆಯಾಗುತ್ತವೆ.

ನಿರ್ವಹಣೆ ಸುಲಭ: ಭೂಗತ ಕೇಬಲ್ ಅಥವಾ ವಿದ್ಯುತ್ ಕಂಬಗಳ ಅವಶ್ಯಕತೆ ಇಲ್ಲದಿರುವುದರಿಂದ ಮೂಲಸೌಕರ್ಯದ ವೆಚ್ಚ ಗಣನೀಯವಾಗಿ ಇಳಿಕೆಯಾಗಲಿದೆ.

ವೈರ್‌ಗಳ ಮುಕ್ತಿ: ರಸ್ತೆಗಳಲ್ಲಿ ಮತ್ತು ಮನೆಗಳಲ್ಲಿ ಜೇಡರ ಬಲೆಯಂತೆ ಹರಡಿರುವ ವೈರ್‌ಗಳ ಅಗತ್ಯವಿರುವುದಿಲ್ಲ. ಇದರಿಂದ ವಿದ್ಯುತ್ ಶಾರ್ಟ್ ಸರ್ಕೀಟ್ ಅಪಘಾತಗಳು ಕಡಿಮೆಯಾಗುತ್ತವೆ.

ಇ-ತ್ಯಾಜ್ಯ ಇಳಿಕೆ: ಪ್ರತಿಯೊಂದು ಸಾಧನಕ್ಕೂ ಬೇರೆ ಬೇರೆ ಚಾರ್ಜರ್‌ಗಳು ಬೇಕಾಗಿಲ್ಲದ ಕಾರಣ ಪ್ಲಾಸ್ಟಿಕ್ ಮತ್ತು ಲೋಹದ ತ್ಯಾಜ್ಯ ಕಡಿಮೆಯಾಗುತ್ತದೆ.

ನಿರಂತರ ಪೂರೈಕೆ: ಎಲೆಕ್ಟ್ರಿಕ್ ವಾಹನಗಳು (EV) ರಸ್ತೆಯಲ್ಲಿ ಚಲಿಸುತ್ತಿರುವಾಗಲೇ ಚಾರ್ಜ್ ಆಗುವಂತೆ ಮಾಡಬಹುದು. ಇದರಿಂದ ವಾಹನ ನಿಲ್ಲಿಸಿ ಚಾರ್ಜ್ ಮಾಡುವ ಸಮಯ ಉಳಿಯುತ್ತದೆ.

ಮಿತಿಗಳು

ದೂರದ ಮಿತಿ: ಪ್ರಸ್ತುತ ಇದು ಕಡಿಮೆ ದೂರಕ್ಕೆ ಮಾತ್ರ ಸೀಮಿತವಾಗಿದೆ. ದೂರ ಹೆಚ್ಚಾದಂತೆ ಶಕ್ತಿಯ ಸಾಮರ್ಥ್ಯ ಕುಸಿಯುತ್ತದೆ.

ಸಾಂಪ್ರದಾಯಿಕ ಗ್ರಿಡ್‌ಗೆ ಪರ್ಯಾಯವಲ್ಲ: ಇದು ಈಗಿರುವ ವಿದ್ಯುತ್ ಕಂಬ ಮತ್ತು ತಂತಿಗಳ ವ್ಯವಸ್ಥೆಯನ್ನು ಪೂರ್ಣವಾಗಿ ಬದಲಿಸಲು ಸಾಧ್ಯವಿಲ್ಲ. ಬದಲಾಗಿ, ಅವುಗಳಿಗೆ ಪೂರಕವಾಗಿ ಕೆಲಸ ಮಾಡಲಿದೆ.

ದಕ್ಷತೆ: ವೈರ್‌ಲೆಸ್ ವಿದ್ಯುತ್ ತಂತ್ರಜ್ಞಾನದಲ್ಲಿ ದೊಡ್ಡ ಸವಾಲೆಂದರೆ ‘ದಕ್ಷತೆ’ (Efficiency). ವೈರ್ ಮೂಲಕ ವಿದ್ಯುತ್ ಹರಿಯುವಾಗ ಆಗುವ ನಷ್ಟಕ್ಕಿಂತ, ಗಾಳಿಯಲ್ಲಿ ಹರಿಯುವಾಗ ಹೆಚ್ಚಿನ ವಿದ್ಯುತ್ ವ್ಯಯವಾಗುತ್ತದೆ.

ಆರೋಗ್ಯದ ಮೇಲೆ ಪರಿಣಾಮ: ಜೀವಿಗಳ ಅಂಗಾಂಗಳ ಮೇಲೆ ಈ ವಿದ್ಯುತ್ಕಾಂತೀಯ ಅಲೆಗಳ ಪರಿಣಾಮದ ಬಗ್ಗೆಯೂ ಸಂಶೋಧನೆ ನಡೆಯುತ್ತಿದೆ. ವಿದ್ಯುತ್ ಶಕ್ತಿ ಕಣ್ಣಿಗೆ ಕಾಣದಿದ್ದರೂ ಅದರ ಪ್ರಭಾವ ಇರುವ ಸಾಧ್ಯತೆ ಬಗ್ಗೆ ಹಲವರಲ್ಲಿ ಆತಂಕ ಇದೆ. ಈಗಾಗಲೇ ಹಲವರು ಮೊಬೈಲ್‌ಫೋನ್ ಸಿಗ್ನಲ್‌ಗಳು ಬೀರುತ್ತಿರುವ ಪರಿಣಾಮಗಳ ಬಗ್ಗೆಯೂ ಚರ್ಚೆ ಮಾಡುತ್ತಿದ್ದಾರೆ. ಹೀಗಾಗಿ ಈ ಹೊಸ ತಂತ್ರಜ್ಞಾನದ ಬಗ್ಗೆ ಆತಂಕ ಸಹಜ.

ಟೆಸ್ಲಾ ಕನಸು

ವೈರ್‌ಲೆಸ್ ವಿದ್ಯುತ್ ಹೊಸ ಪರಿಕಲ್ಪನೆಯೇನಲ್ಲ. ಸುಮಾರು 100 ವರ್ಷಗಳ ಹಿಂದೆ ಖ್ಯಾತ ವಿಜ್ಞಾನಿ ನಿಕೋಲಾ ಟೆಸ್ಲಾ ಅವರು ‘ಟೆಸ್ಲಾ ಕಾಯಿಲ್’ ಮೂಲಕ ಗಾಳಿಯಲ್ಲಿ ವಿದ್ಯುತ್ ಹರಿಸುವ ಪ್ರಯತ್ನ ಮಾಡಿದ್ದರು. ತಾಂತ್ರಿಕ ಮಿತಿಗಳಿಂದ ಅಂದು ಅದು ಸಾಧ್ಯವಾಗದಿದ್ದರೂ, ಇಂದು ಆಧುನಿಕ ವಿಜ್ಞಾನ ಆ ಕನಸನ್ನು ನನಸಾಗಿಸುತ್ತಿದೆ.

ಭವಿಷ್ಯ

ಈ ನವೀನ ತಂತ್ರಜ್ಞಾನ ತಕ್ಷಣವೇ ಇಡೀ ವಿದ್ಯುತ್ ವ್ಯವಸ್ಥೆಯನ್ನು ಬದಲಿಸದಿದ್ದರೂ, ಮುಂಬರುವ ವರ್ಷಗಳಲ್ಲಿ ಮಹತ್ತರ ಬದಲಾವಣೆ ತರಲಿದೆ. ಈಗಾಗಲೇ ದೂರದ ಪ್ರದೇಶಗಳಿಗೆ ವೈರ್‌ಲೆಸ್ ಮೂಲಕ ವಿದ್ಯುತ್ ಕಳುಹಿಸುವ ಪ್ರಯೋಗಗಳು ಯಶಸ್ವಿಯಾಗಿವೆ. ಮುಂದಿನ ಒಂದು ದಶಕದಲ್ಲಿ ನಮ್ಮ ಮನೆಯ ಗೋಡೆಗಳಲ್ಲಿ ಪ್ಲಗ್ ಪಾಯಿಂಟ್‌ಗಳೇ ಇರುವುದಿಲ್ಲ! ನಾವು ರೂಮಿನೊಳಗೆ ಕಾಲಿಟ್ಟ ಕೂಡಲೇ ನಮ್ಮ ಮೊಬೈಲ್ ಮತ್ತು ಲ್ಯಾಪ್‌ಟಾಪ್‌ಗಳು ತಂತಾನೇ ಚಾರ್ಜ್ ಆಗುವ ಕಾಲ ದೂರವಿಲ್ಲ. ವೈದ್ಯಕೀಯ ಇಂಪ್ಲಾಂಟ್‌ಗಳು, ಸೆನ್ಸಾರ್‌ಗಳು ಮತ್ತು ಕೈಗಾರಿಕಾ ವ್ಯವಸ್ಥೆಗಳಲ್ಲಿ ಮಹತ್ವದ ಬದಲಾವಣೆ ತರಬಹುದು. ವಿಶೇಷವಾಗಿ, ವೈರಿಂಗ್ ಅಸಾಧ್ಯ ಎನಿಸುವಂತಹ ಪ್ರದೇಶಗಳಲ್ಲಿ ಇದು ತುಂಬಾ ಉಪಯುಕ್ತ.

ಸೈಬರ್ ಜೀವಿಗಳಿಗೆ ಒಲಿದೀತೆ ಕಣ್ಣು

• ಕೊಳ್ಳೇಗಾಲ ಶರ್ಮ

ರೋಬೋಟ್‌ಗಳಿಗೆ ಕ್ಯಾಮೆರಾಗಳಿಗೆ ಬದಲಾಗಿ ಮನುಷ್ಯರ ಕಣ್ಣಿನಂತೆಯೇ ಬೆಳಕಿಗೆ ಸ್ಪಂದಿಸುವ ಕೃತಕ ಸಾಧನವನ್ನು ಜೋಡಿಸಬಹುದೇ?

ಕವಿ ಲಕ್ಷ್ಮಣರಾಯರು ‘ಸುಬ್ಬಾಭಟ್ಟರೆ’ ಕವನದಲ್ಲಿ ರಾತ್ರಿಯಾಕಾಶವನ್ನು ಚಿಕ್ಕೆ ಮೂಗುತಿ, ಚಂದ್ರಪದಕ, ನೀಹಾರಿಕೆಯ ಹಾರ ಇರುವ ಜಿಗಿ, ಜಿಗಿ ಒಡವೆ ದುಕಾನು ಎಂದೆಲ್ಲ ವರ್ಣಿಸಿದ್ದಾರೆ. ವೇಲೆಂಟೈನ್ ದಿನದಲ್ಲಿ ನಮಗೆ, ನಿಮಗೆಲ್ಲ ಆಕಾಶ ಹಾಗೆಯೇ ತೋರಿರಬಹುದು. ಆದರೆ ಎಷ್ಟೇ ಪ್ರಬಲ ಕೃತಕ ಬುದ್ಧಿಮತ್ತೆ ಇರುವ ರೋಬೋಟಿಗೂ ರಾತ್ರಿಯಾಕಾಶ ಕೇವಲ ಕಪ್ಪು, ಕಪ್ಪು! ಇದಕ್ಕೆ ಕಾರಣ ಅದರ ಕ್ಯಾಮೆರಾ–ಕಣ್ಣು. ರೋಬೋಟ್‌ಗಳ ಕಣ್ಣು ನಮ್ಮದರಂತೆ ಕಡಿಮೆ ಅಥವಾ ಹೆಚ್ಚು ಬೆಳಕಿಗೆ ಸರಾಗವಾಗಿ ಒಗ್ಗಿಕೊಳ್ಳುವುದಿಲ್ಲ. ರಾತ್ರಿಯ ಚಿಕ್ಕೆಗಳು ಅವಕ್ಕೆ ತೋರಲು ಬಹಳ ಹೊತ್ತು ಬೇಕು. ಬೆಳಗಿನ ಪ್ರಖರ ಬೆಳಕಿನಲ್ಲಿಯೂ ಸ್ಪಷ್ಟವಾಗಿ ಎಲ್ಲವೂ ಗೋಚರಿಸುವುದಿಲ್ಲ. ಇನ್ನು ಮುಂದೆ ರೋಬೋಟ್‌ಗಳೂ ಸುಬ್ಬಾಭಟ್ಟರ ಕವನದ ಸೌಂದರ್ಯವನ್ನು ಸವಿಯುವಂತೆ ಮಾಡುವ ಸಾಧನವೊಂದು ಸಿದ್ಧವಾಗುತ್ತಿದೆಯಂತೆ. ನಮ್ಮ ಕಣ್ಣುಗಳಂತೆಯೇ ಬೆಳಕಿನ ಪ್ರಖರತೆಗೆ ತಕ್ಕಂತೆ ಹೊಂದಿಕೊಳ್ಳಬಲ್ಲ ಕ್ಯಾಮೆರಾದ ಎಲೆಕ್ಟ್ರಾನಿಕ್ ಪಟಲಗಳನ್ನು ಅಮೆರಿಕದ ನಾರ್ತ್ ಕೆರೊಲಿನಾ ವಿ.ವಿ.ಯ ಎಲೆಕ್ಟ್ರಾನಿಕ್ ತಂತ್ರಜ್ಞ ವುಬಿನ್ ಬಾಯ್ ಮತ್ತು ಸಂಗಡಿಗರು ಸಿದ್ಧಪಡಿಸಿದ್ದಾರೆ.

ಕಣ್ಣಿನ ಪಟಲದ ಬಗ್ಗೆ ನಿಮಗೆ ಗೊತ್ತಿರಬೇಕು; ನಮ್ಮ ಕಣ್ಣಿಗೆ ಬಣ್ಣ ಕೊಡುವುದೇ ಅದು. ನೀಲಿಯೋ ಕಪ್ಪೋ ಕಂದೋ, ಕಣ್ಣಿನ ಸೌಂದರ್ಯಕ್ಕೆ ಹೊರಗೆ ಇರುವ ರೆಪ್ಪೆ ಹಾಗೂ ಹುಬ್ಬುಗಳಂತೆಯೇ ಒಳಗೆ ಗುಡ್ಡೆಯಲ್ಲಿರುವ ಈ ಬಣ್ಣದ ಪರದೆಯೂ ಕಾರಣ. ಕಣ್ಣಿನ ಕ್ಷಮತೆಗೂ ಅದು ಸಾಕಷ್ಟು ಕೊಡುಗೆಯನ್ನು ನೀಡುತ್ತದೆ. ಕಣ್ಣಿನೊಳಗೆ ಹರಿಯುವ ಬೆಳಕನ ಪ್ರವಾಹವನ್ನು ನಿಯಂತ್ರಿಸುವ ವಾಲ್ವ್ ಅದು. ಹೊರಗೆ ಪ್ರಖರವಾದ ಬೆಳಕಿದ್ದಾಗ ಕಿರಿದಾಗಿ, ಬೇಕಿದ್ದಷ್ಟೆ ಬೆಳಕನ್ನು ಒಳಗೆ ಬಿಡುತ್ತದೆ. ಹೊರಗಡೆ ಕಾರ್ಗತ್ತಲು ಕವಿದಿದ್ದಾಗ, ದೊಡ್ಡದಾಗಿ ಅರಳಿಕೊಂಡು ಹೆಚ್ಚು ಬೆಳಕು ಒಳನುಸುಳುವಂತೆ ನೆರವಾಗುತ್ತದೆ. ಈ ವಾಲ್ವ್ ಇರುವುದರಿಂದಲೆ ಪ್ರಖರ ಬೆಳಕಿನಲ್ಲಿಯೂ ನಮ್ಮ ಕಣ್ಣಿನೊಳಗಿನ ಅಕ್ಷಿಪಟಲ ಸುಟ್ಟು ಹೋಗುವುದಿಲ್ಲ. ಅಥವಾ ಕಗ್ಗತ್ತಲಿನಲ್ಲಿ ನಾವು ಸಂಪೂರ್ಣ ಅಂಧರೂ ಆಗುವುದಿಲ್ಲ. ಕತ್ತಲಿನಿಂದ ಇದ್ದಕ್ಕಿದ್ದ ಹಾಗೆ ಬೆಳಕಿಗೆ ಬಂದಿರೆನ್ನಿ, ತಟಕ್ಕನೆ ಈ ಪಟಲ ಮುದುರಿಕೊಂಡು, ಬೆಳಕು ಕಣ್ಣನ್ನು ಕೋರೈಸದಂತೆ ತಡೆಯುತ್ತದೆ. ಇದ್ದಕ್ಕಿದ್ದ ಹಾಗೆ ದೀಪ ಆರಿದಾಗ, ಕ್ಷಣ ಹೊತ್ತಿನಲ್ಲಿಯೇ ಅಗಲಿಸಿಕೊಂಡು, ಹೆಚ್ಚು ಬೆಳಕನ್ನು ಒಳಬಿಡುತ್ತದೆ. ಸುತ್ತಲಿನ ಪರಿಸರ ಮಸುಕಾಗಿಯಾದರೂ ಗೋಚರಿಸುವಂತೆ ಮಾಡುತ್ತದೆ.

ಪಾಪ! ರೋಬೋಟುಗಳ ಕಣ್ಣುಗಳಿಗೆ, ಅರ್ಥಾತ್, ಕ್ಯಾಮೆರಾಗಳಿಗೆ ಇಂತಹ ಪಟಲದ ಸೌಕರ್ಯ ಇರಲಿಲ್ಲ. ಇದೀಗ ವುಬಿನ್ ಬಾಯ್ ತಂಡ ಮನುಷ್ಯರ ಕಣ್ಣನ್ನೇ ಮಾದರಿಯನ್ನಾಗಿಟ್ಟುಕೊಂಡು ವಿಶಿಷ್ಟ ವಸ್ತುವೊಂದನ್ನು ರೂಪಿಸಿದೆ. ಮೆತ್ತನೆಯ ದ್ರವ, ವಿದ್ಯುತ್ ಹರಿಯುವ ಲೋಹದ ತಂತುಗಳು, ಪಾಲಿಮರ್‌ನ ಪೊರೆಯನ್ನೇ ಬಳಸಿಕೊಂಡು ಮನುಷ್ಯರ ಕಣ್ಣಿನಂತೆಯೇ ಹಿಗ್ಗಿ, ಕುಗ್ಗಬಲ್ಲ ಎಲೆಕ್ಟ್ರಾನಿಕ್ ಪಟಲವನ್ನು ರೂಪಿಸಿದೆ. ರೋಬೋಟ್‌ಗಳ ಕಣ್ಣು, ಸ್ಮಾರ್ಟ್ ಫೋನು, ಎಲೆಕ್ಟ್ರಾನಿಕ್ ಕ್ಯಾಮೆರಾಗಳ ಲೆನ್ಸುಗಳು ನಮ್ಮ ಕಣ್ಣುಗಳಂತೆಯೇ ಬೆಳಕಿನ ಪ್ರಖರತೆಗೆ ಹೊಂದಿಕೊಳ್ಳುವಂತೆ ಇದು ಮಾಡಬಲ್ಲುದಂತೆ.

ಕ್ಯಾಮೆರಾವನ್ನು ಕಣ್ಣಿಗೋ, ಕಣ್ಣನ್ನು ಕ್ಯಾಮೆರಾಗೋ ಹೋಲಿಸುವುದು ಅಭ್ಯಾಸ. ಬೆಳಕಿನಿಂದ ಬಿಂಬ ಮೂಡಿಸುವ ಲೆನ್ಸು, ಹಾಗೂ ಬಿಂಬವನ್ನು ವಿದ್ಯುತ್ ಅನ್ನಾಗಿಸುವ ಬಿಂಬಗ್ರಾಹಿ ವ್ಯವಸ್ಥೆ – ಎರಡೇ ಇವೆರಡರಲ್ಲೂ ಇರುವ ಹೋಲಿಕೆ. ಕ್ಯಾಮೆರಾವಿನ ಬಿಂಬಗ್ರಾಹಿ ಹಿಂದೆ ಬೆಳಕು ಬಿದ್ದಾಗ ರಾಸಾಯನಿಕವಾಗಿ ಬದಲಾಗುವ ಫಿಲ್ಮುಗಳಾಗಿದ್ದುವು. ಈಗ ಎಲೆಕ್ಟ್ರಾನಿಕ್ ಪರದೆಗಳಾಗಿವೆ. ಕಣ್ಣಿನಲ್ಲಿ ಇದು ನರಕೋಶಗಳ ಪರದೆ. ಕಣ್ಣಿನ ಲೆನ್ಸು ಪ್ರೋಟೀನಿನದ್ದು. ಕ್ಯಾಮೆರಾದಲ್ಲಿ ಗಾಜಿನದ್ದು. ಇವೆರಡರ ನಡುವೆ ಇದ್ದ ಪ್ರಮುಖ ವ್ಯತ್ಯಾಸ ಎಂದರೆ ಪಾಪೆ. ಲೆನ್ಸಿನ ಮುಂದೆ ಇರುವ ನಡುವೆ ರಂಧ್ರವಿರುವ ಪರದೆ. ಪಾಪೆ ಹಿಗ್ಗಿ ಕುಗ್ಗಿದಾಗ ಈ ರಂಧ್ರದ ಗಾತ್ರ ಬದಲಾಗುವುದರಿಂದ ಕಣ್ಣಿನೊಳಗೆ ನುಸುಳುವ ಬೆಳಕಿನ ಪ್ರಮಾಣ ಬದಲಾಗುತ್ತದೆ.

ವುಬಿನ್ ಬಾಯ್ ತಂಡ ಇದೀಗ ಇಂತಹ ಪಾಪೆ ಇರುವ ಕೃತಕ–ಕಣ್ಣನ್ನು ಸೃಷ್ಟಿಸಿದೆ. ಈ ಕಣ್ಣಿನ ಬಿಂಬಗ್ರಾಹಿ ಪರದೆಯೂ ನಮ್ಮ ಕಣ್ಣಿನಂತೆಯೇ ಅರೆಗೋಲ. ಕ್ಯಾಮೆರಾದಲ್ಲಿ ಅದು ಸಪಾಟಾಗಿರುವುದರಿಂದ ಚಿತ್ರಗಳ ಅಂಚು ಮಸುಕಾಗಿರುತ್ತದೆ. ನ್ಯಾನೊಕಾರ್ಬನ್‌ಗಳ ಜೊತೆಗೆ ಯಿಟ್ರಿಯಂ ಲೋಹ ಮತ್ತು ಇಂಡಿಯಂ ಆಕ್ಸೈಡುಗಳಿಂದ ಮಾಡಿದ ಈ ಪದರ ಬೆಳಕು ಬಿದ್ದ ಕೂಡಲೇ ಎಲೆಕ್ಟ್ರಾನುಗಳನ್ನು ಸುರಿಸುತ್ತದೆ; ಬಿಂಬಗ್ರಾಹಿಯಾಗುತ್ತದೆ. ವಿಶೇಷ ಎಂದರೆ ನಮಗೆ ಕಾಣದ ಅಲ್ಟ್ರಾವಯಲೆಟ್ ಬೆಳಕನ್ನೂ ಇದು ಗ್ರಹಿಸಬಲ್ಲುದು. ಇದನ್ನು ಗ್ಯಾಲಿಯಂ ಇಂಡಿಯಂ ಲೋಹದ ತಂತುಗಳೊಂದಿಗೆ ಬೆಸೆದಿದ್ದಾರೆ. ಈ ತಂತುಗಳು ಎಲೆಕ್ಟ್ರಾನುಗಳನ್ನು ಕಣ್ಣಿನಲ್ಲಿರುವ ನರಕೋಶಗಳಂತೆ ಕೊಂಡೊಯ್ಯುತ್ತವೆ. ಬೆಳಕು ಹೆಚ್ಚಿದೆಯೋ ಕಡಿಮೆಯೋ ಎನ್ನುವುದನ್ನು ಇವು ಪಾಪೆಗೆ ಹೊಂದಿಸಿರುವ ಎಲೆಕ್ಟ್ರಾನಿಕ್ ಸರ್ಕೀಟಿಗೆ ತಿಳಿಸುತ್ತವೆ. ಅದು ಈ ಮಾಹಿತಿಯನ್ನು ಬಳಸಿಕೊಂಡು ಥೇಟ್ ಕಣ್ಣಿನಲ್ಲಿ ಆಗುವಂತೆಯೇ ಪಾಪೆಯನ್ನು ಹಿಗ್ಗಿಸಿ, ಕುಗ್ಗಿಸಿ ಬೆಳಕಿನ ಪ್ರವಾಹವನ್ನು ನಿಯಂತ್ರಿಸುತ್ತದೆಯಂತೆ.

ವುಬಿನ್ ಬಾಯ್ ತಂಡ ಈ ಪಾಪೆಯನ್ನು ದ್ರವಲೋಹ ಎಂದು ಕರೆದಿದೆ. ಗ್ಯಾಲಿಯಂ ಮತ್ತು ಇಂಡಿಯಂ ಲೋಹಗಳ ಮಿಶ್ರಲೋಹದ ಸೂಕ್ಷ್ಮ ತಂತಿಗಳು ಹಾಗೂ ರಬ್ಬರಿನಂತಹ ಪಾಲಿಡೈಮೀಥೈಲ್ ಸಿಲೋಕ್ಸೇನ್ ವಸ್ತುಗಳು ಈ ಪಾಪೆಯಲ್ಲಿವೆ. ಸಿಲೋಕ್ಸೇನಿನಿಂದ ಮಾಡಿದ ತೆಳುವಾದ ಪೊರೆಯೊಳಗೆ ತಂತಿಗಳನ್ನು ನಿರ್ದಿಷ್ಟ ವಿನ್ಯಾಸದಲ್ಲಿ ಅಳವಡಿಸಲಾಗಿದೆ. ಈ ತಂತಿಗಳು ವಿದ್ಯುತ್ ಹರಿದಾಗ ಕುಗ್ಗಿಯೂ, ಇಲ್ಲದಾಗ ಸ್ವಸ್ಥಿತಿಯಲ್ಲಿಯೂ ಇರಬಲ್ಲವು. ಈ ಪಾಪೆಯ ಮಧ್ಯೆ ಬೆಳಕು ಹೋಗುವಂತೆ ಲೆನ್ಸನ್ನು ಇಟ್ಟಿದ್ದಾರೆ. ತಂತಿಗಳನ್ನು ಲಾಜಿಕ್ ಸರ್ಕೀಟಿಗೆ ಹೊಂದಿಸಲಾಗಿದೆ. ಹೀಗೆ ಬಿಂಬಗ್ರಾಹಿಯಿಂದ ಬರುವ ಬೆಳಕಿನ ಮಾಹಿತಿ ಪಾಪೆಯ ಉದ್ದಗಲಗಳನ್ನು ನಿಯಂತ್ರಿಸುತ್ತದೆ. ತನ್ಮೂಲಕ ಬೆಳಕಿನ ಪ್ರಮಾಣವನ್ನೂ ನಿಯಂತ್ರಿಸುತ್ತದೆ.

ವುಬಿನ್ ಬಾಯ್ ತಂಡ ಈ ಪಟಲವಿರುವ ಕೃತಕ ನೇತ್ರವನ್ನು ಪರೀಕ್ಷೆಗೊಡ್ಡಿತ್ತು. ವಿವಿಧ ಅಕ್ಷರಗಳನ್ನು ಅದರ ಮುಂದಿಟ್ಟು, ಚಿತ್ರ ತೆಗೆದಿತ್ತು. ವಿವಿಧ ಬೆಳಕಿನ ತರಂಗಾಂತರ ಹಾಗೂ ಪ್ರಖರತೆಯಲ್ಲಿ ಈ ಪರೀಕ್ಷೆಗಳು ನಡೆದಿದ್ದುವು. ಕೀಟಗಳ ಕಣ್ಣಿನಂತೆ ಇದು ಯುವಿ ಬೆಳಕಿಗೂ ಸ್ಪಂದಿಸುತ್ತದೆ; ಹಾಗೆಯೇ ನಮ್ಮಂತೆ ಕಾಮನಬಿಲ್ಲನ್ನೂ ಕಾಣುತ್ತದೆಯಂತೆ. ಅಷ್ಟೇ ಅಲ್ಲ, ಗ್ಯಾಲಿಯಂ-ಇಂಡಿಯಂ ಮಿಶ್ರಲೋಹದ ತಂತುಗಳನ್ನು ವಿವಿಧ ವಿನ್ಯಾಸದಲ್ಲಿ ಜೋಡಿಸಿ, ಬೆಕ್ಕು, ಕಪ್ಪೆ, ಮೇಕೆ, ಹದ್ದುಗಳ ಕಣ್ಣುಗಳ ಪಾಪೆಗಳನ್ನೂ ಇವರು ರಚಿಸಿದ್ದಾರೆ. ಎಂದರೆ ಇಷ್ಟೆ, ಇನ್ನು ಮುಂದೆ ರೋಬೋಟ್ ಮನುಷ್ಯನ ಕಣ್ಣೇ ಬೇರೆ, ರೋಬೋಟ್ ಬೆಕ್ಕಿನದ್ದೇ ಬೇರೆ. ಇದೀಗ ಇವೆಲ್ಲದರದ್ದೂ ದುಂಡಗೆ ಒಂದೇ ತೆರನಾದ ಕ್ಯಾಮೆರಾ ಆಗಿರುತ್ತಿತ್ತು.

ಈ ಕಣ್ಣುಗಳು ಕಾರ್ಖಾನೆಗಳಲ್ಲಿ ಉತ್ಪನ್ನಗಳ ಪರೀಕ್ಷೆಗೆ, ಆಸ್ಪತ್ರೆಗಳಲ್ಲಿ ಅಂಗಗಳ ಪರೀಕ್ಷೆಗೆ, ಮತ್ತು ಸೈಬರ್‌ಜೀವಿ, ಅರ್ಥಾತ್, ಯಂತ್ರಜೀವಿಗಳ ಕಣ್ಣುಗಳಲ್ಲಿ ಬಳಕೆಗೆ ಉಪಯುಕ್ತ ಎಂದು ಬಾಯ್ ತಂಡ ಆಶಿಸಿದೆ. ಇವರ ಆಶಯ ನಿಜವಾದಲ್ಲಿ ಸೈಬರ್‌ಜೀವಿಗಳೂ ರಾತ್ರಿಯ ಒಡವೆ ದುಕಾನನ್ನು ಕಂಡು ಖುಷಿ ಪಡಬಹುದು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

46) ಭೌತ ಮತ್ತು ರಾಸಾಯನಿಕ ಗುಣಗಳ ಆಧಾರದ ಮೇಲೆ ಎಥನಾಲ್ ಮತ್ತು ಎಥನೋಯಿಕ್ ಆಮ್ಲಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ

ಉತ್ತರ

ಎಥನಾಲ್	ಎಥನೋಯಿಕ್ ಆಮ್ಲ
ಭೌತ ಗುಣ	
* ಕೊಠಡಿ ಉಷ್ಣತೆಯಲ್ಲಿ ದ್ರವರೂಪದಲ್ಲಿರುತ್ತದೆ. ಮತ್ತು ಘಾಟು(ಆಲ್ಕೋಹಾಲ್) ವಾಸನೆಯಿಂದ ಕೂಡಿರುತ್ತದೆ.	ಇದು ಕೂಡಾ ಕೊಠಡಿಯ ಉಷ್ಣತೆಯಲ್ಲಿ ದ್ರವರೂಪದಲ್ಲಿದ್ದು ಸುವಾಸನೆಯಿಂದ ಕೂಡಿರುತ್ತದೆ.
ಇದು ಉತ್ತಮ ದ್ರಾವಕ	ಇದನ್ನು ಉತ್ತಮ ಸಂಗ್ರಾಹಕವಾಗಿ ಬಳಸುವರು. ಉದಾ:– ಉಪ್ಪಿನ ಕಾಯಿ ಸಂರಕ್ಷಕವಾಗಿ ಬಳಸುವರು
ರಾಸಾಯನಿಕ ಗುಣ	
ಎಥನಾಲ್ ಸೋಡಿಯಂ ನೊಂದಿಗೆ ವರ್ತಿಸಿ ಸೋಡಿಯಂ ಎಥಕ್ಸೈಡ್ ಉಂಟು ಮಾಡುತ್ತದೆ.	ಎಥನೋಯಿಕ್ ಆಮ್ಲವು ಸೋಡಿಯಂನೊಂದಿಗೆ ವರ್ತಿಸಿ ಸೋಡಿಯಂ ಎಥನೋಯೇಟ್ ಅನ್ನು ಉಂಟು ಮಾಡುತ್ತದೆ.
ಎಥನಾಲ್ ಇದು ಕಾರ್ಬೋನೇಟ್ ಮತ್ತು ಹೈಡ್ರೋಜನ್ ಕಾರ್ಬೋನೇಟ್‌ಗಳೊಂದಿಗೆ ವರ್ತಿಸುವುದಿಲ್ಲ	ಎಥನೋಯಿಕ್ ಆಮ್ಲವು ಕಾರ್ಬೋನೇಟ್ ಮತ್ತು ಹೈಡ್ರೋಜನ್ ಕಾರ್ಬೋನೇಟ್‌ಗಳೊಂದಿಗೆ ವರ್ತಿಸಿ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರನ್ನು ಅನ್ನು ಬಿಡುಗಡೆ ಮಾಡುತ್ತದೆ

47) ಮಾನವನ ಶ್ವಾಸಕೋಶ ಚಿತ್ರ ಬರೆದು, ಅದರ ರಚನೆ ಮತ್ತು ಕಾರ್ಯ ನಿರ್ವಹಣೆಯನ್ನು ವಿವರಿಸಿ

ಉತ್ತರ:– ಮನುಷ್ಯರಲ್ಲಿ (ಚಿತ್ರ ನೋಡಿ) ಮೂಗಿನ ಹೊಳ್ಳೆಗಳ ಮೂಲಕ ಗಾಳಿ ಒಳ ತೆಗೆದುಕೊಳ್ಳಲ್ಪಡುತ್ತದೆ. ಮೂಗಿನ ಹೊಳ್ಳೆಯೊಳಗೆ ಹಾದು ಹೋಗುವ ಗಾಳಿಯು ಹೊಳ್ಳೆಯ ಒಳದಾರಿಯಲ್ಲಿರುವ ಸೂಕ್ಷ್ಮ ಕೂದಲುಗಳಿಂದ ಸೋಸಲ್ಪಡುತ್ತದೆ. ಹೊಳ್ಳೆಯ ಒಳದಾರಿಯು ಲೋಳೆಯಿಂದ ಕೂಡಾ ಆವರಿಸಿದೆ. ಇದೂ ಈ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.



ಇಲ್ಲಿಂದ ಗಾಳಿಯು ಗಂಟಲಿನ ಮೂಲಕ ಶ್ವಾಸಕೋಶದೊಳಗೆ ಚಲಿಸುತ್ತದೆ. ಗಂಟಲಿನಲ್ಲಿ ಮೃದ್ವಸ್ಥಿಯ ಉಂಗುರಗಳಂಥ ರಚನೆಗಳಿವೆ. ಇವುಗಳು ಗಾಳಿ ಹಾದುಹೋಗುವ ರಚನೆ ಕುಸಿಯದಂತೆ ನೋಡಿಕೊಳ್ಳುತ್ತವೆ. ಚಿತ್ರದಲ್ಲಿರುವಂತೆ ಮಾನವನ ಶ್ವಾಸಕಾಂಗವ್ಯೂಹ ಶ್ವಾಸನಾಳವು ಶ್ವಾಸಕೋಶದೊಳಗೆ ಅತಿಸಣ್ಣ ನಳಿಕೆಗಳಾಗಿ ವಿಭಜನೆ ಹೊಂದಿ ಅಂತಿಮವಾಗಿ ಬಲೂನಿನಂತಹ ರಚನೆಗಳಾಗಿ ಬದಲಾಗುತ್ತವೆ. ಅವುಗಳನ್ನು ಗಾಳಿಗೂಡುಗಳು ಎನ್ನುವರು. ಈ ಗಾಳಿಗೂಡುಗಳು ಒಂದು ಮೇಲ್ಮೈಯನ್ನು ಒದಗಿಸುತ್ತವೆ. ಅಲ್ಲಿ ಅನಿಲಗಳ ವಿನಿಮಯ ನಡೆಯುತ್ತದೆ. ಗಾಳಿಗೂಡುಗಳ ಗೋಡೆಯು ವಿಶಾಲ ವ್ಯಾಪ್ತಿಯ ರಕ್ತನಾಳಗಳ ಜಾಲವನ್ನು ಹೊಂದಿವೆ. ನಾವು ಗಾಳಿಯನ್ನು ಒಳತೆಗೆದುಕೊಂಡಾಗ ನಮ್ಮ ಪಕ್ಕೆಲುಬುಗಳು ಮೇಲಕ್ಕೆ ಏರುತ್ತವೆ ಮತ್ತು ವಪೆಯು ಚಪ್ಪಟೆಗೊಳ್ಳುತ್ತದೆ. ಇದರ ಪರಿಣಾಮವಾಗಿ ಎದೆಗೂಡು ದೊಡ್ಡದಾಗುತ್ತದೆ. ಇದರಿಂದಾಗಿ ಗಾಳಿಯು ಶ್ವಾಸಕೋಶದೊಳಗೆ ಹೀರಲ್ಪಡುತ್ತದೆ ಮತ್ತು ಹಿಗ್ಗಿದ ಗಾಳಿಗೂಡುಗಳನ್ನು ತುಂಬುತ್ತದೆ. ರಕ್ತವು ದೇಹದ ಇತರ ಭಾಗಗಳಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ಗಾಳಿಗೂಡುಗಳಲ್ಲಿ ಬಿಡುಗಡೆ ಮಾಡಲು ತರುತ್ತದೆ ಮತ್ತು ಆಲ್ವಿಯೋಲಾರ್ ಗಾಳಿಯಲ್ಲಿರುವ ಆಕ್ಸಿಜನ್‌ಅನ್ನು ಆಲ್ವಿಯೋಲಾರ್ ರಕ್ತನಾಳಗಳಲ್ಲಿರುವ ರಕ್ತವು ದೇಹದ ಎಲ್ಲಾ ಜೀವಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ. ಉಸಿರಾಟ ಚಕ್ರದ ಸಮಯದಲ್ಲಿ ಗಾಳಿಯನ್ನು ಒಳತೆಗೆದುಕೊಂಡು ಹೊರಬಿಡುವಾಗ ಶ್ವಾಸಕೋಶಗಳು ಯಾವಾಗಲೂ ಸ್ವಲ್ಪ ಪ್ರಮಾಣದ ಗಾಳಿಯನ್ನು ಉಳಿಸಿಕೊಂಡಿರುತ್ತವೆ. ಆದ್ದರಿಂದ, ಆಕ್ಸಿಜನ್‌ಅನ್ನು ಹೀರಿಕೊಳ್ಳಲು ಮತ್ತು ಕಾರ್ಬನ್ ಡೈಆಕ್ಸೈಡ್‌ಅನ್ನು ಬಿಡುಗಡೆ ಮಾಡಲು ಸಾಕಷ್ಟು ಸಮಯ ಇರುತ್ತದೆ.

ಪ್ರಾಣಿಗಳ ದೇಹದ ಗಾತ್ರವು ದೊಡ್ಡದಾಗಿದ್ದಾಗ ವಿಸರಣಾ ಒತ್ತಡವೊಂದೇ ದೇಹದ ಎಲ್ಲಾ ಭಾಗಗಳಿಗೆ ಆಕ್ಸಿಜನ್ ಪೂರೈಸುವ ಜವಾಬ್ದಾರಿಯನ್ನು ನಿರ್ವಹಿಸಲಾರದು. ಬದಲಾಗಿ ಉಸಿರಾಟದ ವರ್ಣಕಗಳು ಶ್ವಾಸಕೋಶದಲ್ಲಿನ ಗಾಳಿಯಿಂದ ಆಕ್ಸಿಜನ್‌ಅನ್ನು ಪಡೆಯುತ್ತವೆ ಮತ್ತು ಬಿಡುಗಡೆ ಮಾಡುವ ಮೊದಲು ಆಕ್ಸಿಜನ್ ಕೊರತೆಯಿರುವ ಅಂಗಾಂಶಗಳಿಗೆ ಕೊಂಡೊಯ್ಯುತ್ತವೆ. ಮನುಷ್ಯರಲ್ಲಿ ಹಿಮೋಗ್ಲೋಬಿನ್ ಉಸಿರಾಟದ ವರ್ಣಕವಾಗಿದ್ದು ಅದು ಆಕ್ಸಿಜನ್‌ನೆಡೆಗೆ ಹೆಚ್ಚಿನ ಆಕರ್ಷಣೆಯನ್ನು ಹೊಂದಿದೆ. ಈ ವರ್ಣಕವು ಕೆಂಪು ರಕ್ತ ಕಣಗಳಲ್ಲಿರುತ್ತದೆ. ಆಕ್ಸಿಜನ್‌ಗಿಂತ ಕಾರ್ಬನ್ ಡೈಆಕ್ಸೈಡ್ ಹೆಚ್ಚಾಗಿ ನೀರಿನಲ್ಲಿ ಕರಗುತ್ತದೆ ಮತ್ತು ಬಹುತೇಕ ಇದರಿಂದಾಗಿ ನಮ್ಮ ರಕ್ತದಲ್ಲಿ ವಿಲೀನಗೊಂಡ ರೂಪದಲ್ಲಿ ಸಾಗಿಸಲ್ಪಡುತ್ತದೆ.

48) ಮಿಶ್ರ ಲೋಹದ ಬಗ್ಗೆ ಬರೆಯಿರಿ

ಉತ್ತರ:– ಮಿಶ್ರಲೋಹವು ಎರಡು ಅಥವಾ ಹೆಚ್ಚು ಲೋಹ ಅಥವಾ ಲೋಹ–ಅಲೋಹಗಳ ಸಮರೂಪದ ಮಿಶ್ರಣವಾಗಿದೆ. ಇದನ್ನು ಮೊದಲು ಪ್ರಾಥಮಿಕ ಲೋಹವನ್ನು ಕರಗಿಸಿ ನಂತರ ನಿರ್ದಿಷ್ಟ ಅನುಪಾತದಲ್ಲಿ ಬೇರೆ ಧಾತುಗಳನ್ನು ವಿಲೀನಗೊಳಿಸಿ ತಯಾರಿಸಲಾಗುತ್ತದೆ.

ಮಿಶ್ರಲೋಹಗೊಳಿಸುವಿಕೆಯು ಲೋಹದ ಗುಣಗಳನ್ನು ಹೆಚ್ಚಿಸಬಲ್ಲ ಒಂದು ಉತ್ತಮ ವಿಧಾನವಾಗಿದೆ. ಇದರಿಂದ ನಮಗೆ ಬೇಕಾದ ಗುಣಗಳನ್ನು ಪಡೆಯಬಹುದು. ಉದಾಹರಣೆಗೆ, ಕಬ್ಬಿಣವು ಅತ್ಯಂತ ವ್ಯಾಪಕವಾಗಿ ಬಳಸುವ ಲೋಹ. ಆದರೆ ಇದನ್ನು ಶುದ್ಧರೂಪದಲ್ಲಿ ಎಂದಿಗೂ ಉಪಯೋಗಿಸಲು ಸಾಧ್ಯವಿಲ್ಲ. ಕಾರಣ ಶುದ್ಧ ಕಬ್ಬಿಣವು ತುಂಬಾ ಮೃದುವಾಗಿರುತ್ತದೆ ಮತ್ತು ಉಷ್ಣತೆ ನೀಡಿದಾಗ ಸುಲಭವಾಗಿ ಹಿಗ್ಗುತ್ತದೆ. ಆದರೆ ಇದಕ್ಕೆ ಸ್ವಲ್ಪ ಕಾರ್ಬನ್‌ಅನ್ನು (0.05%) ಸೇರಿಸಿದರೆ ಗಟ್ಟಿ ಮತ್ತು ಬಲಯುತವಾಗುತ್ತದೆ. ಕಬ್ಬಿಣಕ್ಕೆ ನಿಕ್ಕಲ್ ಮತ್ತು ಕ್ರೋಮಿಯಂ ಅನ್ನು ಸೇರಿಸಿದರೆ ಕಲೆರಹಿತ ಉಕ್ಕನ್ನು ಪಡೆಯಬಹುದು. ಇದು ಗಟ್ಟಿಯಾಗಿರುತ್ತದೆ ಮತ್ತು ತುಕ್ಕು ಹಿಡಿಯುವುದಿಲ್ಲ. ಹಾಗೆಯೇ ಕಬ್ಬಿಣವನ್ನು ಬೇರೆ ವಸ್ತುಗಳ ಜೊತೆ ಮಿಶ್ರಗೊಳಿಸಿದರೆ ಅದರ ಗುಣದಲ್ಲಿ ಬದಲಾವಣೆಯಾಗುತ್ತದೆ. ವಾಸ್ತವವಾಗಿ, ಕೆಲವು ವಸ್ತುಗಳ ಮಿಶ್ರಣದಿಂದ ಯಾವುದೇ ಲೋಹದ ಗುಣಗಳನ್ನು ಬದಲಾಯಿಸಬಹುದು. ಸೇರಿಸುವ ವಸ್ತುವು ಲೋಹ ಅಥವಾ ಅಲೋಹವಾಗಿರಬಹುದು.

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION : MODEL QUESTIONS

41. Name the sugar present in milk. How many monosaccharide units are present in it? What are such oligosaccharides called?

Ans: (i) Lactose sugar is present in the milk.
(ii) There are two saccharide units present in the milk: glucose and galactose.
(iii) Such oligosaccharides are called disaccharides.

42. Which of the compounds will react faster in S_N1 reaction with the "OH" ion?
CH_3-CH_2-Cl or C_6H_5-CH_2-Cl

Ans: In the rate-determining phase of the S_N1 reaction, a carbocation intermediate is initially generated. The benzyl carbocation is resonance stabilised in benzyl chloride.

In the case of ethyl chloride or chloroethane, however, the $CH_3CH_2^+$ carbocation can only have a hyper-conjugation effect. It is less stable in comparison. As a result, in the S_N1 reaction, benzyl chloride reacts faster with the OH ion than ethyl chloride.

43. Explain the magnetic properties or paramagnetic property of transition elements.

Ans: Most of the transition metals and their compounds are paramagnetic (slightly attracted by the magnet).

The paramagnetism is due to the number of unpaired electrons in the d-orbitals.

The main causes of paramagnetism are orbital angular momentum and spin momentum of electron. The magnetic moment is calculated by using **spin – only formula** i.e., $\mu = \sqrt{n(n+2)}$ BM,

where μ - Magnetic moment,

B.M. – Boohr magneton, the unit of magnetic moment,

n = number of unpaired electrons.

The magnetic moment increases as the number of unpaired electrons increases.

44. a) i) Name the water insoluble component of starch.
ii) Mention one water soluble vitamin.
iii) Is Lysine an essential or non-essential amino acid?
b) Write the structure of Maltose

Ans:- a) i) The water insoluble component of starch is amylopectin.
ii) Vitamin C (or) Vitamin K.
iii) Essential amino acid.

b) Structure of Maltose



45. A carboxylic acid is treated with alcohol in presence of conc. H_2SO_4. Name the reaction. Give its general equation.

Ans:- A carboxylic acid is treated with alcohol in presence of conc. H_2SO_4.
The reaction is Esterification .
Give its general equation is –

$$R\text{-}COOH + R^1OH \rightarrow RCOOR^1 + H_2O$$

46. a) The rate of a reaction increases by 4 times when the temperature of the reaction is raised from 340 K to 360K. Calculate the energy of activation of the reaction. Given R=8.314 J/K/mol.

b) Draw a graph of potential energy versus reaction coordinate to show the effect of catalyst on activation energy.

Ans:- a) Given that – (1) the rate of a reaction increases by 4 times when the temperature of the reaction is raised from 340 K to 360 K.
(2) R = 8.314 J/K/mol.
To Calculate - the energy of activation of the reaction

$$\log\frac{k_2}{k_1} = \frac{Ea}{2.303\,R}\left[\frac{T_2 - T_1}{T_1T_2}\right]$$

$$\Rightarrow \log 4 = \frac{Ea}{2.303 \times 8.314}\left[\frac{360 - 340}{360 \times 340}\right]$$

$$\Rightarrow Ea = 70554\ J\ (or)$$
$$Ea = 70.554\ kJ$$

b) A graph of potential energy versus reaction coordinate to show the effect of catalyst on activation energy -



Reaction coordinate

47. How many series of d-block elements are known?

Ans: 4 series (namely, 3d, 4d, 5d and 6d series).

3d series or first transition series; $_{12}Sc$ to $_{30}Zn(3d^{1-10}4s^{1-2})$

4d series or second transition series; $_{39}Y$ to $_{48}Cd(4d^{1-10}5s^{1-2})$

5d series or third transition series; $_{57}La$ to $_{72}Hf - _{80}Hg(5d^{1-10}6s^{1-2})$

6d series or fourth transition series; $_{89}Ac$ to $_{104}Rb - _{111}Rg(6d^{1-10}7s^{1-2})$

48. Why does iodoform have appreciable antiseptic properties?

Ans: The antiseptic qualities of iodoform (CHI_3) are attributable to iodine, which is produced when the substance comes into contact with the skin. When Iodoform comes into touch with skin, it releases I_2. Iodine's antiseptic properties are attributable to the liberation of I_2, not iodoform itself.

49. Oxidation of ketones involves carbon-carbon bond cleavage. Name the products formed on oxidation of 2, 5-dimethyl hexane-3-one.

Ans:-

(Contd....)

‘ಪ್ರಮಾಣವಚನಕ್ಕೆ ಸೂಚಿಸಿದ್ದ ಸೋನಿಯಾ’

2014ರಲ್ಲಿ 58 ಕಾಂಗ್ರೆಸ್ ಶಾಸಕರಿಂದ ಬೆಂಬಲ ಸಿಕ್ಕಿತ್ತು–ಹಿಮಂತ ಬಿಸ್ವ ಶರ್ಮಾ

ಗುವಾಹಟಿ (ಪಿಟಿಐ): ‘2014ರಲ್ಲಿ ನಾನು ಕಾಂಗ್ರೆಸ್‌ನಲ್ಲಿದ್ದ ವೇಳೆ 58 ಶಾಸಕರು ನನ್ನನ್ನು ಬೆಂಬಲಿಸಿದ್ದರಿಂದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರಕ್ಕೆ ದಿನಾಂಕ ನಿಗದಿಪಡಿಸಲು ಕಾಂಗ್ರೆಸ್‌ನ ಆಗಿನ ಅಧ್ಯಕ್ಷೆ ಸೋನಿಯಾ ಗಾಂಧಿ ಸೂಚಿಸಿದ್ದರು’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಬಹಿರಂಗಪಡಿಸಿದ್ದಾರೆ.

ಹಿಮಂತ ಬಿಸ್ವ ಶರ್ಮಾ

‘ಆಗ ಅಮೆರಿಕದಲ್ಲಿದ್ದ ರಾಹುಲ್ ಗಾಂಧಿ ಅವರು ಪಕ್ಷದ ನಾಯಕರಿಗೆ ದೂರವಾಣಿ ಕರೆ ಮಾಡಿದ ಬಳಿಕ ಪರಿಸ್ಥಿತಿ ಬದಲಾಯಿತು’ ಎಂದು ಶರ್ಮಾ ನೆನಪಿಸಿದ್ದಾರೆ.

2011ರಲ್ಲಿ ಅಸ್ಸಾಂನ ಕಾಂಗ್ರೆಸ್ ಸರ್ಕಾರದಲ್ಲಿ ಬಂಡಾಯ ಕಾಣಿಸಿಕೊಂಡಿತ್ತು. ಬಹುಪಾಲು ಶಾಸಕರು ಆಗ ಶರ್ಮಾ ಅವರನ್ನು ಬೆಂಬಲಿಸಿ, ಗೊಗೊಯಿ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸುವಂತೆ ಒತ್ತಾಯಿಸಿದ್ದರು. ಈ ಬೆಳವಣಿಗೆ ಬಳಿಕ ಶರ್ಮಾ ಅವರನ್ನು ಮುಖ್ಯಮಂತ್ರಿ ಮಾಡಲು ಹೈಕಮಾಂಡ್ ಒಪ್ಪಿಗೆ ಸೂಚಿಸಿತ್ತು. ಕಾಂಗ್ರೆಸ್‌ನ ಆಗಿನ ಅಧ್ಯಕ್ಷೆ ಸೋನಿಯಾ ಗಾಂಧಿ ಸಮ್ಮತಿಸಿದ್ದರೂ ರಾಹುಲ್ ಗಾಂಧಿ ಒಪ್ಪಿರಲಿಲ್ಲ. ಹೀಗಾಗಿ, 2015ರಲ್ಲಿ ಬೆಂಬಲಿಗ ಶಾಸಕರ ಜೊತೆ ಕಾಂಗ್ರೆಸ್ ತೊರೆದಿದ್ದ ಶರ್ಮಾ, ಬಿಜೆಪಿ ಸೇರಿದ್ದರು. ನಂತರ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಅಧಿಕಾರ ಹಿಡಿದಿತ್ತು.

‘ಮೇಡಂ (ಸೋನಿಯಾ ಗಾಂಧಿ) ಅವರೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲು ದಿನಾಂಕ ನಿಗದಿಪಡಿಸುವಂತೆ ಸೂಚಿಸಿದ್ದರು. ಕಾಮಾಕ್ಯ ದೇವಾಲಯದ ಅಂಬುಬಾಚಿ ಮೇಳದ ನಂತರ ಪ್ರಮಾಣವಚನ ಸ್ವೀಕರಿಸುತ್ತೇನೆ ಎಂದು ತಿಳಿಸಿದ್ದೆ. ರಾಹುಲ್ ಗಾಂಧಿ ಅವರು ಕರೆ ಮಾಡಿದ ಬಳಿಕ ಪರಿಸ್ಥಿತಿ ಸಂಪೂರ್ಣ ಬದಲಾಯಿತು’ ಎಂದು ಹೇಳಿದ್ದಾರೆ.

‘ಈ ಬೆಳವಣಿಗೆ ತೀವ್ರ ನೋವುಂಟು ಮಾಡಿತು. ಯಾರ ಜೀವನದಲ್ಲಿ ಏನು ಆಗಿದೆಯೋ ಒಳ್ಳೆಯದಕ್ಕೆ ಆಗಿದೆ, ನಾನು ಕಾಂಗ್ರೆಸ್‌ನಲ್ಲಿದ್ದರೆ, ಅದಕ್ಕಿಂತ ಹೆಚ್ಚಿನದೇ ಸಿಕ್ಕಿತು. ನಾನು ಬಿಜೆಪಿಯಿಂದ ಮುಖ್ಯಮಂತ್ರಿಯಾಗಿ ಅಸ್ಸಾಂ ಜನರ ಹಾಗೂ ಸನಾತನ ಧರ್ಮದ ಸೇವೆ ಮಾಡುವ ಅವಕಾಶ ದೊರಕಿದೆ. ಕಾಂಗ್ರೆಸ್‌ನಲ್ಲಿದ್ದರೆ, ಇದೆಲ್ಲವೂ ಸಾಧ್ಯವಾಗುತ್ತಿರಲಿಲ್ಲ’ ಎಂದು ತಿಳಿಸಿದ್ದಾರೆ.

‘ರಾಜಕಾರಣದಲ್ಲಿ ನಡೆದ ಬೆಳವಣಿಗೆಗಳ ಕುರಿತು ಪುಸ್ತಕ ಬರೆಯಲಿದ್ದು, ಈ ಕುರಿತು ವಿಸ್ತೃತ ವಿವರಣೆ ನೀಡಲಿದ್ದೇನೆ’ ಎಂದು ತಿಳಿಸಿದ್ದಾರೆ.

ಹಿಮಂತ ಬಿಸ್ವ ಶರ್ಮಾ 2021ರಿಂದ ಅಸ್ಸಾಂ ಮುಖ್ಯಮಂತ್ರಿಯಾಗಿದ್ದಾರೆ.

ಅಸ್ಸಾಂ: ಮಧ್ಯಂತರ ಬಜೆಟ್ ಮಂಡನೆ

ಅಸ್ಸಾಂ ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಉಳಿದಿರುವ ಬೆನ್ನಲ್ಲೇ, ಹಣಕಾಸು ಸಚಿವ ಅಜಂತಾ ನಿಯೋಗ್ ಅವರು ಮಂಗಳವಾರ ಮಧ್ಯಂತರ ಬಜೆಟ್ ಮಂಡಿಸಿದರು.

ನಾಗರಿಕರಿಗೆ ನೇರ ನಗದು ಒದಗಿಸುವ ಹಲವು ಯೋಜನೆಗಳನ್ನು ಮುಂದುವರಿಸಲಾಗಿದೆ. ಆರ್‌ಬಿಐ ದತ್ತಾಂಶಗಳ ಪ್ರಕಾರ, ರಾಜ್ಯವು ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯವಾಗಿದೆ ಎಂದು ಬಜೆಟ್ ಮಂಡನೆ ವೇಳೆ ಪ್ರಕಟಿಸಿದರು.

‘ನಿಜೂತ್–ಮೊಯಿನಾ’ ಯೋಜನೆ ಜಾರಿಯಿಂದ ಬಾಲಕಿಯರು ಶಾಲೆಯಿಂದ ಹೊರಗುಳಿಯುವ ಪ್ರಮಾಣವು ಶೇಕಡಾ 8.2ಕ್ಕೆ ಇಳಿಕೆಯಾಗಿದೆ.

‘ಮುಖ್ಯಮಂತ್ರಿ ನಿಜುತ್ ಮೊಯಿನಾ’ ಯೋಜನೆ ಅಡಿಯಲ್ಲಿ ರಾಜ್ಯದ 5.5 ಲಕ್ಷ ವಿದ್ಯಾರ್ಥಿನಿಯರಿಗೆ ಮಾಸಿಕ ₹1 ಸಾವಿರದಿಂದ ₹2,500ರವರೆಗೆ ನೆರವು ನೀಡಲಾಗುತ್ತಿದ್ದು, ಈ ಬಾರಿಯೂ ಮುಂದುವರಿಸಲಾಗಿದೆ. ಮುಖ್ಯಮಂತ್ರಿ ನಿಜುತ್ ಬಾಬು ಯೋಜನೆ ಅಡಿಯಲ್ಲಿ ಆರ್ಥಿಕವಾಗಿ ಹಿಂದುಳಿದ 47,428 ಬಾಲಕರಿಗೂ ಮಾಸಿಕ ₹1 ಸಾವಿರದಿಂದ ₹2 ಸಾವಿರ ನೆರವು ನೀಡಲಾಗುತ್ತದೆ’ ಎಂದು ಪ್ರಕಟಿಸಿದರು.

ಅಸ್ಸಾಂ ವಿಧಾನಸಭೆಯ 126 ಕ್ಷೇತ್ರಗಳಿಗೆ ಇದೇ ಮಾರ್ಚ್– ಏಪ್ರಿಲ್ ತಿಂಗಳಲ್ಲಿ ಮತದಾನ ನಡೆಯಲಿದೆ.

‘ಭಿನ್ನಮತ ಸಹಿಸಿಕೊಳ್ಳದಿದ್ದರೆ ವಿನಾಶ’

ಕಾಂಗ್ರೆಸ್ ವಿರುದ್ಧ ಹಿರಿಯ ನಾಯಕ ಅಯ್ಯರ್ ವಾಗ್ದಾಳಿ

ನವದೆಹಲಿ (ಪಿಟಿಐ): ‘ಕಾಂಗ್ರೆಸ್‌ಗೆ ಒಬ್ಬ ಭಿನ್ನಮತೀಯನನ್ನು ಸಹಿಸಿಕೊಳ್ಳಲು ಸಾಧ್ಯವಾಗದಿದ್ದರೆ ಅದು ಆ ಪಕ್ಷದ ವಿನಾಶ ಎಂದರ್ಥ. ಹಾಗೆಯೇ, ಭಿನ್ನ ಮತ ವ್ಯಕ್ತಪಡಿಸುವ ವ್ಯಕ್ತಿಗೆ ಸಭ್ಯವಾಗಿಯೇ ದೃಢ ಭಾಷೆಯಲ್ಲಿ ಪ್ರತಿಕ್ರಿಯೆ ನೀಡಬಹುದು. ಆ ಧೈರ್ಯ ಪಕ್ಷಕ್ಕಿಲ್ಲದಿದ್ದರೆ, ಅದು ಆಡಳಿತ ನಡೆಸಲು ಅರ್ಹವಲ್ಲ’ ಎಂದು ಹಿರಿಯ ನಾಯಕ ಮಣಿಶಂಕರ್ ಅಯ್ಯರ್ ಕಾಂಗ್ರೆಸ್ ವಿರುದ್ಧ ಮಂಗಳವಾರ ವಾಗ್ದಾಳಿ ನಡೆಸಿದ್ದಾರೆ.

‘ಜಾತ್ಯತೀತ ಭಾರತ ಮಾತ್ರ ಉಳಿಯಲು ಸಾಧ್ಯ’ ಎಂದು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು 1989ರಲ್ಲಿ ಸಂಸತ್ತಿನಲ್ಲಿ ಹೇಳಿದ್ದ ಮಾತುಗಳನ್ನು ಅಯ್ಯರ್ ನೆನಪಿಸಿಕೊಂಡಿದ್ದಾರೆ. ಅಲ್ಲದೆ, ಅದೇ ಮಾತುಗಳನ್ನು ಅವರ ಮಗ ರಾಹುಲ್ ಗಾಂಧಿ ಅವರಿಂದ ಪುನರಾವರ್ತಿಸುವಂತೆ ಕಾಂಗ್ರೆಸ್ ಹೈಕಮಾಂಡ್‌ಗೆ ಸವಾಲು ಹಾಕಿದ್ದಾರೆ.

‘ಭಿನ್ನಾಭಿಪ್ರಾಯಗಳು ಇರುವುದರಿಂದಲೇ ಕಾಂಗ್ರೆಸ್ ಜೀವಂತವಾಗಿದೆ ಹಾಗೂ ಬೆಳೆಯುತ್ತಿದೆ. ಇದೆಲ್ಲವೂ ವೇದಗಳ ಸಾರವಾದ ‘ದೇವನೊಬ್ಬ ನಾಮ ಹಲವು’ ಎಂಬುದಕ್ಕೆ ಸಂಬಂಧಿಸಿದೆ. ಕಾಂಗ್ರೆಸ್ ಕೂಡ ಒಂದೇ, ಆದರೆ ಅದನ್ನು ತಲುಪಲು ಅನೇಕ ಮಾರ್ಗಗಳಿವೆ. ದುರದೃಷ್ಟವಶಾತ್, ಈಗಿನ ನಾಯಕತ್ವವು ಈ ಪಾಠವನ್ನು ಮರೆತಂತಿದೆ’ ಎಂದು ಅಯ್ಯರ್ ತಮ್ಮ ‘ಮಣಿ ಟಾಕ್’ ಯೂಟ್ಯೂಬ್ ಸರಣಿಯಲ್ಲಿ ತಿಳಿಸಿದ್ದಾರೆ.

‘ಇಂದಿನ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶ ಇಲ್ಲವೇ?’ ಎಂಬ ಶೀರ್ಷಿಕೆಯ 23 ನಿಮಿಷಗಳ ವಿಡಿಯೊದಲ್ಲಿ ಅವರು ಈ ರೀತಿ ಹೇಳಿದ್ದಾರೆ.

‘ಪ್ರಾಮಾಣಿಕವಾಗಿ ಭಿನ್ನಾಭಿಪ್ರಾಯ ಹೊಂದಿರುವವರು ರಾಜಕೀಯ ಪರಿಧಿಯೊಳಗೆ ಉಳಿಯುತ್ತಾರೆ. ಅಪ್ರಾಮಾಣಿಕವಾಗಿ ಭಿನ್ನಾಭಿಪ್ರಾಯ ಮೂಡಿಸುವವರನ್ನು ಇತಿಹಾಸವೇ ಶಿಕ್ಷಿಸುತ್ತದೆ. ಬಹುಶಃ ಅಲ್ಲಾಹುವೇ ಶಿಕ್ಷಿಸುತ್ತಾನೆ’ ಎಂದು ಹೇಳಿದ್ದಾರೆ.

‘ನಾವು ಯಾವಾಗಲೂ ಭಿನ್ನಾಭಿಪ್ರಾಯದ ಬಲದ ಮೇಲೆಯೇ ಬದುಕಿದ್ದೇವೆ ಮತ್ತು ಭಿನ್ನಾಭಿಪ್ರಾಯವೇ ಪ್ರಜಾಪ್ರಭುತ್ವದ ಆಧಾರ’ ಎಂದಿದ್ದಾರೆ.

ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಅವರ ಕಾಲದಲ್ಲಿ ಕಾಂಗ್ರೆಸ್‌ನಲ್ಲಿ ಭಿನ್ನಮತೀಯರು ಧ್ವನಿ ಎತ್ತಿದ್ದ ಹಲವಾರು ನಿದರ್ಶನಗಳನ್ನು ಅಯ್ಯರ್ ಅವರು ಉಲ್ಲೇಖಿಸಿದ್ದಾರೆ. ‘ಪಿಣರಾಯಿ ಮತ್ತೊಮ್ಮೆ ಕೇರಳ ಮುಖ್ಯಮಂತ್ರಿಯಾಗುವುದು ಖಚಿತ’ ಎಂದು ಅಯ್ಯರ್ ಹೇಳಿದ್ದರು. ಈ ಹೇಳಿಕೆಯಿಂದ ಕಾಂಗ್ರೆಸ್ ಅಂತರ ಕಾಯ್ದುಕೊಂಡಿತ್ತು.

ಮುಖ್ಯಾಂಶಗಳು

- ‘ಮಣಿ ಟಾಕ್’ ಯೂಟ್ಯೂಬ್ ಸರಣಿ
- ‘ಭಿನ್ನಾಭಿಪ್ರಾಯ ಇರುವುದರಿಂದಲೇ ಕಾಂಗ್ರೆಸ್ ಜೀವಂತ’
- ‘ಸಭ್ಯವಾಗಿಯೇ ದೃಢ ಭಾಷೆಯಲ್ಲಿ ಪ್ರತಿಕ್ರಿಯೆ ನೀಡಲಿ’

ಮಣಿಶಂಕರ್ ವಾಗ್ಬಾಣ

- ತಿರುವನಂತಪುರ ಸಂಸದ ಶಶಿ ತರೂರ್ ‘ತತ್ವಹೀನ ಜೀವಿ’
- ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ‘ರೌಡಿ’
- ಕಾಂಗ್ರೆಸ್ ರಾಷ್ಟ್ರೀಯ ವಕ್ತಾರ ಪವನ್ ಖೇರಾ ಅವರು ‘ಕುಬ್ಜ ಕುದುರೆ’

ಶುಭಾಶಯ...

ಪಿಟಿಐ ಚಿತ್ರ:

ಗುರುಗ್ರಾಮದಲ್ಲಿ ಮಂಗಳವಾರ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಗಳಿಗೆ ಮಹಿಳೆಯೊಬ್ಬರು ಪರೀಕ್ಷಾ ಕೇಂದ್ರದ ಬಳಿ ಸಿಹಿ ತಿನ್ನಿಸಿ ಶುಭ ಕೋರಿದರು

ತುಘಲಕ್ ಆಯೋಗ: ಮಮತಾ ಟೀಕೆ

ಕೋಲ್ಕತ್ತ (ಪಿಟಿಐ): ಚುನಾವಣಾ ಆಯೋಗವು ‘ತುಘಲಕ್ ಆಯೋಗ’ ದಂತೆಕಾರ್ಯನಿರ್ವಹಿಸುತ್ತಿದೆ.ಬಿಜೆಪಿಯ ನಿರ್ದೇಶನದಂತೆ ಮತದಾರರ ಪಟ್ಟಿಯನ್ನು ತಿರುಚುತ್ತಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಯೋಗವನ್ನು ದೆಹಲಿ ಸುಲ್ತಾನ ಮೊಹಮ್ಮದ್ ಬಿನ್ ತುಘಲಕ್ ಮತ್ತು ಅಡಾಲ್ಫ್ ಹಿಟ್ಲರ್‌ಗೆ ಹೋಲಿಕೆ ಮಾಡಿದರು. ‘ಆಯೋಗವು ಪಶ್ಚಿಮ ಬಂಗಾಳದ ಮತದಾರರರಿಗೆ ಚಿತ್ರಹಿಂಸೆ ನೀಡಿದೆ’ ಎಂದು ಹೇಳಿದರು.

‘ಸರ್ಕಾರವನ್ನು ಜನರು ಆಯ್ಕೆ ಮಾಡುತ್ತಾರೋ? ಅಥವಾ ರಾಜಕೀಯ ಪಕ್ಷವೊಂದರಿಂದ ಬೆಂಬಲಿತವಾಗಿರುವ ತುಘಲಕ್ ಆಯೋಗ ಮಾಡುತ್ತದೆಯೇ? ಹರಿಯಾಣ, ಬಿಹಾರ, ಮಹಾರಾಷ್ಟ್ರದಲ್ಲಿಯೂ ದೂರುಗಳಿವೆ. ಪಶ್ಚಿಮ ಬಂಗಾಳವನ್ನು ಯಾಕೆ ಗುರಿಯಾಗಿಸಲಾಗುತ್ತದೆ’ ಎಂದು ಪ್ರಶ್ನಿಸಿದರು.

ಅಧಿಕಾರಿಗಳ ವಿರುದ್ಧ ಎಫ್‌ಐಆರ್: ಎಸ್‌ಐಆರ್ ಪ್ರಕ್ರಿಯೆ ವೇಳೆ ದತ್ತಾಂಶ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿದ ಮತ್ತು ಗಂಭೀರ ಲೋಪ ಎಸಗಿದ ಐವರು ನೌಕರರ ವಿರುದ್ಧ ಪಶ್ಚಿಮ ಬಂಗಾಳ ಸರ್ಕಾರ ಪ್ರಕರಣ ದಾಖಲಿಸಿಕೊಂಡಿದೆ.

ಆರೋಪಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಚುನಾವಣಾ ಆಯೋಗ ನಿರ್ದೇಶನ ನೀಡಿದ ಆರು ತಿಂಗಳ ಬಳಿಕ ಕ್ರಮಕೈಗೊಂಡಿದೆ.

‘ಅಧಿಕಾರಿಗಳೊಂದಿಗೆ ನಾವಿದ್ದೇವೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ’ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

₹13,000ಕ್ಕೆ ಹರಾಜಾದ ನಿಂಬೆಹಣ್ಣು

ಈರೋಡ್ (ತಮಿಳುನಾಡು) (ಪಿಟಿಐ): ಜಿಲ್ಲೆಯ ಪಳಂತಿನ್ನಿ ಕರುಪ್ಪ ಈಶ್ವರನ್ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ ಆಚರಣೆಯ ಅಂಗವಾಗಿ ನಡೆದ ಹರಾಜಿನಲ್ಲಿ ಒಂದು ನಿಂಬೆಹಣ್ಣಿಗೆ ₹13,000 ಮೌಲ್ಯ ನಿಗದಿಯಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಳಕ್ಕೇತಿ ಗ್ರಾಮದ ಬಳಿಯ ಪುದು ಅಣ್ಣಾಮಲೈ ಪಾಳಯಂ ನಲ್ಲಿರುವ ಈ ದೇವಾಲಯದ ಪ್ರಧಾನ ದೇವರನ್ನು ಅಲಂಕರಿಸಿದ್ದ ಬೆಳ್ಳಿ ಉಂಗುರ, ಬೆಳ್ಳಿ ನಾಣ್ಯ ಮತ್ತು ನಿಂಬೆಹಣ್ಣನ್ನು ಹರಾಜಿಗೆ ಇಡಲಾಗಿತ್ತು.

ವಡುಗಪಟ್ಟಿ ಗ್ರಾಮದ ವಿಶ್ವನಾಥನ್ ಎಂಬವರು ನಿಂಬೆಹಣ್ಣನ್ನು ದಾಖಲೆ ಬೆಲೆಗೆ ಹರಾಜು ಕೂಗಿ, ಪಡೆದುಕೊಂಡರು. ಸ್ಥಳೀಯ ನಿವಾಸಿ ಪರಮಶಿವಂ ₹33,000ಕ್ಕೆ ಹರಾಜು ಕೂಗಿ ಬೆಳ್ಳಿ ಉಂಗುರವನ್ನು ಪಡೆದುಕೊಂಡರೆ, ₹43,000 ನೀಡಿ ಅತ್ತಪ್ಪಂಪಾಳಯಂ ಗ್ರಾಮದ ದೊರೆ ಅವರು ಬೆಳ್ಳಿ ನಾಣ್ಯವನ್ನು ತಮ್ಮದಾಗಿಸಿಕೊಂಡರು.

ಹರಾಜಿನಲ್ಲಿ ಬರುವ ಹಣವನ್ನು ದೇವಾಲಯದ ಅಭಿವೃದ್ಧಿ ಮತ್ತು ವಿಶೇಷ ಪೂಜೆಗಳಿಗೆ ಬಳಸಲಾಗುವುದು ಎಂದು ದೇವಾಲಯದ ಸಂಘಟಕರು ತಿಳಿಸಿದ್ದಾರೆ.

ಸಮಿತಿ ಮುಂದೆ ಹಾಜರಾದ ಕುನಾಲ್

ಪ್ರಜಾವಾಣಿ ವಾರ್ತೆ

ಮುಂಬೈ: ಉಪಮುಖ್ಯಮಂತ್ರಿ ಮತ್ತು ಶಿವಸೇನಾ ಮುಖ್ಯಸ್ಥ ಏಕನಾಥ್ ಶಿಂದೆ ಅವರ ವಿರುದ್ಧದ ಟೀಕೆಗೆ ಸಂಬಂಧಿಸಿ, ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರು ಮಂಗಳವಾರ ಇಲ್ಲಿನ ವಿಧಾನ ಭವನದಲ್ಲಿ ಮಹಾರಾಷ್ಟ್ರ ವಿಧಾನ ಪರಿಷತ್‌ನ ಹಕ್ಕುಚ್ಯುತಿ ಸಮಿತಿ ಮುಂದೆ ಹಾಜರಾದರು.

ಕುನಾಲ್ ಕಾಮ್ರಾ

ಅವರೊಂದಿಗೆ ಶಿವಸೇನೆ (ಯುಬಿಟಿ) ನಾಯಕಿ ಸುಷ್ಮಾ ಅಂಧರೆ ಕೂಡ ಸಮಿತಿಯ ಮುಂದೆ ಹಾಜರಾದರು. ಆದರೆ, ದೂರುದಾರ ಪ್ರವೀಣ್ ದಾರೇಕರ್ ಮುಂಬೈನಿಂದ ಹೊರಗಿದ್ದ ಕಾರಣ ವಿಚಾರಣೆಯನ್ನು ಮಾ. 10ಕ್ಕೆ ಮುಂದೂಡಲಾಯಿತು.

‘ದೂರುದಾರ ದಾರೇಕರ್ ಅನುಪಸ್ಥಿತಿಯಲ್ಲಿ ಹೇಳಿಕೆ ದಾಖಲಿಸುವುದು ಸೂಕ್ತವಲ್ಲ. ಎರಡೂ ಕಡೆಯ ಹೇಳಿಕೆಗಳನ್ನು ಒಂದೇ ದಿನ ದಾಖಲಿಸಿಕೊಳ್ಳಲಾಗುವುದು’ ಎಂದು ಹಕ್ಕುಚ್ಯುತಿ ಸಮಿತಿಯ ಮುಖ್ಯಸ್ಥ ಪ್ರಸಾದ್ ಲಾಡ್ ತಿಳಿಸಿದ್ದಾರೆ.

ಬಿಜೆಪಿ ಸೇರ್ಪಡೆಗೆ ನಿರ್ಧರಿಸಿದ ಬೋರಾ

ಗುವಾಹಟಿ: ಅಸ್ಸಾಂ ಕಾಂಗ್ರೆಸ್ ಪ್ರದೇಶಸಮಿತಿಯ ಮಾಜಿ ಅಧ್ಯಕ್ಷ ಭೂಪೇನ್ ಕುಮಾರ್ ಬೋರಾ ಆಡಳಿತಾರೂಢ ಬಿಜೆಪಿಗೆ ಸೇರಿ, ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ.

ಬೋರಾ ನಿವಾಸಕ್ಕೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಮಂಗಳವಾರ ಸಂಜೆ ಭೇಟಿ ನೀಡಿದ್ದು, ಆ ಭೇಟಿಯ ಬೆನ್ನಲ್ಲೇ ಬೋರಾ ಅವರು, ‘ನಾನು ಫೆಬ್ರುವರಿ 22ರಂದು ಬಿಜೆಪಿಗೆ ಸೇರ್ಪಡೆಯಾಗುತ್ತೇನೆ’ ಎಂದು ಘೋಷಣೆ ಮಾಡಿದ್ದಾರೆ.

ಪಕ್ಷದ ರಾಜ್ಯ ನಾಯಕತ್ವದ ಬಗ್ಗೆ ಅಸಮಾಧಾನದ ಹೊಂದಿದ್ದ ಬೋರಾ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸೋಮವಾರ ರಾಜೀನಾಮೆ ಪತ್ರ ಸಲ್ಲಿಸಿದ್ದರು.

ಛತ್ತೀಸಗಢ: 22 ನಕ್ಸಲರ ಶರಣಾಗತಿ

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ 22 ಮಂದಿ ನಕ್ಸಲರು ಪೊಲೀಸರ ಮುಂದೆ ಮಂಗಳವಾರ ಶರಣಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಶರಣಾಗತಿ ಮತ್ತು ಪುನರ್ವಸತಿ ನೀತಿಯಿಂದ ಪ್ರಭಾವಿತಗೊಂಡು ಹಿರಿಯ ಪೊಲೀಸರು ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಅಧಿಕಾರಿಗಳ ಮುಂದೆ ಶರಣಾಗಿದ್ದಾರೆ ಎಂದು ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ತಿಳಿಸಿದ್ದಾರೆ.

‘ಜಿಲ್ಲೆಯಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಗಳು ತೀವ್ರಗೊಂಡ ಬಳಿಕ ನಕ್ಸಲರ ಚಟುವಟಿಕೆ ಕಡಿಮೆಯಾಗಿದೆ. ಶರಣಾದ ಎಲ್ಲ ನಕ್ಸಲರಿಗೆ ತಕ್ಷಣವೇ ತಲಾ ₹50,000 ನೆರವು ಹಾಗೂ ಪುನರ್‌ವಸತಿ ಸೌಲಭ್ಯ ಕಲ್ಪಿಸಿಕೊಡಲಾಗುವುದು’ ಎಂದು ತಿಳಿಸಿದ್ದಾರೆ.

‘ಆರ್ಥಿಕ ಬಿಕ್ಕಟ್ಟು ಸೃಷ್ಟಿಗೆ ಕೇಂದ್ರ ಯತ್ನ’

ಚೆನ್ನೈ (ಪಿಟಿಐ): ತಮಿಳುನಾಡು ಹಣಕಾಸು ಸಚಿವ ತಂಗಂ ತೇನರಸು ಅವರು 2026–27ನೇ ಸಾಲಿನ ಮಧ್ಯಂತರ ಬಜೆಟ್ ಅನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಿದರು.

ಬಜೆಟ್‌ನಲ್ಲಿ ಸಾಮಾಜಿಕ ಭದ್ರತೆ ಯೋಜನೆಗಳಿಗಾಗಿ ಅವರು ಒಟ್ಟು ₹5,463 ಕೋಟಿ ಮೀಸಲಿಟ್ಟಿದ್ದಾರೆ.

ಬಜೆಟ್ ಭಾಷಣದ ವೇಳೆ ಅವರು, ‘ತಮಿಳುನಾಡಿನಲ್ಲಿ ಆರ್ಥಿಕ ಬಿಕ್ಕಟ್ಟು ಸೃಷ್ಟಿಸಲು ಕೇಂದ್ರ ಸರ್ಕಾರವು ಯತ್ನಿಸುತ್ತಿದೆ’ ಎಂದು ಆರೋಪಿಸಿದರು.

ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಅನ್ಯಾಯ ಎಸಗಿದ ಹಲವು ಉದಾಹರಣೆಗಳು ನಮ್ಮ ಮುಂದಿವೆ ಎಂದರು.

‘ನಮ್ಮ ಸರ್ಕಾರವು ಹಿಂದೆಂದೂ ಕಂಡಿರದಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಪ್ರಮುಖ ಮೂಲಸೌಕರ್ಯ ಯೋಜನೆಗಳಿಗೆ ಅನುಮೋದನೆಯನ್ನು ನಿರಾಕರಿಸಲಾಗುತ್ತಿದೆ. ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳ ಅನುದಾನವನ್ನು ತಡೆಹಿಡಿಯಲಾಗುತ್ತಿದೆ’ ಎಂದು ದೂರಿದರು.

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

Fax No.08472/260776, Phone: 08472/ 278675, Email Id: itstaff_ulb_gulbarga@yahoo.com

No: KMP/TS-01/CF-UGD/DC-65/Z-2Recall-2/2025-26 Date:16.02.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ. ಸಂಖ್ಯೆ : /2025–26 ದಿನಾಂಕ: 16.02.2026

1) ಕಾಮಗಾರಿಯ ವಿವರ : Mechanized cleaning of sewer lines and Machine hole chambers by sucking, jetting, Roding and desilting machines for operation and maintenance of UGD system of ZONE-2 in Kalaburagi city Corporation for a period of three Year (Jetting Cum Sucking Machine-2, Mini Jetting Machine-1, Desilting cum rodding-1)DMA/2025-26/SE6269/CALL-2, 2) ಲೆಕ್ಕ ಶೀರ್ಷಿಕೆ: 2025–26ನೇ ಸಾಲಿನ ಪಾಲಿಕೆ ನಿಧಿಯಲ್ಲಿ ಅನುಮೋದನೆಗೊಂಡ (01) ಒಳಚರಂಡಿಯ ಕಾರ್ಯಾಚರಣೆ ಮತ್ತು ನಿರ್ವಹಣೆಯ (O&M) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಕೆ.ಸಿ–8 ಪ್ರಕಾರ ಟೆಂಡರ ಎರಡನೇ ಕರೆ ಪ್ರಕಟಣೆ. 3) ಟೆಂಡರರಿಗಿಟ್ಟ ಮೊತ್ತ : ಅಂದಾಜು ಪಟ್ಟಿಯ ಗರಿಷ್ಠ ಮೊತ್ತ/ಕನಿಷ್ಠ ಮೊತ್ತ ರೂ. 253,00,000.00, 4) ಗುತ್ತಿಗೆದಾರರ ಅರ್ಹತೆ: As per Bid Document. 5) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: 04.03.2026 ಬೆಳಿಗ್ಗೆ 11.00, 6) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ : 04.03.2026 ಸಾಯಂಕಾಲ 4:30 ಗಂಟೆಯವರೆಗೆ, 7) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ: 05.03.2026 ಸಾಯಂಕಾಲ 4:35 ಗಂಟೆಯವರೆಗೆ, 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ: 06.03.2026 ಬೆಳಿಗ್ಗೆ 11:30 ಗಂಟೆಗೆ, 9) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ ರೂ. As per e-portal EMD ಗರಿಷ್ಠ /ಕನಿಷ್ಠ ಮೊತ್ತ ರೂ.3,57,200.00, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಮತ್ತು ಮೋ. ನಂ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. 9620341599 & 9448119141, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾ.ಸಾ.ಸಂ.ಇ/ಕಲಬುರಗಿ/1083/ಕೆ.ಎಸ್.ಎಂ.ಸಿ.&ಎ/2025–26 ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ–5/ಟೆಂಡರ/2025–26/6165 ದಿನಾಂಕ: 16/02/2026

:: ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ–ಲಕೋಟೆ ಪದ್ದತಿಯಲ್ಲಿ ::

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: ಚಿತ್ತಾಪೂರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 2025–26 & 2026–27ನೇ ಸಾಲಿನಲ್ಲಿ ಮಂಜೂರಾದ 13 ವಿವಿಧ ಗ್ರಾಮಗಳಲ್ಲಿ ಅಕ್ಷರ ಅವಿಷ್ಕಾರ ಮೈಕ್ರೋ ಯೋಜನೆಯಡಿಯಲ್ಲಿ ಮಂಜೂರಾದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶಾಲಾ ಕೋಣೆಕಟ್ಟಡ ನಿರ್ಮಾಣ ಕಾಮಗಾರಿಗಳ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತದೆ: (1)24739 (2) 24740 (3) 24687 (4) 24679 (5) 24711 (6) 24714 (7) 24686 (8) 24681 (9) 24683 (10) 24741 (11) 24715 (12) 24744 (13) 24751 (14) 24743 (15) 24678 (16) 24680 (17) 24732 (18) 24685 (19) 24735 (20) 24719 (21) 24734 (22) 24745 (23) 24713 **ಒಟ್ಟು 23 ಕಾಮಗಾರಿಗಳು,** 2) ಲೆಕ್ಕ ಶೀರ್ಷಿಕೆ: 2025–26 & 2026–27ನೇ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮೈಕ್ರೋ ಯೋಜನೆ, 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ರೂ. **55,10,400.50,** ಗರಿಷ್ಠ ರೂ. **83,08,457.13,** 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂಪಡೆಯುವ ದಿನಾಂಕ: **16.02.2026 ರಿಂದ 06.03.2026 ಸಾಯಂಕಾಲ 4:00 ಗಂಟೆವರೆಗೆ,** 6) ಟೆಂಡರ ಅರ್ಜಿ ಬೆಲೆ : ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ.: ಕನಿಷ್ಠ ರೂ. 55,500.00, ಗರಿಷ್ಠ ರೂ. 1,66,500.00, 8) ಟೆಂಡರ ಸಲ್ಲಿಸುವ ದಿನಾಂಕ: **16.02.2026 ರಿಂದ 06.03.2026 ಸಾಯಂಕಾಲ 4:00 ಗಂಟೆವರೆಗೆ,** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07.03.2026 ಸಾಯಂಕಾಲ 4:00 ಗಂಟೆ ನಂತರ,** 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **09.03.2026 ಬೆಳಿಗ್ಗೆ 11:00 ಗಂಟೆ ನಂತರ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1090/ಕೆ.ಎಸ್.ಎಂ.ಸಿ.&ಎ/2025–26

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. MANMOHAN SINGH BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS
Office of the Registrar Evaluation, Jnana Jyothi Central College Campus, Dr Ambedkar Veedhi, Bengaluru – 560001. Ph: 080-22295559/29572003 | Mail: registrarevlubcu@gmail.com/regev@bcu.ac.in

ಸಂಖ್ಯೆ:ಬೆಂ.ನ.ವಿ/ಪ.ವಿ./5ನೇ ಘಟಿಕೋತ್ಸವ/2025–26/616 ದಿನಾಂಕ:17.02.2026

ಪತ್ರಿಕಾ ಪ್ರಕಟಣೆ

ನವೆಂಬರ್ / ಡಿಸೆಂಬರ್ 2025 ರವರೆಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡಲು ಮತ್ತು ಈ ಹಿಂದೆ ನಡೆದ ಘಟಿಕೋತ್ಸವಗಳಲ್ಲಿ ಪದವಿ ಪ್ರಮಾಣ ಪತ್ರ ಪಡೆಯದ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡಲು ಡಾ. ಮನ್‌ಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು 5ನೇ ಘಟಿಕೋತ್ಸವವನ್ನು ಏಪ್ರಿಲ್ ತಿಂಗಳ ಪ್ರಥಮ ಅಥವಾ ದ್ವಿತೀಯ ವಾರದಲ್ಲಿ ಜರುಗಿಸಲು ನಿರ್ದರಿಸಲಾಗಿದೆ. ವಿಶ್ವವಿದ್ಯಾಲಯದ ವಿವಿದ ವಿಭಾಗಗಳಲ್ಲಿ ಹಾಗೂ ಇದಕ್ಕೆ ಸಂಯೋಜನೆಗೊಂಡಿರುವ ಕಾಲೇಜುಗಳಲ್ಲಿ ಮತ್ತು ಸ್ವಾಯತ್ತ ಕಾಲೇಜುಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ವ್ಯಾಸಂಗ ಮಾಡಿ ನವೆಂಬರ್/ಡಿಸೆಂಬರ್ – 2025 ರವರೆಗೆ ಎಲ್ಲಾ ಸೆಮಿಸ್ಟರುಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಂದ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಈ ಕೆಳಕಂಡ ದಿನಾಂಕಗಳ ಒಳಗೆ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿ, ನಂತರ ಅದರ Printout ಪ್ರತಿಗಳನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ/ ವಿಶ್ವವಿದ್ಯಾನಿಲಯದ ಆಯಾ ವಿಭಾಗಗಳ ಮುಖ್ಯಸ್ಥರುಗಳಿಗೆ ಅರ್ಜಿಗಳನ್ನು ಸಲ್ಲಿಸಲು ಸೂಚಿಸಲಾಗಿದೆ. ಈಗಾಗಲೇ ಪದವಿ ಪ್ರಮಾಣ ಪತ್ರ ಪಡೆದಿರುವವರ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅಂತಿಮ ಸೆಮಿಸ್ಟರುಗಳ ಪರೀಕ್ಷಾ ಸಮಯದಲ್ಲಿ ಘಟಿಕೋತ್ಸವ ಶುಲ್ಕವನ್ನು ಪಾವತಿ ಮಾಡಿರುವ ವಿದ್ಯಾರ್ಥಿಗಳು ಮತ್ತೊಮ್ಮೆ ಶುಲ್ಕ ಪಾವತಿ ಮಾಡಬಾರದು. ಇಲ್ಲಿಯವರೆಗೂ ಉತ್ತೀರ್ಣರಾಗಿದ್ದರೂ ಪದವಿ ಪ್ರಮಾಣ ಪತ್ರ ಪಡೆಯದ ವಿದ್ಯಾರ್ಥಿಗಳು ನಿಗಧಿತ ಶುಲ್ಕ ಪಾವತಿಯೊಂದಿಗೆ ಅರ್ಜಿ ಸಲ್ಲಿಸಬಹುದು.

ಕ್ರ ಸಂ.	ವಿವರ	ದಿನಾಂಕ
1.	ಪೂರ್ಣಗೊಳಿಸಿದ ಅರ್ಜಿಯನ್ನು ಸ್ನಾತಕೋತ್ತರ ವಿಭಾಗಗಳು/ಕಾಲೇಜುಗಳಿಗೆ ದಂಡ ಶುಲ್ಕವಿಲ್ಲದೆ ಸಲ್ಲಿಸಲು ಕೊನೆಯ ದಿನಾಂಕ	09.03.2026
2.	ಪೂರ್ಣಗೊಳಿಸಿದ ಅರ್ಜಿಯನ್ನು ಸ್ನಾತಕೋತ್ತರ ವಿಭಾಗಗಳು/ಕಾಲೇಜುಗಳಿಗೆ ರೂ.100/– ದಂಡ ಶುಲ್ಕದೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ	13.03.2026
3.	ಘಟಿಕೋತ್ಸವಕ್ಕೆ ಪಿ.ಜಿ. ವಿಭಾಗಗಳಲ್ಲಿ ಮತ್ತು ಕಾಲೇಜುಗಳಲ್ಲಿ ಸ್ವೀಕರಿಸಿದ ಅರ್ಜಿಗಳನ್ನ, ಆನ್‌ಲೈನ್ ಶುಲ್ಕ ರಶೀದಿಗಳೊಂದಿಗೆ ಪಟ್ಟಿಯನ್ನು ಕುಲಸಚಿವರು (ಮೌಲ್ಯಮಾಪನ) ಅವರಿಗೆ ಸಲ್ಲಿಸಲು ಕೊನೆಯ ದಿನಾಂಕ	18.03.2026

ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾನಿಲಯದ ಜಾಲತಾಣ https://www.bcu.ac.in/ ನಿಂದ ಪಡೆಯಬಹುದಾಗಿದೆ.

ಸಹಿ/–
ಡಿಐಪಿಆರ್/ಸಿಪಿ/5694/ಸಿಸಿಎಲ್/2025–26 ಕುಲಸಚಿವರು (ಮೌಲ್ಯಮಾಪನ)

ಡಾ॥ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. MANMOHAN SINGH BENGALURU CITY UNIVERSITY
Office of the Registrar, Central College Campus, Dr. B.R AmbedkarVeedhi, Bengaluru – 560 001. E-mail: registrar@bcu.ac.in

Tender No: BCU/2025-26/SE0005 Date: 17-02-2026

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ

ಕೆಲಸದ ಹೆಸರು	Establishment of Two Language Learning Labs Along with Hardware, Software and Compatible Furniture at Dr. Manmohan Singh Bengaluru City University On Turnkey Basis
ಇ.ಎಮ್.ಡಿ	ರೂ. 3,50,000/–
ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	21–02–2026 16.30 ಗಂಟೆಗಳವರೆಗೆ
ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ:	23–02–2026, 15.30 ಗಂಟೆಗೆ ಕುಲಸಚಿವರ ಕಛೇರಿ, ಆಡಳಿತ ಕಟ್ಟಡ, ಸೆಂಟ್ರಲ್ ಕಾಲೇಜು ಆವರಣ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	09–03–2026, 16.00 ಗಂಟೆಗಳವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	10–03–2026 16.30 ಗಂಟೆಗೆ

ಸೂಚನೆ : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕ್ರಿಯೆ ಶುಲ್ಕ ಮತ್ತು ಇ.ಎಮ್.ಡಿ ಮೊತ್ತವನ್ನು ಪಾವತಿಸುವುದು.

ಸಹಿ/–
DIPR/CP/SHIRDI SAI/5699/2025-26 ಕುಲಸಚಿವರು

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. MANMOHAN SINGH BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS
Office of the Registrar (Evaluation), Jnana Jyothi Central College Campus, Dr B.R. Ambedkar Veedhi, Bengaluru – 560001. Ph: 080-22295559/29572003 | E-Mail ID:registrarevlubcu@gmail.com/regev@bcu.ac.in

ಸಂಖ್ಯೆ:ಡಾ.ಮಸಿಬೆಂ.ನ.ವಿ./ಪ.ವಿ./01/ಪಿಹೆಚ್.ಡಿ./ಪ್ರವೇಶ/2025–26/615 ದಿನಾಂಕ:17.02.2026

ಅಧಿಸೂಚನೆ

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸ್ನಾತಕೋತರ ವಿಭಾಗಗಳು ಮತ್ತು ಸಂಯೋಜಿತ ಸಂಶೋಧನಾ ಕೇಂದ್ರಗಳಲ್ಲಿ, ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅಗತ್ಯ ವಿದ್ಯಾತೆ ಹೊಂದಿರುವ ಆಸಕ್ತ ಸ್ನಾತಕೋತರ ಪಧವೀದರರು ಆನ್‌ಲೈನ್ / ಆಫ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಪ್ರವೇಶಕ್ಕಾಗಿ ಅಗತ್ಯವಾದ ವಿದ್ಯಾರ್ಹತೆ, ಪ್ರವೇಶ ಪರೀಕ್ಷೆಯ ವಿವರಗಳು, ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಹೊಂದುವ ವಿವರಗಳು, ಅರ್ಜಿ ಸಲ್ಲಿಸುವ ವಿಧಾನ, ಶುಲ್ಕ ಸಂದಾಯದ ವಿವರ, ಲಭ್ಯವಿರುವ ವಿಷಯವಾರು ಖಾಲಿ ಸ್ಥಾನಗಳು, ಸಂಶೋಧನಾ ಕೇಂದ್ರಗಳ ವಿವರ ಇತ್ಯಾದಿಗಳನ್ನು ವಿಶ್ವವಿದ್ಯಾಲಯದ ಜಾಲತಾಣ https://bcu.ac.in/onlineapp/ ರಲ್ಲಿ ಪ್ರಕಟಿಸಲಾಗಿದೆ. ಅರ್ಜಿಗಳನ್ನು ದಿನಾಂಕ:19.02.2026 ರಿಂದ 18.03.2026 ವರೆಗೆ ದಂಡ ಶುಲ್ಕವಿಲ್ಲದೆ ಹಾಗೂ ರೂ.200.00 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:25.03.2026 ವರೆಗೆ ಸಲ್ಲಿಸಬಹುದಾಗಿದೆ. ಪ್ರವೇಶ ಪರೀಕ್ಷೆಯ ದಿನಾಂಕವನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಲತಾಣ www.bcu.ac.in ರಲ್ಲಿ ಪ್ರಕಟಿಸಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಶುಲ್ಕ ಪಾವತಿ ರಶೀದಿಯೊಂದಿಗೆ ಹಾಗೂ ಇತರೆ ಅಗತ್ಯ ದಾಖಲೆಗಳೊಂದಿಗೆ ಕುಲಸಚಿವರು (ಮೌಲ್ಯಮಾಪನ) ರವರ ಕಛೇರಿ, ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಅವರಣ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560001 ಅವರಿಗೆ ತಲುಪಿಸಲು ಕೋರಲಾಗಿದೆ.

ಅರ್ಜಿಗಳನ್ನು ಸಲ್ಲಿಸಲು ಆಸಕ್ತ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಅಗತ್ಯ ವಿವರ ಹಾಗೂ ಸೂಚನೆಗಳನ್ನು ಗಮನಿಸಬಹುದು.

ಸಹಿ/–
ಡಿಐಪಿಆರ್/ಸಿಪಿ/5695/ಸಿಸಿಎಲ್/2025–26 ಕುಲಸಚಿವರು (ಮೌಲ್ಯಮಾಪನ)

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, (ಪೂರ್ವ& ಪಶ್ಚಿಮ) ಸಿವಿಲ್ ವಿಭಾಗ ಸಯ್ಯಾಜಿರಾವ್ ರಸ್ತೆ, ಮೈಸೂರು ಇ-ಮೇಲ್– eewmccmys@gmail.com

ಸಂಖ್ಯೆ: ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ–25/2025–26 ದಿನಾಂಕ: 17.02.2026

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
	ಸಿವಿಲ್ ಕಾಮಗಾರಿಗಳು					
1	ಮೈನಪಾ/ಕಾಇಂ(ಪೂ)/ಟಿ.ಎನ್–72/2025–26, ದಿನಾಂಕ:17.02.2026	02	43.12	20.02.2026 ಬೆಳಿಗ್ಗೆ 11 ರ ನಂತರ	06.03.2026 ಸಂಜೆ 5.00 ವರೆಗೆ	07.03.2026 ಸಂಜೆ 5.30 ಕ್ಕೆ
2	ಮೈನಪಾ/ಕಾಇಂ(ಪೂ)/ಟಿ.ಎನ್–74/2025–26, ದಿನಾಂಕ:12.02.2026	06	3000.00	12.02.2026 ಸಂಜೆ 4.00ರ ನಂತರ	26.02.2026 ಸಂಜೆ 5.25 ವರೆಗೆ	27.02.2026 ಸಂಜೆ 5.30 ಕ್ಕೆ
3	ಮೈನಪಾ/ಕಾಇಂ(ಪೂ)/ಟಿ.ಎನ್–77/2025–26, ದಿನಾಂಕ:17.02.2026	16	1078.70	20.02.2026 ಬೆಳಿಗ್ಗೆ 11 ರ ನಂತರ	06.03.2026 ಸಂಜೆ 5.00 ವರೆಗೆ	07.03.2026 ಸಂಜೆ 5.20 ಕ್ಕೆ
4	ಮೈನಪಾ/ಕಾಇಂ(ಪ)/ಟಿ.ಎನ್–78/2025–26, ದಿನಾಂಕ:17.02.2026	08	273.18	17.02.2026 ಬೆಳಿಗ್ಗೆ 11 ರ ನಂತರ	25.02.2026 ಸಂಜೆ 5.00 ವರೆಗೆ	26.02.2026 ಸಂಜೆ 5.20 ಕ್ಕೆ
5	ಮೈನಪಾ/ಕಾಇಂ(ಪ)/ಟಿ.ಎನ್–79/2025–26, ದಿನಾಂಕ:17.02.2026	04	138.60	17.02.2026 ಬೆಳಿಗ್ಗೆ 11 ರ ನಂತರ	03.03.2026 ಸಂಜೆ 5.00 ವರೆಗೆ	04.03.2026 ಸಂಜೆ 5.20 ಕ್ಕೆ
	ಗೂಡ್ಸ್ ಕಾಮಗಾರಿ					
6	ಮೈನಪಾ/ಕಾಇಂ(ಪೂ)/ಟಿ.ಎನ್–73/2025–26, ದಿನಾಂಕ:16.02.2026	01	11.50	17.02.2026 ಬೆಳಿಗ್ಗೆ 11 ರ ನಂತರ	03.03.2026 ಸಂಜೆ 5.25 ವರೆಗೆ	04.03.2026 ಸಂಜೆ 5.30 ಕ್ಕೆ
	ಸರ್ವೀಸ್ ಕಾಮಗಾರಿ					
7	ಮೈನಪಾ/ಕಾಇಂ(ಪೂ)/ಟಿ.ಎನ್–75/2025–26, ದಿನಾಂಕ:16.02.2026	01	99.00	18.02.2026 ಬೆಳಿಗ್ಗೆ 11 ರ ನಂತರ	03.03.2026 ಸಂಜೆ 5.25 ವರೆಗೆ	04.03.2026 ಸಂಜೆ 5.30 ಕ್ಕೆ
8	ಮೈನಪಾ/ಕಾಇಂ(ಪೂ)/ಟಿ.ಎನ್–76/2025–26, ದಿನಾಂಕ:16.02.2026	09	99.30	18.02.2026 ಬೆಳಿಗ್ಗೆ 11 ರ ನಂತರ	03.03.2026 ಸಂಜೆ 5.25 ವರೆಗೆ	04.03.2026 ಸಂಜೆ 5.30 ಕ್ಕೆ

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ)ಸಿವಿಲ್‌ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು (ಪೂ) ಮೈಸೂರು ಮಹಾನಗರ ಪಾಲಿಕೆ, ಮೈಸೂರು.
ವಾಸಾಸಂಇ/ಮೈಸೂರು/1682/ಶಿರಡಿ ಸಾಯಿ/2025–26
ಸಹಿ/– ಕಾರ್ಯಪಾಲಕ ಅಭಿಯಂತರರು (ಪ) ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಜಗತ್ತಿನ ಅತಿದೊಡ್ಡ ಪ್ರಾರ್ಥನೆ ಎಂದರೆ ತಾಳ್ಮೆ.

–ಗೌತಮ ಬುದ್ಧ

ಸಂಪಾದಕೀಯ

‘ವಂದೇ ಮಾತರಂ’ ರಾಜಕೀಯ ‘ಬಹುತ್ವ ಭಾರತ’ದ ಆಶಯಕ್ಕೆ ಧಕ್ಕೆ

‘ವಂದೇ ಮಾತರಂ’ ಗೀತೆಯ ಸಂಪೂರ್ಣ ಪಠ್ಯ ಹಾಡುವುದನ್ನು ಕಡ್ಡಾಯಗೊಳಿಸುವ ಹೊಸ ಮಾರ್ಗಸೂಚಿಯನ್ನು ಕೇಂದ್ರ ಸರ್ಕಾರ ರೂಪಿಸಿರುವುದು, ರಾಷ್ಟ್ರೀಯ ಗೀತೆಯನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವ ಪ್ರಯತ್ನವಾಗಿದೆ. ಬಂಗಾಳಿ ಸಾಹಿತಿ ಬಂಕಿಮಚಂದ್ರ ಚಟರ್ಜಿ ಅವರ ಭಾವಪೂರ್ಣ ಸಾಲುಗಳನ್ನು ಒಳಗೊಂಡಿರುವ ಗೀತೆಯು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಹಾಗೂ ಸ್ವಾತಂತ್ರ್ಯಾನಂತರವೂ ಭಾರತೀಯರ ಮನಸ್ಸನ್ನು ಆವರಿಸಿಕೊಂಡಿದೆ. ಮೂಲ ಗೀತೆ ಆರು ಚರಣಗಳನ್ನು ಹೊಂದಿದ್ದು, ಅವುಗಳಲ್ಲಿ ಎರಡು ಭಾಗಗಳನ್ನಷ್ಟೇ ಸಂವಿಧಾನ ಸಭೆಯು ರಾಷ್ಟ್ರೀಯ ಗೀತೆಯಾಗಿ ಅಳವಡಿಸಿಕೊಂಡಿತು. ಆದರೆ, ಕೇಂದ್ರ ಗೃಹ ಸಚಿವಾಲಯವು ಕಳೆದ ಜನವರಿಯಲ್ಲಿ ಹೊರಡಿಸಿರುವ ವಿವರವಾದ ಅಧಿಸೂಚನೆಯಲ್ಲಿ, ವಂದೇ ಮಾತರಂ ಗೀತೆಯ ಆರೂ ಚರಣಗಳನ್ನು ಉಳಿಸಿಕೊಳ್ಳುವಂತೆ ತಿಳಿಸಿದೆ; ರಾಷ್ಟ್ರೀಯ ಗೀತೆಯನ್ನು ಪೂರ್ಣಪ್ರಮಾಣದಲ್ಲಿ ಹಾಡುವಂತೆ ಆದೇಶ ಹೊರಡಿಸಿದೆ. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ರಾಷ್ಟ್ರಗೀತೆಯೊಂದಿಗೆ ರಾಷ್ಟ್ರೀಯ ಗೀತೆಯನ್ನೂ ಹಾಡುವ ಸಂದರ್ಭದಲ್ಲಿ, ವಂದೇ ಮಾತರಂ ಹಾಡಿದ ಬಳಿಕ ರಾಷ್ಟ್ರಗೀತೆಯನ್ನು ಹಾಡುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಮೊಹಮ್ಮದ್ ಅಲಿ ಜಿನ್ನಾ ಅವರ ಅತೀವ ಒತ್ತಡದಿಂದಾಗಿ ಹಾಗೂ ಮುಸ್ಲಿಮರನ್ನು ಓಲೈಸುವ ಉದ್ದೇಶದಿಂದ, ಮಾತೃಭೂಮಿಯನ್ನು ದೇವತೆಯೆಂದು ಬಣ್ಣಿಸುವ ಚರಣಗಳನ್ನು ಜವಾಹರಲಾಲ್ ನೆಹರೂ ಕೈಬಿಟ್ಟಿದ್ದರು ಎಂದು ಸಂಸತ್‌ನಲ್ಲಿ ನಡೆದ ‘ವಂದೇ ಮಾತರಂ’ನ 150ನೇ ವರ್ಷಾಚರಣೆ ಚರ್ಚೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದರು. ಆದರೆ, ರವೀಂದ್ರನಾಥ ಟ್ಯಾಗೋರ್ ಅವರ ಶಿಫಾರಸಿನ ಮೇರೆಗೆ ಕಾಂಗ್ರೆಸ್ ಪಕ್ಷ ಪರಿಷ್ಕಾರದ ನಿರ್ಧಾರವನ್ನು ತೆಗೆದುಕೊಂಡಿತ್ತು. ಆ ನಿರ್ಧಾರದಲ್ಲಿ ಮಹಾತ್ಮ ಗಾಂಧಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಸುಭಾಷ್‌ಚಂದ್ರ ಬೋಸ್, ಮುಂತಾದ ನಾಯಕರ ಪಾತ್ರವೂ ಇತ್ತು. ಹಿಂದೂಗಳಲ್ಲದವರ ಭಾವನೆಗಳನ್ನು ಗೌರವಿಸುವ, ಮುಖ್ಯವಾಗಿ ಮುಸ್ಲಿಮರ ಭಾವನೆಗಳನ್ನು ಗೌರವಿಸುವ ಉದ್ದೇಶದಿಂದ ತೆಗೆದುಕೊಂಡ ನಿರ್ಣಯ ಅದಾಗಿತ್ತು. ಹಿಂದೂ ಧಾರ್ಮಿಕ ಸಂಕೇತಗಳನ್ನು ಒಳಗೊಂಡಿದ್ದ ಸಾಲುಗಳು ಹಿಂದೂಗಳಲ್ಲದವರಿಗೆ ಉಂಟುಮಾಡಬಹುದಾದ ಮುಜುಗರದ ಪರಿಸ್ಥಿತಿಯನ್ನು ತಪ್ಪಿಸುವ ಉದ್ದೇಶ ಆ ತೀರ್ಮಾನದ ಹಿಂದಿತ್ತು. ವಂದೇ ಮಾತರಂ ಗೀತೆ ಇಂದಿಗೂ ಭಾರತೀಯರ ಒಗ್ಗಟ್ಟು ಮತ್ತು ಒಳಗೊಳ್ಳುವಿಕೆಯ ಸಂಕೇತವಾಗಿ ಮುಂದುವರಿದಿದೆ; ಸಂಸ್ಕೃತಿ, ಚರಿತ್ರೆ ಮತ್ತು ರಾಷ್ಟ್ರೀಯತೆಯ ಸಮೀಕರಣದ ರೂಪದಲ್ಲಿ ನೋಡಬಹುದಾದ ಈ ಗೀತೆ, ತನ್ನೊಳಗಿನ ಏಕತೆಯ ಶಕ್ತಿಯಿಂದ ಎಲ್ಲರನ್ನೂ ಸೆಳೆಯುವಂತಿದೆ. ಈ ಗೀತೆಯು ಧರ್ಮ, ಜಾತಿ, ಭಾಷೆಗಳಿಗೆ ಅತೀತವಾಗಿ ಎಲ್ಲರನ್ನೂ ಒಳಗೊಳ್ಳುವ ರಾಷ್ಟ್ರೀಯ ಸಂಕೇತವಾಗಿದೆ. ಭಾರತೀಯರ ಭಾವಕೋಶದ ಭಾಗವಾದ ಈ ಅಪೂರ್ವ ಗೀತೆಗೆ ರಾಜಕೀಯದ ಸ್ಪರ್ಶವಾದಾಗ, ಅದು ತನ್ನ ಬಹು ಆಯಾಮದ ಅರ್ಥ ಸಾಧ್ಯತೆಗಳನ್ನು ಕಳೆದುಕೊಳ್ಳುತ್ತದೆ.



ವಂದೇ ಮಾತರಂ ಪೂರ್ಣ ಪಠ್ಯವನ್ನು ಹಾಡುವಂತೆ ಕೇಂದ್ರ ಸರ್ಕಾರ ರೂಪಿಸಿರುವ ಮಾರ್ಗಸೂಚಿ, ದೇಶದ ಬಹುತ್ವದ ಆಶಯಗಳನ್ನು ಗಾಸಿಗೊಳಿಸುವಂತಹದ್ದು.

ವಂದೇ ಮಾತರಂ ಗೀತೆ ಭಾವೋತ್ಕರ್ಷದ ಮೌಲ್ಯವಾಗಿ ಗುರ್ತಿಸಿಕೊಂಡಿರುವ ಪಶ್ಚಿಮ ಬಂಗಾಳದಲ್ಲೀಗ ಚುನಾವಣಾ ಪರ್ವ. ಚುನಾವಣಾ ಲಾಭದ ಅವಕಾಶಗಳು ಹಾಗೂ ಕೋಮು ಧ್ರುವೀಕರಣದ ಲೆಕ್ಕಾಚಾರದ ರೂಪದಲ್ಲಿ ರಾಷ್ಟ್ರೀಯ ಗೀತೆಯನ್ನು ರಾಜಕೀಯಗೊಳಿಸುತ್ತಿರುವ ವಿದ್ಯಮಾನವನ್ನು ಗಮನಿಸಬೇಕು. ಹಾಗೆಯೇ ಈ ಪ್ರಯತ್ನ, ಬಹುತ್ವ ಮತ್ತು ವಿಶ್ವಮಾನವ ದೃಷ್ಟಿಕೋನವನ್ನು ಹೊಂದಿದ್ದ, ಪಶ್ಚಿಮ ಬಂಗಾಳದ ಬಹುದೊಡ್ಡ ಐಕಾನ್ ಆಗಿರುವ ರವೀಂದ್ರನಾಥ ಟ್ಯಾಗೋರರಿಗೆ ಮುಖಾಮುಖಿಯಾಗಿ ಬಂಕಿಮಚಂದ್ರರನ್ನು ನಿಲ್ಲಿಸುವ ಹುನ್ನಾರವೂ ಆಗಿದೆ. ರಾಷ್ಟ್ರೀಯ ಸಂಕೇತಗಳು ಏಕತೆ ಮತ್ತು ಒಮ್ಮತದ ಪ್ರತಿನಿಧಿಗಳಾಗಿವೆ. ಇತಿಹಾಸದಿಂದ ಆಯ್ದುಕೊಂಡಿರುವ ಅಶೋಕಸ್ತಂಭ ಹಾಗೂ ಚಕ್ರಗಳು ನಿರ್ದಿಷ್ಟ ಅರ್ಥವನ್ನು ಹೊಂದಿದ್ದರೂ, ಅವು ಬಹುತ್ವ ಹಾಗೂ ರಾಷ್ಟ್ರೀಯ ಚಿಂತನೆಯನ್ನು ಪ್ರತಿನಿಧಿಸುತ್ತವೆ. ನಾಗರಿಕರ ಮೇಲೆ ಸರ್ಕಾರ ಏಕರೂಪದ ವ್ಯಾಖ್ಯಾನ ಅಥವಾ ಸಂಕೇತವನ್ನು ಹೇರಬಾರದು. ವಂದೇ ಮಾತರಂ ಗೀತೆಯ ಕೆಲವು ಭಾಗಗಳೊಂದಿಗೆ ಸಂಬಂಧ ಹೊಂದುವುದು ಹಿಂದೂ ಅಲ್ಲದ ಸಮುದಾಯಗಳಿಗೆ ಸಮಸ್ಯೆಯಾಗುತ್ತದೆ ಎನ್ನುವುದನ್ನು ತಿಳಿದೂ, ಆ ಗೀತೆಯ ಪೂರ್ಣ ಪಠ್ಯದ ಪ್ರಸ್ತುತಿಯನ್ನು ದೇಶಭಕ್ತಿ ಅಥವಾ ನಿಷ್ಠೆಯ ಪರೀಕ್ಷೆಯನ್ನಾಗಿ ಮಾಡಬಾರದು. ವಂದೇ ಮಾತರಂ ಹಾಡುವಿಕೆಗೆ ಸಂಬಂಧಿಸಿದ ಪರಿಷ್ಕೃತ ಮಾರ್ಗಸೂಚಿಯನ್ನು ಬೆಂಬಲಿಸುವ ರಾಜಕೀಯ ಸಂಕಥನಗಳು, ದೇಶದ ಸಾಂವಿಧಾನಿಕ ತತ್ತ್ವಗಳೊಂದಿಗೆ ಸಂಘರ್ಷಕ್ಕೆ ಕಾರಣವಾಗುವಂತಿವೆ.

ಹೊಳಪಿನ ಕಲೆ ಮತ್ತು ಕತ್ತಲೆ

ಅರ್ಥ ವಿಚಾರ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಭಾರತ ಪ್ರಕಾಶಿಸುತ್ತಿದೆ ಮತ್ತು ನಶಿಸುತ್ತಲೂ ಇದೆ ಎನ್ನುವುದಕ್ಕೆ ನಿದರ್ಶನವಾಗಿ ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳನ್ನು ಗಮನಿಸಬಹುದು. ಆ ಊರುಗಳಲ್ಲಿನ ಮಂದಿರಗಳ ಶಿಲ್ಪಕಲೆಯ ವೈಭವ ಹಾಗೂ ವರ್ತಮಾನದ ಜನಜೀವನದಲ್ಲಿ ಸಮಕಾಲೀನ ಭಾರತದ ವೈರುಧ್ಯಗಳು ಕಾಣಿಸುತ್ತವೆ.

ಬಹುತೇಕ ಭಾರತೀಯರು ಅಸಂಗತವೂ, ಸಮಯದ ಹರಿವಿನಲ್ಲಿ ಉಂಟಾಗುವ ವ್ಯತ್ಯಯದ ನಡುವೆಯೂ ಸಹಬಾಳ್ವೆ ನಡೆಸುತ್ತಾರೆ. ಇಲ್ಲಿ ಅದ್ಭುತವಾದುದು ಇರುವಂತೆ ಅಸ್ಪಷ್ಟವಾದುದೂ ಇದೆ. ಪವಿತ್ರವೂ ಲಭ್ಯ, ಅಪವಿತ್ರವೂ ದೊರಕೀತು. ಬಲ್ಲಿದರು ಇರುವಂತೆ ಬಡವರೂ ಇಲ್ಲಿದ್ದಾರೆ. ಇತ್ತೀಚೆಗೆ ಬಾದಾಮಿ ಗುಹಾಂತರ ದೇವಾಲಯಗಳ ವಿಗ್ರಹಗಳು, ಪ್ರತಿಮೆಗಳನ್ನು ಕಂಡಾಗ, ಮೇಲಿನ ವೈರುಧ್ಯಗಳ ದರ್ಶನ ನನಗಾಯಿತು.

ಎಲ್ಲಮ್ಮ ದೇವಿಯ ಜನಪದ ಗೀತೆಗಳ ಕಾರ್ಯಕ್ರಮವೊಂದಕ್ಕೆ ನನಗೆ ಆಹ್ವಾನವಿತ್ತು. ರೇಣುಕಾ ಎಲ್ಲಮ್ಮ ಎಂದೇ ಜನಪ್ರಿಯವಾದ ಈ ಶಕ್ತಿದೇವತೆಯನ್ನು ಕರ್ನಾಟಕದಲ್ಲಷ್ಟೇ ಅಲ್ಲದೆ, ತೆಲಂಗಾಣ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿಯೂ ಪೂಜಿಸುತ್ತಾರೆ. ಸಮಾಜ ಕಡೆಗಣಿಸಿದ ವರ್ಗದವರ ರಕ್ಷಣೆಗೆ ಇರುವ ದೇವಿ ಇವಳು ಎಂದೇ ನಂಬಿಕೆ. ಫಲ ನೀಡುವ ದೇವಿ, ರೋಗ–ರುಜಿನಗಳ ನಿಯಂತ್ರಿಸಬಲ್ಲವಳು, ಗಂಡನಿಂದ ಲಿಂಗಭೇದಕ್ಕೆ ಒಳಗಾಗಿ, ಎದೆಗುಂದದೆ ದೈವಿಕ ಕೋಪಾವಿಷ್ಟೆಯಾದ ದೇವತೆ ಎಲ್ಲಮ್ಮ. ‘ಮಿಥ್’ಗಳ ಪ್ರಕಾರ ಎಲ್ಲಮ್ಮ ಲಿಂಗತ್ವ ಅಲ್ಪಸಂಖ್ಯಾತರೊಟ್ಟಿಗೆ ಬೆಸೆದುಕೊಂಡವಳು. ಗ್ರಾಮೀಣ ಜನರ ನಡುವಲ್ಲಿಯೇ ಆಕೆಯ ಅಸ್ತಿತ್ವ ಇದೆ. ಅನೇಕರು ಆಕೆಯನ್ನು ‘ಮಹಿಳೆಯರ ಇಷ್ಟ ದೇವತೆ’ ಎಂದೇ ಭಾವಿಸುತ್ತಾರೆ. ಬಾಯಿಂದ ಬಾಯಿಗೆ ಹರಿದುಬಂದ ಹಾಡುಗಳು, ಲಾವಣಿಗಳು, ನೃತ್ಯ ನಾಟಕಗಳು, ಜಾತ್ರೆಗಳು, ಅನೂಚಾನವಾಗಿ ನಡೆಸಿಕೊಂಡು ಬಂದ ಆಚರಣೆಗಳಲ್ಲಿ ಎಲ್ಲಮ್ಮ ಶತಮಾನಗಳಿಂದ ಜೀವಿಸುತ್ತಾ ಬಂದಿದ್ದಾಳೆ.

ನಿವೃತ್ತ ಐಎಎಸ್ ಅಧಿಕಾರಿಯ ಪುತ್ರಿ ಶಿಲ್ಪಾ ಮುಡುಬಿ ಜನಪದ ಲಾವಣಿಗಳನ್ನು ಪ್ರಸ್ತುತಪಡಿಸಿದರು. ಶಿಲ್ಪಾ ಹಾಗೂ ಅವರ ಪತಿ ಬಹುರಾಷ್ಟ್ರೀಯ ಕಂಪನಿಯ ಉದ್ಯೋಗ ತೊರೆದು, ಕಲಬುರಗಿಯಲ್ಲಿ ನೆಲಸಿದ್ದಾರೆ. ಶ್ರೀಮಂತವಾದ ಜನಪದ ಕಲೆಗಳನ್ನು ಸಂರಕ್ಷಿಸುವ ಉದ್ದೇಶದಿಂದಲೇ ಅವರು ಸಣ್ಣ ಸಮುದಾಯವೊಂದನ್ನು ಕಟ್ಟಿದ್ದಾರೆ. ಗದಗ ಜಿಲ್ಲೆಯ ಸೂಡಿಯಲ್ಲಿನ ಮೆಟ್ಟಿಲುಗಳ ಬಾವಿಯನ್ನು ಈಗ ಸಂರಕ್ಷಿಸಲಾಗಿದ್ದು, ಅದಕ್ಕೆ ಡೆಕ್ಕನ್ ದತ್ತಿ ಸಂಸ್ಥೆ ಹಣಕಾಸಿನ ನೆರವು ನೀಡಿತ್ತು. 11ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ ಅದ್ಭುತವಾದ ಸ್ಮಾರಕ ಮೆಟ್ಟಿಲುಗಳ ಬಾವಿಯನ್ನು, ಅಂತರ್ಜಲ ನಿರ್ವಹಣೆ ವ್ಯವಸ್ಥೆಗಳ ‘ಮಾಸ್ಟರ್‌ಪೀಸ್’ ಎನ್ನಲಡ್ಡಿ ಇಲ್ಲ.

ಶಿಲ್ಪಾ ಅವರ ಮೇಲುಲಿ ಹಾಗೂ ಧ್ವನಿಯ ಗುಣಮಟ್ಟವು ಮಾಧುರ್ಯದ ಜೊತೆಗೆ ಎಲ್ಲಮ್ಮನ ಬಗ್ಗೆ ಇರುವ ಸಾಹಿತ್ಯದ ಸಾರ–ಸತ್ವವನ್ನು ನಮ್ಮೆದೆಗೆ ನಾಟುವಂತೆ ಮಾಡಿತು. ಅವರ ಕೈಯಲ್ಲಿದ್ದ ಏಕತಾರಿ ನಾದ, ಅಲೆಮಾರಿಗಳು ಎಂದೋ ಹೊಮ್ಮಿಸಿದ್ದ ಸಂಗೀತವನ್ನು ನವನೀತವಾಗಿಸಿತ್ತು. ಲಾವಣಿಯೊಂದು ಎಲ್ಲಮ್ಮನ ಹುಟ್ಟು–ಬದುಕಿನ ಮೇಲೆ ಬೆಳಕು ಚೆಲ್ಲುವಾಗ, ಕಷ್ಟ–ಕಾರ್ಪಣ್ಯಗಳ ಹಾದಿಯಲ್ಲಿ ಹೃದಯಹೀನ ಪತಿ ಜಮದಗ್ನಿ ಒಡ್ಡಿದ ಸವಾಲುಗಳಿಗೆ ಅವಳು ಎದೆಗೊಡುತ್ತಾ ಬಂದ ಕಥನಗಳು ತೆರೆದುಕೊಂಡವು. ಹೊಡೆತ ತಿಂದು ಬಿದ್ದ ನಂತರ ಮತ್ತೆ ಮತ್ತೆ ಎಲ್ಲಮ್ಮ ಮೇಲೆದ್ದು ನಿಲ್ಲುವ ಸಾಹಸಗಾಥೆಯು ನಮ್ಮ ಹೃದಯದ ಕಂಪನವನ್ನು ತೀವ್ರಗೊಳಿಸುತ್ತದೆ. ಮಹಾಭಾರತದ ಕಥನಗಳಿಗೆ ಹೊರತಾದ ಹೂರಣವನ್ನು ಈ ಜನಪದ ಗಾಥೆಯು ಅರುಹಿತು.

ಕ್ರಿ.ಶ. 6ರಿಂದ 8ನೇ ಶತಮಾನದವರೆಗೆ ಚಾಲುಕ್ಯರು ಆಳಿದ ನಾಡು ಸಮೃದ್ಧವಾಗಿತ್ತು. 2ನೇ ಪುಲಿಕೇಶಿ ರಾಜನಾಗಿದ್ದ ಕಾಲದಲ್ಲಿ ದಕ್ಷಿಣದಲ್ಲಿ ಕಾವೇರಿ ಜಲಾನಯನ ಪ್ರದೇಶದವರೆಗೆ, ನರ್ಮದಾ ನದಿಯತನಕ ಹಾಗೂ ಗುಜರಾತ್‌ನ ಕೆಲವು ಭಾಗಗಳವರೆಗೆ ಸಾಮ್ರಾಜ್ಯ ವಿಸ್ತರಣೆಗೊಂಡಿತ್ತು. ಬಾದಾಮಿಯಲ್ಲಿ ಬಂಡೆಗಳನ್ನು ಕೊರೆದು ದೇವಸ್ಥಾನಗಳನ್ನು ನಿರ್ಮಿಸಿದ್ದು ಚಾಲುಕ್ಯರ ಸಾಮ್ರಾಜ್ಯದ ಮೊದಲ ಅವಧಿಯಲ್ಲಿ. ದಕ್ಷಿಣ ದೇವಸ್ಥಾನ ಶಿಲ್ಪಕಲೆಗಳ ತಾಯಿ ಎಂದೇ ಅದನ್ನು ಬಣ್ಣಿಸುತ್ತಾರೆ. ಆ ನಂತರ ಕಟ್ಟಿದ್ದು ಪಟ್ಟದಕಲ್ಲು (ಯುನೆಸ್ಕೊ ವಿಶ್ವ ಪರಂಪರೆಯ ತಾಣ. ಐಹೊಳೆಯಲ್ಲಿನ ಅಡಿಪಾಯವೇ ಇಲ್ಲದೆ ನಿರ್ಮಿತವಾದ ಸ್ವತಂತ್ರ ದೇಗುಲಗಳು ಕೂಡ ಆಮೇಲೆ ತಲೆ ಎತ್ತಿದವು. ಇವೆಲ್ಲವೂ ದಕ್ಷಿಣ ಭಾರತದ ಹಿಂದೂ ದೇಗುಲಗಳ ಶಿಲ್ಪಕಲೆಗೆ ಪ್ರೇರಣೆ ನೀಡಿದವು. ಬಾದಾಮಿ ಹಾಗೂ ಪಟ್ಟದಕಲ್ಲು ಪರ್ಯಾಯ ರಾಜಧಾನಿಗಳಾಗಿದ್ದವು).

1500 ವರ್ಷಗಳ ಹಿಂದೆ, ಬಂಡೆಗಳನ್ನು ಕಟೆದು ನಿರ್ಮಿಸಲಾದ ಈ ದೇವಸ್ಥಾನಗಳಲ್ಲಿನ ಕೆತ್ತನೆಗಳು ಗಮನಸೆಳೆಯುತ್ತವೆ. ಎಲ್ಲ ಕೆತ್ತನೆಗಳು ಚಿತ್ತಾಪಹಾರಿ. ಯಾವ ಸುತ್ತಿಗೆ, ಯಾವ ಉಳಿ, ಯಾವ ಅಪೂರ್ವ ಕಲ್ಪನೆಯು ಶಿಲೆಯಲ್ಲಿ ಅಂತಹ ಕಲೆ ಮೂಡಿಸಿತೊ?

ಬಾದಾಮಿ, ಪಟ್ಟದಕಲ್ಲು, ಐಹೊಳೆಯ ದೇಗುಲಗಳನ್ನು, ಅಲ್ಲಿನ ಶಿಲ್ಪಕಲೆಯನ್ನು ನೋಡಿ ‘ಅಬ್ಬಾ’ ಎನ್ನುವ ಉದ್ಗಾರ ಹೊರಡಿಸಿ, ನಾವು ಹೊರಬಂದಾಗ ಆದ ಅನುಭವವೇ ಬೇರೆ. ಸಣ್ಣ ಸಣ್ಣ ಓಣಿಗಳಲ್ಲಿ ಸಗಣಿ ತೊಪ್ಪೆಗಳ ಮೇಲೆ ಕಾಲಿಡದಂತೆ ಎಚ್ಚರ ವಹಿಸುತ್ತ ಅಡಿ ಇಟ್ಟೆವು. ತೆರೆದ ಚರಂಡಿಗಳಿಗೆ ಗುಡಿಸಲುಗಳಿಂದ ಕೊಚ್ಚೆ ನೀರು ರಸ್ತೆ ಸೀಳಿಕೊಂಡೇ ಸರಾಗ ಹರಿದು ಬರುತ್ತಿತ್ತು. ಶಿಥಿಲಗೊಂಡ ಮನೆಗಳನ್ನು ಅಲ್ಲಲ್ಲಿ ಕೆಡವಿದ್ದರು. ಅವುಗಳ ಸಿಮೆಂಟ್ ಪಳೆಯುಳಿಕೆ ಕಂಬಗಳ ಒಳಭಾಗದಲ್ಲಿ ಬೀಡಾಡಿ ದನಗಳಿದ್ದವು. ಕೈಮಗ್ಗಗಳಲ್ಲಿ ನೂಲುವ ಶಬ್ದವೂ ಕಿವಿಯ ಮೇಲೆ ಬಿತ್ತು. ನಮ್ಮ ಗೈಡ್ ಒಂದು ಮನೆಯೊಳಗೆ ಕರೆದೊಯ್ದರು. ಅವರು ಲಾಗಾಯ್ತಿನಿಂದ ಇಳಕಲ್ ಸೀರೆಯನ್ನು ನೇಯುತ್ತಾ ಬಂದವರು. ಹತ್ತಿ ಹಾಗೂ ಶುದ್ಧ ರೇಷ್ಮೆಯ ಹದವರಿತ ಮಿಶ್ರಣದ ಸೀರೆಗಳು ಅವು. ನೇಯ್ಗೆಯಲ್ಲಿನ ಸಂಕೀರ್ಣತೆ, ಸಹಜವಾದ ಬಣ್ಣಗಳನ್ನು ಬಳಸುವ ವಿಧಾನ, ಬಣ್ಣಗಳನ್ನು ಹದವರಿತಂತೆ ಬೆರೆಸುವ ಕ್ರಮ... ಎಲ್ಲವೂ ತಲೆಮಾರಿನಿಂದ ತಲೆಮಾರಿಗೆ ಹರಿದುಬಂದಿವೆ.

ಕೈಮಗ್ಗದಲ್ಲಿ ಕರಚಳಕ ತೋರುತ್ತಾ ಕಾರ್ಯಮಗ್ನರಾಗಿದ್ದ ಒಬ್ಬಾಕೆಯು ಕಿಟಕಿಯಾಚೆ ಇದ್ದ ನಮ್ಮತ್ತ ನೋಟ ಬೀರಿದರು. ಸೀರೆ ನೇಯಲು ಎಷ್ಟು ದಿನ ಬೇಕು ಎಂದು ಕೇಳಿದರೆ, ಹತ್ತಿ ಸೀರೆಗೆ ಏಳು ದಿನ ಎಂಬ ಉತ್ತರ ಬಂತು. ತುಸು ದೂರದಲ್ಲೇ ಇದ್ದ ಅಂಗಡಿಯಲ್ಲಿ ಒಂದು ಸೀರೆಗೆ ₹3,000 ದರವಿತ್ತು. ಅದನ್ನು ಮಾರುತ್ತಿದ್ದ ಮಹಿಳೆ ಪಾಲಿಯೆಸ್ಟರ್ ಸೀರೆ ಉಟ್ಟಿದ್ದರು. ನೈಲಾನ್ ನೂಲುಗಳೂ ದೊಡ್ಡ ಯಂತ್ರಗಳಿಂದ ಹೊಮ್ಮುತ್ತಿದ್ದವು. ಕಾಲಾಂತರದಲ್ಲಿ ಅದೂ ಅನಿವಾರ್ಯವೇ ಎಂದುಕೊಂಡೆ.

ಶಾಲೆಯಿಂದ ಅದೇ ತಾನೇ ಬಂದ ಆಕೆಯ ಸಣಕಲು ಮಗಳು ಬಡತನದ ಸ್ಥಿತಿಗೆ ಕನ್ನಡಿ ಹಿಡಿದಳು. ಹೀಗಿದ್ದರೂ ಮಹಿಳೆಯ ಕುಶಲ ಕಲೆಯಲ್ಲಿ ಲೋಪವಿಲ್ಲ. ನಮ್ಮದೇ ಗೂಡೊಳಗೆ ಸೇರಿಕೊಂಡ ನಗರ ನಾಗರಿಕರಾದ ನಾವು ಇಂಟರ್ನೆಟ್, ಎ.ಐ ಮಂತ್ರ ಜಪಿಸುತ್ತಿದ್ದೇವೆ. ಥಾಮಸ್ ಗ್ರೇ ಇದನ್ನೇ ‘Let not Ambition mock their useful toil’ ಎಂದು ಹೇಳಿರುವುದು. ಬಡತನಕ್ಕೂ, ವೃತ್ತಿಪರತೆ–ಬದ್ಧತೆಗೂ ಸಂಬಂಧ ಕಲ್ಪಿಸಬಾರದು ಎಂಬರ್ಥದ ಕಿವಿಮಾತಿದು.

ಮನೆಯಿಂದ ಹೊರಗೆ ಬಂದಮೇಲೆ ಒಬ್ಬ ಮಹಿಳೆ ಬಟ್ಟೆ ಒಗೆಯುತ್ತಾ ಇದ್ದರು. ದಿನಕ್ಕೆ ಎಷ್ಟು ಗಂಟೆ ನೀರು ಬರುತ್ತದೆ ಎಂಬ ನಮ್ಮ ಪ್ರಶ್ನೆಗೆ ಸಿಕ್ಕ ಉತ್ತರ: ‘ಐದು ದಿನಕ್ಕೊಮ್ಮೆ ಎರಡು ಗಂಟೆ ಮಾತ್ರ.’ ಬಾದಾಮಿ, ಐಹೊಳೆ, ಪಟ್ಟದಕಲ್ಲು ಈ ಸ್ಥಳಗಳಲ್ಲಿ ಮಲಪ್ರಭಾ, ಘಟಪ್ರಭಾ, ಕೃಷ್ಣಾ ನದಿಗಳು ಪ್ರಮುಖವಾಗಿ ಹರಿಯುತ್ತವೆ. ಅವೆಲ್ಲವೂ ಸೇರುವ ಸ್ಥಳದಲ್ಲಿ ಭವ್ಯವಾದ ಆಲಮಟ್ಟಿ ಅಣೆಕಟ್ಟು ಕಟ್ಟಲಾಗಿದೆ. ಎಲ್ಲೆಡೆಯೂ ನೀರು ಕಂಡರೂ ಬಳಸಲು ಹನಿ ಸಿಗುವುದಿಲ್ಲ! ನನಗೆ ಮಾಸ್ತಿ ವೆಂಕಟೇಶ ಅಯ್ಯಂಗಾರರ ಮಾತು ನೆನಪಾಯಿತು. ಅವರು ಬೇಲೂರಿಗೆ ಭೇಟಿ ನೀಡಿ, ಕಲಾಸ್ವಾದ ಮಾಡಿದ ನಂತರ ಹೀಗಂದಿದ್ದರು: ‘ಓ ದೇವರೇ, ದಯಾಮಯನೂ ಶಕ್ತಿಶಾಲಿಯೂ ಆದ ನೀನು ಇಂತಹ ಭವ್ಯ ದೇವಸ್ಥಾನವನ್ನು ಕೊಟ್ಟಿರುವೆ. ಕಲೆ, ಸಂಸ್ಕೃತಿಯ ಉಚ್ಛ್ರಾಯ ಸ್ಥಿತಿಗೆ ದೊಡ್ಡ ಕೊಡುಗೆ ಇತ್ತಿರುವೆ. ಆದರೀಗ ಬಡತನದ ಕೂಪಕ್ಕೆ ನಮ್ಮನ್ನು ಯಾಕೆ ದೂಡಿರುವೆ?’

ಅಂದು ರಾತ್ರಿಯ ಮಾತುಕತೆಯಲ್ಲಿ ನಮ್ಮೊಂದಿಗೆ ಕಲಾ ಇತಿಹಾಸಕಾರ ಹಾಗೂ ಪ್ರೊಫೆಸರ್, 80 ವಯಸ್ಸು ದಾಟದ ಹೆಲೆನ್ ಫಿಲನ್ ಇದ್ದರು. ಪಿ.ವಿ. ನರಸಿಂಹ ರಾವ್ ಪ್ರಧಾನಿಯಾಗಿದ್ದಾಗ ಭಾರತಕ್ಕೆ ಗ್ರೀಕ್ ದೇಶದ ರಾಯಭಾರಿಯಾಗಿ ಕೆಲಸ ಮಾಡಿದ್ದವರು ಆಕೆಯ ಪತಿ ಸ್ಟೀಫನ್ ಬ್ಲೋಚ್ ಸ್ಯಾಲೋಜ್. ಅವರು ಡೆಕ್ಕನ್ ಪರಂಪರೆ ದತ್ತಿ ಸಂಸ್ಥೆ ಸ್ಥಾಪಿಸಿದರು. ಹೈದರಾಬಾದ್‌ನ ರಾಜಶ್ರೀ ಕೂಡ ನಮ್ಮೊಡನೆ ಇದ್ದರು. ಅವರು ಡೆಕ್ಕನ್ ಸಂಸ್ಥೆಯೊಟ್ಟಿಗೆ ಮೆಟ್ಟಿಲುಬಾವಿಗಳ ಪುನರುಜ್ಜೀವನ ಕಾರ್ಯದಲ್ಲಿ ಆಸ್ಥೆಯಿಂದ ತೊಡಗಿಕೊಂಡಿದ್ದರು.

ಬಾದಾಮಿಯಲ್ಲಿ ವಿದೇಶದಿಂದ ಬಂದ ಮೂವರೋ ನಾಲ್ವರೋ ಅಷ್ಟೇ ಯಾಕೆ ಇದ್ದಾರೆ ಎಂಬ ಪ್ರಶ್ನೆಯನ್ನು ಅಲ್ಲಿದ್ದ ಯಾರೋ ಕೇಳಿದರು. ಥಾಯ್ಲೆಂಡ್, ಬಾಲಿ, ಮಾರಿಷಸ್, ಮಾಲ್ದೀವ್ಸ್, ಸಿಂಗಪುರಕ್ಕೆ ಹೆಚ್ಚಿನ ಮಂದಿ ಪ್ರವಾಸ ಹೋಗುತ್ತಾರಲ್ಲವೇ ಎಂಬ ಉಪಪ್ರಶ್ನೆಯನ್ನೂ ಅವರು ಹಾಕಿದರು. ಅದಕ್ಕೆ ಹೆಲೆನ್ ಹೀಗಂದರು: ‘ನಾನು ಪ್ರತಿವರ್ಷ ಐದಾರು ಸಲ ಇಲ್ಲಿಗೆ ಬರುತ್ತೇನೆ. ನನ್ನ ಮಗನಿಗೆ ಭಾರತ ಇಷ್ಟ. ಅವನೂ ಪ್ರತಿವರ್ಷ ಬರುತ್ತಾನೆ. ಅವನಿಗೆ ತನ್ನ ಸ್ನೇಹಿತರನ್ನೂ ಕರೆತರಲು ಇಷ್ಟ. ಆದರೆ, ಅವರೆಲ್ಲ ಭಾರತ ಕೊಳಕಾಗಿದೆ ಎನ್ನುತ್ತಾರೆ. ಅದರಲ್ಲೂ ಸತ್ಯವಿದೆ.’

ದೇವಸ್ಥಾನಗಳನ್ನು ನೋಡಿದ ಮೇಲೆ ನಾವೂ ಚೋಳ ರಾಜರಂತೆ ಮತ್ತೆ ಪುಟದೇಳಬಹುದು ಎಂಬ ಉತ್ಸಾಹ ಮೂಡುತ್ತದೆ. ಶಿಥಿಲಗೊಂಡ ಹಳ್ಳಿಗಳು ಹಾಗೂ ಎದ್ದುಕಾಣುವ ಬಡತನ ಬೇಸರ ಮೂಡಿಸುತ್ತದಾದರೂ, ಅಲ್ಲಿ ದಣಿವಿಲ್ಲದೆ ಕೆಲಸ ಮಾಡುವ ಕುಶಲಮತಿ ಪುರುಷರು–ಮಹಿಳೆಯರನ್ನು ಕಂಡಾಗ ಸ್ಫೂರ್ತಿಯ ಚಿಲುಮೆಯೊಂದು ಮನದಲ್ಲಿ ಮೂಡಿತು.

ಭರವಸೆಯೇ ಬದುಕಿಗೆ ಇಂಧನ. ಫ್ಯೊದೊರ್ ದಾಸ್ತೋವ್‌ಸ್ಕಿ ಹೇಳಿರುವಂತೆ– ‘ಭರವಸೆ ಕಳೆದುಕೊಂಡು ಬದುಕುವುದೆಂದರೆ, ಜೀವಿಸುವುದನ್ನೇ ಬಿಟ್ಟಂತೆ.’

ವಾಚಕರ ವಾಣಿ

ಕ್ಯಾಥೊಲಿಕ್ ಕ್ರೈಸ್ತರ ಈಡೇರದ ಬೇಡಿಕೆ

ರಾಜ್ಯದ ಚರ್ಚ್‌ಗಳಲ್ಲಿ ಪ್ರಾರ್ಥನಾ ವಿಧಿಗಳು ಕನ್ನಡದಲ್ಲೇ ಜರುಗಬೇಕು ಎಂಬುದು ಕನ್ನಡ ಕ್ಯಾಥೊಲಿಕ್ ಕ್ರೈಸ್ತರ ಬೇಡಿಕೆ. ಇದಕ್ಕೆ ಕಿವಿಗೊಡುವವರೇ ಇಲ್ಲ. ನೆರೆಯ ರಾಜ್ಯಗಳ ಚರ್ಚ್‌ಗಳಲ್ಲಿ ಎಲ್ಲಾ ಪೂಜಾ ಪ್ರಾರ್ಥನೆಗಳು ಅಲ್ಲಿನ ಸ್ಥಳೀಯ ಭಾಷೆಯಲ್ಲೇ ಜರುಗುತ್ತವೆ. ಆದರೆ, ಇಲ್ಲಿನ ಚರ್ಚ್ ವರಿಷ್ಠರು ಕನ್ನಡ ಭಾಷೆಗೆ ಆದ್ಯತೆ ನೀಡುತ್ತಿಲ್ಲ. 1983ರಲ್ಲಿ ವ್ಯಾಟಿಕನ್ ಪೀಠವು ಹೊರಡಿಸಿದ ಸುತ್ತೋಲೆಯಲ್ಲಿ ಸ್ಥಳೀಯ ಭಾಷೆಯಲ್ಲಿ ಪೂಜಾ ಪ್ರಾರ್ಥನೆಗಳು ಜರುಗಬೇಕೆಂದು ಹೇಳಿದ್ದರೂ ಅದು ಪಾಲನೆಯಾಗುತ್ತಿಲ್ಲ. ಇತ್ತೀಚೆಗೆ ಬೆಂಗಳೂರಿನಲ್ಲಿ ಅಖಿಲ ಭಾರತ ಬಿಷಪ್‌ಗಳ ಸಮ್ಮೇಳನ ನಡೆಯಿತು. ಅಲ್ಲಿ ಕನ್ನಡ ಕ್ರೈಸ್ತರ ಕುಂದುಕೊರತೆ ಬಗ್ಗೆ ಪ್ರಸ್ತಾಪ ಮಾಡುವವರೇ ಇರಲಿಲ್ಲ. ಅವರ ಪರವಾಗಿ ಮಾತನಾಡುವವರೇ ಇಲ್ಲವೆಂದ ಮೇಲೆ ಬೇಡಿಕೆಗಳು ಈಡೇರಲು ಸಾಧ್ಯವೆ?

ಎಲ್. ಚಿನ್ನಪ್ಪ, ಬೆಂಗಳೂರು

ನಕಲಿ ವಿಜ್ಞಾನದ ಉಪಟಳ: ಎಚ್ಚರ ಅಗತ್ಯ

‘ವಿಜ್ಞಾನ: ನಕಲಿಗೇನು ಮದ್ದು?’ ಲೇಖನವು (ಲೇ: ಗುರುರಾಜ್ ದಾವಣಗೆರೆ, ಪ್ರ.ವಾ., ಫೆ. 17) ಮಾಹಿತಿಪೂರ್ಣವಾಗಿದೆ. ಯಾವುದೇ ಸಂಗತಿಯನ್ನು ಪ್ರಶ್ನಿಸದೆ, ಪ್ರಯೋಗ ಮಾಡಿ ನೋಡದೆ ಒಪ್ಪಿಕೊಳ್ಳುವಂತಹುದಲ್ಲ ವಿಜ್ಞಾನ. ಹೀಗಿರುವಾಗ ಪ್ರತಿದಿನ ನಕಲಿ ವಿಜ್ಞಾನ ಸಂಗತಿಗಳು ಬೆಳಕಿಗೆ ಬರುತ್ತಿವೆ. ಇತ್ತೀಚೆಗೆ ಕೆಲವು ಮಾಧ್ಯಮಗಳಲ್ಲಿ ವೈದ್ಯರಲ್ಲದ ಹಲವು ಲೇಖಕರು ಯಾವುದೋ ಸೊಪ್ಪು, ಗಿಡಮೂಲಿಕೆಗಳ ಬಗ್ಗೆ ಮಾಹಿತಿ ತಿಳಿಸುತ್ತಾರೆ; ಅದನ್ನು ಬಳಸಿದರೆ ಎಷ್ಟೆಲ್ಲಾ ರೋಗಗಳು ಗುಣಮುಖವಾಗುತ್ತವೆಂದು ಬರೆಯುತ್ತಾರೆ. ಇಂತಹ ಬರಹ ಓದಿದ ಮುಗ್ಧ ಓದುಗರು ಆ ಮದ್ದು ಪ್ರಯೋಗಿಸಿ ಅಡ್ಡಪರಿಣಾಮಕ್ಕೆ ತುತ್ತಾದ ನಿದರ್ಶನಗಳಿವೆ. ಈ ಕುರಿತು ಸಾರ್ವಜನಿಕರು ಎಚ್ಚರವಹಿಸಬೇಕಿದೆ.

ಎಲ್.ಪಿ. ಕುಲಕರ್ಣಿ, ಹಿರೇಮಗಳೂರು

ಕೃಷಿ ಭೂಮಿ: ಭೂಗಳ್ಳರ ಕಾಕದೃಷ್ಟಿ

ಲೋಕಾಯುಕ್ತದಿಂದ ಸರ್ಕಾರಿ ನೌಕರರ ಮನೆ ಮೇಲೆ ದಾಳಿ ನಡೆಸಿ ಅಕ್ರಮ ಸಂಪತ್ತನ್ನು ಪತ್ತೆಹಚ್ಚಲಾಗುತ್ತದೆ. ನೌಕರರು ಹಲವು ನಿವೇಶನ, ಹತ್ತಾರು ಎಕರೆ ಕೃಷಿ ಭೂಮಿ ಹೊಂದಿರುತ್ತಾರೆ. ರಾಜ್ಯದಲ್ಲಿ ಕೃಷಿ ಭೂಮಿಯ ಮೇಲೆ ಭೂಗಳ್ಳರ ವಕ್ರದೃಷ್ಟಿ ಹೆಚ್ಚುತ್ತಿದೆ. ಮೊದಲೆಲ್ಲಾ ಕೃಷಿ ಜಮೀನನ್ನು ರೈತನೇ ಖರೀದಿಸುತ್ತಿದ್ದ. ಪ್ರಸ್ತುತ ಕೃಷಿ ಜಮೀನನ್ನು ಮತ್ತೊಬ್ಬ ರೈತ ಖರೀದಿಸುವ ಯೋಚನೆ ಮಾಡಲಾರದಂತಹ ವ್ಯವಸ್ಥೆಯನ್ನು ಭೂಗಳ್ಳರು ಸೃಷ್ಟಿಸಿದ್ದಾರೆ. ಇವರು ಕೃಷಿ ಚಟುವಟಿಕೆ ಮಾಡುವುದಿಲ್ಲ. ಭೂಮಿಯ ಬೆಲೆಯನ್ನು ದುಪ್ಪಟ್ಟುಗೊಳಿಸುತ್ತಾರೆ. ನಿಜವಾದ ರೈತರು ಭೂಮಿ ಖರೀದಿಸದಂತೆ ಮಾಡುತ್ತಾರೆ. ಇಂತಹ ಅಕ್ರಮಗಳಿಗೆ ಕಡಿವಾಣ ಹಾಕಬೇಕಿದೆ.

ತಿಮ್ಮೇಶ ಮುಸ್ಟೂರು, ಜಗಳೂರು

ಸಾರ್ಥಕ ಸಂಪ್ರದಾಯ ಪ್ರಗತಿಯ ಸಂಕೇತ

ಭಾರತದ ಮಹತ್ವವು ಅದರ ಭೌತಿಕ ಪ್ರಗತಿಯಲ್ಲಿ ಮಾತ್ರವಲ್ಲ, ನೈತಿಕ ಮೌಲ್ಯಗಳು ಮತ್ತು ಮಾನವೀಯತೆಯಲ್ಲಿ ಅಡಗಿದೆ. ಆದರೆ, ಇಂದಿನ ವೇಗದ ಜೀವನಶೈಲಿಯಲ್ಲಿ ಯುವಜನರು ಮೌಲ್ಯಗಳಿಂದ ನಿಧಾನವಾಗಿ ದೂರವಾಗುತ್ತಿದ್ದಾರೆ. ಆಧುನಿಕತೆಯ ಹೆಸರಿನಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ ಹೆಚ್ಚುತ್ತಿದೆ. ಉಡುಪು, ಮಾತಿನ ಶೈಲಿ, ವರ್ತನೆ ಇವೆಲ್ಲದಲ್ಲೂ ಸರಳತೆ, ಸಂಯಮ ಕಡಿಮೆಯಾಗುತ್ತಿದೆ. ಹಿರಿಯರಿಗೆ ಗೌರವ, ಸಂಪ್ರದಾಯಗಳಿಗೆ ಮಾನ್ಯತೆ, ಮಾತಿನಲ್ಲಿ ವಿನಯ – ಇವು ನಮ್ಮ ಸಂಸ್ಕೃತಿಯ ಬೆನ್ನೆಲುಬಾಗಿದ್ದವು. ಇವೆಲ್ಲ ಪ್ರಸ್ತುತ ಮರೆಯಾಗುತ್ತಿರುವುದು ನೋವಿನ ಸಂಗತಿ. ಆರೋಗ್ಯಕರ ಸಂಪ್ರದಾಯ ಅನುಸರಿಸುವುದು ಹಳೆಯತನವಲ್ಲ; ಅದು ನಮ್ಮ ಹೆಗ್ಗುರುತು. ಭಾರತದ ವೈಭವವು ನಮ್ಮ ಸಂಪ್ರದಾಯದಲ್ಲಿದೆ. ಆ ವೈಭವ ಉಳಿಸುವ ಜವಾಬ್ದಾರಿ ನಮ್ಮೆಲ್ಲರದು. ಆಧುನಿಕತೆಯೊಂದಿಗೆ ಸಂಪ್ರದಾಯವನ್ನು ಸಮತೋಲನದಿಂದ ಸಾಗಿಸುವುದೇ ನೈಜ ಪ್ರಗತಿ.

ಗೋಪಿ ವೀರಭದ್ರ, ರಾಯಚೂರು

ಹುಸಿ ಬಾಂಬ್: ಕಿಡಿಗೇಡಿಗಳಿಗೆ ಶಿಕ್ಷೆ ವಿಧಿಸಿ

ರಾಜ್ಯದ ಕೆಲವು ನ್ಯಾಯಾಲಯಗಳಿಗೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಭದ್ರತಾ ಪಡೆಗಳು ಪರಿಶೀಲಿಸಿದ ಬಳಿಕ ಅದು ಹುಸಿ ಎಂಬುದು ಗೊತ್ತಾಗಿದೆ. ಈ ಮೊದಲು ಶಾಲೆ, ವಿಮಾನ ನಿಲ್ದಾಣಗಳಿಗೆ ಬೆದರಿಕೆ ಕರೆ ಬರುತ್ತಿದ್ದವು. ಇದರಿಂದ ಅನಗತ್ಯ ಭೀತಿ, ಆರ್ಥಿಕ ನಷ್ಟ, ಪೊಲೀಸರ ಸಮಯ ಮತ್ತು ಸಂಪನ್ಮೂಲ ವ್ಯರ್ಥವಾಗುತ್ತದೆ. ಬೆದರಿಕೆ ಕರೆ ಅಥವಾ ಸಂದೇಶ ನಿಭಾಯಿಸುವುದು ತಮಾಷೆಯಲ್ಲ. ಸೈಬರ್ ಅಪರಾಧ ತಡೆ ವಿಭಾಗದವರು ಇಂತಹ ಇ–ಮೇಲ್‌ಗಳ ಮೂಲವನ್ನು ತ್ವರಿತವಾಗಿ ಪತ್ತೆಹಚ್ಚಬೇಕಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಮತ್ತು ಭಾರೀ ದಂಡ ವಿಧಿಸಬೇಕಿದೆ.

ಉದಯ ಮ. ಯಂಡಿಗೇರಿ, ಧಾರವಾಡ

ತೆರಿಗೆ ಪಾಲು: ‘ಸುಪ್ರೀಂ’ ಮೊರೆ ಹೋಗಲಿ

ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಅದರ ಹಕ್ಕಿನ ತೆರಿಗೆ ಪಾಲನ್ನು ಸಮರ್ಪಕವಾಗಿ ನೀಡದೆ ವಂಚಿಸುತ್ತಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೇಳಿಕೆ ಗಂಭೀರವಾದುದು. ಇಂತಹ ಹೇಳಿಕೆಗಳು ಸಾರ್ವಜನಿಕ ವೇದಿಕೆಗಳಲ್ಲಿ ವ್ಯಕ್ತವಾಗುವುದರಿಂದ ಸಮಸ್ಯೆಯು ಪರಿಹಾರ ಕಾಣದು. ಅತಿಹೆಚ್ಚು ತೆರಿಗೆ ಸಂಗ್ರಹವಾಗುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಅದರ ಕೊಡುಗೆಗೆ ತಕ್ಕ ಪ್ರತಿಫಲ ಸಿಗುತ್ತಿದೆಯೇ ಎಂಬ ಪ್ರಶ್ನೆ ಸಹಜ. ಈ ಹಿಂದೆ ರಾಜ್ಯವು ತನ್ನ ಹಕ್ಕಿಗಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಿದೆ. ಅದೇ ದೃಢತೆಯನ್ನು ಈಗಲೂ ತೋರಿಸಬೇಕು. ಕೇವಲ ರಾಜಕೀಯ ಭಾಷಣಗಳು ಅಥವಾ ಭಾವನಾತ್ಮಕ ಘೋಷಣೆಗಳು ನಾಡಿನ ಅಭಿವೃದ್ಧಿಗೆ ಸಾಕಾಗುವುದಿಲ್ಲ. ರಾಜ್ಯದ ಹಿತಾಸಕ್ತಿ ಕಾಪಾಡಲು ಕಾನೂನು ಹೋರಾಟವೇ ಅನಿವಾರ್ಯ.

ಎಂ.ಎಸ್. ಅಲ್ಲಮ ಪ್ರಭು, ಬೆಂಗಳೂರು

ಚಾಟಿ

ಪ್ರಶ್ನೆ ಇನ್ನೂ ಜೀವಂತ

ಪುಲ್ವಾಮಾ ದಾಳಿಯಲ್ಲಿ ದೇಶವು 40 ವೀರಸೈನಿಕರನ್ನು ಕಳೆದುಕೊಂಡಿತು. ಆದರೆ, ಏಳು ವರ್ಷಗಳ ನಂತರವೂ ಪ್ರಶ್ನೆ ಹಾಗೆಯೇ ಉಳಿದಿದೆ: 300 ಕೆ.ಜಿ ಆರ್‌ಡಿಎಕ್ಸ್ ಎಲ್ಲಿಂದ ಬಂತು? ಅದನ್ನು ಯಾರು ತಲಪಿಸಿದರು? ಇದೆಲ್ಲವೂ ಯಾರ ಅಣತಿಯಂತೆ ಸಂಭವಿಸಿತು?

ಜೆ.ಎಸ್. ಪಾಟೀಲ್, ಪ್ರಾಚಾರ್ಯ, ‘ಎಕ್ಸ್’ನಿಂದ

ಕಿಡಿನುಡಿ

ಸರ್ಕಾರದ ಭ್ರಷ್ಟಾಚಾರ, ಅಸಮರ್ಥತೆ, ನಿರ್ಲಕ್ಷ್ಯದಿಂದ ಅಮಾಯಕರು ರಸ್ತೆ ಗುಂಡಿಗಳಿಗೆ ಬಲಿಯಾಗುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಅವರು, ಸಿಎಂ ಕುರ್ಚಿ ಕನಸಿನಿಂದ ಮೇಲೆದ್ದು ಮೊದಲು ಸಿಲಿಕಾನ್ ಸಿಟಿಯ ರಸ್ತೆಗಳ ಯಮಗುಂಡಿಗಳನ್ನು ದುರಸ್ತಿಪಡಿಸಬೇಕಿದೆ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 18-2-2001

• **ರಾಜ್ಯಕ್ಕೆ ಬಂದ ಭೀಮಾ ನೀರು: ರೈತರ ನಿರಶನ ಅಂತ್ಯ**

ವಿಜಾಪುರ, ಫೆ. 17– ಮಹಾರಾಷ್ಟ್ರ ಸರ್ಕಾರ ಭೀಮಾ ನದಿಗೆ ಬಿಟ್ಟಿರುವ ನೀರು ಇಂದು ಸಂಜೆ ಸುಮಾರು 4.30ರ ವೇಳೆಗೆ ಜಿಲ್ಲೆಯ ಇಂಡಿ ತಾಲ್ಲೂಕಿನ ಗಡಿಯಲ್ಲಿರುವ ಟಾಕಳಿ ಸೇತುವೆಗೆ ತಲಪಿ ಮುಂದೆ ಹರಿದಿದ್ದು, ಇದನ್ನು ಕಣ್ಣಾರೆ ಕಂಡ ರೈತರು ಆಮರಣ ನಿರಶನವನ್ನು ಅಂತ್ಯಗೊಳಿಸಿದರು.

ಇಂದು ಮುಂಜಾನೆ ಭೀಮಾ ನದಿ ನೀರು ಟಾಕಳಿ ಸೇತುವೆಗೆ ಸಮೀಪದ ಮಹಾರಾಷ್ಟ್ರದ ಔಟ್–ಶಿರನಾಳ ಬ್ಯಾರೇಜ್ ತಲಪಿತ್ತು. ಅಧಿಕೃತ ಮೂಲಗಳ ಪ್ರಕಾರ ಈ ಬ್ಯಾರೇಜ್‌ನಿಂದ ಹರಿವಿನ ಪ್ರಮಾಣ 600–700 ಕ್ಯುಸೆಕ್ ಇತ್ತು.

• **ಗೇರುಸೊಪ್ಪಾದಲ್ಲಿ ವಿದ್ಯುತ್ ಘಟಕ ಕಾರ್ಯಾರಂಭ**

ಜೋಗ್‌ಫಾಲ್ಸ್, ಫೆ. 17– ಇಲ್ಲಿಗೆ ಸಮೀಪದ ಗೇರುಸೊಪ್ಪಾದಲ್ಲಿ ಶರಾವತಿ ಟೇಲ್‌ರೇಸ್ ಯೋಜನೆಯ 60 ಮೆಗಾವಾಟ್ ಸಾಮರ್ಥ್ಯದ ಮೊದಲ ವಿದ್ಯುತ್ ಉತ್ಪಾದನಾ ಘಟಕವನ್ನು ಕರ್ನಾಟಕ ವಿದ್ಯುತ್ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜ್ಯೋತಿ ರಾಮಲಿಂಗಂ ಅವರು, ಶುಕ್ರವಾರ ಮಧ್ಯಾಹ್ನ ಉದ್ಘಾಟಿಸಿದರು.

ನಿಗದಿತ ಅವಧಿಗೆ ಆರು ತಿಂಗಳು ಮುಂಚಿತವಾಗಿ ಯೋಜನೆ ಪೂರ್ಣಗೊಂಡಿದೆ ಎಂದು ತಿಳಿಸಿದರು.

75 ವರ್ಷಗಳ ಹಿಂದೆ

ಭಾನುವಾರ, 18-2-1951

• **ನಿವೃತ್ತ ಸೈನಿಕರ ಪುನರ್ ವ್ಯವಸ್ಥೆ**

ಬೆಂಗಳೂರು, ಫೆ. 17– ಇತ್ತೀಚೆಗೆ ದೆಹಲಿಯಲ್ಲಿ ನಡೆದ ‘ಬಿ’ ವಿಭಾಗದ ಸಂಸ್ಥಾನಗಳ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ನಿವೃತ್ತ ಸೈನಿಕರ ಪುನರ್ ವ್ಯವಸ್ಥೆಯ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಿದ ಮೈಸೂರು ಸರಕಾರ, ಈ ತಿಂಗಳ ಅಂತ್ಯದೊಳಗೆ ಅಥವಾ ಮುಂದಿನ ತಿಂಗಳ ಆದಿಯಲ್ಲಿ ಈ ಸಂಬಂಧದಲ್ಲಿ ವಿವರವಾದ ಯೋಜನೆಯೊಂದನ್ನು ತಯಾರಿಸಿ ಕೇಂದ್ರಕ್ಕೆ ಕಳುಹಿಸಿಕೊಡುವುದು.

ಇಂದು ಮಧ್ಯಾಹ್ನ ನಡೆದ ಪತ್ರಿಕಾಗೋಷ್ಠಿಯಲ್ಲಿ ಮೇಲಿನ ಅಂಶ ತಿಳಿಸಿದ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು, ‘ಪುನರ್ ವ್ಯವಸ್ಥೆಯ ಕ್ರಮಗಳ ಬಗ್ಗೆ ಅಂತಿಮ ನಿರ್ಧಾರಗಳಿಗೆ ಬರುವವರೆಗೆ ನಿವೃತ್ತಿಗೊಳಿಸುವುದನ್ನು ನಿಲ್ಲಿಸಬೇಕೆಂದು ಕೇಂದ್ರಕ್ಕೆ ಸಲಹೆ ಮಾಡಲಾಗಿದೆ’ ಎಂದೂ ತಿಳಿಸಿದರು.

ಚುರುಮುರಿ

ಔಷಧರಹಿತ ಚಿಕಿತ್ಸೆ

• ಮಣ್ಣೆ ರಾಜು

ಹೆಂಡ್ತಿ ಕಾಯಿಲೆಗೆ ಚಿಕಿತ್ಸೆ ಕೊಡಿಸಲು ಸರ್ಕಾರಿ ಆಸ್ಪತ್ರೆಗೆ ಬಂದ ಶಂಕ್ರಿ, ‘ಡಾಕ್ಟರ್ ಇದ್ದಾರಾ?’ ಎಂದು ಕೇಳಿದ.

‘ಡಾಕ್ಟರ್ ಇದ್ದಾರೆ, ಔಷಧ ಮಾತ್ರ ಇಲ್ಲ’ ಅಂದರು ನರ್ಸ್.

‘ಹೊರಗಿನ ಮೆಡಿಕಲ್ ಸ್ಟೋರ್‌ಗೆ ಔಷಧ ಚೀಟಿ ಬರೆದುಕೊಡಬಾರದು ಎಂದು ಇಲಾಖೆ ಹೇಳಿದೆಯಲ್ವೆ?’ ಎಂದ ಶಂಕ್ರಿ.

‘ಹೌದು, ನಮ್ಮ ಡಾಕ್ಟರ್ ಔಷಧರಹಿತ ಚಿಕಿತ್ಸೆ ಕೊಡ್ತಾರೆ’.

ಪಕ್ಕದಲ್ಲಿದ್ದವನು ಎದ್ದು ಕುಂಟುತ್ತಾ ಡಾಕ್ಟರ್ ಕೊಠಡಿಗೆ ಹೋದ.

‘ಈಗ ಒಳಗೆ ಹೋದ ವ್ಯಕ್ತಿಯ ಕಾಲು ಉಳುಕಿದೆ, ಯಾವುದೇ ಔಷಧ ಕೊಡದೆ ಡಾಕ್ಟರ್ ಕಾಲು ನೀವಿ ಉಳುಕು ತೆಗೆದು ಕಳಿಸುತ್ತಾರೆ ನೋಡುತ್ತಿರಿ’ ಎಂದರು ನರ್ಸ್. ಹಾಗೇ ಆಯ್ತು. ಕುಂಟುತ್ತಾ ಹೋದವನು ಸಹಜವಾಗಿ ನಡೆದುಬಂದ!

‘ತಮ್ಮ ಕೈಗುಣದಿಂದ ಡಾಕ್ಟರ್ ಕಠಿಣ ಕಾಯಿಲೆಗಳನ್ನೂ ಗುಣಪಡಿಸಿಬಿಡುತ್ತಾರೆ... ಈಗ ನಿಮ್ಮ ಸರದಿ ಹೋಗಿ’ ಎಂದರು ನರ್ಸ್.

‘ನನ್ನ ಹೆಂಡ್ತಿಗೆ ವಿಪರೀತ ಹೊಟ್ಟೆಯುರಿ ಸಾರ್’ ಶಂಕ್ರಿ ಡಾಕ್ಟರ್‌ಗೆ ಹೇಳಿದ.

ಅಷ್ಟರಲ್ಲಿ ಹೆಂಗಸೊಬ್ಬಳು ಅಳುವ ಮಗುವನ್ನು ಎತ್ತಿಕೊಂಡು ಬಂದು, ‘ಡಾಕ್ಟ್ರೇ, ಮಗು ಗಂಟಲು ಕಿತ್ತುಬರುವಂತೆ ಅಳುತ್ತಿದೆ, ಅಳು ನಿಲ್ಲಿಸಿ’ ಎಂದಳು.

ಚೀಟಿ ಬರೆದುಕೊಟ್ಟ ಡಾಕ್ಟರ್, ‘ಈ ಕಷಾಯ ಮಾಡಿ ಮಗೂಗೆ ಕುಡಿಸಿ, ನಾನು ಮಗುವಾಗಿದ್ದಾಗ ನನ್ನ ಅಜ್ಜಿ ನನಗೆ ಇದನ್ನೇ ಕುಡಿಸುತ್ತಿದ್ದರು’ ಎಂದರು. ಹೆಂಗಸು ಹೋದರು.

‘ನಿಮ್ಮ ಮೆಡಿಕಲ್ ಕಾಲೇಜಿನಲ್ಲಿ ಕಷಾಯ ಕೋರ್ಸ್ ಇತ್ತಾ ಸಾರ್?’ ಸುಮಿ ಕೇಳಿದಳು.

‘ಇಲ್ಲ, ಅಜ್ಜಿಯಿಂದ ಕಲಿತೆ... ಸರಿ, ಯಾವಾಗಿನಿಂದ ನಿಮಗೆ ಹೊಟ್ಟೆಯುರಿ?’ ಕೇಳಿದರು.

‘ಪಕ್ಕದ ಮನೆಯವರು ಹೊಸ ಕಾರು ತಂದಾಗಿನಿಂದ ಡಾಕ್ಟರ್’ ಅಂದ ಶಂಕ್ರಿ.

ಡಾಕ್ಟರ್ ಪ್ರಿಸ್ಕ್ರಿಪ್ಷನ್ ಬರೆದುಕೊಟ್ಟು ಕಳಿಸಿದರು. ಅದರಲ್ಲಿ ‘ಹೊಸ ಕಾರು ಕೊಂಡುಕೊಳ್ಳಿ’ ಎಂದು ಬರೆದಿದ್ದರು.

ಸಂಗತ

ಹಾಸ್ಯದ ಹರಿಗೋಲಿನ ಚಲನೆ ದಿಕ್ಕು ತಪ್ಪಿತೆ?

ನಗು ಆರೋಗ್ಯಕ್ಕೆ ಪೂರಕ. ಸದಭಿರುಚಿ ಇಲ್ಲದ ನಗು ಸಮಾಜಕ್ಕೆ ಮಾರಕ. ಹಾಸ್ಯದ ಹೆಸರಿನಲ್ಲಿ ರೂಪುಗೊಳ್ಳುತ್ತಿರುವ ರಂಜನೆಯ ಸರಕುಗಳ ಪರಾಮರ್ಶೆ ಆಗಬೇಕಿದೆ.

• ಸಿದ್ದಯ್ಯ ಹಿರೇಮಠ

ಹಾಸ್ಯದ ಹೆಸರಿನ ಕಾರ್ಯಕ್ರಮವೊಂದರಲ್ಲಿ ರಾಮಾಯಣ ಮತ್ತು ಮಹಾಭಾರತದ ಪಾತ್ರಗಳು ಮತ್ತು ದೇವತೆಗಳನ್ನು ವಿಡಂಬನೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಖಾಸಗಿ ವಾಹಿನಿಯೊಂದನ್ನು ಹೈಕೋರ್ಟ್ ಇತ್ತೀಚೆಗೆ ತರಾಟೆಗೆ ತೆಗೆದುಕೊಂಡಿದೆ. ‘ವಾಕ್ ಸ್ವಾತಂತ್ರ್ಯದ ನೆಪದಲ್ಲಿ ಮನಸ್ಸಿಗೆ ತೋಚಿದಂತೆ ನಡೆದುಕೊಳ್ಳಬಹುದೆ? ಹಾಸ್ಯದ ಹೆಸರಲ್ಲಿ ಏನು ಬೇಕಾದರೂ ನಡೆಯಬಹುದೆ?’ ಎಂದು ಪ್ರಶ್ನಿಸಿದೆ.

ಹಾಸ್ಯದ ಹೆಸರಿನಲ್ಲಿ ಅಪಹಾಸ್ಯದಂತಾಗಿರುವ ರೀಲ್ಸ್‌ಗಳು ಯುವಜನರನ್ನು ಹೆಚ್ಚು ಸೆಳೆಯುತ್ತಿವೆ. ಅಂಥವನ್ನೇ ಮತ್ತೆ ಮತ್ತೆ ನೋಡುತ್ತ ಯುವಕ–ಯುವತಿಯರು ಅಮೂಲ್ಯವಾದ ಸಮಯವನ್ನು ವ್ಯರ್ಥವಾಗಿ ಕಳೆಯುತ್ತಿದ್ದಾರೆ. ಗುರು–ಹಿರಿಯರನ್ನು ಗೇಲಿ ಮಾಡುವುದು, ಶಿಕ್ಷಕರನ್ನು ಹೀಗಳೆಯುವುದು, ನಾಡಿನ ಕಲೆ, ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಗೌರವಿಸುವವರನ್ನು ಅಪಹಾಸ್ಯಕ್ಕೆ ಈಡು ಮಾಡುವಂಥ ಅಸಂಬದ್ಧ ಹಾಸ್ಯಕ್ಕೆ ಒತ್ತು ನೀಡಿದ ರೀಲ್ಸ್‌ಗಳೇ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಕಾಣಸಿಗುತ್ತವೆ.

ದುರದೃಷ್ಟವಶಾತ್, ಅಂಥ ರೀಲ್ಸ್ ಸಿದ್ಧಪಡಿಸುವವರಿಗೆ ಹೆಸರು ಮತ್ತು ಹಣವೂ ದೊರೆಯುತ್ತಿದೆ. ಸಾಮಾಜಿಕ ಜಾಲತಾಣ ಅದಕ್ಕೆ ಸೂಕ್ತ ವೇದಿಕೆ ಒದಗಿಸುತ್ತಿದೆ. ಸ್ಟಾರ್ ನಟರು ಸಿನಿಮಾಗಳಲ್ಲಿ ಸಿಗರೇಟು, ಮದ್ಯದ ಬಾಟಲಿಗಳೊಂದಿಗೆ ರಾರಾಜಿಸುತ್ತಿರುವುದೂ ಯುವಜನ ದಾರಿತಪ್ಪಲು ಪ್ರೇರೇಪಿಸುತ್ತಿದೆ.

ಕಿರುತೆರೆ ಶೋಗಳಲ್ಲಿ ಪೌರಾಣಿಕ, ಐತಿಹಾಸಿಕ ಪಾತ್ರಗಳ ವಿಡಂಬನೆ ಒಂದೆಡೆಯಾದರೆ, ದ್ವಂದ್ವಾರ್ಥದ ಪದಗಳನ್ನು ಬೇಕಾಬಿಟ್ಟಿಯಾಗಿ ಬಳಸುತ್ತಿರುವುದು ಅತಿಯಾಗಿದೆ. ದ್ವಂದ್ವಾರ್ಥದ ಪದಗಳ ಬಳಕೆ ಅನೇಕ ವರ್ಷಗಳ ಹಿಂದೆಯೇ ಕನ್ನಡ ಚಲನಚಿತ್ರಗಳಲ್ಲಿ ಶುರುವಾಗಿದೆ. ಎಂಬತ್ತು ತೊಂಬತ್ತರ ದಶಕದಲ್ಲಿ ಕಾಶೀನಾಥ್, ಜಗ್ಗೇಶ್ ಮತ್ತಿತರರು ಪ್ರಧಾನವಾಗಿ ನಟಿಸಿದ ಚಿತ್ರಗಳಲ್ಲಿ ಇಂಥ ಪದಗಳ ಬಳಕೆ ಆಗಿದ್ದರಿಂದ ಆರಂಭದಲ್ಲಿ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು. ಇದೀಗ ದ್ವಂದ್ವಾರ್ಥ ಪದ ಬಳಕೆಯು ಎಲ್ಲೆ ಮೀರಿದೆ. ಅಸಾಂವಿಧಾನಿಕ ಪದಗಳನ್ನು ಎಗ್ಗಿಲ್ಲದೇ ಬಳಸುವ, ಕುಟುಂಬ ಸಮೇತ ಕುಳಿತು ನೋಡಲು ಅಸಹ್ಯ ಎನ್ನಿಸುವಂಥ ಸನ್ನಿವೇಶಗಳನ್ನು ಸೃಷ್ಟಿಸಿ, ಅವಾಚ್ಯ ಪದಗಳನ್ನು ಬಳಸಲಾಗುತ್ತಿದೆ. ಉತ್ತರ ಕರ್ನಾಟಕದ ಆಡುಭಾಷೆಯ ಶೈಲಿಯನ್ನು ಇದಕ್ಕೆ ಪ್ರಧಾನವಾಗಿ ಬಳಸಿ, ‘ಇಡೀ ಉತ್ತರ ಕರ್ನಾಟಕ ಭಾಗದ ಜನರ ಅಭಿರುಚಿಯೇ ಸರಿಯಿಲ್ಲ, ಅಭಿರುಚಿಹೀನರು’ ಎಂಬ ಭಾವನೆ ಮೂಡುವಂತೆ ಮಾಡಲಾಗುತ್ತಿದೆ.

ಮದ್ಯಪಾನವನ್ನು ವೈಭವೀಕರಿಸುವ, ‘ಕುಡಿಯದವರು ಏನೇನೂ ಗೊತ್ತಿರದ ದಡ್ಡರು’ ಎಂದು ಬಿಂಬಿಸುವ ರೀಲ್ಸ್‌ಗಳೂ ರೂಪುಗೊಳ್ಳುತ್ತಿವೆ. ‘ಕುಡಿತದಿಂದ ಅನೇಕ ಲಾಭಗಳಿವೆ. ಧೈರ್ಯವನ್ನು ಕುಡಿತದಿಂದಲೇ ತಂದುಕೊಳ್ಳಬಹುದು’ ಎಂಬಂಥ ಅಸಂಬದ್ಧ ಸಲಹೆಗಳನ್ನು ರೀಲ್ಸ್‌ಗಳಲ್ಲಿ ಮಾತ್ರವಲ್ಲದೆ, ಕಿರುತೆರೆಯ ಕಾಮಿಡಿ ಕಾರ್ಯಕ್ರಮಗಳ ಮೂಲಕವೂ ಹರಿಬಿಡಲಾಗುತ್ತಿದೆ.

ಆ ಕ್ಷಣದ ಮನರಂಜನೆಗೂ, ಒಮ್ಮೆ ನಕ್ಕು ಸುಮ್ಮನಾಗಬಹುದಾದ ಕಾರ್ಯಕ್ರಮ ಮತ್ತು ರೀಲ್ಸ್‌ಗಳು ಉಂಟುಮಾಡಬಹುದಾದ ದುಷ್ಪರಿಣಾಮಗಳು ಎಂಥವು ಎಂಬ ಅರಿವು, ಅವುಗಳನ್ನು ಸಿದ್ಧಪಡಿಸುವವರಿಗೆ ಇಲ್ಲವೆಂದೇ ಕಾಣುತ್ತದೆ. ಸಾಮಾಜಿಕ ಜವಾಬ್ದಾರಿಯ ಕೊರತೆಯೂ ಅಂಥವರಲ್ಲಿ ಎದ್ದುಕಾಣುತ್ತಿದೆ. ಹೆಸರು, ಹಣ ಗಳಿಸುವ ಏಕೈಕ ಉದ್ದೇಶದೊಂದಿಗೆ ಸಿದ್ಧಗೊಂಡು, ಪ್ರಸಾರ ಆಗುತ್ತಿರುವ ಇಂಥ ಕಾರ್ಯಕ್ರಮಗಳು ಮತ್ತು ರೀಲ್ಸ್‌ಗಳು ಕೆಟ್ಟ ಅಭಿರುಚಿಯನ್ನು ಹುಟ್ಟುಹಾಕುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳಿಗೆ ಮಾದಕ ದ್ರವ್ಯಗಳ ವ್ಯಸನವೂ ಒಂದು ಕಾರಣವಾಗುತ್ತಿರುವುದು ಸರ್ವವಿದಿತ. ಹಿಂದೆಂದೂ ಕಂಡು, ಕೇಳರಿಯದ ಅಪರಾಧಗಳಲ್ಲಿ ಯುವಜನರು ಭಾಗಿಯಾಗುತ್ತಿರುವುದು ಕಳವಳದ ಸಂಗತಿ.

‘ಕುಡಿಯಲು ಹಣ ಕೊಡಲಿಲ್ಲ’ ಎಂಬ ಕಾರಣಕ್ಕೆ ತಾಯಿಯನ್ನೇ ಕೊಡಲಿಯಿಂದ ಕೊಚ್ಚಿ ಕೊಂದ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದ ಯುವಕನೊಬ್ಬ ಮದ್ಯದ ಅಮಲಿನಲ್ಲಿದ್ದ ಎಂದು ವರದಿಯಾಗಿದೆ. ಗಾಂಜಾ ಮತ್ತಿತರ ಮಾದಕ ವಸ್ತುವಿನ ಚಟ ಅಂಟಿಸಿಕೊಂಡಿದ್ದ ಯುವಕನೊಬ್ಬ, ಹಣ ನೀಡದ ತಂದೆಯನ್ನೇ ಕೊಲೆ ಮಾಡಿದ ಘಟನೆಯೂ ಉತ್ತರ ಭಾರತದಲ್ಲಿ ಕೆಲವು ತಿಂಗಳುಗಳ ಹಿಂದೆ ನಡೆದಿದೆ. ಯುವಜನರು ಸೇರಿದಂತೆ ವಯಸ್ಸಾದವರ ನಡುವೆ ನಡೆಯುವ ಸಣ್ಣಪುಟ್ಟ ಮನಸ್ತಾಪಗಳು, ಹೊಡೆದಾಟಗಳಿಗೆ ಮದ್ಯವೇ ಕಾರಣ. ಆದರೆ, ‘ಸರ್ವ ರೋಗಕ್ಕೆ ಸಾರಾಯಿ ಮದ್ದು’ ಎಂಬಂಥ ತಲೆಬುಡ ಇಲ್ಲದ ಸಲಹೆಗಳನ್ನು ರೀಲ್ಸ್ ಮೂಲಕ ನೀಡುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ.

ಯುವಜನರನ್ನು ಸುಲಭಕ್ಕೆ ಸೆಳೆಯುವ ತಂತ್ರಗಾರಿಕೆಯಲ್ಲಿ ಗಿಮಿಕ್‌ಗಳಿಗೆ ಮೊದಲ ಸ್ಥಾನ. ನಂತರದ ಸ್ಥಾನವು ಹೆಂಡತಿಯನ್ನು ಹೀಗಳೆಯುವಂಥ ರೀಲ್ಸ್‌ಗಳಿಗೆ ಸಲ್ಲುತ್ತದೆ. ಹಾಸ್ಯದ ಹೆಸರಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳಲ್ಲಂತೂ ಅಕ್ರಮ ಸಂಬಂಧವನ್ನು ಎಗ್ಗಿಲ್ಲದೆ ಪೋಷಿಸಲಾಗುತ್ತಿದೆ. ಪಕ್ಕದ ಮನೆಯಾಕೆಯ ಮೇಲೆ ಕಣ್ಣು ಹಾಕುವಂಥ ಸಂಭಾಷಣೆಯನ್ನು ಅಲ್ಲಿನ ಕಪೋಲಕಲ್ಪಿತ ಪಾತ್ರಗಳು ಯಾವುದೇ ಸಂಕೋಚ ಇಲ್ಲದೆಯೇ ಬಳಸುತ್ತವೆ. ಕಾರ್ಯಕ್ರಮಗಳ ನಿರ್ಣಾಯಕರ ಸ್ಥಾನದಲ್ಲಿರುವ ಅನೇಕ ಸೆಲೆಬ್ರಿಟಿ ಮಹಿಳೆಯರು ಅಂಥವನ್ನು ವಿರೋಧಿಸದೆ, ಬಿದ್ದುಬಿದ್ದು ನಗುವುದು ಕಾರ್ಯಕ್ರಮ ವೀಕ್ಷಿಸುವ ಮಹಿಳಾ ಪ್ರೇಕ್ಷಕರಲ್ಲಿ ಇರುಸುಮುರುಸು ತರುತ್ತದೆ.

ಬಹುತೇಕ ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾದವರು ಮದ್ಯದ ಅಮಲಿನಲ್ಲಿದ್ದು, ಅಮಾನವೀಯವಾಗಿ ಹಲ್ಲೆ ಮಾಡಿರುವ ಪ್ರಕರಣಗಳು ಬೆಳಕಿಗೆ ಬಂದಿವೆ. ಅಪರಾಧಕ್ಕೆ ಕುಮ್ಮಕ್ಕು ನೀಡುವ ಮದ್ಯ ಮತ್ತಿತರ ಮಾದಕ ವಸ್ತುಗಳನ್ನು ಸೇವಿಸುವಂತೆ ಪ್ರೇರೇಪಿಸುವ ಯಾವುದೇ ರೀಲ್ಸ್‌ಗಳನ್ನು ನಿರ್ಬಂಧಿಸುವಲ್ಲಿ ಸರ್ಕಾರ ಅಗತ್ಯ ಕ್ರಮಕ್ಕೆ ಮುಂದಾಗುವುದು ಸದ್ಯದ ಅವಶ್ಯಕತೆಗಳಲ್ಲಿ ಒಂದಾಗಿದೆ ಮತ್ತು ತುರ್ತೂ ಆಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಗಳು ಕಿಮ್ ಜು ಆಯ್ ಜೊತೆಗೆ ಕಿಮ್ ಜಾಂಗ್ ಉನ್

ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವರು ಉತ್ತರಾಧಿಕಾರಿಯಾಗಿ ತಮ್ಮ ಹದಿಹರೆಯದ ಮಗಳನ್ನು ನೇಮಿಸಲು ಪ್ರಯತ್ನ ನಡೆಸುತ್ತಿದ್ದಾರೆ ಎನ್ನುವ ಮಾಹಿತಿ ಹೊರಬಿದ್ದಿದೆ. ಮುಂದಿನ ದಿನಗಳಲ್ಲಿ ಪಟ್ಟಕ್ಕಾಗಿ ಕಿಮ್ ಜಾಂಗ್ ಮಗಳು ಮತ್ತು ಅವರ ತಂಗಿ ಕಿಮ್ ಯೋ ಜಾಂಗ್ ನಡುವೆ ಪೈಪೋಟಿ, ಸಂಘರ್ಷ ಏರ್ಪಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಇಬ್ಬರಲ್ಲಿ ಯಾರು ಗದ್ದುಗೆ ಏರಿದರೂ ಅವರು ದೇಶದ ಮೊದಲ ಮಹಿಳಾ ಮುಖ್ಯಸ್ಥರಾಗಲಿದ್ದಾರೆ

ಸರ್ವಾಧಿಕಾರಿ ನಾಡಿನಲ್ಲಿ ಉತ್ತರಾಧಿಕಾರಿ ಕುತೂಹಲ

ಕಿಮ್ ಜಾಂಗ್ ಉನ್ ಮಗಳು ಮತ್ತು ತಂಗಿ ನಡುವೆ ಶುರುವಾಗುವುದೇ ಸ್ಪರ್ಧೆ?

ಪ್ರಜಾವಾಣಿ ವಾರ್ತೆ

ಉತ್ತರ ಕೊರಿಯಾದಲ್ಲಿ ಇದೇ ತಿಂಗಳ ಅಂತ್ಯಕ್ಕೆ ಆಡಳಿತ ಪಕ್ಷದ (ವರ್ಕರ್ಸ್ ಪಾರ್ಟಿ) ಬೃಹತ್ ಸಮಾವೇಶ ನಡೆಯಲಿದೆ. ಐದು ವರ್ಷಗಳಿಗೊಮ್ಮೆ ನಡೆಯುವ ಸಮಾವೇಶದ ಬಗ್ಗೆ ಆ ದೇಶದ ಒಳಗೆ ಅಷ್ಟೇ ಅಲ್ಲ, ಜಾಗತಿಕ ಮಟ್ಟದಲ್ಲಿಯೂ ಕುತೂಹಲ ಮೂಡಿದೆ. ದೇಶವನ್ನು ಆಳುತ್ತಿರುವ ಕಿಮ್ ಜಾಂಗ್ ಉನ್ ಅವರ ಮುಂದಿನ ಆದ್ಯತೆಗಳು, ಸೇನೆ, ವಿದೇಶಾಂಗ ನೀತಿ, ಆರ್ಥಿಕತೆ, ಪ್ರಮುಖ ಅಧಿಕಾರಿಗಳ ಬದಲಾವಣೆ ಸೇರಿದಂತೆ ಹಲವು ಮಹತ್ವದ ವಿಚಾರಗಳ ಬಗ್ಗೆ ಅಂದು ಘೋಷಣೆಗಳು ಹೊರಬೀಳುವ ಸಾಧ್ಯತೆ ಇದೆ. ಅದಕ್ಕಿಂತ ಹೆಚ್ಚಿಗೆ ಅಂದು ಕಿಮ್ ಜಾಂಗ್ ಉನ್ ಅವರ ಉತ್ತರಾಧಿಕಾರಿ ಯಾರು ಎನ್ನುವ ಬಗ್ಗೆಯೂ ಘೋಷಣೆ ಹೊರಬೀಳಬಹುದು ಎನ್ನುವ ಕಾರಣಕ್ಕೆ ಅದರ ಬಗ್ಗೆ ಕುತೂಹಲ ಹುಟ್ಟಿಕೊಂಡಿದೆ.

ಇದುವರೆಗೆ ಕಿಮ್ ಜಾಂಗ್ ಉನ್ ಅವರ ಸಹೋದರಿ ಕಿಮ್ ಯೋ ಜಾಂಗ್ ಉತ್ತರಾಧಿಕಾರಿ ಆಗುತ್ತಾರೆ ಎಂದೇ ಭಾವಿಸಲಾಗಿತ್ತು. ಆದರೆ, ಇದೀಗ ಅವರ ಮಗಳು ಕಿಮ್ ಜು ಆಯ್ ಅವರ ಹೆಸರು ಮುನ್ನೆಲೆಗೆ ಬಂದಿದೆ. ಇದರಿಂದ ಮುಂದೆ ಸರ್ವಾಧಿಕಾರಿಯ ನಾಡಿನಲ್ಲಿ ಪಟ್ಟಕ್ಕಾಗಿ ಪೈಪೋಟಿ, ಸ್ಪರ್ಧೆ, ಸಂಘರ್ಷ ಉಂಟಾಗಲಿದೆ ಎನ್ನುವ ವಿಶ್ಲೇಷಣೆ ಇದೆ.

ಉತ್ತರ ಕೊರಿಯಾ ಉತ್ತರಾಧಿಕಾರಿ ವಿಚಾರವನ್ನು ಮುನ್ನೆಲೆಗೆ ತಂದಿದ್ದು ದಕ್ಷಿಣ ಕೊರಿಯಾ. ಸರ್ವಾಧಿಕಾರಿಯಾದ ಕಿಮ್ ಜಾಂಗ್ ಉನ್ ಅವರು ಉತ್ತರಾಧಿಕಾರಿಯಾಗಿ ತಮ್ಮ ಹದಿಹರೆಯದ ಮಗಳಾದ ಕಿಮ್ ಜು ಆಯ್ ಅನ್ನು ನೇಮಿಸಲು ಪ್ರಯತ್ನ ನಡೆಸುತ್ತಿದ್ದಾರೆ ಎಂದು ರಾಷ್ಟ್ರೀಯ ಗುಪ್ತಚರ ಸಂಸ್ಥೆಯ (ಎನ್‌ಐಎಸ್) ಮಾಹಿತಿ ಆಧರಿಸಿ ದಕ್ಷಿಣ ಕೊರಿಯಾ ಹೇಳಿದೆ.

ಕಿಮ್‌ಗೆ ಮೂವರು ಮಕ್ಕಳಿದ್ದು, ಅವರಲ್ಲಿ ಕಿಮ್ ಜು ಆಯ್ ಮಧ್ಯದವಳು (ಉಳಿದಿಬ್ಬರು ಗಂಡು ಮಕ್ಕಳು) ಎನ್ನಲಾಗಿದೆ. ಆದರೆ, ವಾಸ್ತವವಾಗಿ ಕಿಮ್ ಜಾಂಗ್ ಉನ್‌ಗೆ ಎಷ್ಟು ಮಕ್ಕಳು ಎನ್ನುವುದರ ಬಗ್ಗೆಯಾಗಲಿ, ಈಗ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿರುವ ಮಗಳ ಹೆಸರೇನು ಎನ್ನುವುದರ ಬಗ್ಗೆಯಾಗಲಿ ಅಧಿಕೃತ ಮಾಹಿತಿ ಇಲ್ಲ. ಅವಳ ಹೆಸರು ಕಿಮ್ ಜು ಆಯ್ ಇರಬಹುದು ಎನ್ನುವುದು ಒಂದು ಮೂಲದ ಮಾಹಿತಿ ಅಷ್ಟೇ. ಕಿಮ್ ಜಾಂಗ್ ಉನ್‌ಗೆ ಒಬ್ಬಳು ಮಗಳಿದ್ದಾಳೆ ಎನ್ನುವುದು ಬಹಿರಂಗಗೊಂಡಿದ್ದು 2013ರಲ್ಲಿ. ಉತ್ತರ ಕೊರಿಯಾ ರಾಜಧಾನಿ ಪ್ಯೊಂಗ್ಯಾಂಗ್‌ಗೆ ಭೇಟಿ ನೀಡಿದ್ದ ಅಮೆರಿಕದ ಬ್ಯಾಸ್ಕೆಟ್‌ಬಾಲ್ ಆಟಗಾರ ಡೆನ್ನಿಸ್ ರೋಡ್‌ಮನ್, ಕಿಮ್ ಜಾಂಗ್ ಉನ್‌ಗೆ ಒಬ್ಬ ಮಗಳಿದ್ದಾಳೆ ಎನ್ನುವುದನ್ನು ಬಹಿರಂಗಪಡಿಸಿದ್ದರು. 2022ರ ನಂತರ ಸೇನಾ ಕಾರ್ಯಕ್ರಮಗಳಲ್ಲಿ ಅಪ್ಪನ ಜತೆ ಕಾಣಿಸಿಕೊಂಡಿದ್ದಳು. ಕಳೆದ ವರ್ಷ ಸೇನಾ ಪರೇಡ್‌ನಲ್ಲಿ ಭಾಗವಹಿಸಲು ಚೀನಾಕ್ಕೆ ಭೇಟಿ ನೀಡಿದ್ದ ಅವಳು ಅಲ್ಲಿ ರಷ್ಯಾ ಸೇರಿದಂತೆ ವಿವಿಧ ರಾಷ್ಟ್ರಗಳ ಮುಖಂಡರನ್ನು ಭೇಟಿ ಮಾಡಿದ್ದು ಸುದ್ದಿಯಾಗಿತ್ತು. ಈ ವರ್ಷದ ಜನವರಿ 1ರಂದು ಮುತ್ತಾತ, ತಾತ ಅವರ ಸಮಾಧಿ ಇರುವ ಸ್ಥಳಕ್ಕೆ ಅಪ್ಪನೊಂದಿಗೆ ಭೇಟಿ ನೀಡಿದ್ದ ಬಾಲಕಿ, ಈಗ ಅಪ್ಪನೊಂದಿಗೆ ಸಾರ್ವಜನಿಕವಾಗಿ ಪದೇ ಪದೇ ಕಾಣಿಸಿಕೊಳ್ಳುತ್ತಿದ್ದಾಳೆ. ಸುಮಾರು 13 ವರ್ಷದ ಅವಳು ಆಡಳಿತದಲ್ಲಿ, ನೀತಿ ನಿರೂಪಣೆಯಲ್ಲಿ ಸಲಹೆ ನೀಡುತ್ತಿದ್ದು, ಅಪ್ಪನ ನಂತರ ಅಧಿಕಾರ ಹಿಡಿಯುತ್ತಾಳೆ ಎನ್ನಲಾಗುತ್ತಿದೆ.

ಕಿಮ್ ಜಾಂಗ್ ಉನ್, ಉತ್ತರ ಕೊರಿಯಾದ ವರ್ಕರ್ಸ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ, ಸೇನಾ ಪಡೆಗಳ ಸುಪ್ರೀಂ ಕಮಾಂಡರ್ ಮತ್ತು ದೇಶದ ಸರ್ವೋಚ್ಚ ನಾಯಕ. ರಕ್ತಸಿಕ್ತ ಹಾದಿಯಲ್ಲಿ 15 ವರ್ಷದ ಹಿಂದೆ ಗದ್ದುಗೆ ಹಿಡಿದ ಕಿಮ್ ಜಾಂಗ್ ಉನ್ ಅವರ ವಯಸ್ಸು ಈಗ 40ರ ಆಸುಪಾಸು ಇರಬಹುದು ಎನ್ನಲಾಗಿದೆ. ತನ್ನ ತಂದೆಯ ಸಾವಿನ ನಂತರ ಕಿಮ್ ಜಾಂಗ್ ಉನ್ ದೇಶದ ಅಧಿಕಾರದ ಚುಕ್ಕಾಣಿ ಹಿಡಿದಾಗ ಅವರ ವಯಸ್ಸು 26. ಯಾರನ್ನೂ ನಂಬದ, ಎಲ್ಲ ಕೆಲಸಗಳನ್ನೂ ನಿಗೂಢವಾಗಿ ಮಾಡುವ ಕಿಮ್ ಜಾಂಗ್ ಉನ್, ತನ್ನ ಹದಿಹರೆಯದ ಮಗಳನ್ನು ಉತ್ತರಾಧಿಕಾರಿಯನ್ನಾಗಿ ಈಗಲೇ ಏಕೆ ಸಜ್ಜು ಮಾಡುತ್ತಿದ್ದಾರೆ ಎನ್ನುವ ಬಗ್ಗೆಯೂ ಹಲವು ರೀತಿಯ ವಿಶ್ಲೇಷಣೆಗಳಿವೆ.

ಆದರೆ, ತನ್ನ ಮಗಳನ್ನು ಉತ್ತರಾಧಿಕಾರಿಯನ್ನಾಗಿ ಮಾಡುವುದು ಕಿಮ್ ಜಾಂಗ್ ಉನ್‌ಗೆ ಸುಲಭವೇನಲ್ಲ. ಕಿಮ್ ಜಾಂಗ್ ಉನ್ ಅವರ ತಂಗಿ ಕಿಮ್ ಯೋ ಜಂಗ್ ಉತ್ತರ ಕೊರಿಯಾದಲ್ಲಿ ಎರಡನೇ ಅತ್ಯಂತ ಪ್ರಭಾವಶಾಲಿ ವ್ಯಕ್ತಿಯಾಗಿದ್ದಾರೆ ಎನ್ನಲಾಗಿದೆ. ಅಣ್ಣನ ನಂತರ ತಾನೇ ಅಧಿಕಾರ ಹಿಡಿಯಬೇಕು ಎನ್ನುವ ಮಹತ್ವಾಕಾಂಕ್ಷೆ ಹೊಂದಿರುವ ಅವರು, ಹಿಂಸಾಚಾರದ ಮೂಲಕವಾದರೂ ಗದ್ದುಗೆ ಹಿಡಿಯಲು ಸಿದ್ಧರಾಗಿದ್ದಾರೆ ಎನ್ನಲಾಗುತ್ತಿದೆ. ಇಬ್ಬರಲ್ಲಿ ಯಾರು ದೇಶದ ಮುಖ್ಯಸ್ಥರಾದರೂ, ಅವರು ಉತ್ತರ ಕೊರಿಯಾದ ಮೊದಲ ಮಹಿಳಾ ಮುಖ್ಯಸ್ಥೆಯಾಗಲಿದ್ದಾರೆ. ಕಮ್ಯುನಿಸ್ಟ್ ಆಡಳಿತದ ರಾಷ್ಟ್ರಗಳಲ್ಲಿಯೂ ಅದೊಂದು ದಾಖಲೆಯಾಗಲಿದೆ. ಆದರೆ, ಸರ್ವಾಧಿಕಾರದ ರಾಷ್ಟ್ರಗಳಲ್ಲಿ ಇದು ಹೀಗೆಯೇ ನಡೆಯುತ್ತದೆ ಎಂದು ಯಾವುದರ ಬಗ್ಗೆಯೂ ಹೇಳಲಾಗದು.

ಆಧಾರ: ಎಎಫ್‌ಪಿ, ರಾಯಿಟರ್ಸ್, ಸಿಎನ್‌ಎನ್, ದಿ ಗಾರ್ಡಿಯನ್

ಏಕಿಷ್ಟು ಕುತೂಹಲ?

ಅಣ್ವಸ್ತ್ರಗಳನ್ನು ಹೊಂದಿ, ಅಮೆರಿಕ ಸೇರಿದಂತೆ ಹಲವು ದೇಶಗಳಿಗೆ ಸಡ್ಡು ಹೊಡೆಯಲು ಬಯಸಿರುವ ಕಿಮ್ ಜಾಂಗ್ ಉನ್ ಉತ್ತರಾಧಿಕಾರದ ವಿಚಾರ ಜಾಗತಿಕ ಮಟ್ಟದಲ್ಲಿ ಚರ್ಚೆಯಾಗುತ್ತಿದೆ.

ಪ್ರಜಾಪ್ರಭುತ್ವದಲ್ಲಿ ಅಥವಾ ರಾಜಕೀಯ ವಿದ್ಯಮಾನಗಳು ಮುಕ್ತವಾಗಿ ನಡೆಯುವ ವ್ಯವಸ್ಥೆಯಲ್ಲಿ ಉತ್ತರಾಧಿಕಾರಿ ಆಯ್ಕೆ ಎನ್ನುವುದು ನಿಗೂಢ ವಿಚಾರವೇನಲ್ಲ. ಆದರೆ, ಉತ್ತರ ಕೊರಿಯಾದಂಥ ಮಾಹಿತಿ ನಿರ್ಬಂಧಿತ ವ್ಯವಸ್ಥೆಯಲ್ಲಿ, ದೇಶದ ಸಕಲ ಆಗುಹೋಗುಗಳನ್ನೂ ಒಬ್ಬ ವ್ಯಕ್ತಿ ಏಕಪಕ್ಷೀಯವಾಗಿ ನಿರ್ಧರಿಸುವಲ್ಲಿ, ಸರ್ವಾಧಿಕಾರಿಯ ಬದುಕಿನ ಸಣ್ಣಪುಟ್ಟ ವಿವರಗಳೂ ರಹಸ್ಯವಾಗಿರುವ ದೇಶದಲ್ಲಿ ಉತ್ತರಾಧಿಕಾರಿ ಆಯ್ಕೆ ಎನ್ನುವುದು ಭಾರಿ ಮಹತ್ವದ, ಕುತೂಹಲದ ವಿಚಾರವಾಗಿರುವುದು ಸಹಜವೇ ಆಗಿದೆ.

ಅಧಿಕಾರ ಹಸ್ತಾಂತರ ಸುಲಭವಲ್ಲ

ಉತ್ತರ ಕೊರಿಯಾದಲ್ಲಿ ಉತ್ತರಾಧಿಕಾರಿ ನೇಮಕ, ಅಧಿಕಾರ ಹಸ್ತಾಂತರ ಅಷ್ಟು ಸುಲಭವಾಗಿ ನಡೆಯದು. 2011ರಲ್ಲಿ ತಂದೆ ಮೃತಪಟ್ಟ ನಂತರ ಕಿಮ್ ಜಾಂಗ್ ಉನ್ ಅಧಿಕಾರ ಚುಕ್ಕಾಣಿ ಹಿಡಿಯುವಾಗಲೂ ಅವರ ಕುಟುಂಬದಲ್ಲಿ ನಾಟಕೀಯ ಬೆಳವಣಿಗೆಗಳು ನಡೆದಿದ್ದವು.

ಅಧಿಕಾರಕ್ಕೆ ಏರಿದ ಎರಡು ವರ್ಷಗಳ ನಂತರ ತಮ್ಮ ಚಿಕ್ಕಪ್ಪ ಜಾಂಗ್ ಸಾಂಗ್ ಥೇಯಿಕ್ ಅವರನ್ನು ಪಕ್ಷ ವಿರೋಧಿ, ಪಕ್ಷ ವಿಭಜನೆ ಯತ್ನ, ಭ್ರಷ್ಟಾಚಾರ ಆರೋಪದಲ್ಲಿ ಬಂಧಿಸಿದ್ದರು. 2013ರ ಡಿಸೆಂಬರ್ 12ರಂದು ಅವರಿಗೆ ಮರಣದಂಡನೆಯನ್ನೂ ವಿಧಿಸಲಾಗಿತ್ತು.

2017ರ ಫೆಬ್ರುವರಿಯಲ್ಲಿ ಕಿಮ್ ಜಾಂಗ್ ಉನ್ ಅವರ ಮಲಸಹೋದರ ಕಿಮ್ ಜಾಂಗ್ ನಾಮ್ ಅವರನ್ನು ಕ್ವಾಲಾಲಂಪುರದ ವಿಮಾನ ನಿಲ್ದಾಣದಲ್ಲಿ ಹತ್ಯೆ ಮಾಡಲಾಗಿತ್ತು. ಇಬ್ಬರು ಅಪರಿಚಿತರು ಅವರ ಮುಖಕ್ಕೆ ರಾಸಾಯನಿಕವನ್ನು ಎರಚಿದ್ದರು. ಈ ಹತ್ಯೆಯ ಹಿಂದೆ ಕಿಮ್ ಜಾಂಗ್ ಅವರ ಕೈವಾಡ ಇದೆ ಎಂದೂ ಹೇಳಲಾಗಿತ್ತು.

ಕಿಮ್ ಜಾಂಗ್ ಉನ್ ಇರುವವರೆಗೆ ಅಧಿಕಾರ ಹಸ್ತಾಂತರದ ಪ್ರಮೇಯ ಬರಲಾರದು. ಅವರ ನಿಧನದ ನಂತರ ಅಧಿಕಾರ ಯಾರು ಹಿಡಿಯಬೇಕು ಎಂಬ ಬಗ್ಗೆ ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಬರಬಹುದು ಎಂದೂ ಹೇಳಲಾಗುತ್ತಿದೆ. ಸದ್ಯ ಜಗತ್ತಿಗೆ ಕಿಮ್ ಜಾಂಗ್ ಅವರ ಮಗಳ ಬಗ್ಗೆ ಮಾತ್ರ ಗೊತ್ತಿದೆ. ಅವರಿಗೆ ಇನ್ನಿಬ್ಬರು ಮಕ್ಕಳು ಇದ್ದಾರೆ ಎಂದು ಹೇಳಲಾಗುತ್ತಿರುವುದರಿಂದ ಕೊನೆ ಕ್ಷಣದಲ್ಲಿ ಅಥವಾ ಸಂದರ್ಭ ಬಂದರೆ ಉಳಿದ ಮಕ್ಕಳಲ್ಲಿ ಒಬ್ಬರನ್ನು ಉತ್ತರಾಧಿಕಾರಿ ಎಂದು ಅವರು ಘೋಷಿಸಬಹುದು ಎನ್ನುವ ವಾದವೂ ಇದೆ.

ಅಣ್ಣನ ಹಾದಿಯಲ್ಲಿ ತಂಗಿ

38 ವರ್ಷದ ಕಿಮ್ ಯೋ ಜಾಂಗ್, ಉತ್ತರ ಕೊರಿಯಾದ ಆಡಳಿತದಲ್ಲಿ ಅಣ್ಣ ಕಿಮ್ ಜಾಂಗ್ ಉನ್ ನಂತರ, ಎರಡನೇ ಪ್ರಭಾವಿ ನಾಯಕಿ. ಅಲ್ಲಿನ ರಾಜಕೀಯ, ಸೇನೆ ಮತ್ತು ಅಧಿಕಾರಿಶಾಹಿಯಲ್ಲಿ ಬಿಗಿ ಹಿಡಿತವನ್ನು ಹೊಂದಿದ್ದಾರೆ. ಅಪಾಯಕಾರಿ ಆಡಳಿತಗಾರ್ತಿ ಎಂಬ ಕುಖ್ಯಾತಿಯೂ ಜಾಗತಿಕವಾಗಿ ಇದೆ. ದಕ್ಷಿಣ ಕೊರಿಯಾ, ಅಮೆರಿಕ ಸೇರಿದಂತೆ ಉತ್ತರ ಕೊರಿಯಾದ ಆಡಳಿತ, ನಿಲುವನ್ನು ವಿರೋಧಿಸುತ್ತಿರುವ ರಾಷ್ಟ್ರಗಳ ಮುಖಂಡರನ್ನು ನಿರ್ಭಿಡೆಯಿಂದ ಟೀಕಿಸುತ್ತಾ ಬಂದಿರುವ ಕಿಮ್ ಯೋ ಅವರನ್ನು ಅಮೆರಿಕದ ಖಜಾನೆ ಇಲಾಖೆ 2017ರ ಜನವರಿಯಲ್ಲಿ ಕಪ್ಪು ಪಟ್ಟಿಗೆ ಸೇರಿಸಿತ್ತು.

ಸದ್ಯ ಈಕೆ ಅಣ್ಣನೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. 2011ರಲ್ಲಿ ತಂದೆ ಕಿಮ್ ಜಾಂಗ್ ಇಲ್ ನಿಧನರಾದಾಗ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದ ಕಿಮ್ ಯೋ ಜಾಂಗ್, ನಂತರ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು 2014ರಲ್ಲಿ. ಆ ವರ್ಷ ಕಿಮ್ ಜಾಂಗ್ ಉನ್ ಅವರು ಅನಾರೋಗ್ಯಕ್ಕೆ ಒಳಗಾಗಿದ್ದ ವೇಳೆ ದೇಶದ ಆಡಳಿತ ನಿರ್ವಹಿಸಿದವರೂ ಇವರೇ. 2017ರಲ್ಲಿ ಇವರನ್ನು ವರ್ಕರ್ಸ್ ಪಾರ್ಟಿಯ ಮುಖ್ಯ ಹುದ್ದೆಗೆ ಕಿಮ್ ಜಾಂಗ್ ನೇಮಕ ಮಾಡಿದ್ದರು. ಆ ಬಳಿಕ ದೇಶದ ಆಡಳಿತದಲ್ಲಿ ಕಿಮ್ ಯೋ ಇನ್ನಷ್ಟು ಪ್ರಭಾವಿಯಾಗಿದ್ದಾರೆ.

ದೇಶದ ರಾಜಕೀಯ, ಸೇನಾ ವಲಯದಲ್ಲಿ ಇವರಿಗೆ ಅಪಾರ ಬೆಂಬಲಿಗರಿದ್ದಾರೆ ಎಂದೂ ಹೇಳಲಾಗುತ್ತಿದೆ. ಅಣ್ಣ ಇರುವಾಗಲೇ ಆಡಳಿತದ ಮೇಲೆ ಹಿಡಿತ ಹೊಂದಿರುವ ಕಿಮ್ ಯೋ ಜಾಂಗ್ ಅವರು, ದೇಶದ ಚುಕ್ಕಾಣಿ ಹಿಡಿಯುವ ಯಾವುದೇ ಅವಕಾಶವನ್ನು ಕೈಚೆಲ್ಲಲಾರರು ಎಂಬುದು ರಾಜತಾಂತ್ರಿಕ ತಜ್ಞರ ಅಭಿಪ್ರಾಯ.

ಕಿಮ್ ಯೋ ಜಾಂಗ್

ರಾಷ್ಟ್ರೀಯ

‘ಗ್ರೇಟ್ ನಿಕೋಬಾರ್’ಗೆ ಎನ್‌ಜಿಟಿ ಅನುಮತಿ

ನವದೆಹಲಿ (ಪಿಟಿಐ): ಗ್ರೇಟ್ ನಿಕೋಬಾರ್ ದ್ವೀಪದಲ್ಲಿ ಅಂತರರಾಷ್ಟ್ರೀಯ ಕಂಟೇನರ್ ಟ್ರಾನ್ಸ್‌ಶಿಪ್‌ಮೆಂಟ್ ಟರ್ಮಿನಲ್ ನಿರ್ಮಾಣದ ಪ್ರಸ್ತಾವಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಅನುಮತಿ ನೀಡಿದೆ. ಪರಿಸರ ಅನುಮತಿ (ಇ.ಸಿ) ಕೊಡುವ ಮುನ್ನ ಸುರಕ್ಷತಾ ಕ್ರಮಗಳಿಗೂ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದೆ.

ಪ್ರಸ್ತಾವಿತ ಟರ್ಮಿನಲ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಆಕ್ಷೇಪಣೆ ಕುರಿತಾದ ಅರ್ಜಿ ವಿಚಾರಣೆ ನಡೆಸಿ ಕೋಲ್ಕತ್ತದಲ್ಲಿರುವ ಪೂರ್ವ ವಲಯದ ಪೀಠದ ಎನ್‌ಜಿಟಿ ಮುಖ್ಯಸ್ಥ ನ್ಯಾಯಮೂರ್ತಿ ಪ್ರಕಾಶ್ ಶ್ರೀ ವಾತ್ಸವ ಅವರು ಸೋಮವಾರ ಈ ಆದೇಶ ಹೊರಡಿಸಿದ್ದಾರೆ. ಯೋಜನೆಯು ಟೌನ್‌ಶಿಪ್ ಹಾಗೂ 450 ಮೆಗಾವಾಟ್ ಅನಿಲ ಹಾಗೂ ಸೌರ ಆಧಾರಿತ ವಿದ್ಯುತ್ ಘಟಕವನ್ನು ಒಳಗೊಂಡಿರಲಿದೆ.

ಟರ್ಮಿನಲ್ ನಿರ್ಮಾಣದಿಂದ ದ್ವೀಪ ಕರಾವಳಿ ವಲಯ ಅಧಿಸೂಚನೆ (ಐಸಿಆರ್‌ಝ್) ಉಲ್ಲಂಘನೆಯಾಗಲಿದೆ ಎಂದು ಆರೋಪಿಸಿ ಇದಕ್ಕೂ ಮುನ್ನ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು. ಇದು ಯೋಜನೆಗೆ ಸಂಬಂಧಿಸಿದ ಎರಡನೇ ಹಂತದ ಮೊಕದ್ದಮೆಯಾಗಿತ್ತು. 2023ರ ಏಪ್ರಿಲ್‌ನಲ್ಲಿ ಯೋಜನೆಗೆ ಪರಿಸರ ಅನುಮತಿಯನ್ನು ಎನ್‌ಜಿಟಿ ಎತ್ತಿ ಹಿಡಿದಿತ್ತು. ಅರ್ಜಿದಾರರು ಎತ್ತಿದ್ದ ನಿರ್ದಿಷ್ಟ ಕಾಳಜಿಯ ಕುರಿತು ಪರಿಶೀಲನೆ ನಡೆಸಲು ಉನ್ನತ ಮಟ್ಟದ ಸಮಿತಿ (ಎಚ್‌ಪಿಸಿ)ಯನ್ನೂ ರಚಿಸಿತ್ತು.

‘ಪರಿಸರ ಅನುಮತಿಗೆ ಸಂಬಂಧಿಸಿ ಷರತ್ತುಗಳನ್ನು ವಿಧಿಸುವ ಮೂಲಕ ಹೆಚ್ಚುವರಿ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಮೊದಲ ಸುತ್ತಿನ ಮೊಕದ್ದಮೆಯ ವಿಚಾರಣೆಯಲ್ಲಿ ಪರಿಸರ ಅನುಮತಿಗೆ ಸಂಬಂಧಿಸಿದ ಮಧ್ಯಪ್ರವೇಶಿಸಲು ನ್ಯಾಯಮಂಡಳಿ ನಿರಾಕರಿಸಿತ್ತು. ಅರ್ಜಿಯಲ್ಲಿ ಎತ್ತಿರುವ ಉಳಿದ ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಯೋಜನೆ ಜಾರಿಯಾಗುವುದು ‘ಕಾರ್ಯತಂತ್ರದ ಪ್ರಮುಖ’ ಎಂದು ಉನ್ನತ ಮಟ್ಟದ ಸಮಿತಿ (ಎಚ್‌ಪಿಸಿ) ಕೂಡ ಪರಿಗಣಿಸಿದ್ದು, ಈ ವಿಚಾರದಲ್ಲಿ ಮಧ್ಯಪ್ರವೇಶಿಸುವುದು ನಮಗೆ ಯಾವುದೇ ಉತ್ತಮವಾದ ಆಧಾರಗಳು ಸಿಗುವುದಿಲ್ಲ’ ಎಂದು ನ್ಯಾಯಮಂಡಳಿ ತಿಳಿಸಿದೆ.

ಗ್ರೇಟ್ ನಿಕೋಬಾರ್ ದ್ವೀಪ ಸಮೂಹ

> **ಎನ್‌ಜಿಟಿ ನಿರ್ಧಾರವು ತೀವ್ರ ನಿರಾಶಾದಾಯಕವಾಗಿದೆ. ಯೋಜನೆ ಪರಿಸರದ ಮೇಲೆ ಭಾರಿ ಹಾನಿ ಉಂಟುಮಾಡಲಿದೆ ಎಂಬುದಕ್ಕೆ ನಿರ್ದಿಷ್ಟ ಪುರಾವೆಗಳಿವೆ**
> **ಜೈರಾಮ್ ರಮೇಶ್, ಕಾಂಗ್ರೆಸ್ ಸಂಸದ,** ಪರಿಸರ ಖಾತೆ ಮಾಜಿ ಸಚಿವ

ಇದರ ಹೊರತಾಗಿಯೂ, ‘ಸಂಬಂಧಿತ ಪ್ರಾಧಿಕಾರಗಳು ಪರಿಸರ ಅನುಮತಿಗೆ ಸಂಬಂಧಿಸಿದ ಷರತ್ತುಗಳನ್ನು ಕಠಿಣವಾಗಿ ಜಾರಿಗೊಳಿಸುವಂತೆ ನೋಡಿಕೊಳ್ಳಬೇಕು’ ಎಂದು ನ್ಯಾಯಮಂಡಳಿಯು ಒತ್ತಿ ಹೇಳಿದೆ.

‘ಕಾರ್ಯತಂತ್ರದ ಭಾಗವಾಗಿ ಯೋಜನೆಯೂ ಜಾರಿಗೊಳ್ಳುವುದು ಅತ್ಯಗತ್ಯವಾಗಿರುವ ಕಾರಣ, ಯೋಜನೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ಐಸಿಆರ್‌ಝಡ್ ಅಧಿಸೂಚನೆಯನ್ನು ನಿರ್ಲಕ್ಷಿಸಲಾಗುವುದಿಲ್ಲ’ ಎಂದು ಸ್ಪಷ್ಟಪಡಿಸಿದೆ.

ಪರಿಸರ ಅನುಮತಿಯಲ್ಲಿ ವಿಧಿಸಿದ ನಿರ್ದಿಷ್ಟ ಕಠಿಣ ಷರತ್ತುಗಳು: ಸಮುದ್ರ ಆಮೆಗಳ ರಕ್ಷಣೆ, ನಿಕೋಬಾರ್ ಮೆಗಾಪೊಡ್ ಹಕ್ಕಿಗಳ ರಕ್ಷಣೆ, ಉಪ್ಪು ನೀರಿನ ಮೊಸಳೆ, ಸ್ಥಳೀಯ ಸಸ್ಯವರ್ಗಗಳ ರಕ್ಷಣೆ, ನಿಕೋಬಾರ್ ಉದ್ದ ಬಾಲದ ಮಂಗಗಳು, ನಿಕೋಬಾರ್ ಏಡಿಗಳು, ನಿಕೋಬಾರ್ ದ್ವೀಪದ ಸ್ಥಳೀಯ ಹಕ್ಕಿಗಳು, ಮ್ಯಾಂಗ್ರೋವ್ ಕಾಡುಗಳ ಪುನರ್ ಸ್ಥಾಪನೆ, ಹವಳದ ಸ್ಥಳಾಂತರ, ಶೋಂಪೆನ್ ಹಾಗೂ ನಿಕೋಬಾರಿ ದ್ವೀಪಗಳ ಬುಡಕಟ್ಟು ಸಮುದಾಯದವರ ಕಲ್ಯಾಣ ಕಾರ್ಯಕ್ರಮಗಳಿಗೆ ಆದ್ಯತೆ. ದ್ವೀಪದ ಕರಾವಳಿ ರಕ್ಷಣೆ, ಆಮೆ ಹಾಗೂ ಹಕ್ಕಿಗಳ ಗೂಡು, ಮೊಟ್ಟೆಗಳ ರಕ್ಷಣೆ ನಿಟ್ಟಿನಲ್ಲಿ ಮರಳಿನ ಕಡಲ ತೀರಕ್ಕೆ ಹಾನಿಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ದುರದೃಷ್ಟಕರ, ನಿರಾಶಾದಾಯಕ: ತಜ್ಞರು

ನವದೆಹಲಿ: ಎನ್‌ಜಿಟಿ ಅನುಮತಿ ನೀಡಿದ ಕ್ರಮವನ್ನು ಪರಿಸರವಾದಿಗಳು ದುರದೃಷ್ಟಕರ, ನಿರಾಸದಾಯಕ ಎಂದಿದ್ದಾರೆ.

ಎನ್‌ಜಿಟಿ ನಿರ್ಧಾರವು ದುರದೃಷ್ಟಕರ. ನಾವು ಈ ಕುರಿತು ಕಲ್ಕತ್ತ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದು, ತ್ವರಿತಗತಿಯಲ್ಲಿ ವಿಚಾರಣೆ ನಡೆಸಲಿದೆ ಎಂದು ಆಶಾಭಾವ ಹೊಂದಿದ್ದೇವೆ’ ಎಂದು ಮುಂಬೈನ ಎನ್‌ಜಿಒ ‘ಕನ್ಸರ್ವೇಷನ್ ಆ್ಯಕ್ಷನ್ ಟ್ರಸ್ಟ್‌’ನ ಕಾರ್ಯಕಾರಿ ಟ್ರಸ್ಟಿ ದೇಬಿ ಗೋಯೆಂಕಾ ತಿಳಿಸಿದ್ದಾರೆ.

‘ಎನ್‌ಜಿಟಿ ನಿರ್ಧಾರವು ನಂಬಲು ಅಸಾಧ್ಯ, ಸ್ವೀಕಾರಾರ್ಹವಲ್ಲ’ ಎಂದು ರಾಜ್ಯಸಭೆಯ ಮಾಜಿ ಸಂಸದ ಜವಾಹರ್ ಸಿಕಾರ್ ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಅಮೆರಿಕದ ಲೈಂಗಿಕ ಅಪರಾಧಿ ಎಪ್‌ಸ್ಟೈನ್ ಜೊತೆ ಪ್ರಧಾನಿ ನರೇಂದ್ರ ಮೋದಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು (ಹಸ್ತಲಾಘವ ಮಾಡುತ್ತಿರುವುದು) ಇರುವ ಪ್ರತ್ಯೇಕ ಚಿತ್ರಗಳನ್ನು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಲಾಗಿದೆ. ಹಲವರು ಇದನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಮಾಹಿತಿ.

2019ರಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿದ್ದ ಸಂದರ್ಭದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್‌ಗೆ ಸಂಬಂಧಿಸಿದ ದಾಖಲೆಗಳನ್ನು (ಮೊಬೈಲ್ ಮತ್ತು ಇಮೇಲ್) ಅಮೆರಿಕದ ನ್ಯಾಯಾಂಗ ಇಲಾಖೆಯು ಈಗ ಹಂತ ಹಂತವಾಗಿ ಬಿಡುಗಡೆ ಮಾಡುತ್ತಿದೆ. ಅದರಲ್ಲಿ ಪ್ರಧಾನಿ ಮೋದಿ ಸೇರಿದಂತೆ ಜಗತ್ತಿನ ಹಲವು ಪ್ರಭಾವಿಗಳ ಹೆಸರುಗಳಿವೆ. ದಾಖಲೆಗಳು ಪ್ರಕಟವಾದ ನಂತರ ಈ ಪೋಸ್ಟ್‌ಗಳನ್ನು ಮಾಡಲಾಗಿದೆ. ಆದರೆ, ನ್ಯಾಯಾಂಗ ಇಲಾಖೆಯು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವ ದಾಖಲೆಗಳಲ್ಲಿ ಆತ ಪ್ರಧಾನಿ ಮೋದಿ, ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರೊಂದಿಗೆ ಇರುವ ಫೋಟೊಗಳು ಸಿಗಲಿಲ್ಲ. ಫೋಟೊಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅದನ್ನು ಎಡಿಟ್ ಮಾಡಿರುವ ಅನುಮಾನ ಬಂತು. ಹೈವ್ ಮಾಡರೇಷನ್ ಮತ್ತು ಎಐ ವರ್ಸಸ್ ಹ್ಯೂಮನ್ ಇಮೇಜ್ ಡಿಟೆಕ್ಟರ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ, ಮೂರೂ ಚಿತ್ರಗಳು ಎಐ ಸೃಷ್ಟಿ ಎಂಬುದು ದೃಢಪಟ್ಟಿತು ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಏನೇ ಬರಲಿ ಎಂತೇ ಇರಲಿ

ವಾಸುದೇವ ನಾಡಿಗ್

ಉತ್ಸಾಹ ಕಳೆದುಕೊಂಡಂತಿದ್ದ...

ಉಸ್ಸಂತ ಕೂತುಬಿಟ್ಟಿದ್ದ ಆ ಹುಡುಗನಿಗೆ ಎಲ್ಲೂ ಸಮಾಧಾನವಿಲ್ಲ; ಸಣ್ಣಪುಟ್ಟ ವಿಚಾರವನ್ನೂ ಗಹನವಾಗಿ ತೆಗೆದುಕೊಂಡು ತಲೆ ಮೇಲೆ ಕೈ ಹೊತ್ತು ಕೂತು ಬಿಡುವ ಮನೋಭಾವ. ಗೆಳೆಯರು, ಶಿಕ್ಷಕರು ಎಲ್ಲ ಎಲ್ಲ ಭಾರವೇ ಅವನಿಗೆ. ಯಾರು ಏನೇ ಅಂದರೂ ಮನಸ್ಸಿಗೆ ತೆಗೆದುಕೊಂಡು ಒದ್ದಾಟ. ಅನೇಕರಿಗೆ ಅನೇಕ ಸಲ ಹೀಗೆ ಆಗುತ್ತದೆ. ಈ ಹುಡುಗ ಸದ್ಯದ ಸಂಕೇತ ಮಾತ್ರ. ತಾಯಿ ತಂದೆಗೆ ಇವನ ಈ ವರಾತ ಕಂಡು ದಿಗಿಲು ಮತ್ತು ಬೇಸರ. ಇವನ ಈ ದುರ್ಬಲ ಮನಃಸ್ಥಿತಿಗೆ ಮಾನಸಿಕ ಬೆಂಬಲ ಮತ್ತು ಸಲಹೆ ಕೊಡುವ ಸಮರ್ಥ ವ್ಯಕ್ತಿಯೇ ಬೇಕು. ವಾಸ್ತವದ ಜೀವಂತ ಉದಾಹರಣೆಗಳನ್ನು ಮುಟ್ಟಿಸಿ ಮಾತಾಡುವ ಗುರುವೇ ಬೇಕು. ಸಿಕ್ಕಿದ್ದು ಇಂತಹ ಗುರುವೇ.

ತಂದೆ ತಾಯಿ ಮಗನನ್ನು ಗುರುಗಳ ಬಳಿ ಬಿಟ್ಟು ಬಂದರು. ತಂದೆ ತಾಯಿಯನ್ನು ಆ ಗುರುಗಳು ಮನೆಯಲ್ಲಿ ಕೂಡಿಸಿ ಹುಡುಗನನ್ನು ದಟ್ಟ ಹಸಿರು ಕಾಡು ನದಿಯ ಬಳಿಗೆ ಕರೆದೊಯ್ದರು. ಜೊತೆಗೆ ಮೂರು ಹಿಡಿ ಉಪ್ಪನ್ನೂ ಜೊತೆಗೆ ತೆಗೆದುಕೊಂಡು ಹೋದರು. ದಾರಿಯಲ್ಲಿ ಹೋಗುವಾಗ ಒಂದು ಲೋಟದ ತುಂಬಾ ನೀರನ್ನು ತುಂಬಿಕೊಂಡು ಒಂದು ಹಿಡಿ ಉಪ್ಪನ್ನು ಹಾಕಿ ಆ ಹುಡುಗನಿಗೆ ಕುಡಿಯಲು ಹೇಳಿದರು. ಸ್ವಲ್ಪ ರುಚಿನೋಡಿ ವಾಕರಿಸಿಕೊಂಡ ಹುಡುಗನನ್ನು ನೋಡಿ ಜೋರಾಗಿ ನಕ್ಕರು. ಸ್ವಲ್ಪ ದೂರ ಹೋಗಿ ಒಂದು ಕೊಳದಲ್ಲಿ ಹಿಡಿ ಉಪ್ಪನ್ನು ಹಾಕಿ ರುಚಿ ನೋಡಲು ಹೇಳಿದರು. ಹುಡುಗ ಉಪ್ಪು ತೀರಾ ಹೆಚ್ಚಿಲ್ಲ ಅಂದ. ಗುರುಗಳು ದೂರದ ಹರಿಯುವ ನದಿಗೆ ಉಪ್ಪನ್ನು ಹಾಕಿ ಕುಡಿಯಲು ಹೇಳಿದರು. ಹುಡುಗ ನಗುನಗುತ್ತ ಕುಡಿದ. ಹಿಡಿ ಉಪ್ಪೇ ಆದರೂ ಪರಿಣಾಮ ಬೇರೆ.

ಮನೆಗೆ ಹಿಂದಿರುಗಿದ ಮೇಲೆ ತಾಯಿ ತಂದೆ ಸಮ್ಮುಖದಲ್ಲೇ ಮಾತಾಡಲು ಶುರು ಮಾಡಿದರು. ಉಪ್ಪಿನ ಪ್ರಮಾಣ ಒಂದೇ ಆಗಿದ್ದರೂ ಅದನ್ನು ತಮ್ಮೊಳಗೆ ತೆಗೆದುಕೊಂಡ ವಸ್ತುಗಳೇ ಬೇರೆ. ಲೋಟ, ಕೊಳ ಮತ್ತು ನದಿಗಳು ಉಪ್ಪನ್ನು ಸ್ವೀಕರಿಸಿದ ರೀತಿಯೇ ಬೇರೆ. ಉಪ್ಪು ಎಂಬುದೇ ಸಮಸ್ಯೆ. ಅದನ್ನು ಕರಗಿಸಿಕೊಂಡು ಅದನ್ನು ಒಳಗೊಂಡು ದಾಟೋ ಬಗೆಯನ್ನು ಬಹಳ ವಾಸ್ತವದ ಅಡಿಯಲ್ಲಿ ಹೇಳಲಾಗಿತ್ತು. ಮನಸ್ಸು ಮತ್ತು ಹೃದಯದ ವ್ಯಾಪ್ತಿಗೆ ಅನುಗುಣವಾಗಿ ಕಷ್ಟಗಳ ಸ್ವರೂಪ ನಿಂತಿರುತ್ತದೆ. ವ್ಯಕ್ತಿತ್ವ ಹರಿಯುವ ವಿಶಾಲವಾದ ನದಿಯಾದಾಗ ಸಮಸ್ಯೆಗಳನ್ನು ತಾಕುವ ಬಗೆಯೇ ಬೇರೆ. ಸಣ್ಣ ಲೋಟವಾದಾಗ ನೀರೇ ಸಮಸ್ಯೆಯಾಗಿ ಕಾಣುತ್ತದೆ. ನದಿಯ ನೀರು ನೀರೇ ಆದರೂ ಅದು ಉಪ್ಪೆಂಬ ಕಷ್ಟವನ್ನು ತನ್ನೊಂದಿಗೆ ಕರಗಿಸಿಕೊಂಡು ದಾಟುವ ಘನತೆಯೇ ಭಿನ್ನ.

ಇದನ್ನೇ ಡಿವಿಜಿ ಅವರು ಕಷ್ಟಗಳ ವಿಧಿ ಮಳೆ ಸುರಿಯೇ ಎಂದಿದ್ದಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಂತೂ ಎಲ್ಲ ಕಷ್ಟ ನಷ್ಟಗಳನ್ನು ಶ್ರೀಹರಿಯ ಸುಪರ್ದಿಗೆ ಬಿಟ್ಟು ಕೊಟ್ಟು ‘ಏನೇ ಬರಲಿ ಎಂತೇ ಇರಲಿ, ಅನುದಿನ ಯಾವ ಅಸುಖ ಸುಖ ತರಲಿ, ಬಾಳ ಗೊಂದಲದ ಕರ್ಕಶದೆದೆಯಲ್ಲಿ ಕೇಳುತಿರಲಿ ಹರಿ ನಿನ್ನ ಮುರಳೀ’ ಎಂದು ಹಾಡುತ್ತಾರೆ. ನಿಜ ಅಲ್ಲವೆ, ಎದುರಾಗುವ ಕಷ್ಟಗಳನ್ನು ಸ್ವೀಕರಿಸಲು ನದಿಯ ಹಾಗೆ ಮನಸ್ಸೂ ವಿಶಾಲವಾಗಿ ಚಲಿಸಬೇಕಲ್ಲವೆ? ❖

ಗುಂಡಣ್ಣ

ಪದಬಂಧ 6319

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಪಾಯದಿಂದ ಹಾಕಿದ ಬುನಾದಿ (4)
3.ಆದಾಯ ಮತ್ತು ಖರ್ಚು (4)
5.ಬಿಡದಿ ಬಳಿಯಿರುವ ಹೆಂಡತಿ (3)
6.ಮರಳ ಹತ್ತಿರವಿರುವ ಹುಚ್ಚ (3)
7.ಗಮನವಿಟ್ಟಾಗ ಗಂಭೀರವಾದುದು ಕಂಡಿದೆ (3)
9.ತನಯ ಹೀಗೆ ಮಗ್ನ! (3)
11.ರಾಮನಿಗೆ ಸಿಕ್ಕಿರುವ ಬಿಡುವು (3)
12.ಕನ್ನಡಿಗನು ಹಿಡಿದಿರುವ ಲೆನ್ಸು! (3)
14.ತಕ್ಕಂತಹ ಅಥವಾ ಅನುಗುಣವಾದುದು ಎಂದರೂ ಸರಿ (4)
15.ನಗಿಸಲೆಂದು ಬಂದವನು (4)

ಮೇಲಿಂದ ಕೆಳಕ್ಕೆ
1.ಒಪ್ಪವಾಗಿ ಹಾಡಿನ ಧಾಟಿಯಿಂದ ಮೂಡಿರುವ ಪ್ರೀತಿ (4)
2.ಮಯನಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ! (2)
3.ಆದಿವಾಸಿಯಲ್ಲಿನ ಮೂಲ (2)
4.ಯಮನ ಹತ್ತಿರ ಕಾಣಿಸಿರುವ ಜೋಡಿ (3)
6.ಈತ ಕಟ್ಟಾ ಸಂಪ್ರದಾಯವಂತ (4)
8.ಹೊಸ ಹೂವಿದು (4)
10.ಬಲು ರುಚಿಯಾದ ಅಡುಗೆ (4)
11.ದಾಯಾದಿಯ ಬಿಳ್ಕೊಡುವಿಕೆ! (3)
12.ತಮ್ಮ ನೀಡಿರುವ ಓಟು (2)
13.ವಿರಮಿಸುತ್ತಿದ್ದಾಗ ಮೂಡಿರುವ ಸೂರ್ಯ (2)



6318ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಭಾಷಾಂತರ 6.ಮಲಯಜ
7.ನಿಯಮ 10.ಜವಾನ
11.ಹಯವದನ 12.ಕಡಲು
13.ಕರಗ 15.ಕನ್ನಡಕ
17.ಕೆಂಗುಲಾಬಿ

ಮೇಲಿಂದ ಕೆಳಕ್ಕೆ:
1.ಅಭಾಗಿನಿ 2.ಸ್ತರ
3.ಸುಮ 4.ಯಜಮಾನ
8.ಮಹಲು 9.ಕವಳ
10.ಜನಕ 12.ಕನಿಕರ
14.ಗಡಿಬಿಡಿ 16.ಕಣ್ಣು
17.ಕೆಂಡ

ಸುಡೊಕು 6703

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9			3			6	
4	1				7	3		9
		3		9		1		7
		4			9		8	
	2			5				3
8			2				4	
	4			2		8		
			9					5
2		8		7			3	

6702 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

18 ಫೆಬ್ರುವರಿ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪ್ರತಿಪದ್ ಗಂ 16-58 ನಕ್ಷತ್ರ: ಶತಭಿಷ ಗಂ. 21-16 ಯೋಗ: ಶಿವ ಗಂ. 22-45 ಕರಣ: ಬವ ಗಂ 16-58 ಕುಂಭ ಮಾಸದ 06 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ಸೂರ್ಯೋದಯ : 06-56 ಸೂರ್ಯಾಸ್ತ : 06-33, ಮುಸ್ಲಿಂ ದಿನಾಂಕ : 29 ಶಬನ್. ಅದೃಷ್ಟ ಸಂಖ್ಯೆ : 8, 5

ಮೇಷ: ಬಹಳ ದಿನಗಳಿಂದ ಕಾಯಿಲೆಯಿಂದ ಬಳಲುತ್ತಿರುವವರಿಗೆ ಔಷಧಿ ಪ್ರತಿಕ್ರಿಯಿಸಿ ಚೇತರಿಕೆಯ ಹಂತಕ್ಕೆ ಹೋಗುವಿರಿ. ನಂಬಿಕಸ್ಥರಿಂದ ಮೋಸ ಹೋಗುವ ಸಾಧ್ಯತೆಯಿದೆ ಜಾಗ್ರತರಾಗಿರಿ. ದಂತ ವೈದ್ಯರಿಗೆ ಲಾಭದಾಯಕ ದಿನ.

ವೃಷಭ: ವಿರೋಧಿಗಳು ಇಂದು ರಾಜಿಯಾಗಲು ಬರುವಂಥ ಸನ್ನಿವೇಶಗಳು ನಡೆಯಲಿವೆ. ಎಲ್ಲಾ ಸಮಸ್ಯೆಯನ್ನು ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕುವ ಯೋಚನೆ ಸರಿಯಾದ ಮಾರ್ಗವಾಗಿರುತ್ತದೆ.

ಮಿಥುನ: ಗೆಳೆಯರ ಗುಂಪಿನಲ್ಲಿ ಮಿತ್ರತ್ವ ಹಾಗು ಶತ್ರುತ್ವ ಹೊಂದಿದವರು ಇರುತ್ತಾರೆಂಬುದನ್ನು ಮರೆಯದಿರಿ. ಷೇರು ವ್ಯವಹಾರದಲ್ಲಿ ಹಣ ಹೂಡಿಕೆ ಮಾಡುವಂತಾಗಲಿದೆ. ಕ್ರೀಡೆ ಮತ್ತು ಚಿತ್ರಕಲೆಯಲ್ಲಿ ಆಸಕ್ತಿ ಹೆಚ್ಚಲಿದೆ.

ಕರ್ಕಾಟಕ: ತೆರೆ ಮರೆಯಲ್ಲಿ ನಡೆಯುತ್ತಿರುವ ಸಂಚನ್ನು, ರಾಜಕೀಯ ಚಟುವಟಿಕೆಗಳನ್ನು ಆಪ್ತರೊಬ್ಬರ ಮೂಲಕವಾಗಿ ತಿಳಿದುಕೊಳ್ಳುವಿರಿ. ದೃಷ್ಟಿಕೋನ ವಿಶಾಲವಾಗಿರುವುದರಿಂದ ವ್ಯವಹಾರ ಸುಗಮವಾಗಿ ನಡೆಯುವುದು.

ಸಿಂಹ: ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿ ವರ್ಗದವರಲ್ಲಿ ದಿನವಿಡೀ ಚರ್ಚಿಸಿದರೂ ತೀರ್ಮಾನಕ್ಕೆ ಬರುವುದು ಕಷ್ಟಕರ. ತಂದೆಯವರ ಆರೋಗ್ಯ ತಪಾಸಣೆ ನಡೆಸಿ.

ಕನ್ಯಾ: ಎಲ್ಲರೊಂದಿಗೆ ಮುಕ್ತವಾಗಿ ಬೆರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ವಿಮಾ ಯೋಜನೆಗಳಿಂದ ಲಾಭ ಪಡೆದುಕೊಳ್ಳುವಿರಿ. ಅನುಭವದಿಂದ ಆತ್ಮಾಭಿಮಾನ ವೃದ್ಧಿಯಾಗಲಿದೆ.

ತುಲಾ: ಯೋಜನೆಗಳು ಅರ್ಧದಲ್ಲಿಯೇ ನಿಂತಿರುವುದರಿಂದ ಆಗಿದ್ದ ನಿರಾಸೆಯು ಆತ್ಮವಿಶ್ವಾಸದಿಂದ ಪುನಃ ಸಕಾರಾತ್ಮಕ ತಿರುವು ಪಡೆದುಕೊಳ್ಳಲಿದೆ. ಗ್ರಂಥ ಪಾಲಕರ ಹುದ್ದೆಗೆ ಅಭ್ಯರ್ಥಿಯಾಗುವುದರಿಂದ ಶುಭವಾಗುವುದು.

ವೃಶ್ಚಿಕ: ಗುತ್ತಿಗೆಯನ್ನು ನೀಡುವ ಮೊದಲು ಎಲ್ಲ ದಾಖಲೆ ಪತ್ರಗಳಲ್ಲಿ ಸೂಕ್ತ ಸಹಿ ಪಡೆದುಕೊಳ್ಳಲು ಮರೆಯದಿರಿ. ಆಲಸ್ಯದಿಂದಾಗಿ ಕೆಲಸಗಳನ್ನು ಮುಂದೂಡದೆ ಪೂರ್ಣಗೊಳಿಸಲು ಪ್ರಯತ್ನಿಸಿ.

ಧನು: ಆಶ್ಚರ್ಯ ಮೂಡುವಂಥ ಘಟನೆ ಬದುಕಲ್ಲಿ ಈ ದಿನ ನಡೆಯಲಿದೆ. ಕಾರ್ಯಕ್ಷೇತ್ರದಲ್ಲಿ ಉತ್ತಮ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ಬಹಳ ಮುಖ್ಯ.

ಮಕರ: ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಂಡು ಸಂಸಾರದ ಜವಾಬ್ದಾರಿಯನ್ನು ಉತ್ತಮವಾಗಿ ನೋಡಿಕೊಳ್ಳುವ ಬಗ್ಗೆ ಗಮನವಿರಲಿ. ಕಲಹವನ್ನು ಉಂಟುಮಾಡುವ ವಿಚಾರಗಳನ್ನು ನಿಯಂತ್ರಿಸುವ ಜಾಣ್ಮೆ ನಿಮ್ಮಲ್ಲಿರಲಿ.

ಕುಂಭ: ಸೋಮಾರಿತನ ಇಲ್ಲದೆ ದುಡಿಯಿರಿ, ಆದರೆ ಸಂಪಾದನೆಯ ಮಾರ್ಗ ದೇವರು ಮೆಚ್ಚುವ ರೀತಿಯಲ್ಲಿ ಸತ್ಯವಾಗಿರಲಿ. ಸಣ್ಣಪುಟ್ಟ ಸಮಸ್ಯೆಯನ್ನು ಹೊರತುಪಡಿಸಿ ಆರೋಗ್ಯ, ಮಾನಸಿಕ ನೆಮ್ಮದಿ ಉತ್ತಮವಾಗಿರುತ್ತದೆ.

ಮೀನ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿ, ಇರುವ ಅವಕಾಶಗಳನ್ನು ಮುಂದುವರಿಸಿ. ಬುದ್ಧಿವಂತಿಕೆ ಪ್ರದರ್ಶಿಸಿ. ದಿನಚರಿಯಲ್ಲಿ ಸಂತೋಷ, ಉಲ್ಲಾಸ ಅತಿಯಾಗಿ ಇರುತ್ತದೆ.

ಮುಂಬೈ ಧಾರಣೆ (ಶೇಂಗಾ)

17-02-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1760 (1770)
ಒಂದು ವಾರದ ಡೆಲಿವರಿ	1755 (1765)
ಪಾಮ್ ವಾರದ ಡೆಲಿವರಿ	1288 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1490 (1500)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,000 (1,53,300)
ಬೆಳ್ಳಿ ಕೆ.ಜಿಗೆ	2,32,000 (2,40,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,682
ಇಂದಿನ ಅಂತ್ಯ: 25,725
ದಿನದ ಗರಿಷ್ಠ: 25,764
42

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು
100 ಕ್ಕೆ ₹590
12 ಕ್ಕೆ ₹85
ಮೈಸೂರು: 100 ಕ್ಕೆ ₹592

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹209
ಆರ್‌ಎಸ್‌ಎಸ್-5 ₹203.50
ಗುಡ್ ಲಾಟ್ ₹191.50

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹555-795
ದ್ವಿತಳಿ (ಬಿ.ವಿ) ₹482-999

ಮುದ್ರೆಮನೆ ಕಾಫಿ
ಎಪಿ ₹23650
ಎಸಿ ₹13150
ಆರ್‌ಪಿ ₹18400
ಆರ್‌ಸಿ ₹10175

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1750 (1760)
ಸೋಯಾ (ರಿಫೈನ್ಡ್) ₹1360 (1370)
ಸೂರ್ಯಕಾಂತಿ (ರಿಫೈನ್ಡ್) ₹1590 (1600)
ಪಾಮೋಲಿನ್ ₹1290 (1300)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1400-2100
ಮಧ್ಯಮ ₹800-1400
ಸಣ್ಣ ₹400-800

ದತ್ತಾಂಶ: ₹9 ಲಕ್ಷ ಕೋಟಿ ಹೂಡಿಕೆ

ಅದಾನಿ ಸಮೂಹದಿಂದ ಘೋಷಣೆ ಇಂಧನ ಉತ್ಪಾದನೆ ಮೇಲೆಯೂ ಹೂಡಿಕೆ

ನವದೆಹಲಿ (ಪಿಟಿಐ): ನವೀಕರಿಸಬಹುದಾದ ಇಂಧನ ಬಳಕೆ ಮಾಡುವ ಭಾರಿ ಸಾಮರ್ಥ್ಯದ ದತ್ತಾಂಶ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು 2035ರೊಳಗೆ 100 ಬಿಲಿಯನ್ ಡಾಲರ್ (ಸರಿಸುಮಾರು ₹9.07 ಲಕ್ಷ ಕೋಟಿ) ಹೂಡಿಕೆ ಮಾಡುವುದಾಗಿ ಅದಾನಿ ಸಮೂಹ ಹೇಳಿದೆ.

ಈ ಹೂಡಿಕೆಯು ಸರ್ವರ್ ತಯಾರಿಕೆ, ಕ್ಲೌಡ್ ವೇದಿಕೆಗಳು, ಪೂರಕವಾಗಿರುವ ಇತರ ಉದ್ಯಮಗಳ ವಲಯದಲ್ಲಿ ಹೆಚ್ಚುವರಿಯಾಗಿ ಒಟ್ಟು 150 ಬಿಲಿಯನ್ ಡಾಲರ್ (₹13.60 ಲಕ್ಷ ಕೋಟಿ) ವಹಿವಾಟುಗಳಿಗೆ ಕಾರಣವಾಗಲಿದೆ ಎಂದು ಅದಾನಿ ಎಂಟರ್‌ಪ್ರೈಸಸ್ ಹೇಳಿದೆ.

'ಇಂಧನ ಹಾಗೂ ಕಂಪ್ಯೂಟಿಂಗ್

ಸಾಮರ್ಥ್ಯದ ನಡುವಿನ ಸಮತೋಲನದ ಮೇಲೆ ಹಿಡಿತ ಸಾಧಿಸುವ ದೇಶಗಳು ಮುಂದಿನ ದಶಕವನ್ನು ರೂಪಿಸುವ ಕೆಲಸ ಮಾಡಲಿವೆ' ಎಂದು ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಹೇಳಿದ್ದಾರೆ.

'ಎ.ಐ ಕಾಲಘಟ್ಟದಲ್ಲಿ ಭಾರತವು ಗ್ರಾಹಕ ಆಗಿ ಮಾತ್ರವೇ ಇರುವುದಿಲ್ಲ. ಅದು ಸೃಷ್ಟಿಕರ್ತನ, ನಿರ್ಮಾತೃವಿನ ಜಾಗದಲ್ಲಿ ಹಾಗೂ ಬುದ್ಧಿಮತ್ತೆಯ ರಫ್ತುದಾರನ ಸ್ಥಾನದಲ್ಲಿ ಇರಲಿದೆ' ಎಂದು ಅವರು ವಿವರಿಸಿದ್ದಾರೆ.

ಅದಾನಿ ಸಮೂಹವು ವಿಶಾಖಪಟ್ಟಣದಲ್ಲಿ ಗಿಗಾವಾಟ್ ಸಾಮರ್ಥ್ಯದ ದತ್ತಾಂಶ ಕೇಂದ್ರ ನಿರ್ಮಾಣಕ್ಕೆ ಗೂಗಲ್ ಕಂಪನಿಯ ಜೊತೆ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ. ಅಲ್ಲದೆ, ಹೈದರಾಬಾದ್ ಮತ್ತು ಪುಣೆಯಲ್ಲಿ ದತ್ತಾಂಶ ಕೇಂದ್ರಗಳ ಸ್ಥಾಪನೆಗೆ ಮೈಕ್ರೊಸಾಫ್ಟ್ ಜೊತೆ ಪಾಲುದಾರಿಕೆ ಹೊಂದಿದೆ.

ಅದಾನಿ ಸಮೂಹವು ತನ್ನ ನವೀಕರಿಸಬಹುದಾದ ಇಂಧನ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಲು 55 ಬಿಲಿಯನ್ ಡಾಲರ್ (₹4.98 ಲಕ್ಷ ಕೋಟಿ) ಹೂಡಿಕೆ ಮಾಡಲಿದೆ.

ಸಮೂಹವು ಘೋಷಣೆ ಮಾಡಿರುವ ದತ್ತಾಂಶ ಕೇಂದ್ರವು ಸಾಂಪ್ರದಾಯಿಕ ಮಾದರಿಯಲ್ಲಿ ಕೆಲಸ ಮಾಡುವುದಿಲ್ಲ. 'ಇಲ್ಲಿ ಇಂಧನ ಉತ್ಪಾದನೆ, ಭಾರಿ ಪ್ರಮಾಣದ ದತ್ತಾಂಶವನ್ನು ಸಂಸ್ಕರಿಸುವ ಸಾಮರ್ಥ್ಯವನ್ನು ಒಟ್ಟೊಟ್ಟಿಗೆ ಅಭಿವೃದ್ಧಿಪಡಿಸಲಾಗುತ್ತದೆ' ಎಂದು ಸಮೂಹವು ಪ್ರಕಟಣೆಯಲ್ಲಿ ತಿಳಿಸಿದೆ.

ಜಾಗತಿಕ ಮಟ್ಟದಲ್ಲಿನ ಎ.ಐ. ಕೆಲಸಗಳಿಗೆ ಅಪಾರ ಪ್ರಮಾಣದ ಇಂಧನದ ಅಗತ್ಯ ಇದೆ. ಇಂತಹ ಸಂದರ್ಭದಲ್ಲಿ ಅದಾನಿ ಸಮೂಹವು ಈ ಕೆಲಸಗಳಿಗೆ ಬೇಕಿರುವ ಇಂಧನವನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ, ಇಂಗಾಲದ ಹೊರಸೂಸುವಿಕೆಯನ್ನು ಶೂನ್ಯ ಮಟ್ಟದಲ್ಲಿ ಇರಿಸಿಕೊಂಡು ಒದಗಿಸುವ ಸ್ಥಾನದಲ್ಲಿದೆ ಎಂದು ಅದು ಹೇಳಿದೆ.

ಜಾಗತಿಕ ಮಟ್ಟದ ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಈ ಯೋಜನೆಯ ಮೇಲೆ ಕೆಟ್ಟ ಪರಿಣಾಮ ಬೀರುವುದನ್ನು ತಡೆಯುವ ಉದ್ದೇಶದಿಂದ ಅದಾನಿ ಸಮೂಹವು, ಮಹತ್ವದ ಮೂಲಸೌಕರ್ಯ ಬಿಡಿಭಾಗಗಳು, ಹೆಚ್ಚಿನ ಸಾಮರ್ಥ್ಯದ ಪರಿವರ್ತಕಗಳು, ಗ್ರಿಡ್ ವ್ಯವಸ್ಥೆಗಳು, ಇನ್ವರ್ಟರ್‌ಗಳು ಮತ್ತು ಇತರ ಅಗತ್ಯ ಉಪಕರಣಗಳ ದೇಶಿ ತಯಾರಿಕೆಯಲ್ಲಿಯೂ ಪಾಲುದಾರರ ಜೊತೆಯಾಗಿ ಹೂಡಿಕೆ ಮಾಡಲಿದೆ.

ಇಳುವರಿ ಕುಸಿತದ ನಡುವೆ ಕಬ್ಬು ಬೆಳೆಗಾರರಿಗೆ ಸಿಹಿ ಬೆಲೆ

ಆಲೆಮನೆ ಬೆಲ್ಲದ ದರ ಏರಿಕೆ

• ರಾಜೇಂದ್ರ ಹೆಗಡೆ

ಶಿರಸಿ: ಮಲೆನಾಡಿನ ಭಾಗದ ಆಲೆಮನೆಗಳಲ್ಲಿ ಸಿದ್ಧವಾಗಿರುವ ಸಾಂಪ್ರದಾಯಿಕ ಬೆಲ್ಲಕ್ಕೆ ಈ ವರ್ಷ ಮಾರುಕಟ್ಟೆಯಲ್ಲಿ ಭಾರಿ ದರ ಸಿಕ್ಕಿದೆ. ಅತಿವೃಷ್ಟಿ ಮತ್ತು ರೋಗಬಾಧೆಯಿಂದ ಇಳುವರಿ ಕುಸಿತ ಕಂಡು ಕಂಗೆಟ್ಟಿದ್ದ ಕಬ್ಬು ಬೆಳೆಗಾರರಲ್ಲಿ ಇದು ಸಮಾಧಾನ ತಂದಿದೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಹೊಸ ಬೆಲ್ಲದ ದರ ಗಗನಕ್ಕೇರಿದೆ. 20 ಕೆಜಿಯ ಒಂದು ಡಬ್ಬ ಬೆಲ್ಲದ ದರ ₹3,500ರಿಂದ ₹3,700ಕ್ಕೆ ಏರಿಕೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಬೆಲ್ಲದ ದರ ₹ 2,300 ರಿಂದ ₹2,500 ಇತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಪ್ರತಿ ಡಬ್ಬಕ್ಕೆ ₹1 ಸಾವಿರಕ್ಕೂ ಅಧಿಕ ದರ ಏರಿಕೆಯಾಗಿದೆ.

'ಈ ಬಾರಿ ಕಬ್ಬಿನ ಇಳುವರಿ ಕುಂಠಿತಗೊಳ್ಳಲು ಹವಾಮಾನ ವೈಪರೀತ್ಯ ಕಾರಣ. ಕಬ್ಬು ನಾಟಿ ವೇಳೆ ಮೇ ತಿಂಗಳಲ್ಲೇ ಮಳೆ ಸುರಿಯಿತು. ಬಹುತೇಕ ಕಡೆ ಕಬ್ಬು ಭೂಮಿಯಲ್ಲೇ ಕೊಳೆಯಿತು. ಇನ್ನುಳಿದ ಕಡೆ ಅತಿಯಾದ ತೇವಾಂಶದಿಂದ ಕಬ್ಬು ಚಿಗುರುವುದು ವಿಳಂಬವಾಯಿತು. ಇದೆಲ್ಲದರ ನಂತರವೂ ನಿರಂತರ ಮಳೆಯಿಂದ ಕಬ್ಬಿನ ಬೆಳೆ ಹದಕ್ಕೆ ಬರಲಿಲ್ಲ' ಎಂದು ಶಿರಸಿಯ ಕಬ್ಬು ಬೆಳೆಗಾರ ಸುಭಾಷ ಶಿರಾಲಿ 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಸಿಲಿನ ಕೊರತೆ ಮತ್ತು ಅತಿಯಾದ ಮಳೆಯಿಂದ ಕಬ್ಬು ಉತ್ತಮವಾಗಿ ಬೆಳೆಯದೆ, ಗಣ್ಣುಗಳು ಚಿಕ್ಕದಾಗಿದ್ದವು. ಕಟಾವಿಗೆ ಕೇವಲ ಒಂದೆರಡು ತಿಂಗಳು ಬಾಕಿ ಇರುವಾಗ ರೋಗಬಾಧೆ ಕಾಣಿಸಿಕೊಂಡು ಕಬ್ಬು ಒಡೆದ ಪರಿಣಾಮ, ವಾರ್ಷಿಕ ಇಳುವರಿಯಲ್ಲಿ ಶೇ 35 ರಿಂದ 40ರಷ್ಟು ಭಾರಿ ಕುಸಿತವಾಗಿದೆ. ಇದರ ಮಧ್ಯೆ ಆಲೆಮನೆಯಲ್ಲಿ ತಯಾರಾಗುವ ಬೆಲ್ಲಕ್ಕೆ ದರ ಏರಿಕೆಯಾಗಿದ್ದು ಸ್ವಲ್ಪ ಸಮಾಧಾನ ತಂದಿದೆ' ಎಂದರು.

> **ಸಾಂಪ್ರದಾಯಿಕವಾಗಿ ಸಿದ್ಧವಾದ ಬೆಲ್ಲ ತುಟ್ಟಿಯಾಗಿದ್ದರೂ, ಇಳುವರಿ ನಷ್ಟ ಅನುಭವಿಸಿದ ಬೆಳೆಗಾರರಿಗೆ ಈ ದಾಖಲೆ ದರವು ಆಸರೆಯಾಗಿದೆ**
> **ಸೋಮಯ್ಯ ಚಾವಡಿ**, ಕಬ್ಬು ಬೆಳೆಗಾರ

> **ಆರೋಗ್ಯದ ಬಗ್ಗೆ ಜಾಗೃತಿ ಹೆಚ್ಚುತ್ತಿದೆ. ಮಾರುಕಟ್ಟೆಯಲ್ಲಿ ಸಿಗುವ ಕಲಬೆರಕೆ ಬೆಲ್ಲಕ್ಕಿಂತ ಆಲೆಮನೆಗಳಲ್ಲಿ ತಯಾರಿಸುವ ಬೆಲ್ಲವನ್ನೇ ಜನರು ಹೆಚ್ಚು ಇಷ್ಟಪಡುತ್ತಾರೆ**
> **ಸುಭಾಷ ಶಿರಾಲಿ,** ಕಬ್ಬು ಬೆಳೆಗಾರ

ಪ್ರಧಾನಿಯಾಗಿ ತಾರಿಕ್ ರೆಹಮಾನ್ ಪದಗ್ರಹಣ: ಭಾರತದೊಂದಿಗೆ ಸುಧಾರಿಸಲಿದೆಯೇ ಬಾಂಧವ್ಯ?

●ಹೌದು ●ಇಲ್ಲ ●ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮಾರುತಿ ಇ-ವಿಟಾರಾ ಬಿಡುಗಡೆ

ನವದೆಹಲಿ (ಪಿಟಿಐ): ಇ-ವಿಟಾರಾ ಕಾರನ್ನು ಬಿಡುಗಡೆ ಮಾಡುವ ಮೂಲಕ ಮಾರುತಿ ಸುಜುಕಿ ಇಂಡಿಯಾ ಕಂಪನಿಯು ದೇಶದ ಇ.ವಿ. ಮಾರುಕಟ್ಟೆಯನ್ನು ಮಂಗಳವಾರ ಪ್ರವೇಶಿಸಿದೆ.

ಈ ಮಾದರಿಯ ಕಾರುಗಳ ರಫ್ತನ್ನು ಕಂಪನಿಯು ಈಗಾಗಲೇ ಆರಂಭಿಸಿದೆ. '45 ವರ್ಷಗಳ ಹಿಂದೆ ಕಂಪನಿಯು ಫೆಬ್ರುವರಿ ತಿಂಗಳಲ್ಲಿ ಆರಂಭವಾಯಿತು… ಈಗ ಅದೇ ಫೆಬ್ರುವರಿ ತಿಂಗಳಲ್ಲಿ ನಾವು ವಾಹನ ಉದ್ಯಮಕ್ಕೆ ಹೊಸ ವ್ಯಾಖ್ಯಾನ ನೀಡುವ ಪರಿವರ್ತನೆಯ ಪಯಣವನ್ನು ಆರಂಭಿಸಲು ಸಿದ್ಧರಾಗಿದ್ದೇವೆ' ಎಂದು ಕಂಪನಿಯ ಮಾರುಕಟ್ಟೆ ಹಾಗೂ ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಹಣಾ ಅಧಿಕಾರಿ ಪಾರ್ಥೊ ಬ್ಯಾನರ್ಜಿ ಹೇಳಿದ್ದಾರೆ.

ಬ್ಯಾಟರಿಯನ್ನು ಒಂದು ಸೇವೆಯನ್ನಾಗಿ ಪಡೆಯುವುದಿದ್ದರೆ ಇ-ವಿಟಾರಾ ವಾಹನಕ್ಕೆ ₹10.99 ಲಕ್ಷ ಬೆಲೆ ನಿಗದಿ ಮಾಡಲಾಗಿದೆ. ಇ-ವಿಟಾರಾ ಒಂದು ಬಾರಿ ಪೂರ್ತಿಯಾಗಿ ಚಾರ್ಜ್ ಆದರೆ ₹543 ಕಿ.ಮೀ.ವರೆಗೆ ಸಾಗುತ್ತದೆ. 1,500ಕ್ಕೂ ಹೆಚ್ಚಿನ ಸೇವಾ ಕೇಂದ್ರಗಳು ಈ ವಾಹನಕ್ಕೆ ಅಗತ್ಯವಿರುವ ರಿಪೇರಿ ಕೆಲಸಗಳನ್ನು ಮಾಡಿಕೊಡಲಿವೆ.

ಎ.ಐ ಹೊಸ ಅವಕಾಶ ಸೃಷ್ಟಿಸಲಿದೆ: ಪ್ರಧಾನಿ ಮೋದಿ

'ಉದ್ಯೋಗ ನಷ್ಟದ ಆತಂಕ ಬೇಡ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದಿಂದ ಬೃಹತ್ ಪ್ರಮಾಣದ ಉದ್ಯೋಗ ನಷ್ಟದ ಆತಂಕವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ತಳ್ಳಿಹಾಕಿದ್ದಾರೆ.

'ಈಗಾಗಲೇ ಅಸ್ತಿತ್ವದಲ್ಲಿರುವ ಉದ್ಯೋಗಗಳು ಎ.ಐ ತಂತ್ರಜ್ಞಾನದಿಂದ ಹೊಸ ರೂಪ ಪಡೆದುಕೊಳ್ಳಬಹುದು. ಅದೇ ರೀತಿ, ಹೊಸ ಉದ್ಯೋಗಗಳ ಸೃಷ್ಟಿಗೂ ಕಾರಣವಾಗುತ್ತದೆ ಹಾಗೂ ದೇಶದ ಆರ್ಥಿಕತೆಯನ್ನು ಉತ್ತೇಜಿಸುತ್ತದೆ' ಎಂದು ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ವಿಶ್ವದ ಅಗ್ರ ಮೂರು ಎ.ಐ ಸೂಪರ್‌ಪವರ್‌ಗಳಲ್ಲಿ ಭಾರತಕ್ಕೆ ಸ್ಥಾನ ಕಲ್ಪಿಸುವುದು ತಮ್ಮ ಗುರಿ' ಎಂಬ ಮಾತನ್ನು ಪ್ರಧಾನಿ ಪುನರುಚ್ಚರಿಸಿದರು.

'ಭಾರತದ ಐ.ಟಿ ವಲಯವು ನಮ್ಮ ರಫ್ತಿನ ಬೆನ್ನೆಲುಬು ಆಗಿದ್ದು, ಆರ್ಥಿಕ ಬೆಳವಣಿಗೆಗೆ ಶಕ್ತಿ ತುಂಬಿದೆ. ಎ.ಐ ತಂತ್ರಜ್ಞಾನವು ಈ ವಲಯಕ್ಕೆ ಅತ್ಯುತ್ತಮ ಅವಕಾಶ ಮತ್ತು ಸವಾಲು ಎರಡನ್ನೂ ನೀಡಿದೆ' ಎಂದು ಹೇಳಿದರು.

'ವೈದ್ಯ ವೃತ್ತಿಗೆ ತೊಂದರೆ ಇಲ್ಲ': 'ಎ.ಐ ತಂತ್ರಜ್ಞಾನವು ವೈದ್ಯರು ಮತ್ತು ವೈದ್ಯಕೀಯ ವೃತ್ತಿಯಲ್ಲಿ ತೊಡಗಿಸಿಕೊಂಡವರ ಮೇಲೆ ಯಾವ ಪರಿಣಾಮ ಬೀರಬಹುದು ಎಂಬ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಈ ತಂತ್ರಜ್ಞಾನದಿಂದ ವೈದ್ಯರು ಕೆಲಸ ಕಳೆದುಕೊಳ್ಳಬಹುದು ಎಂಬ ಭಯ ಅನಗತ್ಯ' ಎಂದು ಆರೋಗ್ಯ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಹೇಳಿದರು.

ಎ.ಐ ಶೃಂಗದಲ್ಲಿ ಮಂಗಳವಾರ ನಡೆದ ಗೋಷ್ಠಿಯಲ್ಲಿ ಮಾತನಾಡಿ, 'ವೈದ್ಯಕೀಯ ಕ್ಷೇತ್ರಕ್ಕೆ ಎ.ಐ ನಿಂದ ಆಗುವ ಲಾಭಗಳ ಬಗ್ಗೆ ಮನಗಂಡಿರುವ ವೈದ್ಯರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅದರ ಜತೆಯಲ್ಲೇ, ಈ ತಂತ್ರಜ್ಞಾನವು ವೈದ್ಯ ವೃತ್ತಿಗೆ ಬೆದರಿಕೆಯಾಗಿ ಪರಿಣಮಿಸಬಹುದು ಎಂಬ ಆತಂಕವೂ ಕೆಲವರನ್ನು ಕಾಡುತ್ತಿದೆ. ಆ ರೀತಿ ಭಯಪಡುವುದರಲ್ಲಿ ಯಾವುದೇ ಅರ್ಥವಿಲ್ಲ' ಎಂದರು.

'ಎ.ಐ ತಂತ್ರಜ್ಞಾನವು ವೈದ್ಯರಿಗೆ ನೆರವಾಗಲು ಇರುವುದೇ ಹೊರತು, ಅವರನ್ನು ವೃತ್ತಿಯನ್ನು ಕಸಿದುಕೊಳ್ಳಲು ಇರುವುದಲ್ಲ' ಎಂದು ಪ್ರತಿಪಾದಿಸಿದರು.

> **ಮೋದಿ ಅವರು ಊಹಿಸಿರುವಂತೆ ಭಾರತಕ್ಕೆ ಎ.ಐ ಎಂಬುದು ಕೇವಲ ಕೃತಕ ಬುದ್ಧಿಮತ್ತೆ ಅಲ್ಲ, ಅದು ಎಲ್ಲರನ್ನೂ ಒಳಗೊಂಡ ಬುದ್ಧಿಮತ್ತೆ**
> **ಅನುಪ್ರಿಯಾ ಪಟೇಲ್**, ಆರೋಗ್ಯ ಖಾತೆಯ ರಾಜ್ಯ ಸಚಿವೆ

> **ಎ.ಐ ಶೃಂಗದ ತಾಣದಲ್ಲಿ ಮೊದಲ ದಿನ ಉಂಟಾದ ಅವ್ಯವಸ್ಥೆಯಿಂದಾಗಿ ದೇಶವು ಜಾಗತಿಕ ಮಟ್ಟದಲ್ಲಿ ಮುಜುಗರ ಅನುಭವಿಸುವಂತಾಗಿದೆ**
> **ಮಲ್ಲಿಕಾರ್ಜುನ ಖರ್ಗೆ**, ಎಐಸಿಸಿ ಅಧ್ಯಕ್ಷ

ಅವ್ಯವಸ್ಥೆ: ಕ್ಷಮೆಯಾಚನೆ

ಎ.ಐ ಶೃಂಗದ ಮೊದಲ ದಿನ ಸೋಮವಾರ ಉಂಟಾದ ಜನದಟ್ಟಣೆ ಮತ್ತು ಆಯೋಜನೆಗೆ ಸಂಬಂಧಿಸಿದಂತೆ ಇತರ ದೂರುಗಳು ಬಂದಿರುವುದಕ್ಕೆ ಐ.ಟಿ ಸಚಿವ ಅಶ್ವಿನಿ ವೈಷ್ಣವ್ ಅವರು ಮಂಗಳವಾರ ಕ್ಷಮೆಯಾಚಿಸಿದರು.

ಶೃಂಗದ ತಾಣದಲ್ಲಿ ಸೋಮವಾರ ಭಾರಿ ಜನದಟ್ಟಣೆ ಉಂಟಾಗಿತ್ತು. ಇಲ್ಲಿಗೆ ಭೇಟಿ ನೀಡುವವರಿಗೆ ಪ್ರವೇಶ ಕಲ್ಪಿಸಲು ಮಾಡಿದ್ದ ವ್ಯವಸ್ಥೆ ಬಗ್ಗೆ ಹಾಗೂ ಇತರ ಸೌಲಭ್ಯಗಳ ಕುರಿತು ಕೆಲವರು ಅಸಮಾಧಾನ ಹೊರಹಾಕಿದ್ದರು.

'ಮೊದಲ ದಿನ ಯಾರಿಗಾದರೂ ಯಾವುದೇ ಸಮಸ್ಯೆಗಳು ಎದುರಾಗಿದ್ದರೆ, ಅದಕ್ಕಾಗಿ ನಾನು ಕ್ಷಮೆಯಾಚಿಸುತ್ತೇನೆ. ಶೃಂಗದ ಯಶಸ್ವಿ ಆಯೋಜನೆಗೆ ನಾವು ತುಂಬಾ ಶ್ರಮಿಸುತ್ತಿದ್ದೇವೆ' ಎಂದರು.

'ಪಾಲುದಾರಿಕೆ ಮಾತುಕತೆಯಲ್ಲಿ ಪಾರಮ್ಯ'

ಮುಂಬೈ (ಪಿಟಿಐ): 'ಭಾರತವು ಅಂತರರಾಷ್ಟ್ರೀಯ ಪಾಲುದಾರರೊಂದಿಗೆ ಬಲಾಢ್ಯ ಸ್ಥಾನದಲ್ಲಿ ನಿಂತು ಮಾತುಕತೆ ನಡೆಸುತ್ತಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮಂಗಳವಾರ ಇಲ್ಲಿ ತಿಳಿಸಿದರು.

ಜಾಗತಿಕ ಆರ್ಥಿಕ ಸಹಕಾರ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಈಚೆಗೆ ನಡೆದ ವ್ಯಾಪಾರ ಒಪ್ಪಂದದಲ್ಲಿ ಭಾರತದ ಪಾರಮ್ಯವು ಸಾಬೀತಾಗಿದೆ' ಎಂದರು.

'ದೇಶದಲ್ಲಿ ಆರಂಭವಾಗಿರುವ ಸುಧಾರಣೆಯ ಎಕ್ಸ್‌ಪ್ರೆಸ್ ಮುಂದುವರಿಯಲಿದೆ' ಎಂದೂ ಇದೇ ಸಂದರ್ಭ ಹೇಳಿದರು.

ಇನ್ಫಿ–ಆ್ಯಂಥ್ರೊಪಿಕ್ ಪಾಲುದಾರಿಕೆ

ಬೃಹತ್ ಕಂಪನಿಗಳಿಗೆ ಎ.ಐ ಉಪಕರಣ ಅಭಿವೃದ್ಧಿ ಮಾಡಿಕೊಡುವ ಉದ್ದೇಶ

ನವದೆಹಲಿ (ಪಿಟಿಐ): ದೇಶದ ಐ.ಟಿ ಸೇವಾ ವಲಯದ ಎರಡನೆಯ ಅತಿದೊಡ್ಡ ಕಂಪನಿಯಾದ ಇನ್ಫೊಸಿಸ್, ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ದೊಡ್ಡ ಹೆಸರು ಸಂಪಾದಿಸಿರುವ ಅಮೆರಿಕದ ಆ್ಯಂಥ್ರೊಪಿಕ್ ಕಂಪನಿಯ ಜೊತೆ ಪಾಲುದಾರಿಕೆ ಮಾಡಿಕೊಳ್ಳುತ್ತಿರುವುದಾಗಿ ಮಂಗಳವಾರ ಘೋಷಿಸಿದೆ.

ಬೃಹತ್ ಪ್ರಮಾಣದ ಕಂಪನಿ, ಸಂಸ್ಥೆಗಳ ಬಳಕೆಗೆ ಅಗತ್ಯವಿರುವ ಎ.ಐ. ಉಪಕರಣಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಆ ಉಪಕರಣ ಅಳವಡಿಕೆ ಮಾಡಿಕೊಡುವುದು ಈ ಪಾಲುದಾರಿಕೆಯ ಒಂದು ಭಾಗ. ದೂರಸಂಪರ್ಕ, ಹಣಕಾಸು ಸೇವೆಗಳು, ತಯಾರಿಕೆ ಮತ್ತು ತಂತ್ರಾಂಶ ಅಭಿವೃದ್ಧಿ ವಲಯದ ಕಂಪನಿಗಳನ್ನು ಗುರಿಯಾಗಿ ಇರಿಸಿಕೊಂಡು ಇನ್ಫೊಸಿಸ್ ಮತ್ತು ಆ್ಯಂಥ್ರೊಪಿಕ್ ಈ ಸೇವೆಗಳನ್ನು ನೀಡುವ ಉದ್ದೇಶ ಹೊಂದಿವೆ.

ಪಾಲುದಾರಿಕೆಯ ಭಾಗವಾಗಿ ದೂರಸಂಪರ್ಕ ವಲಯಕ್ಕೆ ಸಂಬಂಧಿಸಿದ 'ಆ್ಯಂಥ್ರೊಪಿಕ್ ಶ್ರೇಷ್ಠತಾ ಕೇಂದ್ರ'ವನ್ನು ಆರಂಭಿಸಲಾಗುತ್ತದೆ. ಇದು ಬಹುಹಂತಗಳ ಕೆಲಸಗಳನ್ನು ನಿರ್ವಹಿಸಬಲ್ಲ ಹಾಗೂ ತಾನಾಗಿಯೇ ತೀರ್ಮಾನಗಳನ್ನು ತೆಗೆದುಕೊಳ್ಳಬಲ್ಲ 'ಎ.ಐ ಏಜೆಂಟ್‌ಗಳನ್ನು' ರೂಪಿಸಿ,

ಅವುಗಳನ್ನು ಅಳವಡಿಕೆ ಮಾಡುವ ಕೆಲಸ ನಿರ್ವಹಿಸಲಿದೆ. ನಂತರದ ದಿನಗಳಲ್ಲಿ ಈ ಬಗೆಯ ಏಜೆಂಟ್‌ಗಳನ್ನು ಇತರ ಉದ್ಯಮ ವಲಯಗಳಿಗೂ ವಿಸ್ತರಿಸಬಹುದು ಎಂದು ಇನ್ಫೊಸಿಸ್‌ನ ಪ್ರಕಟಣೆ ತಿಳಿಸಿದೆ.

ಪಾಲುದಾರಿಕೆಯ ಭಾಗವಾಗಿ ಆ್ಯಂಥ್ರೊಪಿಕ್‌ನ ಕ್ಲಾಡ್ ಮಾದರಿಗಳನ್ನು ಇನ್ಫೊಸಿಸ್‌ನ ಟೊಪಾಜ್ ಜೊತೆ ಸಂಯೋಜಿಸಲಾಗುತ್ತದೆ.

ಬಹು ಹಂತಗಳನ್ನು ಒಳಗೊಂಡ ಕೆಲಸಗಳನ್ನು ಸ್ವತಂತ್ರವಾಗಿ ನಿಭಾಯಿಸಬಲ್ಲ ವ್ಯವಸ್ಥೆಗಳ ಮೇಲೆ ಪ್ರಮುಖ ಗಮನ ನೀಡಲಾಗುತ್ತದೆ. ವಿವಿಧ ಉದ್ಯಮಗಳ ಅಗತ್ಯಕ್ಕೆ ಅನುಗುಣವಾದ ಎ.ಐ ಏಜೆಂಟ್‌ಗಳನ್ನು ಅಭಿವೃದ್ಧಿಪಡಿಸಲು ಕೂಡ ಗಮನ ನೀಡಲಾಗುತ್ತದೆ.

'ಪ್ರಾತ್ಯಕ್ಷಿಕೆಯ ಹಂತದಲ್ಲಿ ಕೆಲಸ ಮಾಡುವ ಎ.ಐ ಮಾದರಿ ಹಾಗೂ ಉದ್ಯಮದಲ್ಲಿ ಕೆಲಸ ಮಾಡುವ ಎ.ಐ ಮಾದರಿ ನಡುವೆ ದೊಡ್ಡ ಅಂತರ ಇದೆ. ಈ ಅಂತರವನ್ನು ತಗ್ಗಿಸಲು ವಿಷಯ ಪರಿಣತಿ ಬೇಕು. ದೂರಸಂಪರ್ಕ, ಹಣಕಾಸು ಸೇವೆಗಳು, ತಯಾರಿಕಾ ವಲಯಕ್ಕೆ ಸಂಬಂಧಿಸಿದ ಅಂತಹ ಪರಿಣತಿಯು ಇನ್ಫೊಸಿಸ್ ಬಳಿ ಇದೆ' ಎಂದು ಆ್ಯಂಥ್ರೊಪಿಕ್ ಕಂಪನಿಯ ಸಿಇಒ ಡೇರಿಯೊ ಅಮೊಡೈ ಹೇಳಿದ್ದಾರೆ.

ಹಿಂದೆಂದಿಗಿಂತ ಹೆಚ್ಚು ವೇಗದ ಬದಲಾವಣೆ: ನಂದನ್ ನಿಲೇಕಣಿ

ಬೆಂಗಳೂರು (ಪಿಟಿಐ): ತಂತ್ರಾಂಶ ಅಭಿವೃದ್ಧಿಯ ರೂಪುರೇಷೆಗಳನ್ನು ಕೃತಕ ಬುದ್ಧಿಮತ್ತೆಯು ಬದಲಾಯಿಸುತ್ತಿದೆ, ಕೋಡಿಂಗ್ ಕೆಲಸಗಳು ತಂತ್ರಜ್ಞಾನ ವಲಯದ ವೃತ್ತಿಪರರ ಪಾಲಿಗೆ ಪ್ರಧಾನ ಹೊಣೆಯಾಗಿ ಇರುವುದಿಲ್ಲ ಎಂದು ಇನ್ಫೊಸಿಸ್ ಅಧ್ಯಕ್ಷ ನಂದನ್ ನಿಲೇಕಣಿ ಹೇಳಿದ್ದಾರೆ.

ಇಂಟರ್ನೆಟ್‌ನಿಂದ ಆರಂಭಿಸಿ ಸ್ಮಾರ್ಟ್‌ಫೋನ್‌ವರೆಗೆ ಎಲ್ಲೆಡೆ ಎ.ಐ. ಅಳವಡಿಕೆಯು ಭರದಿಂದ ಸಾಗಿದೆ. ಇದು ಹಿಂದೆ ಆಗಿರುವ ಇತರ ಯಾವುದೇ ತಾಂತ್ರಿಕ ಬದಲಾವಣೆಗಳಿಗಿಂತ ಹೆಚ್ಚಿನ ವೇಗದಲ್ಲಿ ಆಗುತ್ತಿದೆ. ಉದ್ದಿಮೆಗಳು ಕೆಲಸ ಮಾಡುವ ಸ್ವರೂಪವನ್ನು ಇದು ಆಮೂಲಾಗ್ರವಾಗಿ ಬದಲಾಯಿಸಲಿದೆ ಎಂದು ನಿಲೇಕಣಿ ಪ್ರತಿಪಾದಿಸಿದ್ದಾರೆ.

'ಇನ್ಫೊಸಿಸ್‌ನ ಹೂಡಿಕೆದಾರರ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 'ಪ್ರತಿಯೊಂದು ಉದ್ದಿಮೆಯೂ ತನ್ನ ಕಾರ್ಯಾಚರಣೆಯ ಬಗ್ಗೆ ಮರು ಆಲೋಚನೆ ನಡೆಸಬೇಕಾಗುತ್ತದೆ' ಎಂದಿದ್ದಾರೆ.

ಎ.ಐ ಎಂಜಿನಿಯರ್‌ಗಳು, ವಿಧಿವಿಜ್ಞಾನ ವಿಶ್ಲೇಷಕರು ಸೇರಿದಂತೆ ಹಲವು ಕೆಲಸಗಳಿಗೆ ಪರಿಣತರ ಅಗತ್ಯ ಇರಲಿದೆ. ಹಿಂದೆ ಇಲ್ಲದಿದ್ದ ಹಲವು ಹುದ್ದೆಗಳು ಸೃಷ್ಟಿಯಾಗಲಿವೆ ಎಂದು ಅವರು ತಿಳಿಸಿದ್ದಾರೆ.

ಎ.ಐ ಅಳವಡಿಕೆಯ ವೇಗವನ್ನು ವಿವರಿಸಿದ ಅವರು, 'ಇಂಟರ್ನೆಟ್‌ಗೆ ಒಂದು ನೂರು ಕೋಟಿ ಬಳಕೆದಾರರನ್ನು ತಲುಪಲು ದಶಕಕ್ಕೂ ಹೆಚ್ಚಿನ ಅವಧಿ ಬೇಕಾಯಿತು. ಸ್ಮಾರ್ಟ್‌ಫೋನ್ ಇಷ್ಟು ಸಂಖ್ಯೆಯ ಬಳಕೆದಾರರನ್ನು ತಲುಪಲು ಐದು ವರ್ಷಗಳು ಬೇಕಾದವು. ಆದರೆ, ಈ ಹಿಂದಿನ ತಂತ್ರಜ್ಞಾನಗಳ ಕಾಲಘಟ್ಟದಲ್ಲಿ ಸೃಷ್ಟಿಯಾದ ಮೂಲಸೌಕರ್ಯ ಬಳಸಿ ಎ.ಐ ಅಳವಡಿಕೆಯು ಒಂದೆರಡು ವರ್ಷಗಳಲ್ಲಿ ಆಗುತ್ತಿದೆ' ಎಂದಿದ್ದಾರೆ.

ಗೇಟ್ಸ್ ಪಾಲ್ಗೊಳ್ಳುವಿಕೆ ಬಗ್ಗೆ ಗೊಂದಲ

ನವದೆಹಲಿ (ಪಿಟಿಐ): ಮೈಕ್ರೊಸಾಫ್ಟ್ ಸಹ-ಸಂಸ್ಥಾಪಕ ಬಿಲ್ ಗೇಟ್ಸ್ ಅವರು ಇಲ್ಲಿ ನಡೆಯುತ್ತಿರುವ ಎ.ಐ ಶೃಂಗದಲ್ಲಿ ಭಾಗವಹಿಸುವ ಕುರಿತು ಮಂಗಳವಾರ ಗೊಂದಲ ಉಂಟಾಗಿದೆ. ಅವರು ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಆದರೆ, ಅವರ ಗೇಟ್ಸ್ ಫೌಂಡೇಷನ್‌ನ ವಕ್ತಾರರು ತದ್ವಿರುದ್ಧ ಹೇಳಿಕೆ ನೀಡಿದ್ದಾರೆ.

ಇದೇ 20ರ ವರೆಗೆ ನಡೆಯಲಿರುವ ಶೃಂಗದ ಅಧಿಕೃತ ವೆಬ್‌ಸೈಟ್‌ನಲ್ಲಿ ಗೇಟ್ಸ್ ಅವರೂ ಮುಖ್ಯ ಭಾಷಣಕಾರರಲ್ಲಿ ಒಬ್ಬರು ಎಂಬ ಮಾಹಿತಿ ನೀಡಲಾಗಿತ್ತು. ಆದರೆ ಶೃಂಗದಲ್ಲಿ ಮಾತನಾಡುವವರ ಪಟ್ಟಿಯಿಂದ ಮಂಗಳವಾರ ಅವರ ಹೆಸರನ್ನು ಕೈಬಿಡಲಾಗಿದೆ. ನಿಗದಿತ ವೇಳಾಪಟ್ಟಿಯಂತೆ ಅವರು ಫೆಬ್ರುವರಿ 19ರಂದು ಬೆಳಿಗ್ಗೆ 11.50ಕ್ಕೆ ಶೃಂಗದಲ್ಲಿ ಮಾತನಾಡಬೇಕಿದೆ.

ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್‌ಗೆ ಸಂಬಂಧಿಸಿದ ಫೈಲ್‌ಗಳಲ್ಲಿ ಗೇಟ್ಸ್ ಅವರ ಹೆಸರು ಕಾಣಿಸಿಕೊಂಡಿರುವುದರಿಂದ ಶೃಂಗಸಭೆಗೆ ಹಾಜರಾಗುವುದಿಲ್ಲ ಎನ್ನಲಾಗಿದೆ.

ಅಡಿಕೆ ಧಾರಣೆ

ಪುತ್ತೂರು		ಸಿದ್ದಾಪುರ		ಯಲ್ಲಾಪುರ	
ಕೋಕ	20000-37000	ಸರಕು	53159-97050	ರಾಶಿ	44099-57199
ಹೊಸತು	26000-48500	ಬಿಳಿಗೋಟು	27489-41600	ಆಪಿ	64001-66975
ಸಾಗರ		ಚಾಲಿ	45159-50399	ಬಿಳಿಗೋಟು	16899-40511
ಬಿಳಿಗೋಟು	28699-31129	ಕೋಕ	23600-36399	ಹಳೆಚಾಲಿ	38699-51419
ಚಾಲಿ	43599-44820	ಹೊಸಚಾಲಿ	40219-48339	ಹೊಸಚಾಲಿ	40935-49199
ಕೋಕ	33989-33989	ಕೆಂಪುಗೋಟು	31719-36789	ಕೋಕ	12900-32699
ಕೆಂಪುಗೋಟು	36199-39099	ರಾಶಿ	51899-55299	ಕೆಂಪುಗೋಟು	18969-41611
ರಾಶಿ	52929-55870	ತಟ್ಟಿಬೆಟ್ಟೆ	39099-50199	ರಾಶಿ	50519-62930
ಸಿಪ್ಪೆಗೋಟು	22719-23685	**ಶಿರಸಿ**		ತಟ್ಟಿಬೆಟ್ಟೆ	37974-52215
ಶಿವಮೊಗ್ಗ		ಬೆಟ್ಟೆ	41299-52618	**ಸುಳ್ಯ**	
ಬೆಟ್ಟೆ	52200-65671	ಬಿಳಿಗೋಟು	29999-42899	ಕೋಕ	18000-5000
ಗೊರಬಲು	19060-43499	ಚಾಲಿ	42190-49899	ಹೊಸತು	35500-48500
ರಾಶಿ	46009-57100	ಕೆಂಪುಗೋಟು	23199-38618	ಹಳತು	48600-55000

ಹೋರ್ಮುಜ್: ಕ್ಷಿಪಣಿ ಹಾರಿಸಿದ ಇರಾನ್

ಜಿನೇವಾ (ಎಪಿ): ಪರಮಾಣು ಕಾರ್ಯಕ್ರಮಗಳ ಕುರಿತಂತೆ ಜಿನೇವಾದಲ್ಲಿ ಇರಾನ್ ಹಾಗೂ ಅಮೆರಿಕ ನಡುವೆ ಎರಡನೇ ಸುತ್ತಿನ ಮಾತುಕತೆ ನಡೆಯುತ್ತಿರುವಂತೆಯೇ, ಮಧ್ಯಪ್ರಾಚ್ಯದಲ್ಲಿ ಅಮೆರಿಕ ತನ್ನ ಸೇನಾ ನಿಯೋಜನೆಯನ್ನು ಹೆಚ್ಚು ಮಾಡಿದ್ದು, ಇರಾನ್ ಕೂಡ ನೌಕಾಪಡೆಯ ಕಸರತ್ತು ಮುಂದುವರಿಸಿದೆ.

ಮಾತುಕತೆ ಆರಂಭಗೊಂಡಿರುವಂತೆಯೇ, ಹೋರ್ಮುಜ್ ಜಲಸಂಧಿಯ ಕಡೆಗೆ ಇರಾನ್ ಕ್ಷಿಪಣಿಗಳನ್ನು ಹಾರಿಸಿವೆ ಎಂದು ಇರಾನ್‌ನ ಮಾಧ್ಯಮ ವರದಿ ಮಾಡಿವೆ.

ಜಗತ್ತಿಗೆ ಪೂರೈಕೆಯಾಗುವ ಕಚ್ಚಾತೈಲದ ಶೇಕಡಾ 20ರಷ್ಟು ಇದೇ ಜಲಸಂಧಿಯ ಮೂಲಕ ಸಾಗುತ್ತದೆ. ಇದೇ ಜಾಗದಲ್ಲಿ ಸೋಮವಾರ ನೌಕಾಪಡೆಯ ಕಸರತ್ತು ಆರಂಭಿಸುವುದಾಗಿ ಇರಾನ್ ತಿಳಿಸಿತ್ತು.

'ಇರಾನ್‌ನ ಒಳಗೆ ಹಾಗೂ ಹೋರ್ಮುಜ್ ಜಲಸಂಧಿಯ ಕರಾವಳಿ ತಟದಲ್ಲಿರುವ ಗುರಿಗಳ ಮೇಲೆ ಕ್ಷಿಪಣಿ ದಾಳಿ ನಡೆಸಲಾಯಿತು' ಎಂದು ಇಲ್ಲಿನ 'ತಸ್ನಿಂ' ಸುದ್ದಿಸಂಸ್ಥೆ ವರದಿ ಮಾಡಿದೆ.

'ಪರಮಾಣು ಕಾರ್ಯಕ್ರಮದ ಕುರಿತು ಅಮೆರಿಕದ ಜೊತೆಗೆ ಮಾತುಕತೆ ನಡೆಯುತ್ತಿದೆ. ದೇಶದೊಳಗಿನ ನೀತಿಯ ಕುರಿತಂತೆ ಮಾತುಕತೆಯೂ ಒಳಗೊಂಡಿಲ್ಲ' ಎಂದು ಇರಾನ್‌ನ ಸರ್ಕಾರಿ ಸುದ್ದಿವಾಹಿನಿ ವರದಿ ಮಾಡಿದೆ.

ಮಧ್ಯಂತರ ಸರ್ಕಾರದ ನೇತೃತ್ವ ವಹಿಸಿದ್ದ ಮೊಹಮ್ಮದ್ ಯೂನುಸ್ ಅಭಿಮತ

'ಗಡಿಯಲ್ಲಿ ಸಹಕಾರ: ಅಭಿವೃದ್ಧಿಗೆ ಅವಕಾಶ'

ಢಾಕಾ (ಪಿಟಿಐ): 'ನೇಪಾಳ, ಭೂತಾನ್ ಮತ್ತು 'ಭಾರತದ ಈಶಾನ್ಯ ರಾಜ್ಯ'ಗಳನ್ನು ಒಳಗೊಂಡ ಪ್ರಾದೇಶಿಕ ಸಹಕಾರದೊಂದಿಗೆ ದೇಶದ ಅಭಿವೃದ್ಧಿಗೆ ಅಪಾರ ಅವಕಾಶಗಳಿವೆ' ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ನೇತೃತ್ವ ವಹಿಸಿಕೊಂಡಿದ್ದ ಮೊಹಮ್ಮದ್ ಯೂನುಸ್ ಅಭಿಪ್ರಾಯಪಟ್ಟರು.

18 ತಿಂಗಳ ಅಧಿಕಾರಾವಧಿ ಅಂತ್ಯಗೊಂಡ ಕಾರಣ ತಮ್ಮ ಅಂತಿಮ ಭಾಷಣದಲ್ಲಿ ಅವರು ತಮ್ಮ ಆಡಳಿತದ ಅನುಭವಗಳನ್ನು, ಯಶಸ್ಸನ್ನು, ದೇಶದ ಮುಂದಿರುವ ಸವಾಲುಗಳು ಮತ್ತು ಅವಕಾಶಗಳನ್ನು ಹಂಚಿಕೊಂಡರು.

'ನಮ್ಮ ಸರ್ಕಾರವು ದೇಶದ ವಿದೇಶ ನೀತಿಯ ಮೂರು ಆಧಾರಸ್ತಂಭಗಳನ್ನು ಮರುಸ್ಥಾಪಿಸಿದೆ. ಅದುವೇ ಸಾರ್ವಭೌಮತ್ವ, ರಾಷ್ಟ್ರೀಯ ಹಿತಾಸಕ್ತಿ ಮತ್ತು ಘನತೆ. ನಾವು ಈಗ ಇತರೆ ದೇಶದ ಮರ್ಜಿಗೆ ತಲೆಬಾಗುವ ದೇಶವಲ್ಲ. ಇಂದಿನ ಬಾಂಗ್ಲಾವು ಆತ್ಮಸ್ಥೈರ್ಯದಿಂದ ಜವಾಬ್ದಾರಿಯಿಂದ ತನ್ನ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುತ್ತದೆ' ಎಂದರು.

'ನಮ್ಮ ಸಮುದ್ರವು ನಮ್ಮ ಗಡಿ ಮಾತ್ರವಲ್ಲ; ಜಗತ್ತಿನ ಆರ್ಥಿಕತೆಗೆ ಸೇರಿಕೊಳ್ಳಲು ಇರುವ ರಹದಾರಿ. ದೇಶದ ಮುಂದಿನ ಹಂತದ ಅಭಿವೃದ್ಧಿಗೆ ಸಮುದ್ರ ಮಾರ್ಗದ ಸಂಪರ್ಕವು ಅತ್ಯಂತ ಮಹತ್ವದ್ದಾಗಿರಲಿದೆ' ಎಂದರು.

'ಯಾವುದೇ ಪಕ್ಷವಿರಲಿ, ಜಾತಿ–ಧರ್ಮವಿರಲಿ, ಲಿಂಗವಿರಲಿ, ಎಲ್ಲರೂ ಒಟ್ಟಾಗಿ ಬಾಂಗ್ಲಾವನ್ನು ಶಕ್ತಿಶಾಲಿಯಾದ ಪ್ರಜಾಪ್ರಭುತ್ವ ದೇಶವಾಗಿಸಬೇಕು. ಮಾನವತೆಯ ನೆಲೆಯಾಗಿಸಬೇಕು. ಈ ಕರೆ ನೀಡುವ ಮೂಲಕ ಆಶಾವಾದದೊಂದಿಗೆ ನಾನು ನಿರ್ಗಮಿಸುತ್ತೇನೆ' ಎಂದರು.

ಬಾಂಗ್ಲಾದೇಶದ ನೂತನ ಪ್ರಧಾನಿಯಾಗಿ ತಾರಿಕ್ ರೆಹಮಾನ್ ಅವರು ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು ಎಎಫ್‌ಪಿ ಚಿತ್ರ

> **ಭಾರತಕ್ಕೆ ಭೇಟಿ ನೀಡಿ ಎಂದು ತಾರಿಕ್ ಅವರನ್ನು ಆಹ್ವಾನಿಸಿದೆ. ಎರಡೂ ದೇಶಗಳ ಸಹಭಾಗಿತ್ವ ಗಟ್ಟಿ ಮಾಡಿಕೊಳ್ಳುವ ನಿಲುವನ್ನು ಪುನರುಚ್ಚರಿಸಿದೆ**
> **ಓಂ ಬಿರ್ಲಾ,** ಲೋಕಸಭೆ ಸ್ಪೀಕರ್

ಅಲ್ಪಸಂಖ್ಯಾತರಿಗೂ ಸಚಿವ ಸ್ಥಾನ

ಪ್ರಧಾನಿ ತಾರಿಕ್ ರೆಹಮಾನ್ ಅವರ ನೂತನ ಸಂಪುಟಕ್ಕೆ ಇಬ್ಬರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸಂಸದರನ್ನು ಸೇರಿಸಿಕೊಳ್ಳಲಾಗಿದೆ. ಹಿಂದೂ ಧರ್ಮಕ್ಕೆ ಸೇರಿದ ಬಿಎನ್‌ಪಿ ಪಕ್ಷದ ಉಪಾಧ್ಯಕ್ಷ ನಿತಿನ್ ರಾಯ್ ಮತ್ತು ಬೌದ್ಧ ಧರ್ಮಕ್ಕೆ ಸೇರಿದ ದಿಪಿನ್ ದೇವಾನ್ ಅವರನ್ನು ಸಚಿವರನ್ನಾಗಿ ಮಾಡಲಾಗಿದೆ. ಆಶ್ಚರ್ಯವೆಂಬಂತೆ, ಮಧ್ಯಂತರ ಸರ್ಕಾರದಲ್ಲಿ ಭದ್ರತಾ ಸಲಹೆಗಾರರಾಗಿದ್ದ ಖಲೀಲ್ ಉಲ್ ರೆಹಮಾನ್ ಅವರನ್ನೂ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಡ್ರೈವರ್ ಬೇಕಾಗಿದ್ದಾರೆ
ಬೆಂಗಳೂರು
ಎಲೆಕ್ಟ್ರಿಕ್ ಬಸ್‌ಗಳಿಗಾಗಿ
ಕನಿಷ್ಠ ತಿಂಗಳ ಗಳಿಕೆ ₹ 30,000/-
ಗರಿಷ್ಠ ತಿಂಗಳ ಗಳಿಕೆ ₹ 40,000/-
ತಿಂಗಳ ಗಳಿಕೆ
₹ 23,150/-
ಇಎಸ್‌ಐ ಮತ್ತು ಪಿಎಫ್
ಉಚಿತ ವಸತಿ, ಬಸ್ ಪಾಸ್*
ಸಬ್ಸಿಡಿ ಕ್ಯಾಂಟೀನ್* ಡೈಲಿ ಬಾಟಾ*
ಅಪಘಾತ ವಿಮೆ 5 ಲಕ್ಷ
ರಜಾ ವೇತನ
ಪ್ರೋತ್ಸಾಹಕ ಧನ, ಭತ್ಯೆ, ಬೋನಸ್ ಇತ್ಯಾದಿ..
ಭಾರೀ ವಾಹನ ಚಾಲನ ಪರವಾನಗಿ ಕಡ್ಡಾಯ
ಕನಿಷ್ಠ 3 ವರ್ಷ ಅನುಭವ ಕಡ್ಡಾಯ
ಸಂಪರ್ಕಿಸಿ : 8438889961 / 8438889963

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964322833, 9742133993

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ
18.02.2026

ಶ್ರೀ. ಭಕ್ತವತ್ಸಲ
23ನೇ ಫೆಬ್ರುವರಿ 1960 – 8ನೇ ಫೆಬ್ರುವರಿ 2026

ನಮ್ಮ ಜೀವನದ ದೀಪ, ಅವರ ಪ್ರೀತಿ ನಮ್ಮ ಹೃದಯದ ನಿತ್ಯ ಸಂಜೀವಿನಿ.
ಅವರ ತ್ಯಾಗ ನಮ್ಮ ಹೆಜ್ಜೆಯ ಬೆಳಕು, ಅವರ ಮಾರ್ಗದರ್ಶನ ನಮ್ಮ ಬದುಕಿನ ದಿಕ್ಕು.
ಅವರು ಕಟ್ಟಿದ ಕುಟುಂಬದ ಬಾಂಧವ್ಯ, ನಮ್ಮನ್ನು ಸದಾ ಒಂದಾಗಿ ಜೋಡಿಸುವ ಶಕ್ತಿ.
ಅವರ ಮಾತುಗಳಲ್ಲಿ ಮಮತೆ, ಅವರ ಕೃತಿಗಳಲ್ಲಿ ನಿಸ್ವಾರ್ಥತೆ. ಅವರ ಸವಿನೆನಪು
ನಮ್ಮ ಹೃದಯದಲ್ಲಿ ಶಾಶ್ವತ, ಅವರ ಆಶೀರ್ವಾದ ನಮ್ಮ ಬದುಕಿನ ಆಧಾರ.
ಅವರ ನೆನಪು ನಮ್ಮೆಲ್ಲರ ಹೃದಯದಲ್ಲಿ ಜೀವಂತ, ಆತ್ಮದ ಬೆಳಕು ನಮ್ಮನ್ನು ಸದಾ ಮುನ್ನಡೆಸುತ್ತದೆ.

–: ದುಃಖತಪ್ತರು :–
ಧರ್ಮಪತ್ನಿ: ಪ್ರತೀಭ, ಮಗ: ಧ್ರುವ ರಕ್ಷಣ್, ಮಗಳು: ರೂಪಾಲಿ,
ಅಳಿಯ: ಕುಶಾಲ್ ಮತ್ತು ಬಂಧುಮಿತ್ರರು

ಮತ್ತೆ ಮಳೆ ಹೊಯ್ಯುತ್ತಿದೆ ಶೀಘ್ರದಲ್ಲಿ ತೆರೆಗೆ

ಜಿ.ಲಿಖಿತ್, ಸುಲಕ್ಷ ಖೈರ

ಕೆ.ಸದಾಶಿವ ಅವರ ಸಣ್ಣ ಕಥೆ ಆಧಾರಿತ 'ಮತ್ತೆ ಮಳೆ ಹೊಯ್ಯುತ್ತಿದೆ' ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಪರಮ್ ಗುಬ್ಬಿ ನಿರ್ದೇಶನದ ಚಿತ್ರ ಎರಡು ಕಾಲಘಟ್ಟಗಳ ಪ್ರೇಮಕಥೆಯನ್ನು ಹೊಂದಿದೆ.

'ಎಲ್ಲ ನೆನಪಾಗುತಿದೆ' ಎಂಬ ಅಡಿಬರಹ ಚಿತ್ರಕ್ಕಿದೆ. ಶ್ರೀ ಗವಿರಂಗನಾಥ ಸ್ವಾಮಿ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಸುಮ ಬಂಡವಾಳ ಹೂಡಿದ್ದಾರೆ. ಕಬ್ಬಡಿ ನರೇಂದ್ರ ಬಾಬು ಚಿತ್ರಕಥೆ, ಸಂಭಾಷಣೆ, ಸಾಹಿತ್ಯವಿದೆ.

'ಚಿತ್ರವು 1980 ಹಾಗೂ 2000ನೇ ಇಸವಿಯಲ್ಲಿ ನಡೆಯುವ ಎರಡು ಕಥೆಗಳನ್ನು ಹೊಂದಿದೆ. ಮೊದಲನೇ ಜೋಡಿಯ ಪ್ರೇಮ ವಿಫಲವಾಗುತ್ತದೆ. ಎರಡನೇ ಜೋಡಿಯ ಪ್ರೀತಿ ಯಶಸ್ಸು ಕಾಣುತ್ತದೆ. ಇವೆರಡರ ನಡುವಿನ ಸನ್ನಿವೇಶಗಳು ಮನಸ್ಸನ್ನು ಕದಡುತ್ತವೆ. ಸಿನಿಮಾದಲ್ಲಿ ಮಳೆಯು ಮಹತ್ವದ ಪಾತ್ರವನ್ನು ವಹಿಸಿದೆ. ಜತೆಗೆ ಅರ್ಥಪೂರ್ಣ ಸಂದೇಶಗಳು ಅಲ್ಲಲ್ಲಿ ಬರುತ್ತವೆ. ಶೃಂಗೇರಿ, ಹೊರನಾಡು, ಕೊಪ್ಪ, ಹುಹುಬ್ಬಳ್ಳಿ, ಆಗುಂಬೆ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ. ಶೀಘ್ರದಲ್ಲಿಯೇ ಚಿತ್ರ ತೆರೆ ಬರಲಿದೆ' ಎಂದರು ನಿರ್ದೇಶಕ.

ಜಿ.ಲಿಖಿತ್, ಜಯವರ್ಧನ್‌ಗೆ ಸುಲಕ್ಷ ಖೈರ, ಭೂಮಿಕ ಗೌಡ ಜೋಡಿಯಾಗಿದ್ದಾರೆ. ಚಂದ್ರಶೇಖರ ರೆಡ್ಡಿ ಎ.ಎಂ, ಪ್ರಕಾಶ್‌ಮೂರ್ತಿ, ಕುಮಾರಿ ಸ್ವರ್ಣ ಮುಂತಾದವರು ಅಭಿನಯಿಸಿದ್ದಾರೆ. ಚಿತ್ರಕ್ಕೆ ಅತೀಶಯ ಜೈನ್ ಸಂಗೀತ, ಶಾಂತಾರಾಮ್ ಇಪಿಲಿ ಛಾಯಾಚಿತ್ರಗ್ರಹಣ, ಧನುಷ್ ವೀರ್ ಸಂಕಲನವಿದೆ.

ಲವ್ ಮಾರ್ಕ್ಟೇಲ್–3ರ 'ಒಬ್ಬಂಟಿಯಾದೆ ನಾ' ರಿಲೀಸ್

ಡಾರ್ಲಿಂಗ್ ಕೃಷ್ಣ

ನಟ ಡಾರ್ಲಿಂಗ್ ಕೃಷ್ಣ ಹಾಗೂ ನಟಿ ಮಿಲನಾ ನಾಗರಾಜ್ ಸಿನಿಮಾಯಾನಕ್ಕೆ ದೊಡ್ಡ ತಿರುವು ನೀಡಿದ ಸಿನಿಮಾ 'ಲವ್ ಮಾಕ್ಟೇಲ್'. ಈ ಸಿನಿಮಾದ ಮೂರನೇ ಭಾಗ ಏ.10ರಂದು ತೆರೆಕಾಣುತ್ತಿದ್ದು, ಚಿತ್ರದ ಎರಡನೇ ಹಾಡು 'ಒಬ್ಬಂಟಿಯಾದೆ ನಾ' ಇತ್ತೀಚೆಗೆ ಬಿಡುಗಡೆಯಾಗಿದೆ.

ಡಾರ್ಲಿಂಗ್ ಕೃಷ್ಣ ನಿರ್ದೇಶನ ಮಾಡಿ ನಾಯಕನಾಗಿಯೂ ನಟಿಸಿರುವ ಈ ಚಿತ್ರದಲ್ಲಿ ಅಪ್ಪ–ಮಗಳ ಬಾಂಧವ್ಯದ ಕಥೆಯಿದೆ.

'ಮಾತು ಮೌನವಾದಿ ಶೋಕ ಭಾವ ಮೂಡಿದೆ..' ಎಂಬ ಸಾಲಿನೊಂದಿಗೆ ಶುರುವಾಗುವ ಈ ಹಾಡನ್ನು ರಾಘವೇಂದ್ರ ಕಾಮತ್ ಬರೆದಿದ್ದಾರೆ. ನಕುಲ್ ಅಭಯಂಕರ್ ಸಂಗೀತ ಸಂಯೋಜನೆ ಮಾಡಿ, ದನಿಯಾಗಿದ್ದಾರೆ. ಸಿನಿಮಾದ ಎರಡೂ ಭಾಗಗಳಲ್ಲಿ ಹಾಡುಗಳಿಗೆ ಹೆಚ್ಚಿನ ಒತ್ತು ನೀಡಲಾಗಿತ್ತು, ಈ ಭಾಗದಲ್ಲೂ ಅದು ಮುಂದುವರಿದಿದೆ.

'ಕ್ರಿಶ್' ಬ್ಯಾನರ್‌ನಡಿಯಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಡಾರ್ಲಿಂಗ್ ಕೃಷ್ಣ, ಮಿಲನಾ ನಾಗರಾಜ್, ಸಂಧ್ಯಾ, ಅಮೃತಾ ಅಯ್ಯಂಗಾರ್, ರೇಚಲ್ ಡೇವಿಡ್, ಅಭಿಲಾಷ್ ದಳಪತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಿನಿಮಾದ ಆಡಿಯೊ ಹಕ್ಕುಗಳನ್ನು ಆನಂದ್ ಆಡಿಯೊ ಖರೀದಿಸಿದೆ.

ವಿರೇನ್ ಕೇಶವ್, ಜಾಹ್ನವಿ

ಹೊರಬಂತು 'ಯುವ ಸರ್ಕಾರ್' ಟೀಸರ್

ವಿರೇನ್ ಕೇಶವ್ ಮತ್ತು 'ಬಿಗ್‌ಬಾಸ್' ಖ್ಯಾತಿಯ ಜಾಹ್ನವಿ ಜೋಡಿಯಾಗಿ ನಟಿಸಿರುವ 'ಯುವ ಸರ್ಕಾರ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶಿವರಾಜ್‌ಕುಮಾರ್, ತಮ್ಮ ಚಿಕ್ಕಮ್ಮನ ಮಗ ಸಂತೋಷ್ ಕುಮಾರ್ ನಿರ್ದೇಶಿಸಿರುವ ಚಿತ್ರಕ್ಕೆ ಸಾಥ್ ನೀಡಿದ್ದಾರೆ.

'ತಾಯಿ ಮತ್ತು ಮಗನ ನಡುವೆ ನಡೆಯುವ ಭಾವನಾತ್ಮಕ ಕಥೆಯಿದು. ತಾಯಿ, ತನ್ನ ಮಗನನ್ನು ಗಾಂಧಿಯ ಥರ ಬೆಳೆಸಿರುತ್ತಾಳೆ. ಆದರೆ ಆ ಮಗ ಯಾಕೆ ರಾಬಿನ್ ಹುಡ್ ರೀತಿ ಆಗುತ್ತಾನೆ ಎಂಬುದೇ ಈ ಚಿತ್ರದ ಕಥೆ. ಹಲವು ಕಥೆಗಳಲ್ಲಿ ರಾಬಿನ್ ಹುಡ್‌ನನ್ನು ಓರ್ವ ದರೋಡೆಕೋರನ ಥರ ತೋರಿಸಿದ್ದಾರೆ. ಆದರೆ ನಾವಿಲ್ಲಿ ಜನಸ್ನೇಹಿಯಾಗಿ ತೋರಿಸಿದ್ದೇವೆ. ಕನ್ನಡ, ತಮಿಳು, ಹಿಂದಿ ಭಾಷೆಗಳಲ್ಲಿ ಚಿತ್ರೀಕರಣಗೊಂಡಿದೆ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಅಂತಿಮ ಹಂತದಲ್ಲಿದೆ' ಎಂದರು ನಿರ್ದೇಶಕ.

ಶೃತಿ ದೇಶಪಾಂಡೆ, ಅಲ್ತಿಯಾ, ಧರ್ಮ ಕೀರ್ತಿರಾಜ್, ಕೀರ್ತಿರಾಜ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ನಿರ್ದೇಶಕರೇ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಚಿತ್ರದಲ್ಲಿ ಐದು ಹಾಡುಗಳು, ನಾಲ್ಕು ಸಾಹಸ ದೃಶ್ಯಗಳಿವೆ. ಚೆನ್ನೈ, ಚಿಕ್ಕಮಗಳೂರು, ಮೇಲುಕೋಟೆಯ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಜೂನ್‌ನಲ್ಲಿ ಸಿನಿಮಾ ಬಿಡುಗಡೆಗೆ ತಂಡ ಯೋಚಿಸಿದೆ.

ಕವಳ ಶೀರ್ಷಿಕೆ ಅನಾವರಣ

'ಕವಳ' ಶೀರ್ಷಿಕೆ ಬಿಡುಗಡೆಗೊಳಿಸಿದ ಶಿವರಾಜ್‌ಕುಮಾರ್

ಶ್ರೀ ಜೈ ನಿರ್ದೇಶನದ 'ಕವಳ' ಎಂಬ ಸಿನಿಮಾದ ಶೀರ್ಷಿಕೆಯನ್ನು ನಟ ಶಿವರಾಜ್‌ಕುಮಾರ್ ಇತ್ತೀಚೆಗೆ ಅನಾವರಣಗೊಳಿಸಿದರು.

ಮಾಸ್, ಆ್ಯಕ್ಷನ್ ಕಾಂಟೆಂಟ್ ಇರುವ ಈ ಸಿನಿಮಾ ಫೆ. 26ಕ್ಕೆ ಸೆಟ್ಟೇರಲಿದೆ. ಸಿನಿಮಾವನ್ನು ರಾಧಾಕೃಷ್ಣ ಆರ್ಟ್ಸ್ ಹಾಗೂ ಡ್ರೀಮ್ ವರ್ಲ್ಡ್ ಸಿನಿಮಾಸ್ ಮೂಲಕ ಲೋಕೇಶ್ ಬಿ. ಹಾಗೂ ಅಜಯ್ ಪೂಜಾರ್ ಅವರು ನಿರ್ಮಿಸುತ್ತಿದ್ದಾರೆ.

ಶ್ರೀ ಜೈ ಈ ಹಿಂದೆ ದುನಿಯಾ ವಿಜಯ್ ನಟನೆಯ 'ಆರ್.ಎಕ್ಸ್.ಸೂರಿ' ಹಾಗೂ ರಾಧಿಕಾ ಕುಮಾರಸ್ವಾಮಿ ಅವರ 'ಭೈರಾದೇವಿ' ಸಿನಿಮಾಗಳನ್ನು ನಿರ್ದೇಶಿಸಿದ್ದರು. ಇದೀಗ 'ಕವಳ' ಎಂಬ ಸಿನಿಮಾಗೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಸಂದೀಪ್ ನಾಗರಾಜ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರದ ಪೋಸ್ಟರ್ ಭಿನ್ನವಾಗಿದ್ದು, ನೀಲವರ್ಣದ, ರುದ್ರಾಕ್ಷಿ ಧರಿಸಿದ ಕೈಯಲ್ಲಿ ಮಚ್ಚು ಕೊಡಲಾಗಿದೆ. ಚಿತ್ರಕ್ಕೆ ಎ.ಕರುಣಾಕರನ್ ಛಾಯಾಚಿತ್ರಗ್ರಹಣ, ಕೆ.ಜಿ.ಸೆಂಥಿಲ್ ಪ್ರಸಾದ್ ಸಂಗೀತ, ಅಜಿಬನ್ ರಾಜ್, ವಿಕ್ರಮ್ ಮೋರ್ ಸಾಹಸ ನಿರ್ದೇಶನ, ಕಲೈ, ಮುರಳಿ ನೃತ್ಯ ನಿರ್ದೇಶನ, ದೀಪು ಎಸ್.ಕುಮಾರ್ ಸಂಕಲನವಿದೆ.

'ಕವಳ' ಚಿತ್ರದಲ್ಲಿ ನಟರಾದ ಅಚ್ಯುತ್ ಕುಮಾರ್, ರಂಗಾಯಣ ರಘು, ನಾಜರ್, ಸಮುದ್ರಖನಿ, ಈಶ್ವರಿ ರಾವ್, ಬಲ ರಾಜವಾಡಿ, ಕಿಶೋರ್, ಶ್ರವಣ್, ಗಿಲ್ಲಿ, ಪ್ರಕಾಶ್ ತೂಮಿನಾಡು ಸೇರಿದಂತೆ ಹಲವು ಕಲಾವಿದರಿದ್ದಾರೆ.

ಕೋಚ್ ಹುದ್ದೆಗೆ ಶ್ರೀಜೇಶ್ ಮತ್ತೆ ಅರ್ಜಿ

ನವದೆಹಲಿ (ಪಿಟಿಐ): ಭಾರತದ ದಿಗ್ಗಜ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ಭಾರತದ ಜೂನಿಯರ್ ಪುರುಷರ ಹಾಕಿ ತಂಡದ ಮುಖ್ಯ ಕೋಚ್ ಸ್ಥಾನಕ್ಕೆ ಮತ್ತೆ ಅರ್ಜಿ ಸಲ್ಲಿಸಿದ್ದಾರೆ.

ಶ್ರೀಜೇಶ್ ಅವರ ಒಪ್ಪಂದ ಡಿಸೆಂಬರ್ 21ರಂದು ಮುಕ್ತಾಯಗೊಂಡಿದೆ. ಕೋಚ್ ಸ್ಥಾನದಲ್ಲಿ ಮುಂದುವರಿಯಲು ಅವರು ಆಸಕ್ತಿ ತೋರಿಸಿದ್ದಾರೆ. ಅವರ ಅರ್ಜಿಯ ಕುರಿತು 15 ದಿನಗಳಲ್ಲಿ ನಿರ್ಧಾರವಾಗಲಿದೆ.

ಎರಡು ಬಾರಿ ಒಲಿಂಪಿಕ್ ಕಂಚಿನ ಪದಕ ವಿಜೇತ ಭಾರತ ತಂಡದ ಭಾಗವಾಗಿದ್ದ ಶ್ರೀಜೇಶ್ ಅವರಿಗೆ 2024ರ ಆಗಸ್ಟ್‌ನಲ್ಲಿ ಜೂನಿಯರ್ ತಂಡದ ಜವಾಬ್ದಾರಿ ನೀಡಲಾಗಿತ್ತು. ಅವರ ಮಾರ್ಗದರ್ಶನದಲ್ಲಿ ಭಾರತ ತಂಡವು ಚೆನ್ನೈನಲ್ಲಿ ನಡೆದ ಎಫ್‌ಐಎಚ್ ಪುರುಷರ ಹಾಕಿ ಜೂನಿಯರ್ ವಿಶ್ವಕಪ್‌ನಲ್ಲಿ ಕಂಚಿನ ಪದಕದ ಸಾಧನೆ ಮಾಡಿತ್ತು.

'ಜೂನಿಯರ್ ವಿಶ್ವಕಪ್ ನಂತರ ನನ್ನ ಒಪ್ಪಂದ ಮುಗಿದಿದೆ. ಜಾಹೀರಾತು ನೋಡಿ ಕೋಚ್ ಸ್ಥಾನಕ್ಕೆ ಮತ್ತೆ ಅರ್ಜಿ ಸಲ್ಲಿಸಿದ್ದೇನೆ. ಆರರಿಂದ ಏಳು ಮಂದಿ ಅರ್ಜಿ ಸಲ್ಲಿಸಿರುವುದು ನನ್ನ ಗಮನಕ್ಕೆ ಇದೆ. ಏನಾಗುತ್ತದೆ ನೋಡೋಣ' ಎಂದು ಶ್ರೀಜೇಶ್ ಪ್ರತಿಕ್ರಿಯಿಸಿದ್ದಾರೆ.

ಮುಂದುವರಿದ ಕರ್ನಾಟಕ ತಂಡದ ಹಿಡಿತ

ರಣಜಿ ಟ್ರೋಫಿ ಸೆಮಿಫೈನಲ್ • ವಿದ್ಯಾಧರ ಪಾಟೀಲ ಆಲ್‌ರೌಂಡ್ ಆಟ • ಸಂಕಷ್ಟದಲ್ಲಿ ಉತ್ತರಾಖಂಡ

ಲಖನೌ (ಪಿಟಿಐ): ಕರ್ನಾಟಕ ತಂಡ ಇನ್ನೂ ಎರಡು ದಿನಗಳ ಆಟ ಬಾಕಿಯಿರುವಂತೆ ರಣಜಿ ಟ್ರೋಫಿ ಫೈನಲ್‌ಗೆ ಒಂದು ಕಾಲನ್ನಿಟ್ಟಿದೆ. 736 ರನ್‌ಗಳ ಬೃಹತ್ ಮೊತ್ತ ಪೇರಿಸಿದ ಕರ್ನಾಟಕ, ಮಂಗಳವಾರ ಮೂರನೇ ದಿನದಾಟದ ಕೊನೆಗೆ ಉತ್ತರಾಖಂಡ ತಂಡವನ್ನು 5 ವಿಕೆಟ್‌ಗೆ 149 ರನ್‌ಗಳಿಗೆ ಸೀಮಿತಗೊಳಿಸಿದೆ.

ಸೋಮವಾರ 6 ವಿಕೆಟ್‌ಗೆ 689 ರನ್ ಗಳಿಸಿದ್ದ ದೇವದತ್ತ ಪಡಿಕ್ಕಲ್ ಪಡೆ, ಇನಿಂಗ್ಸ್ ಡಿಕ್ಲೇರ್ ಮಾಡಿಕೊಳ್ಳಲು ಮುಂದಾಗದೇ ಆಟ ಮುಂದುವರಿಸಿತು. ಅಂತಿಮವಾಗಿ ಸುದೀರ್ಘ 195 ಓವರುಗಳ ಆಟದಲ್ಲಿ 736 ರನ್‌ಗಳಿಗೆ ಆಲೌಟ್ ಆಯಿತು. ಉತ್ತರಾಖಂಡದ ಮನೋಸ್ಥೈರ್ಯ ಉಡುಗಿಸುವ ಉದ್ದೇಶ ಇದರ ಹಿಂದಿತ್ತು.

121 ರನ್‌ಗಳೊಡನೆ ಆಟ ಮುಂದುವರಿಸಿದ ಸ್ಮರಣ್ ರವಿಚಂದ್ರನ್ ಮತ್ತು ವಿದ್ಯಾಧರ ಪಾಟೀಲ (ಸೋಮವಾರ: ಔಟಾಗದೇ 35) ಅವರು ಏಳನೇ ವಿಕೆಟ್‌ಗೆ ಶತಕದ ಜೊತೆಯಾಟ (109 ರನ್) ಪೂರೈಸಿದರು. ಸ್ಮರಣ್ 135 ರನ್ (216 ಎಸೆತ, 12 ಬೌಂಡರಿ) ಗಳಿಸಿ ಮೊದಲನೆಯವರಾಗಿ ನಿರ್ಗಮಿಸಿದರು. ಇನ್ನೊಂದು ಕಡೆ ವಿದ್ಯಾಧರ ಪಾಟೀಲ ಅರ್ಧಶತಕ ಪೂರೈಸಿ 114 ಎಸೆತಗಳಲ್ಲಿ 54 ರನ್ ಗಳಿಸಿದರು. ಒಂದು ಮತ್ತು ಎರಡು ರನ್‌ಗಳ ಮೂಲಕ ಇನಿಂಗ್ಸ್ ಕಟ್ಟಿದ ಅವರು ಒಂದು ಸಿಕ್ಸರ್, ಎರಡು ಬೌಂಡರಿ ಬಾರಿಸಿದರು.

ಈ ಪರ್ವತದಂಥ ಮೊತ್ತದೆದುರು ಇನಿಂಗ್ಸ್ ಆರಂಭಿಸಿದ ಉತ್ತರಾಖಂಡ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ತಂಡವು, ಕರ್ನಾಟಕದ ಮೊತ್ತಕ್ಕಿಂತ ಇನ್ನೂ 587 ರನ್‌ಗಳಷ್ಟು ಹಿಂದಿದೆ. ಪೂರ್ಣ ಎರಡು ದಿನಗಳ ಆಟ ಬಾಕಿ ಇರುವ ಕಾರಣ ಉತ್ತರಾಖಂಡದ ಮೇಲೆ ಫಾಲೊಆನ್ ಹೇರಿ ಆಲೌಟ್ ಮಾಡುವ ಅವಕಾಶವೂ ಕರ್ನಾಟಕದ ಮುಂದಿದೆ.

ವಿದ್ಯಾಧರ ಪಾಟೀಲ (26ಕ್ಕೆ2) ಅವರು ಉತ್ತರಾಖಂಡದ ಆರಂಭ ಆಟಗಾರರಾದ ಭುಪೇನ್ ಲಾಲ್ವಾನಿ (15) ಮತ್ತು ಪ್ರಶಾಂತ್ ಚೋಪ್ರಾ (5) ಅವರ ವಿಕೆಟ್ ಬೇಗನೇ ಪಡೆದರು. ಅವನೀಶ್ ಸುಧಾ (27) ಮತ್ತು ನಾಯಕ ಕುನಾಲ್ ಚಂದೇಲ (12) ಕ್ರಮವಾಗಿ ವೈಶಾಖ ವಿಜಯಕುಮಾರ್ ಮತ್ತು ಶ್ರೇಯಸ್ ಗೋಪಾಲ್ ಅವರ ಬೌಲಿಂಗ್‌ನಲ್ಲಿ ಔಟಾದರು. ಈ ಹಂತದಲ್ಲಿ ಸ್ಕೋರ್ 4 ವಿಕೆಟ್‌ಗೆ 81.

ಲಕ್ಷ್ಯ ರಾಯಚಂದಾನಿ ಜೊತೆಗೂಡಿದ ಕನ್ನಡಿಗ ಜಗದೀಶ ಸುಚಿತ್ (21) ಅವರು ಐದನೇ ವಿಕೆಟ್‌ಗೆ 43 ರನ್ ಸೇರಿಸಿದರು. ಆದರೆ ಪ್ರಸಿದ್ಧ ಕೃಷ್ಣ ಬೌಲಿಂಗ್‌ನಲ್ಲಿ ಸುಚಿತ್ ಬೌಲ್ಡ್ ಆಗುವ ಮೂಲಕ ಕರ್ನಾಟಕದ ಹಿಡಿತ ಇನ್ನಷ್ಟು ಬಿಗಿಯಾಯಿತು. ಲಕ್ಷ್ಯ 166 ಎಸೆತಗಳನ್ನು ಎದುರಿಸಿದ್ದು, 10 ಬೌಂಡರಿಗಳಿರುವ 52 ರನ್ ಗಳಿಸಿ ಆಟ ಉಳಿಸಿಕೊಂಡರು.

ಕರ್ನಾಟಕ ತಂಡದ ವೇಗಿ ವಿದ್ಯಾಧರ ಪಾಟೀಲ ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: 194.4 ಓವರುಗಳಲ್ಲಿ 736 (ರವಿಚಂದ್ರನ್ ಸ್ಮರಣ್ 145, ವಿದ್ಯಾಧರ ಪಾಟೀಲ 54ಲ ಆದಿತ್ಯ ರಾವತ್ 154ಕ್ಕೆ 4, ಮಯಂಕ್ ಮಿಶ್ರಾ 173ಕ್ಕೆ3); ಉತ್ತರಾಖಂಡ: 69 ಓವರುಗಳಲ್ಲಿ 5 ವಿಕೆಟ್‌ಗೆ 149 (ಅವನೀಶ್ ಸುಧಾ 27, ಲಕ್ಷ್ಯ ರಾಯಚಂದಾನಿ ಔಟಾಗದೇ 52, ಜೆ.ಸುಚಿತ್ 21; ವಿದ್ಯಾಧರ ಪಾಟೀಲ 26ಕ್ಕೆ2, ಪ್ರಸಿದ್ಧ ಕೃಷ್ಣ 42ಕ್ಕೆ1, ವೈಶಾಖ ವಿಜಯಕುಮಾರ್ 30ಕ್ಕೆ1, ಶ್ರೇಯಸ್ ಗೋಪಾಲ್ 23ಕ್ಕೆ1)

ಚಾರಿತ್ರಿಕ ಸಾಧನೆ ಹೊಸ್ತಿಲಲ್ಲಿ ಜಮ್ಮು

ಕಲ್ಯಾಣಿ (ಪಶ್ಚಿಮ ಬಂಗಾಳ): ಅಖಿಬ್ ನಬಿ ಅವರ ಸ್ಮರಣೀಯ ಆಲ್‌ರೌಂಡ್ ಆಟದಿಂದ ಜಮ್ಮು ಮತ್ತು ಕಾಶ್ಮೀರ ತಂಡ ಚಾರಿತ್ರಿಕ ಫೈನಲ್ ತಲುಪುವ ಹೊಸ್ತಿಲಲ್ಲಿದೆ. ಪಶ್ಚಿಮ ಬಂಗಾಳ ವಿರುದ್ಧ ಸೆಮಿಫೈನಲ್ ಪಂದ್ಯದಲ್ಲಿ ಗೆಲುವಿಗೆ 126 ರನ್‌ಗಳ ಗುರಿ ಎದುರಿಸಿರುವ ತಂಡ ಮೂರನೇ ದಿನದಾಟದ ಕೊನೆಗೆ 2 ವಿಕೆಟ್‌ಗೆ 43 ರನ್ ಗಳಿಸಿದೆ.

ತಂಡ ಎಂಟು ವಿಕೆಟ್‌ಗಳನ್ನು ಹೊಂದಿದ್ದು, ಗೆಲುವಿಗೆ ಇನ್ನು 83 ರನ್ ಗಳಿಸಬೇಕಾಗಿದೆ. ಜಮ್ಮು–ಕಾಶ್ಮೀರ ತಂಡ ಹಿಂದೆಂದೂ ಫೈನಲ್ ತಲುಪಿಲ್ಲ.

ಕೆಳ ಕ್ರಮಾಂಕದಲ್ಲಿ ಆಕ್ರಮಣಕಾರಿ 42 ರನ್ ಗಳಿಸಿದ ನಬಿ, ನಂತರ 36 ರನ್ನಿಗೆ 4 ವಿಕೆಟ್ (ಪಂದ್ಯದಲ್ಲಿ ಒಟ್ಟಾರೆ 9 ವಿಕೆಟ್) ಪಡೆದು ತಮ್ಮ ತಂಡಕ್ಕೆ ನಿರ್ಣಾಯಕ ಮೇಲುಗೈ ಒದಗಿಸಿದರು.

ಜಮ್ಮು ಮತ್ತು ಕಾಶ್ಮೀರ ತಂಡದ ಅಖಿಬ್ ನಬಿ ಪಿಟಿಐ ಚಿತ್ರ

ಭಾರತ ತಂಡದ ಮಾಜಿ ವೇಗಿ ಮೊಹಮ್ಮದ್ ಶಮಿ ಅವರ ಅಮೋಘ ಬೌಲಿಂಗ್ (22.1–3–90–8) ನೆರವಿನಿಂದ ಬಂಗಾಳ ತಂಡ, ಎದುರಾಳಿಯನ್ನು 302 ರನ್‌ಗಳಿಗೆ ಆಲೌಟ್ ಮಾಡಿ 26 ರನ್‌ಗಳ ಮುನ್ನಡೆ ಪಡೆದಿತ್ತು. ಆದರೆ ಜಮ್ಮು ಕಾಶ್ಮೀರ ತಿರುಗೇಟು ನೀಡಿ ಬಂಗಾಳವನ್ನು 99 ರನ್‌ಗಳಿಗೆ ಉರುಳಿಸಿತು. ನಬಿ ಜೊತೆಗೆ ಎಡಗೈ ವೇಗಿ ಸುನೀಲ್ ಕುಮಾರ್ 27 ರನ್‌ಗಳಿಗೆ 4 ವಿಕೆಟ್ ಪಡೆದರು. ಬಂಗಾಳ 25.1 ಓವರುಗಳಲ್ಲಿ ಕುಸಿಯಿತು.

ಮೊಹಮ್ಮದ್ ಶಮಿ

ಸಂಕ್ಷಿಪ್ತ ಸ್ಕೋರು: ಪಶ್ಚಿಮ ಬಂಗಾಳ: 328 ಮತ್ತು 25.1 ಓವರುಗಳಲ್ಲಿ 99 (ಶಾಬಾಜ್ ಅಹ್ಮದ್ 24; ಅಖಿಬ್ ನಬಿ 36ಕ್ಕೆ4, ಸುನೀಲ್ ಕುಮಾರ್ 27ಕ್ಕೆ4. ಯುದ್ಧವೀರ ಸಿಂಗ್ 29ಕ್ಕೆ2); ಜಮ್ಮು ಮತ್ತು ಕಾಶ್ಮೀರ: 302 (ಅಖಿಬ್ ನಬಿ 42, ಯುದ್ಧವೀರ್ ಸಿಂಗ್ 33; ಮೊಹಮ್ಮದ್ ಶಮಿ 90ಕ್ಕೆ8, ಮುಕೇಶ್ ಕುಮಾರ್ 78ಕ್ಕೆ2) ಮತ್ತು 13 ಓವರುಗಳಲ್ಲಿ 2ಕ್ಕೆ 43 (ಆಕಾಶ್ ದೀಪ್ 12ಕ್ಕೆ2).

ಭಾರತ ಪುರುಷರ ಹಾಕಿ ತಂಡಕ್ಕೆ ಹಾರ್ದಿಕ್ ನಾಯಕ

ನವದೆಹಲಿ (ಪಿಟಿಐ): ಇದೇ 20 ರಿಂದ 25ರವರೆಗೆ ಹೋಬಾರ್ಟ್‌ನಲ್ಲಿ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್ ಪಂದ್ಯಗಳನ್ನು ಆಡುವ ಭಾರತ ಹಾಕಿ ತಂಡಕ್ಕೆ ಮಿಡ್ ಫೀಲ್ಡರ್ ಹಾರ್ದಿಕ್ ಸಿಂಗ್ ಅವರನ್ನು ಮಂಗಳವಾರ ನಾಯಕರನ್ನಾಗಿ ನೇಮಕ ಮಾಡಲಾಗಿದೆ. ತವರಿನಲ್ಲಿ ನಡೆದ ರೂರ್ಕೆಲಾ ಲೆಗ್‌ನಲ್ಲಿ ತಂಡವು ಸತತ ಸೋಲುಗಳಿಂದ ಹೈರಾಣಾದ ಬೆನ್ನಲ್ಲೇ ಖಾಯಂ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು 'ವೈಯಕ್ತಿಕ ಕಾರಣ' ನೀಡಿ ಹಿಂದೆಸರಿದಿದ್ದಾರೆ.

ಹೋಬಾರ್ಟ್‌ನ ತಾಸ್ಮೇನಿಯಾ ಹಾಕಿ ಸೆಂಟರ್‌ನಲ್ಲಿ ಭಾರತ ತಂಡವು, ಸ್ಪೇನ್ ಮತ್ತು ಆತಿಥೇಯ ಆಸ್ಟ್ರೇಲಿಯಾ ತಂಡಗಳನ್ನು ಎದುರಿಸಬೇಕಾಗಿದೆ.

ಭಾನುವಾರವಷ್ಟೇ ಮುಕ್ತಾಯಗೊಂಡ ಈ ಋತುವಿನ ತನ್ನ ಮೊದಲ ನಾಲ್ಕು ಪ್ರೊ ಲೀಗ್ ಪಂದ್ಯಗಳಲ್ಲಿ ಭಾರತ ನಿರಾಸೆ ಅನುಭವಿಸಿದೆ. ಅದರಲ್ಲೂ ಅರ್ಜೆಂಟೀನಾ ಎದುರು 0–8 ಸೋಲು ತಂಡವನ್ನು ಕಂಗಾಲುಗೊಳಿಸಿತ್ತು. ಬೆಲ್ಜಿಯಂ ವಿರುದ್ಧವೂ ಎರಡು ಪಂದ್ಯಗಳಲ್ಲಿ ಸೋತಿತ್ತು.

'ರೂರ್ಕೆಲಾದಲ್ಲಿ ನಾಲ್ಕು ಪಂದ್ಯಗಳಲ್ಲಿ ಫಲಿತಾಂಶ ನಮ್ಮ ಕಡೆಯಿರಲಿಲ್ಲ. ಆದರೆ ನಾವು ಒಳ್ಳೆಯ ಪಾಠಗಳನ್ನು ಕಲಿತಿದ್ದೇವೆ. ಸುಧಾರಣೆಗಳನ್ನೂ ತಂದಿದ್ದೇವೆ' ಎಂದು ಭಾರತ ತಂಡದ ಕೋಚ್ ಕ್ರೇಗ್ ಫುಲ್ಟನ್ ತಿಳಿಸಿದರು.

ತಂಡ ಹೀಗಿದೆ: ಗೋಲ್‌ಕೀಪರ್ಸ್: ಸೂರಜ್ ಕರ್ಕೇರಾ, ಮೋಹಿತ್ ಶಶಿಕುಮಾರ್, ಡಿಫೆಂಡರ್ಸ್: ಅಮಿತ್ ರೋಹಿದಾಸ್, ಜರ್ಮನ್‌ಪ್ರೀತ್ ಸಿಂಗ್, ಜುಗರಾಜ್ ಸಿಂಗ್, ಸಂಜಯ್ ಸುಮಿತ್, ಅಮನದೀಪ್ ಲಾಕ್ರಾ, ಯಶದೀಪ್ ಸಿವಾಚ್, ಪೂವಣ್ಣ ಚಂದುರ ಬಾಬಿ. ಮಿಡ್‌ಫೀಲ್ಡರ್ಸ್: ರಾಜಿಂದರ್ ಸಿಂಗ್, ಮನಮೀತ್ ಸಿಂಗ್, ವಿವೇಕ ಸಾಗರ ಪ್ರಸಾದ್, ಹಾರ್ದಿಕ್ ಸಿಂಗ್, ಎಂ. ರವಿಚಂದ್ರ ಸಿಂಗ್, ವಿಷ್ಣುಕಾಂತ ಸಿಂಗ್, ರಾಜಕುಮಾರ್ ಪಾಲ್. ಫಾರ್ವರ್ಡ್ಸ್: ಅಭಿಷೇಕ್, ಶಿಲಾನಂದ ಲಾಕ್ರಾ, ಮನದೀಪ್ ಸಿಂಗ್, ಅರಿಜಿತ್ ಸಿಂಗ್ ಹುಂಡಲ್, ಆದಿತ್ಯ ಅರುಣ್ ಲಾಲಗೆ, ಅಂಗದವೀರ್ ಸಿಂಗ್, ಮಣಿಂದರ್ ಸಿಂಗ್.

'ಮುಂದೆ ಸಿದ್ದರಾಮಯ್ಯ ಹೇಳ್ತಾರೆ'

ಒಂದನೇ ಪುಟದಿಂದ

ಗೊಂದಲಗಳಿಗೆ ಹೈಕಮಾಂಡ್ ತೆರೆ ಎಳೆಯಬೇಕು: (ದಾವಣಗೆರೆ ವರದಿ): 'ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲಿದ್ದಾರೆ ಎಂಬ ಬಲವಾದ ವಿಶ್ವಾಸವಿದೆ. ಮುಖ್ಯಮಂತ್ರಿ ಹುದ್ದೆಯ ಕುರಿತು ಎದ್ದಿರುವ ಗೊಂದಲಗಳಿಗೆ ಹೈಕಮಾಂಡ್ ಕೂಡಲೇ ತೆರೆ ಎಳೆಯಬೇಕು' ಎಂದು ಚನ್ನಗಿರಿ ಕಾಂಗ್ರೆಸ್ ಶಾಸಕ ಬಸವರಾಜು ವಿ. ಶಿವಗಂಗಾ ಹೇಳಿದರು.

'ಸಚಿವ ಎಚ್‌.ಸಿ. ಮಹದೇವಪ್ಪ ಅವರು ಶಾಸಕರನ್ನು ನಾಯಿಗೆ ಹೋಲಿಸಿ ಮಾತನಾಡಬಾರದಿತ್ತು. ಅವರಿಂದ ಇಂತಹ ಮಾತು ನಿರೀಕ್ಷಿಸಿರಲಿಲ್ಲ. ಶಾಸಕರನ್ನು ನಾಯಿಗೆ ಹೋಲಿಕೆ ಮಾಡಿದರೆ ಅವರು ಯಾರು?' ಎಂದು ಪ್ರಶ್ನಿಸಿದರು.

'ಮಹದೇವಪ್ಪ ಅವರು ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುವುದನ್ನು ಇನ್ನಾದರೂ ನಿಲ್ಲಿಸಬೇಕು. ಬಾಲ, ನಾಯಿ ಎರಡೂ ನಮ್ಮವೇ. ಬಾಲದ ಬಗ್ಗೆ ಬೇಸರ ಮಾಡಿಕೊಂಡರೆ ನಾಯಿಗೆ ಗೌರವ ಸಿಗುವುದಿಲ್ಲ. ಅವರ ಹೇಳಿಕೆಯನ್ನು ಹೈಕಮಾಂಡ್ ಗಮನಿಸಲಿದೆ' ಎಂದರು. 'ಶಾಸಕರು ಪ್ರವಾಸಕ್ಕೆ ತೆರಳುವುದು ವೈಯಕ್ತಿಕ. ಬಜೆಟ್ ಪೂರ್ವದಲ್ಲಿ ಪ್ರವಾಸ ತೆರಳುತ್ತಿರುವುದಕ್ಕೆ ಆಕ್ಷೇಪವಿದೆ' ಎಂದರು.

'ಸಿ.ಎಂ ಬದಲಾವಣೆ: ಶೀಘ್ರ 3ನೇ ಡೇಟ್'

ರಾಮನಗರ: 'ನಮಗೆ ಆಶೀರ್ವಾದ ಮಾಡುವ ಗುರುಗಳು ಜಪಕ್ಕೆ ಕುಳಿತಿದ್ದಾರೆ. ಅವರು ಡೇಟ್ ಕೊಟ್ಟ ಬಳಿಕ ನಾವೂ ಶೀಘ್ರ ಮೂರನೇ ಡೇಟ್ ಕೊಡುತ್ತೇವೆ. ನಮ್ಮ ನಾಯಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ' ಎಂದು ಡಿ.ಕೆ. ಶಿವಕುಮಾರ್ ಆಪ್ತ ಶಾಸಕ ಎಚ್‌.ಎ. ಇಕ್ಬಾಲ್ ಹುಸೇನ್ ಹೇಳಿದರು

'ಬಾಲವೇ ನಾಯಿಯನ್ನು ಅಲ್ಲಾಡಿಸಲು ಸಾಧ್ಯವಿಲ್ಲ' ಎಂಬ ಸಚಿವ ಎಚ್‌.ಸಿ. ಮಹದೇವಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಮಹದೇವಪ್ಪ ಅವರು ಯಾರನ್ನು ನಾಯಿ ಹಾಗೂ ಯಾರನ್ನು ಬಾಲ ಎಂದು ಕರೆದಿದ್ದಾರೊ ಗೊತ್ತಿಲ್ಲ. ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆಂಬ ಹೇಳಿಕೆಗೆ ನಾನು ಬದ್ಧ' ಎಂದರು. ಕಾಂಗ್ರೆಸ್ ಶಾಸಕರ ವಿದೇಶ ಪ್ರವಾಸ ಕುರಿತ ಪ್ರಶ್ನೆಗೆ, 'ನನಗೆ ರಾಮನಗರವೇ ಫಾರೀನ್. ಎಲ್ಲೂ ಹೋಗುವುದಿಲ್ಲ. ರಾಮನಗರದಲ್ಲಿ 40 ವರ್ಷದ ಕೊಳೆ ತೊಳೆಯಬೇಕಿದೆ. ಮಾಡಬೇಕಾದ ಕೆಲಸ ಸಾಕಷ್ಟಿವೆ' ಎಂದರು.

ಫೆ.28ರಿಂದ ಕರ್ನಾಟಕ ಶೂಟಿಂಗ್ ಲೀಗ್: ಆಟಗಾರರ ಬಿಡ್ಡಿಂಗ್

ಕೃತಾರ್ಥ, ಅನುಷ್ಕಾಗೆ ಬಂಪರ್ ಮೌಲ್ಯ

ಪ್ರಜಾವಾಣಿ ವಾರ್ತೆ

ಕೃತಾರ್ಥ

ಬೆಂಗಳೂರು: ಅನುಭವಿ ಶೂಟರ್ ಕೃತಾರ್ಥ ದೇವಾಂಗಿ ಸವ್ಯಸಾಚಿ ಮತ್ತು ಉದಯೋನ್ಮುಖ ತಾರೆ ಅನುಷ್ಕಾ ಎಚ್. ತೋಕೂರ್ ಅವರು 'ಕರ್ನಾಟಕ ಶೂಟಿಂಗ್ ಲೀಗ್' ಟೂರ್ನಿಗಾಗಿ ಮಂಗಳವಾರ ನಡೆದ ಬಿಡ್‌ನಲ್ಲಿ ಬಂಪರ್ ಮೌಲ್ಯ ಪಡೆದರು.

ಕರ್ನಾಟಕ ರಾಜ್ಯ ರೈಫಲ್ ಸಂಸ್ಥೆಯು ಇದೇ ಮೊದಲ ಬಾರಿಗೆ ಶೂಟಿಂಗ್ ಲೀಗ್ ಆಯೋಜಿಸಿದೆ. ಫೆ.28ರಂದು ಅರ್ಹತಾ ಸುತ್ತು, ಮಾರ್ಚ್ 1ರಂದು ಪ್ರಶಸ್ತಿ ಸುತ್ತು ನಡೆಯಲಿದೆ. ಈ ಪ್ರಯುಕ್ತ ನಗರದ ಹೋಟೆಲ್ ಚಾನ್ಸೇರಿ ಪೆವಿಲಿಯನ್‌ನಲ್ಲಿ ಮಂಗಳವಾರ ಶೂಟರ್‌ಗಳ ಬಿಡ್ಡಿಂಗ್ ಪ್ರಕ್ರಿಯೆ ನಡೆಯಿತು.

ಬಿಡ್ಡಿಂಗ್‌ನಲ್ಲಿ ಒಟ್ಟು 136 ಶೂಟರ್‌ಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದರು. ಅದರಲ್ಲಿ 88 ಮಂದಿ ಎಂಟು ಫ್ರಾಂಚೈಸಿಗಳಿಗೆ ಹಂಚಿಹೋದರು. ತಲಾ ₹1.75 ಕೋಟಿ ಥೈಲಿಯೊಂದಿಗೆ ಫ್ರಾಂಚೈಸಿಗಳು ಬಿಡ್‌ನಲ್ಲಿ ಭಾಗವಹಿಸಿ, ತಮಗೆ ಬೇಕಿದ್ದ 11 ಶೂಟರ್‌ಗಳನ್ನು ತೆಕ್ಕೆಗೆ ಹಾಕಿಕೊಂಡವು.

ಸ್ಕೀಟ್ ಪರಿಣತ ಕೃತಾರ್ಥ ಅವರು ₹44 ಲಕ್ಷ ಮೊತ್ತ ಪಡೆದರು. ಇದು ಈ ಲೀಗ್‌ನಲ್ಲಿಯೇ ಗರಿಷ್ಠ ಮೊತ್ತವಾಗಿದೆ. 10 ಮೀಟರ್ ಮತ್ತು 50 ಮೀ. ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಅನುಷ್ಕಾ ₹43 ಲಕ್ಷ ಮೌಲ್ಯ ಪಡೆದರು. ಇದು ಎರಡನೇ ಗರಿಷ್ಠ ಮೊತ್ತವಾಗಿದೆ. ಇವರಿಬ್ಬರೂ ಬೆಂಗಳೂರು ಬ್ರಿಗೇಡ್ ತಂಡದ ತೆಕ್ಕೆಗೆ ಜಾರಿದರು.

ಅನುಷ್ಕಾ ತೋಕೂರ್

ಉಳಿದಂತೆ ಮಮಿತ್ ಗೌಡ (₹42 ಲಕ್ಷ) ಮಂಗಳೂರು ರ್‍ಯಾಪ್ಟರ್ಸ್ ತಂಡಕ್ಕೆ, ಒಮರ್ ಬಿನ್ ಜಂಗ್ (₹41 ಲಕ್ಷ) ಹುಬ್ಬಳ್ಳಿ ಶೂಟಿಂಗ್ ಸ್ಟಾರ್ ತಂಡಕ್ಕೆ, ಶ್ರವಣ್ ಶಶಿಧರ್ (₹35 ಲಕ್ಷ) ಟಾಪ್ ಗನ್ ತಂಡಕ್ಕೆ ಸೇರುವ ಮೂಲಕ ಉತ್ತಮ ಮೌಲ್ಯ ಪಡೆದರು. ಈ ಎಲ್ಲ ಶೂಟರ್‌ಗಳು ₹10 ಲಕ್ಷ ಮೂಲಬೆಲೆ ಹೊಂದಿದ್ದರು.

ತಂಡಗಳ ನಡುವೆ 10 ಮತ್ತು 25 ಮೀಟರ್ ಏರ್ ಪಿಸ್ತೂಲ್, 10 ಮತ್ತು 50 ಏರ್ ರೈಫಲ್ (ಪುರುಷರ ಮತ್ತು ಮಹಿಳೆಯರಿಗೆ), ಟ್ರ್ಯಾಪ್ ಮತ್ತು ಸ್ಕೀಟ್ (ಮುಕ್ತ) ಸ್ಪರ್ಧೆಗಳು ನಡೆಯಲಿವೆ. ಒಟ್ಟು ಗರಿಷ್ಠ ಅಂಕ ಗಳಿಸಿದ ತಂಡವು ಚಾಂಪಿಯನ್ ಆಗಲಿದೆ. ಪ್ರಶಸ್ತಿ ಗೆದ್ದ ತಂಡಕ್ಕೆ ₹4 ಲಕ್ಷ, ರನ್ನರ್ ಅಪ್ ತಂಡ ₹2 ಲಕ್ಷ, ಮೂರನೇ ಸ್ಥಾನ ಪಡೆಯುವ ತಂಡ ₹1.50 ಲಕ್ಷ ಬಹುಮಾನ ಪಡೆಯಲಿದೆ.

ಲೀಗ್‌ನ ಎಂಟು ತಂಡಗಳು: ಕ್ಯಾಲಿಬರ್ ಕ್ಯಾಪಿಟಲ್ಸ್, ಟ್ರಿಗರ್ ಟ್ಯಾಕ್ಟಿಷಿಯನ್, ಬೆಂಗಳೂರು ಬ್ರಿಗೇಡ್, ರೆಡ್ರಮ್, ಮಂಗಳೂರು ರ್‍ಯಾಪ್ಟರ್ಸ್, ಟಾಪ್ ಗನ್ಸ್, ಸ್ನೈಪರ್ ಸ್ಕ್ವಾಡ್, ಹುಬ್ಬಳ್ಳಿ ಶೂಟಿಂಗ್ ಸ್ಟಾರ್

ರಾಜ್ಯದ ಖ್ಯಾತನಾಮ ಶೂಟರ್‌ಗಳಾದ ದಿವ್ಯಾ ಟಿ.ಎಸ್, ತಿಲೋತ್ತಮಾ ಸೇನ್, ಜಿ.ಎಸ್. ಶರಣ್ ಅವರು ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಸಿದ್ಧತೆ ನಡೆಸುತ್ತಿದ್ದು, ಈ ಲೀಗ್‌ನಲ್ಲಿ ಭಾಗವಹಿಸುತ್ತಿಲ್ಲ ಎಂದು ಲೀಗ್‌ನ ಸಂಘಟನಾ ಸಮಿತಿ ಸದಸ್ಯ ಶರಣೇಂದ್ರ ಕೆ.ವೈ. ಮಾಹಿತಿ ನೀಡಿದರು.

ಕರ್ನಾಟಕ ರಾಜ್ಯ ರೈಫಲ್ ಸಂಸ್ಥೆ ಗೌರವ ಕಾರ್ಯದರ್ಶಿ ಜಿ. ಸುಶೀಲ್, ಖಜಾಂಚಿ ಮುರಳಿ ವಿ. ಅವರ ಸಮ್ಮುಖದಲ್ಲಿ ಸ್ಟೀವ್ ಅವರು ಬಿಡ್ಡಿಂಗ್ ಪ್ರಕ್ರಿಯೆ ನಡೆಸಿಕೊಟ್ಟರು.

ಸೆಮಿಗೆ ಭಾರತ ಮಹಿಳಾ ಎ ತಂಡ

ಬ್ಯಾಂಕಾಕ್ (ಪಿಟಿಐ): ಸ್ಪಿನ್ನರ್‌ಗಳಾದ ತನುಜಾ ಕನ್ವರ್ (12ಕ್ಕೆ4) ಹಾಗೂ ಮಿನು ಮಣಿ (8ಕ್ಕೆ3) ಅವರ ಬೌಲಿಂಗ್ ದಾಳಿ ಎದುರು ನೇಪಾಳ ಮಹಿಳಾ ಎ ತಂಡವು 78 ರನ್‌ಗಳ ಅಲ್ಪಮೊತ್ತಕ್ಕೆ ಕುಸಿಯಿತು. ಕೇವಲ 7.5 ಓವರ್‌ಗಳಲ್ಲಿ ಗುರಿ ತಲುಪಿದ ಭಾರತ ಮಹಿಳಾ ಎ ತಂಡವು ರೈಸಿಂಗ್ ಸ್ಟಾರ್ಸ್ ಮಹಿಳಾ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಮಂಗಳವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಮಹಿಳಾ ಎ ತಂಡದ ನಾಯಕಿ ರಾಧಾ ಯಾದವ್ ಬೌಲಿಂಗ್ ಆಯ್ದುಕೊಂಡರು. ಎಡಗೈ ಸ್ಪಿನ್ನರ್ ತನುಜಾ ಹಾಗೂ ಬಲಗೈ ಸ್ಪಿನ್ನರ್ ಮಿನು ಕೈಚಳಕ ಮೆರೆದರು. ನೇಪಾಳದ ಆರಂಭ ಆಟಗಾರ್ತಿ ಸಂಝಾನಾ ಖಡ್ಕಾ (22; 16ಎ) ಹೊರತುಪಡಿಸಿದರೆ ಉಳಿದ ಬ್ಯಾಟರ್‌ಗಳು ಬಂದ ವೇಗದಲ್ಲಿಯೇ ಪೆವಿಲಿಯನ್‌ಗೆ ಮರಳಿದರು. ನಾಯಕಿ ರಾಧಾ ಎರಡು ವಿಕೆಟ್ ಪಡೆದು ಎದುರಾಳಿ ತಂಡವು ಬೇಗನೆ ಕುಸಿಯುವಂತೆ ಮಾಡಿದರು. ನೇಪಾಳ ತಂಡವು 18 ಓವರ್‌ಗಳಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು.

ಮಿನು ಮಣಿ

ಕನ್ನಡತಿ ವೃಂದಾ ದಿನೇಶ್ ಬ್ಯಾಟಿಂಗ್‌ನಲ್ಲಿ ಮತ್ತೆ ಮಿಂಚಿದರು. ಅವರು 18 ಎಸೆತಗಳಲ್ಲಿ 9 ಬೌಂಡರಿ ಸಹಿತ ಅಜೇಯ 39 ರನ್ ಗಳಿಸಿದರು. ಭಾರತ ಮಹಿಳಾ ಎ ತಂಡವು ಇನ್ನೂ 73 ಎಸೆತ ಉಳಿದಿರುವಂತೆಯೇ 3 ವಿಕೆಟ್ ಕಳೆದುಕೊಂಡು ನಿರಾಯಾಸವಾಗಿ ಗುರಿ ತಲುಪಿತು.

ಎ ಗುಂಪಿನ ಇನ್ನೊಂದು ಪಂದ್ಯದಲ್ಲಿ 9 ವಿಕೆಟ್‌ಗಳಿಂದ ಯುಎಇ ತಂಡವನ್ನು ಮಣಿಸಿದ ಪಾಕಿಸ್ತಾನ ತಂಡವೂ ನಾಲ್ಕರ ಘಟ್ಟಕ್ಕೆ ಅರ್ಹತೆ ಪಡೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ನೇಪಾಳ ಮಹಿಳಾ ಎ ತಂಡ: 18 ಓವರ್‌ಗಳಲ್ಲಿ 78 (ಸಂಝಾನಾ ಖಡ್ಕಾ 22, ಕವಿತಾ ಜೋಶಿ ಔಟಾಗದೇ 12; ತನುಜಾ ಕನ್ವರ್ 12ಕ್ಕೆ4, ಮಿನು ಮಣಿ 8ಕ್ಕೆ3, ರಾಧಾ ಯಾದವ್ 17ಕ್ಕೆ2). ಭಾರತ ಮಹಿಳಾ ಎ ತಂಡ: 7.5 ಓವರ್‌ಗಳಲ್ಲಿ 3 ವಿಕೆಟ್‌ಗೆ 82 (ದಿನೇಶ್ ವೃಂದಾ ಔಟಾಗದೇ 39, ತೇಜಲ್ ಹಸಬ್ನಿಸ್ 18; ಸೀತಾ ರಾಣಾ ಮಗರ್ 9ಕ್ಕೆ1). ಪಂದ್ಯದ ಆಟಗಾರ್ತಿ: ತನುಜಾ ಕನ್ವರ್.

ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್

ಮುಖ್ಯ ಅಭಿಯಂತರರವರ ಕಚೇರಿ–02 ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ಎನ್.ಆರ್. ಚೌಕ, ಬೆಂಗಳೂರು–560002.

ಸಂ : ಬೆಂ–ಸ್ಮೈಲ್/ಮುಅ–2/ಟೆಂಡರ್/10/2025–26 ದಿನಾಂಕ : 17.02.2026

ನೋಟಿಸ್‌ಗಾಗಿ ಟೆಂಡರ್ ಆಹ್ವಾನ (ಎನ್‌ಐಟಿ)
(http://kppp.karnataka.gov.in ಪೋರ್ಟಲ್ ಮೂಲಕ)
(ಕೆಡಬ್ಲ್ಯೂ–4 ದ್ವಿ–ಲಕೋಟೆ ಪದ್ಧತಿಯಡಿಲ್ಲಿ ಸ್ಪರ್ಧಾತ್ಮಕ ಬಿಡ್ಡಿಂಗ್))

ಬೆಂಗಳೂರು ನಗರದಲ್ಲಿ ನಿರ್ದಿಷ್ಟ ಮೂಲಸೌಕರ್ಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರವು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ಅನ್ನು ಸ್ಥಾಪಿಸಿರುತ್ತದೆ. ಮುಖ್ಯ ಅಭಿಯಂತರರು–02 ಇವರು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ಇವರು, ಕೆಡಬ್ಲ್ಯೂ–4 ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಕಾಮಗಾರಿಯ ಅಭಿವೃದ್ಧಿಗಾಗಿ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ. ಕಾಮಗಾರಿಯ ವಿವರಗಳು ಈ ಕೆಳಗಿನಂತಿವೆ.

ಕ್ರ.ಸಂ.	ಕಾಮಗಾರಿಗಳ ವಿವರ/ಟೆಂಡರ್‌ಗಿಟ್ಟ ಮೊತ್ತ/ ಕಾಮಗಾರಿಯ ಅವಧಿ
1	Comprehensive development of **Outer Ring Road from Silk Board Junction to K.R. Puram Metro Station to Global standards.** **Package 2 :** Iblur Junction to KR Puram Metro Station (Length 11.57km) Amount put to tender: **Rs. 223.50 Crores (Excluding GST),** Construction Period: **11 Months**

ವೇಳಾಪಟ್ಟಿ : 1) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳ ಲಭ್ಯತೆಯ ದಿನಾಂಕ ಮತ್ತು ಸಮಯ: 20.02.2026 ರಂದು ಸಂಜೆ 4.30 ಗಂಟೆಗೆ 2) ಪ್ರೀ ಬಿಡ್ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.02.2026 ರಂದು ಮಧ್ಯಾಹ್ನ 1.00 ಗಂಟೆಗೆ. 3) ಪೂರ್ವ–ಬಿಡ್ ಸಭೆಯು 27.02.2026 ರಂದು ಮಧ್ಯಾಹ್ನ 3:00 ಗಂಟೆಗೆ ನಿರ್ದೇಶಕರು (ಟೆಕ್ನಿಕಲ್), ಬಿ–ಸ್ಮೈಲ್ ಅಧ್ಯಕ್ಷತೆಯಲ್ಲಿ, ನಿರ್ದೇಶಕರು(ಟೆಕ್ನಿಕಲ್)ರವರ ಕಛೇರಿ, ಬಿ–ಸ್ಮೈಲ್, ಎನ್.ಆರ್ ಚೌಕ, ಬೆಂಗಳೂರು–560002. ಇಲ್ಲಿ ನಡೆಯಲಿದೆ. 4) ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 10.03.2026 ರಂದು ಸಂಜೆ 4.00 ಗಂಟೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 11.03.2026 ರಂದು ಸಂಜೆ 4.00 ಗಂಟೆಗೆ. 6) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು: ಸೂಚನೆ ನೀಡಲಾಗುವುದು

ಸಹಿ/– ಮುಖ್ಯ ಅಭಿಯಂತರರು–02,
ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್)

ಅಬ್ಬರದ ಆಟಕ್ಕೆ ಅಭಿಷೇಕ್ ತವಕ

ಸೂರ್ಯಕುಮಾರ್ ಯಾದವ್ ಪಡೆಗೆ ಇಂದು ನೆದರ್ಲೆಂಡ್ಸ್ ತಂಡದ ಸವಾಲು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಬದ್ಧ ಎದುರಾಳಿ ಪಾಕಿಸ್ತಾನ ತಂಡದ ಮೇಲೆ ಆರಾಮವಾಗಿ ಗೆಲುವು ದಾಖಲಿಸಿ ಭರ್ತಿ ಆತ್ಮವಿಶ್ವಾಸದಲ್ಲಿರುವ ಭಾರತ ತಂಡವು ದೈತ್ಯಾಕಾರದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಬುಧವಾರ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ. ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮಾ ಲಯಕಂಡುಕೊಂಡು ಟಿ20 ವಿಶ್ವಕಪ್‌ನ ಮುಂದಿನ ಹಂತದ ಸೆಣಸಾಟಕ್ಕೆ ಸಜ್ಜಾಗಬಹುದೆಂಬ ವಿಶ್ವಾಸದಲ್ಲಿ ಆತಿಥೇಯ ತಂಡ ಇದೆ.

ಜಿಂಬಾಬ್ವೆ ವಿರುದ್ಧ ಅಂತರ ರಾಷ್ಟ್ರೀಯ ಟಿ20ಗೆ ಪದಾರ್ಪಣೆ ಮಾಡಿದ ಬಳಿಕ, 25 ವರ್ಷ ವಯಸ್ಸಿನ ಅಭಿಷೇಕ್ ಹಲವು ಪಂದ್ಯಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ. ಕಳೆದ 20 ತಿಂಗಳ ಅವಧಿಯಲ್ಲಿ ಈ ಮಾದರಿಯಲ್ಲಿ ತಂಡದ ಯಶಸ್ಸಿನ ಓಟದಲ್ಲಿ ಪ್ರಮುಖ ಶಕ್ತಿಯಾಗಿ ದ್ದಾರೆ. ನಿರ್ಭೀತ ಆಟಕ್ಕೆ ಹೆಸರಾದ ಅಭಿಷೇಕ್ 40 ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 1,297 ರನ್ ಪೇರಿಸಿದ್ದಾರೆ. ಇದರಲ್ಲಿ ಎರಡು ಮಿಂಚಿನ ಶತಕ ಹಾಗೂ ಎಂಟು ಅರ್ಧ ಶತಕಗಳಿವೆ. ಸ್ಟ್ರೈಕ್ ರೇಟ್ 193ಕ್ಕಿಂತ ಮೇಲಿದೆ. ಬೇರೂರಿದ ಮೇಲೆ ಅವರನ್ನು ತಡೆಯುವುದು ಯಾವುದೇ ಬೌಲರ್‌ಗಳಿಗೆ ತಲೆನೋವಿನ ಕೆಲಸ.

ಆದರೆ 'ಹೈ ರಿಸ್ಕ್, ಹೈ ರಿವಾರ್ಡ್' ಶೈಲಿಯಲ್ಲಿ ಆಡಲು ತಂಡದ ಚಿಂತಕರ ಚಾವಡಿ ಅನುಮತಿ ನೀಡಿರುವುದು ಕೆಲವೊಮ್ಮೆ ಅಪಾಯಕ್ಕೂ ಆಹ್ವಾನ ನೀಡುತ್ತದೆ. ಚೆಂಡು ಪ್ರೇಕ್ಷಕರ ಸ್ಟ್ಯಾಂಡ್‌ಗಳಿಗೂ ತಲುಪಬಹುದು. ಕೆಲವೊಮ್ಮೆ ನೇರವಾಗಿ ಫೀಲ್ಡರ್‌ಗಳ ಬೊಗಸೆಗೂ ಬೀಳಬಹುದು. ಹೊಟ್ಟೆಕೆಟ್ಟ ಪರಿಣಾಮ ನಮೀಬಿಯಾ ವಿರುದ್ಧ 'ಎ' ಮೊದಲ ಪಂದ್ಯ ಕಳೆದುಕೊಂಡಿದ್ದ ಅಭಿಷೇಕ್ ನಂತರ ರನ್ ಗಳಿಸಲು ಪರದಾಡಿದ್ದಾರೆ. ಈ ವಿಶ್ವಕಪ್‌ನ ಸತತ ಎರಡು ಪಂದ್ಯ ಸೇರಿದಂತೆ ಕೊನೆಯ ಏಳು ಇನಿಂಗ್ಸ್‌ಗಳಲ್ಲಿ ಅವರು ನಾಲ್ಕು ಬಾರಿ ಸೊನ್ನೆ ಸುತ್ತಿದ್ದಾರೆ.

ಇಶಾನ್ ಕಿಶನ್ ಮತ್ತು ಇತರ ಬ್ಯಾಟರ್‌ಗಳ ಆಟದಿಂದಾಗಿ, ಅಭಿಷೇಕ್ ವೈಫಲ್ಯ ಅಂಥದ್ದೇನೂ ಪರಿಣಾಮ ಬೀರಿಲ್ಲ. ಆದರೆ ಕ್ರಿಕೆಟ್‌ನ ಈ ಮಹಾ ವೇದಿಕೆಯಲ್ಲಿ ತಮ್ಮ ಮೇರು ಆಟಕ್ಕೆ ಮರಳಲು ಅವರು ಕಾತರರಾಗಿದ್ದಾರೆ. ಸಣ್ಣ ತಂಡವಾದ ನೆದರ್ಲೆಂಡ್ಸ್ ವಿರುದ್ಧದ ಪಂದ್ಯ ಅವರಿಗೆ ಲಯಕ್ಕೆ ಮರಳಲು ಸುವರ್ಣಾವಕಾಶ ಒದಗಿಸಿದೆ. ಕೆಲಕಾಲ ಹೊಂದಿಕೊಂಡು ನಂತರ ತಮ್ಮ ಎಂದಿನ ಆಟವಾಡಿದರೆ ಅವರಿಗೆ ಅನುಕೂಲವಾಗಬಹುದು. ಮೊದಲ ಎಸೆತದಿಂದಲೇ ಅಬ್ಬರದ ಆಟಕ್ಕೆ ಮುಂದಾಗುತ್ತಿರುವುದು ಪತನಕ್ಕೂ ಕಾರಣವಾಗುತ್ತಿದೆ.

ಫೆ.22ರಂದು (ಭಾನುವಾರ) ದಕ್ಷಿಣ ಆಫ್ರಿಕಾ ವಿರುದ್ಧ ಸೂಪರ್ ಎಂಟರ ಹಂತದ ಮೊದಲ ಪಂದ್ಯಕ್ಕೆ ಇಳಿಯುವ ಮೊದಲು, ಹಾಲಿ ಚಾಂಪಿಯನ್ ತಂಡವು ಗುಂಪು ಹಂತದ ಈ ಕೊನೆಯ ಪಂದ್ಯದಲ್ಲಿ ಕೆಲವು ಪ್ರಯೋಗಗಳಿಗೆ ಮುಂದಾಗಬಹುದು. ಗಾಯದಿಂದ ಚೇತರಿಸಿ ತಂಡಕ್ಕೆ ಮರಳಿರುವ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಗೆ ಅವಕಾಶ ನೀಡಬಹುದು.

ನ್ಯೂಜಿಲೆಂಡ್ ವಿರುದ್ಧ ಜನವರಿ 11ರಂದು ಏಕದಿನ ಸರಣಿಯ ಮೊದಲ ಪಂದ್ಯವಾಡಿದ ನಂತರ ಅವರು ಸ್ಪರ್ಧಾತ್ಮಕ ಪಂದ್ಯವಾಡಿಲ್ಲ. ಉಪನಾಯಕ ಅಕ್ಷರ್ ಪಟೇಲ್ ವಿಶ್ರಾಂತಿ ಪಡೆಯುವ ಸಾಧ್ಯತೆಯಿಲ್ಲದ ಕಾರಣ, ಸುಂದರ್‌ಗೆ ಅವಕಾಶ ನೀಡಬೇಕಾದರೆ ಇರುವ ಒಂದೇ ಆಯ್ಕೆ ಎಂದರೆ ವರುಣ್ ಚಕ್ರವರ್ತಿಗೆ ವಿಶ್ರಾಂತಿ ನೀಡುವುದು.

ತನ್ನ ಮೊದಲ ಪಂದ್ಯದಲ್ಲಿ ಸೋಲುವ ಮೊದಲು ಪಾಕಿಸ್ತಾನವನ್ನು ಆತಂಕಕ್ಕೆ ತಳ್ಳಿದ್ದ ನೆದರ್ಲೆಂಡ್ಸ್ ತಂಡಕ್ಕೆ, ಭಾರತ ವಿರುದ್ಧ ಪಂದ್ಯವು ಅನುಭವದ ದೃಷ್ಟಿಯಿಂದಷ್ಟೇ ಮಹತ್ವದ್ದು. ಇಂಥ ದೊಡ್ಡ ಕ್ರೀಡಾಂಗಣದಲ್ಲಿ ಆ ತಂಡ ಹಿಂದೆಂದೂ ಆಡಿರಲಿಕ್ಕಿಲ್ಲ. ಎಲ್ಲ ಟಿಕೆಟ್‌ಗಳು ಬಿಕರಿಯಾದಲ್ಲಿ ಪ್ರೇಕ್ಷಕರ ಸಂಖ್ಯೆ ಡಚ್ಚರ ಪಡೆಗೆ ಭಯ ಹುಟ್ಟಿಸಲೂ ಬಹುದು.

ಗೆಲುವಿಗಿಂತ, ಹೋರಾಟ ನೀಡಬೇಕೆಂಬ ಯೋಚನೆ ಆ ತಂಡದ ಮನಸ್ಸಿನಲ್ಲಿ ಮೂಡಿರಬಹುದು.

ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ನೆದರ್ಲೆಂಡ್ಸ್ ವಿರುದ್ಧ ಭಾರತ ಒಮ್ಮೆ (ಸಿಡ್ನಿಯಲ್ಲಿ) ಮಾತ್ರ ಆಡಿದೆ. ಆಗ ಭಾರತ 56 ರನ್‌ಗಳಿಂದ ಜಯಗಳಿಸಿತ್ತು. ಪವಾಡವೇನಾದರೂ ನಡೆಯದಿದ್ದಲ್ಲಿ ಭಾರತಕ್ಕೆ, ಡಚ್ಚರ ಪಡೆ ಸುಲಭದ ತುತ್ತಾಗಬಹುದು.

ಭಾರತ ತಂಡದ ಆರಂಭ ಆಟಗಾರ ಅಭಿಷೇಕ್ ಶರ್ಮಾ ತಾಲೀಮು

ಇಂದಿನ ಪಂದ್ಯ

ದಕ್ಷಿಣ ಆಫ್ರಿಕಾ	V/s	ಯುಎಇ
ತಾಣ: ದೆಹಲಿ, ಬೆಳಿಗ್ಗೆ 11ರಿಂದ		
ನಮೀಬಿಯಾ	V/s	ಪಾಕಿಸ್ತಾನ
ತಾಣ: ಕೊಲಂಬೊ, ಮಧ್ಯಾಹ್ನ 3ರಿಂದ		
ಭಾರತ	V/s	ನೆದರ್ಲೆಂಡ್ಸ್
ತಾಣ: ಅಹಮದಾಬಾದ್, ರಾತ್ರಿ 7ರಿಂದ		

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಸ್ಟಾರ್

ಸೂಪರ್ 8: ಒಂದನೇ ಗುಂಪಿನಲ್ಲಿ ಭಾರತ

ಹಾಲಿ ಚಾಂಪಿಯನ್ ಭಾರತ ತಂಡವು ಟಿ20 ವಿಶ್ವಕಪ್ ಸೂಪರ್ 8ರ ಹಂತದ ಒಂದನೇ ಗುಂಪಿನಲ್ಲಿ ಸ್ಥಾನ ಪಡೆದಿದೆ. ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ವೆಸ್ಟ್ ಇಂಡೀಸ್ ತಂಡಗಳೂ ಇದೇ ಗುಂಪಿನಲ್ಲಿವೆ.

ಈ ಹಂತದಲ್ಲಿ ಪ್ರತಿ ತಂಡವು ಮೂರು ಪಂದ್ಯಗಳನ್ನು ಆಡಬೇಕಿದೆ. ಗುಂಪಿನಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಮುನ್ನಡೆಯಲಿವೆ.

ಭಾರತ ತಂಡವು ಇದೇ 22ರಂದು ದಕ್ಷಿಣ ಆಫ್ರಿಕಾ ವಿರುದ್ಧ; 26ರಂದು ಜಿಂಬಾಬ್ವೆ ವಿರುದ್ಧ; ಮಾರ್ಚ್ 1ರಂದು ವೆಸ್ಟ್ ಇಂಡೀಸ್ ವಿರುದ್ಧ ಸೆಣಸಲಿದೆ.

ಸೂಪರ್ 8ರ ಎರಡನೇ ಗುಂಪಿನಲ್ಲಿ ಶ್ರೀಲಂಕಾ, ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ತಂಡಗಳಿವೆ. ಉಳಿದಿರುವ ಒಂದು ಸ್ಥಾನಕ್ಕಾಗಿ ಪಾಕಿಸ್ತಾನ ಮತ್ತು ಅಮೆರಿಕ ತಂಡಗಳ ನಡುವೆ ಪೈಪೋಟಿ ಇದೆ.

ಸೂಪರ್ 8ರ ಹಂತದ ಭಾರತದ ವೇಳಾಪಟ್ಟಿ

ದಿನಾಂಕ	ಎದುರಾಳಿ	ತಾಣ	ಸಮಯ
ಫೆ.22	ದಕ್ಷಿಣ ಆಫ್ರಿಕಾ	ಅಹಮದಾಬಾದ್	ರಾತ್ರಿ 7
ಫೆ.26	ಜಿಂಬಾಬ್ವೆ	ಚೆನ್ನೈ	ರಾತ್ರಿ 7
ಮಾ.1	ವೆಸ್ಟ್ ಇಂಡೀಸ್	ಕೋಲ್ಕತ್ತ	ರಾತ್ರಿ 7

ಐರೀ ಅರ್ಧಶತಕ; ನೇಪಾಳಕ್ಕೆ ಜಯ

ಮುಂಬೈ (ಪಿಟಿಐ): ಆಲ್‌ರೌಂಡರ್ ದೀಪೇಂದ್ರ ಸಿಂಗ್ ಐರೀ ಅವರ ಮಿಂಚಿನ ಅರ್ಧಶತಕದ ಬಲದಿಂದ ನೇಪಾಳ ತಂಡ ಸಿ ಗುಂಪಿನ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಸ್ಕಾಟ್ಲೆಂಡ್ ತಂಡವನ್ನು ಮಣಿಸಿತು. ಅದರೊಂದಿಗೆ, 12 ವರ್ಷಗಳ ನಂತರ ಟಿ20 ವಿಶ್ವಕಪ್‌ನಲ್ಲಿ ಗೆಲುವು ಸಾಧಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ನೇಪಾಳ ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್ ಇಳಿದ ಸ್ಕಾಟ್ಲೆಂಡ್ ತಂಡಕ್ಕೆ ಆರಂಭಿಕ ಜೋಡಿ ಮೈಕೆಲ್ ಜೋನ್ಸ್ (71; 45ಎ, 4x8, 6x3) ಹಾಗೂ ಜಾರ್ಜ್ ಮುನ್ಸೆ (27) ಉತ್ತಮ ಬುನಾದಿ ಹಾಕಿಕೊಟ್ಟಿತು. ಮೊದಲ ವಿಕೆಟ್ ಜತೆಯಾಟದಲ್ಲಿ 80 ರನ್ ಪೇರಿಸಿತು.

ಮೂರನೇ ಕ್ರಮಾಂಕದಲ್ಲಿ ಬಂದ ಬ್ರಾಂಡನ್ ಮೆಕ್‌ಮುಲ್ಲೆನ್ (25) ಉಪಯುಕ್ತ ಕಾಣಿಕೆ ನೀಡಿದರು. ಇದರಿಂದಾಗಿ, ಸ್ಕಾಟ್ಲೆಂಡ್ ತಂಡವು 7 ವಿಕೆಟ್‌ಗೆ 170 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಗಳಿಸಿತು. ಬೌಲಿಂಗ್‌ನಲ್ಲಿ ಸೋಂಪಾಲ್ ಕಮಿ (25ಕ್ಕೆ3) ಹಾಗೂ ನಂದನ್ ಯಾದವ್ (34ಕ್ಕೆ2) ಪರಿಣಾಮಕಾರಿ ಎನಿಸಿದರು.

ಗುರಿ ಬೆನ್ನಟ್ಟಿದ ನೇಪಾಳ ತಂಡದ ಕುಶಾಲ್ ಭುರ್ತೆಲ್ (43; 35ಎ) ಹಾಗೂ ಆಸಿಫ್ ಶೇಕ್ (33; 27ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 9.1 ಓವರ್‌ಗಳಲ್ಲಿ 74 ರನ್ ಸೇರಿಸಿದರು.

ನಂತರ, ಐರೀ ಅವರು 23 ಎಸೆತಗಳಲ್ಲಿ 50 ರನ್ ಸಿಡಿಸಿ ತಂಡವನ್ನು ಗುರಿಮುಟ್ಟಿಸಿದರು. ಅವರ ಇನಿಂಗ್ಸ್‌ನಲ್ಲಿ 4 ಬೌಂಡರಿ ಹಾಗೂ 3 ಸಿಕ್ಸರ್ ಇದ್ದವು. ಅವರಿಗೆ, ಗುಲ್ಶನ್ ಝಾ (ಔಟಾಗದೇ 24; 17ಎ) ಜೊತೆ ನೀಡಿದರು. ನೇಪಾಳ ತಂಡವು 19.2 ಓವರ್‌ಗಳಲ್ಲಿ 3 ವಿಕೆಟ್‌ಗೆ 171 ರನ್ ಗಳಿಸಿ, ಗೆಲುವಿನೊಂದಿಗೆ ವಿಶ್ವಕಪ್ ಅಭಿಯಾನವನ್ನು ಮುಗಿಸಿತು.

ದೀಪೇಂದ್ರ ಸಿಂಗ್ ಐರೀ ಎಎಫ್‌ಪಿ ಚಿತ್ರ

ಎರಡೂ ತಂಡಗಳು ಸೂಪರ್ 8ರ ಸ್ಪರ್ಧೆಯಿಂದ ಈಗಾಗಲೇ ಹೊರಬಿದ್ದಿವೆ. ಹೀಗಾಗಿ, ಈ ಪಂದ್ಯ ಹೆಚ್ಚಿನ ಮಹತ್ವ ಪಡೆದಿಲ್ಲ. ಈ ಗುಂಪಿನಲ್ಲಿ ಮೊದಲೆರಡು ಸ್ಥಾನ ಪಡೆದಿರುವ ವೆಸ್ಟ್ ಇಂಡೀಸ್ ಮತ್ತು ಇಂಗ್ಲೆಂಡ್ ತಂಡಗಳು ಸೂಪರ್ 8ಕ್ಕೆ ಪ್ರವೇಶಿಸಿವೆ.

ನೇಪಾಳ ತಂಡವು 2014ರ ಟಿ20 ವಿಶ್ವಕಪ್ ಟೂರ್ನಿಯ ಗುಂಪು ಹಂತದಲ್ಲಿ ಅಫ್ಗಾನಿಸ್ತಾನ ಹಾಗೂ ನೆದರ್ಲೆಂಡ್ಸ್ ತಂಡಗಳನ್ನು ಮಣಿಸಿತ್ತು. ಆ ನಂತರ ಎಲ್ಲ ಪಂದ್ಯಗಳಲ್ಲಿಯೂ ಸೋತಿತ್ತು.

ಸಂಕ್ಷಿಪ್ತ ಸ್ಕೋರು: ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 7ಕ್ಕೆ 170 (ಜಾರ್ಜ್ ಮುನ್ಸೆ 27, ಮೈಕೆಲ್ ಜೋನ್ಸ್ 71; ಸೋಂಪಾಲ್ ಕಮಿ 25ಕ್ಕೆ3, ನಂದನ್ ಯಾದವ್ 34ಕ್ಕೆ2) ನೇಪಾಳ: 19.2 ಓವರ್‌ಗಳಲ್ಲಿ 3ಕ್ಕೆ 171 (ಕುಶಾಲ್ ಭುರ್ತೆಲ್ 43, ಆಸಿಫ್ ಶೇಕ್ 33, ದೀಪೇಂದ್ರ ಸಿಂಗ್ ಐರೀ ಔಟಾಗದೇ 50; ಮೈಕೆಲ್ ಲೀಸ್ಕ್ 30ಕ್ಕೆ3).
ಪಂದ್ಯದ ಆಟಗಾರ: ದೀಪೇಂದ್ರ ಸಿಂಗ್ ಐರೀ.

ಟಿ20 ವಿಶ್ವಕಪ್: ಪಾಯಿಂಟ್ಸ್ ಪಟ್ಟಿ

	ತಂಡಗಳು	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಗುಂಪು ಎ							
1	ಭಾರತ	3	3	0		6	3.050
2	ಅಮೆರಿಕ	4	2	2		4	0.788
3	ಪಾಕಿಸ್ತಾನ	3	2	1		4	-0.403
4	ನೆದರ್ಲೆಂಡ್ಸ್	3	1	2		2	-1.352
5	ನಮೀಬಿಯಾ	3	0	3		0	-2.443
ಗುಂಪು ಬಿ							
1	ಶ್ರೀಲಂಕಾ	3	3	0		6	2.462
2	ಜಿಂಬಾಬ್ವೆ	3	2	0	1	5	1.984
3	ಐರ್ಲೆಂಡ್	4	1	2	1	3	0.150
4	ಆಸ್ಟ್ರೇಲಿಯಾ	3	1	2		2	0.414
5	ಒಮಾನ್	3	0	3		0	-4.546
ಗುಂಪು ಸಿ							
1	ವೆಸ್ಟ್ ಇಂಡೀಸ್	3	3	0		6	1.820
2	ಇಂಗ್ಲೆಂಡ್	4	3	1		6	0.201
3	ಸ್ಕಾಟ್ಲೆಂಡ್	4	1	3		2	0.184
4	ಇಟಲಿ	3	1	1		2	-0.588
5	ನೇಪಾಳ	4	1	3		2	-1.349
ಗುಂಪು ಡಿ							
1	ದಕ್ಷಿಣ ಆಫ್ರಿಕಾ	3	3	0		6	1.477
2	ನ್ಯೂಜಿಲೆಂಡ್	4	3	1		6	1.227
3	ಅಫ್ಘಾನಿಸ್ತಾನ	3	1	2		2	-0.215
4	ಯುಎಇ	3	1	2		2	-0.797
5	ಕೆನಡಾ	3	0	3		0	-1.865

ಗಮನ ಸೆಳೆದ ಕೆನಡಾದ ಯುವರಾಜ್ ಸಮ್ರಾ ಶತಕ

'ಸೂಪರ್ 8' ಹಂತಕ್ಕೆ ನ್ಯೂಜಿಲೆಂಡ್

ಚೆನ್ನೈ (ಎಎಫ್‌ಪಿ): ನಿರೀಕ್ಷೆಯಂತೆ ನ್ಯೂಜಿಲೆಂಡ್ ತಂಡ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ ಎಂಟರ ಹಂತ ತಲುಪಿತು. ಗ್ಲೆನ್ ಫಿಲಿಪ್ಸ್ (ಔಟಾಗದೇ 76) ಮತ್ತು ರಚಿನ್ ರವೀಂದ್ರ (ಔಟಾಗದೇ 59) ಅವರ ಅರ್ಧ ಶತಕಗಳ ನೆರವಿನಿಂದ ಮಿಚೆಲ್ ಸ್ಯಾಂಟ್ನರ್ ಪಡೆ ಮಂಗಳವಾರ ಎಂಟು ವಿಕೆಟ್‌ಗಳಿಂದ ಕೆನಡಾ ತಂಡವನ್ನು ಸೋಲಿಸಿತು.

ಡಿ ಗುಂಪಿನಲ್ಲಿ ದಕ್ಷಿಣ ಆಫ್ರಿಕಾ ಮೊದಲ ಸ್ಥಾನ ಗಳಿಸಿದರೆ, ನ್ಯೂಜಿಲೆಂಡ್ ಎರಡನೇ ಸ್ಥಾನ ಗಳಿಸಿತು. 2024ರ ಆವೃತ್ತಿಯಲ್ಲಿ ಸೆಮಿಫೈನಲ್ ತಲುಪಿದ್ದ ಅಫ್ಗಾನಿಸ್ತಾನ ಹೊರಬಿತ್ತು. ಗೆಲುವಿಗೆ 174 ರನ್‌ಗಳ ಗುರಿಯನ್ನು ಎದುರಿಸಿದ ನ್ಯೂಜಿಲೆಂಡ್ 4.5 ಓವರುಗಳಿರುವಂತೆ 2 ವಿಕೆಟ್‌ಗೆ 176 ರನ್ ಹೊಡೆಯಿತು.

ಕೆನಡಾ ಆಡಿದ ಮೂರೂ ಪಂದ್ಯ ಸೋತರೂ, ಭಾರತ ಮೂಲದ 19 ವರ್ಷ ವಯಸ್ಸಿನ ಆರಂಭ ಆಟಗಾರ ಯುವರಾಜ್ ಸಮ್ರಾ ಗಮನ ಸೆಳೆದರು. ಅವರು ಟಿ20 ವಿಶ್ವಕಪ್‌ನಲ್ಲಿ ಶತಕ ಹೊಡೆದ ಅತಿ ಕಿರಿಯ (19 ವರ್ಷ 141 ದಿನ) ಆಟಗಾರ ಎನಿಸಿದರು.

65 ಎಸೆತಗಳಲ್ಲಿ 11 ಬೌಂಡರಿ, ಅರ್ಧ ಡಜನ್ ಸಿಕ್ಸರ್ ಬಾರಿಸಿ 110 ರನ್ ಗಳಿಸಿದ ಯುವರಾಜ್ ತಮ್ಮ ತಂಡ 4 ವಿಕೆಟ್‌ಗೆ 110 ರನ್‌ಗಳ ಗೌರವಾರ್ಹ ಮೊತ್ತ ಗಳಿಸಲು ನೆರವಾದರು. ಕೆನಡಾ ನಾಯಕ ದಿಲ್‌ಪ್ರೀತ್ ಸಿಂಗ್ ಬಾಜ್ವಾ ಟಾಸ್ ಗೆದ್ದು ಬ್ಯಾಟ್ ಮಾಡಲು ನಿರ್ಧರಿಸಿದ್ದರು.

ಸಮ್ರಾ ಮತ್ತು ದಿಲ್‌ಪ್ರೀತ್ ಬಾಜ್ವಾ (36, 39ಎ) ಮೊದಲ ವಿಕೆಟ್‌ಗೆ 14 ಓವರುಗಳಲ್ಲಿ 116 ರನ್ ಗಳಿಸಿದ್ದು ಗಮನಾರ್ಹ. ಬಾಜ್ವಾ ಅವರು ಜೇಮಿಸನ್ ಬೌಲಿಂಗ್‌ನಲ್ಲಿ ಫಿಲಿಪ್ಸ್ ಅವರಿಗೆ ಕ್ಯಾಚ್ ಆಗುವ ಮೂಲಕ ಜತೆಯಾಟ ಮುರಿಯಿತು. ಆದರೆ ಸಮ್ರಾ ಆಕ್ರಮಣಕಾರಿ ಆಟ ಮುಂದುವರಿಸಿದರು. 58 ಎಸೆತಗಳಲ್ಲಿ ಶತಕ ದಾಟಿದ ಅವರು ಹಾಲಿ ವಿಶ್ವಕಪ್‌ನ ಅತ್ಯಧಿಕ ಮೊತ್ತ ದಾಖಲಿಸಿದರು.

ಅವರು ಇನಿಂಗ್ಸ್ ಅಂತಿಮ ಓವರಿನಲ್ಲಿ (ಬೌಲರ್: ಜೇಕಬ್ ಡಫಿ) ಭರ್ಜರಿ ಹೊಡೆತಕ್ಕೆ ಯತ್ನಿಸಿ ಲಾಂಗ್‌ಲೆಗ್‌ನಲ್ಲಿ ಕ್ಯಾಚಿತ್ತರು.

ಸಂಕ್ಷಿಪ್ತ ಸ್ಕೋರು: ಕೆನಡಾ: 20 ಓವರುಗಳಲ್ಲಿ 4 ವಿಕೆಟ್‌ಗೆ 173 (ಯುವರಾಜ್ ಸಮ್ರಾ 110, ದಿಲ್‌ಪ್ರೀತ್ ಬಾಜ್ವಾ 36); ನ್ಯೂಜಿಲೆಂಡ್: 15.1 ಓವರುಗಳಲ್ಲಿ 2 ವಿಕೆಟ್‌ಗೆ 176 (ರಚಿನ್ ರವೀಂದ್ರ ಔಟಾಗದೇ 59, ಗ್ಲೆನ್ ಫಿಲಿಪ್ಸ್ ಔಟಾಗದೇ 76).
ಪಂದ್ಯದ ಆಟಗಾರ: ಗ್ಲೆನ್ ಫಿಲಿಪ್ಸ್.

ರಚಿನ್ ರವೀಂದ್ರ ಮತ್ತು ಗ್ಲೆನ್ ಫಿಲಿಪ್ಸ್ ಪಿಟಿಐ ಚಿತ್ರ

ಪುತ್ರನಿಗೆ 'ಯುವಿ' ಹೆಸರಿಟ್ಟ ತಂದೆ....

ಯುವರಾಜ್ ಸಮ್ರಾ ಅವರ ತಂದೆ ಬಲಜಿತ್ ಸಮ್ರಾ ಅವರೂ ಕ್ರಿಕೆಟ್‌ಪ್ರೇಮಿ. ಮಗನಿಗೆ ಭಾರತದ ದಿಗ್ಗಜ ಆಲ್‌ರೌಂಡರ್ ಯುವರಾಜ್ ಸಿಂಗ್ ಅವರ ಹೆಸರನ್ನು ಇಟ್ಟಿದ್ದಾರೆ. ಈ ಕುಟುಂಬ ಕೆನಡಾದ ಬ್ರಾಂಪ್ಟನ್‌ನಲ್ಲಿ ನೆಲೆಸಿದೆ.

'ಈ ಇನಿಂಗ್ಸ್ ನನ್ನ ಬದುಕು ಬದಲಿಸಬಹುದೆಂಬ ವಿಶ್ವಾಸ ವ್ಯಕ್ತವಾಗಿದೆ. ಕ್ರಿಕೆಟ್‌ನಿಂದ ಇನ್ನು ನಾನು ಬದುಕು ಕಟ್ಟಿಕೊಳ್ಳಬಹುದೆನಿಸಿದೆ. ಇಂಥ ದೊಡ್ಡ ವೇದಿಕೆಯಲ್ಲಿ ಶತಕ ಬಾರಿಸುವ ಕನಸು ಕಾಣುತ್ತಿದ್ದೆ. ನನ್ನ ಮೊದಲ ವಿಶ್ವಕಪ್‌ನಲ್ಲೇ ಅದನ್ನು ಸಾಧಿಸಲು ಸಾಧ್ಯವಾಗಿದ್ದರಿಂದ ಕನಸು ನನಸಾದಂತಾಗಿದೆ' ಎಂದು ಸಮ್ರಾ ಪಂದ್ಯದ ಬಳಿಕ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

ಜಿಂಬಾಬ್ವೆ ಸೂಪರ್ 8ಕ್ಕೆ; ಗುಂಪು ಹಂತದಲ್ಲೇ ಹೊರಬಿದ್ದ ಆಸ್ಟ್ರೇಲಿಯಾ

ಪಲ್ಲೆಕೆಲೆ (ಪಿಟಿಐ): ಮಂಗಳವಾರ ನಡೆಯಬೇಕಿದ್ದ ಐರ್ಲೆಂಡ್ ವಿರುದ್ಧದ ನಿರ್ಣಾಯಕ ಪಂದ್ಯವು ಮಳೆಯಿಂದಾಗಿ ರದ್ದಾದ ನಂತರ ಜಿಂಬಾಬ್ವೆ ತಂಡವು ಟಿ20 ವಿಶ್ವಕಪ್‌ನ ಸೂಪರ್ 8ರ ಹಂತಕ್ಕೆ ಮುನ್ನಡೆಯಿತು. ಇದರೊಂದಿಗೆ ಮಾಜಿ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಗುಂಪು ಹಂತದಲ್ಲೇ ಹೊರಬಿತ್ತು.

ಐರ್ಲೆಂಡ್ ಮತ್ತು ಜಿಂಬಾಬ್ವೆ ತಂಡಗಳಿಗೆ ಒಂದು ಅಂಕ ನೀಡಲಾಯಿತು. ಈ ಮೊದಲು ಎರಡು ಪಂದ್ಯಗಳನ್ನು ಗೆದ್ದಿದ್ದ ಜಿಂಬಾಬ್ವೆ ಐದು ಅಂಕಗಳೊಂದಿಗೆ ಬಿ ಗುಂಪಿನಿಂದ ಸೂಪರ್ 8ರ ಹಂತಕ್ಕೆ ಸ್ಥಾನ ಕಾಯ್ದಿರಿಸಿತು. ಆ ತಂಡವು ಇದೇ 26ರಂದು ಚೆನ್ನೈನಲ್ಲಿ ನಡೆಯುವ ತನ್ನ ಸೂಪರ್ 8ರ ಮೊದಲ ಪಂದ್ಯದಲ್ಲಿ ಭಾರತವನ್ನು ಎದುರಿಸಲಿದೆ.

ಬಿ ಗುಂಪಿನಲ್ಲಿ ಅಗ್ರಸ್ಥಾನದಲ್ಲಿರುವ ಶ್ರೀಲಂಕಾ (6) ಈಗಾಗಲೇ ಸೂಪರ್ 8ಕ್ಕೆ ಅರ್ಹತೆ ಪಡೆದಿರುವುದರಿಂದ ಮಂಗಳವಾರದ ಪಂದ್ಯ ಜಿಂಬಾಬ್ವೆ ಮತ್ತು ಐರ್ಲೆಂಡ್‌ಗೆ ತಂಡಗಳಿಗೆ ಮಹತ್ವದ್ದಾಗಿತ್ತು. ಪಂದ್ಯ ರದ್ದಾದ ಕಾರಣ ಜಿಂಬಾಬ್ವೆಯ ಹಾದಿ ಸುಗಮವಾಯಿತು. ಐರ್ಲೆಂಡ್ 3 ಅಂಕಗಳೊಂದಿಗೆ ಅಭಿಯಾನ ಮುಗಿಸಿತು. ಆಸ್ಟ್ರೇಲಿಯಾ ತಂಡಕ್ಕೆ ಜಿಂಬಾಬ್ವೆ ಮತ್ತು ಶ್ರೀಲಂಕಾ ವಿರುದ್ಧದ ಸೋಲು ಮುಳುವಾದವು.

2024ರ ಆವೃತ್ತಿಗೆ ಅರ್ಹತೆ ಪಡೆಯುವಲ್ಲಿ ವಿಫಲವಾಗಿದ್ದ ಜಿಂಬಾಬ್ವೆ, ಹಾಲಿ ಟೂರ್ನಿಯಲ್ಲಿ ಸೂಪರ್ 8ರ ಹಂತಕ್ಕೆ ಅರ್ಹತೆ ಪಡೆದ ಏಳನೇ ತಂಡ.

ದೆಹಲಿ ಓಪನ್: ನಾಗಲ್ ಶುಭಾರಂಭ

ನವದೆಹಲಿ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಾಗಲ್ ಅವರು ಮಂಗಳವಾರ ದೆಹಲಿ ಓಪನ್ ಟೆನಿಸ್ ಟೂರ್ನಿಯಲ್ಲಿ ಸ್ಪೇನ್‌ನ ಡೇವಿಡ್ ಜೋರ್ಡಾ ಸಾಂಚಿಸ್ ವಿರುದ್ಧ ನೇರ ಸೆಟ್‌ಗಳಿಂದ ಗೆದ್ದು ಅಭಿಯಾನ ಆರಂಭಿಸಿದರು.

ನಾಗಲ್ 6-3, 7-5ರಿಂದ ಡೇವಿಡ್ ಅವರನ್ನು ಒಂದು ಗಂಟೆ 27 ನಿಮಿಷಗಳ ಹೋರಾಟದಲ್ಲಿ ಮಣಿಸಿದರು. ಅಗ್ರಶ್ರೇಯಾಂಕದ ಡೇನ್ ಸ್ವೀನಿ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಕಜಾಕಸ್ತಾನದ ಬೀಬಿಟ್ ಜುಕಾಯೆವ್ 6-7 (6), 6-2, 6-2ರಿಂದ ಆಸ್ಟ್ರೇಲಿಯಾದ ಸ್ವೀನಿ ಅವರಿಗೆ ಆಘಾತ ನೀಡಿದರು

ಇಮ್ರಾನ್ ಖಾನ್‌ಗೆ ಚಿಕಿತ್ಸೆ: ಪಾಕ್ ಸರ್ಕಾರಕ್ಕೆ ದಿಗ್ಗಜ ಕ್ರಿಕೆಟಿಗರ ಮನವಿ

ನವದೆಹಲಿ (ಪಿಟಿಐ): ಜೈಲಿನಲ್ಲಿ ಅನಾರೋಗ್ಯದಿಂದ ಬಳಲುತ್ತಿರುವ ಮಾಜಿ ಕ್ರಿಕೆಟ್ ತಾರೆ–ರಾಜಕಾರಣಿ ಇಮ್ರಾನ್ ಖಾನ್ ಅವರಿಗೆ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ಒದಗಿಸಬೇಕು ಎಂದು ದಿಗ್ಗಜ ಆಟಗಾರರಾದ ಸುನಿಲ್ ಗಾವಸ್ಕರ್ ಮತ್ತು ಕಪಿಲ್ ದೇವ್ ಸೇರಿದಂತೆ ವಿವಿಧ ತಂಡಗಳ 14 ಮಂದಿ ಮಾಜಿ ನಾಯಕರು ಪಾಕಿಸ್ತಾನ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮಾಜಿ ಪ್ರಧಾನಿಯಾಗಿರುವ ಇಮ್ರಾನ್ ಖಾನ್ ಬಲಗಣ್ಣಿನ ದೃಷ್ಟಿ ಶೇ 85ರಷ್ಟು ಮಂದವಾಗಿದೆ. ರಾವಲ್ಪಿಂಡಿಯ ಜೈಲಿನಲ್ಲಿರುವ ಅವರಿಗೆ ಚಿಕಿತ್ಸೆ ನೀಡದೇ ನಿರ್ಲಕ್ಷಿಸಲಾಗಿದೆ ಎಂದು ಕುಟುಂಬ ಸದಸ್ಯರು ದೂರಿದ್ದಾರೆ. 1992ರಲ್ಲಿ ಏಕದಿನ ವಿಶ್ವಕಪ್ ಗೆದ್ದ ಪಾಕಿಸ್ತಾನ ತಂಡಕ್ಕೆ ಇಮ್ರಾನ್ ಖಾನ್ ನಾಯಕರಾಗಿದ್ದರು.

'ಮಾಜಿ ಅಂತರರಾಷ್ಟ್ರೀಯ ಕ್ರಿಕೆಟ್ ನಾಯಕರ ಮನವಿ' ಶೀರ್ಷಿಕೆಯ ಪತ್ರದಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಅಂತರರಾಷ್ಟ್ರೀಯ ನಾಯಕರಿಗೆ ನೀಡುವಂಥ ಚಿಕಿತ್ಸೆ ನೀಡಬೇಕು ಎಂದು ಈ ಮಾಜಿ ನಾಯಕರು ಮನವಿ ಮಾಡಿದ್ದಾರೆ.

ಸೌರವ್ ಗಂಗೂಲಿ, ಮೈಕೆಲ್ ಅಥರ್ಟನ್, ಆ್ಯಲನ್ ಬಾರ್ಡರ್, ಮೈಕ್ ಬ್ರೇರ್ಲಿ, ಗ್ರೆಗ್ ಚಾಪೆಲ್, ಇಯಾನ್ ಚಾಪೆಲ್, ಬೆಲಿಂಡಾ ಕ್ಲಾರ್ಕ್, ಡೇವಿಡ್ ಗೋವರ್, ಕಿಮ್ ಹ್ಯೂಸ್, ನಾಸಿರ್ ಹುಸೇನ್, ಕ್ಲೈವ್ ಲಾಯ್ಡ್, ಸ್ಟೀವ್ ವಾ ಮತ್ತು ಜಾನ್ ರೈಟ್ ಅವರು ಪತ್ರಕ್ಕೆ ಸಹಿ ಹಾಕಿದ ಮಾಜಿ ನಾಯಕರಾಗಿದ್ದಾರೆ.

ಪಾಕ್ ತಂಡಕ್ಕೆ ಗೆಲುವು ಅನಿವಾರ್ಯ

ಕೊಲಂಬೊ (ಪಿಟಿಐ): ಈ ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡದ ಹಿನ್ನಡೆಗೆ ಅದರ ಅಗ್ರ ಬ್ಯಾಟರ್‌ಗಳು ಪರದಾಡುತ್ತಿರುವುದು ಪ್ರಮುಖ ಕಾರಣವಾಗಿದೆ. ಬ್ಯಾಟರ್‌ಗಳ ಪಡೆ ಲಯಕ್ಕೆ ಮರಳಬಹುದೆಂಬ ವಿಶ್ವಾಸದೊಡನೆ ಪಾಕಿಸ್ತಾನ ತಂಡವು ಬುಧವಾರ ನಡೆಯುವ ತನ್ನ ಕೊನೆಯ, ಆದರೆ ಮಹತ್ವದ ಲೀಗ್ ಪಂದ್ಯದಲ್ಲಿ ನಮಿಬಿಯಾ ತಂಡವನ್ನು ಎದುರಿಸಲಿದೆ.

ಸಲ್ಮಾನ್ ಆಘಾ

ಹಾಲಿ ಚಾಂಪಿಯನ್ ಭಾರತ ತಂಡವು ಭಾನುವಾರ ಪಾಕಿಸ್ತಾನ ತಂಡವನ್ನು ಸೋಲಿಸಿ ಎ ಗುಂಪಿನಿಂದ ಈಗಾಗಲೇ ಸೂಪರ್ ಎಂಟರ ಹಂತದಲ್ಲಿ ಸ್ಥಾನ ಕಾದಿರಿಸಿದೆ. ಗುಂಪಿನಲ್ಲಿ ಎರಡನೇ ಸ್ಥಾನಕ್ಕೆ ಪೈಪೋಟಿಯಿದೆ. ಅಮೆರಿಕ ತಂಡವೂ ಸೂಪರ್ ಎಂಟರ ಹಂತಕ್ಕೆ ಮುನ್ನಡೆಯುವ ಅವಕಾಶ ಹೊಂದಿದೆ.

ಎರಡೂ ತಂಡಗಳು ತಲಾ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿವೆ. ಆದರೆ ಪಾಕಿಸ್ತಾನದ ನೆಟ್‌ರನ್ ರೇಟ್ (–0.403), ಅಮೆರಿಕಕ್ಕಿಂತ (0.788) ಕಡಿಮೆಯಿದೆ. ಪಾಕ್‌ಗೆ ಹೆಚ್ಚಿನ ಲೆಕ್ಕಾಚಾರ ಅಗತ್ಯವಿಲ್ಲ. ನಮೀಬಿಯಾ ವಿರುದ್ಧ ಗೆದ್ದರೆ ತಂಡ ಸೂಪರ್ ಎಂಟರ ಘಟ್ಟ ತಲುಪಬಹುದು. ಸೋಲೇನಾದರೂ ಎದುರಾದರೆ ಸಲ್ಮಾನ್ ಅಲಿ ಆಘಾ ಬಳಗಕ್ಕೆ ಅಪಾಯ ಕಟ್ಟಿಟ್ಟಬುತ್ತಿ. ಭಾರತ ವಿರುದ್ಧ ದೊಡ್ಡ ಅಂತರದ ಸೋಲು ತಂಡವನ್ನು ಈ ಸ್ಥಿತಿಗೆ ತಳ್ಳಿದೆ.

ಪ್ರಮುಖ ಬ್ಯಾಟರ್ ಬಾಬರ್ ಆಜಂ, ಆರಂಭ ಆಟಗಾರರಾದ ಸಾಹಿಬ್‌ಝಾದಾ ಫರ್ಹಾನ್, ಸಯೀಮ್ ಅಯೂಬ್, ನಾಯಕ ಸಲ್ಮಾನ್ ಆಘಾ ಅವರು ರನ್ ಬರ ಎದುರಿಸುತ್ತಿರುವುದು ತಂಡಕ್ಕೆ ತಲೆನೋವಾಗಿದೆ. ಕೊಲಂಬೊದಲ್ಲಿ ಭಾರತ ವಿರುದ್ಧ ಪಂದ್ಯದಲ್ಲೂ ಇವರೆಲ್ಲಾ ವಿಫಲರಾಗಿದ್ದರು. 7 ಎಸೆತಗಳಲ್ಲಿ 5 ರನ್ ಗಳಿಸಿ ನಿರ್ಗಮಿಸಿದ್ದ ಮಾಜಿ ನಾಯಕ ಆಜಂ ಅವರ ತಲೆದಂಡವಾಗ ಬೇಕೆಂಬ ಕೂಗು ಪಾಕಿಸ್ತಾನ ದಲ್ಲಿ ಜೋರಾಗಿದೆ. ಫರ್ಹಾನ್ ಮತ್ತು ಅಯೂಬ್ ಜೋಡಿ ತಂಡಕ್ಕೆ ಉತ್ತಮ ಆರಂಭ ನೀಡಿಲ್ಲ.

ವೇಗದ ಬೌಲರ್ ಶಾಹಿನ್ ಶಾ ಅಫ್ರಿದಿ ಅವರಿಗೆ ಲಯ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಬೌಲಿಂಗ್‌ನಲ್ಲಿ ಸ್ವಲ್ಪ ಗಮನ-ಸೆಳೆದವರು ಸಯೀಮ್ ಅಯೂಬ್. ಅವರು ಭಾರತದ ಅಗ್ರ ಆಟಗಾರರಿಗೆ ಸವಾಲಾಗಿದ್ದರು. ಪದೇ ಪದೇ ಬದಲಾವಣೆಗಳು ಪಾಕ್ ತಂಡದ ದುಃಸ್ಥಿತಿಗೆ ಕಾರಣವಾಗಿದೆ.

ಗುಂಪಿನಲ್ಲಿ ಕೊನೆಯ ಸ್ಥಾನದಲ್ಲಿರುವ ನಮೀಬಿಯಾ ಒಂದೂ ಪಂದ್ಯ ಗೆದಿಲ್ಲ. ತಂಡ ಪಾಕಿಸ್ತಾನಕ್ಕೆ ಎಷ್ಟರ ಮಟ್ಟಿಗೆ ಪೈಪೋಟಿ ಒಡ್ಡುತ್ತದೆ ಎಂಬುದು ಕುತೂಹಲದ ಸಂಗತಿ. ಎಡಗೈ ವೇಗಿ ಜೆ.ಜೆ.ಸ್ಮಟ್ಸ್ ಅವರು ಪ್ರಮುಖ ತಂಡಗಳ ಬ್ಯಾಟರ್‌ಗಳನ್ನು ಪರೀಕ್ಷೆಗೆ ಒಳಪಡಿಸಿದ್ದಾರೆ.

ಆರಂಭ ಆಟಗಾರ ಲಾರೆನ್ ಸ್ಟೀನ್‌ಕ್ಯಾಂಪ್ ಅವರು ಬ್ಯಾಟಿಂಗ್‌ನಲ್ಲಿ ಉಪಯುಕ್ತ ಆಟವಾಡಿದ್ದಾರೆ. ಮಧ್ಯಮ ಕ್ರಮಾಂಕದ ಆಟಗಾರರಾದ ಜಾನ್ ನಿಕೋಲಸ್ ಫ್ರೈಲಿಂಕ್ ಮತ್ತು ಜೇನ್ ನಿಕೋಲ್ ಲೋಫ್ಟಿ ಈಟನ್ ಕೂಡ ಕೆಲವು ಪಂದ್ಯಗಳಲ್ಲಿ ಗಮನಸೆಳೆದಿದ್ದಾರೆ.

ಸಹಜಾ ಯಮಲಪಲ್ಲಿ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ್ತಿ ಸಹಜಾ ಯಮಲಪಲ್ಲಿ ಅವರು ಇಲ್ಲಿ ಮಂಗಳವಾರ ಆರಂಭವಾದ ಕೆಪಿಇ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದ ಒಂದನೇ ಅಂಕಣದಲ್ಲಿ ನಡೆದ ಪಂದ್ಯದಲ್ಲಿ ಹೈದರಾಬಾದ್‌ನ ಸಹಜಾ ಅವರು ತನಗಿಂತ ಉನ್ನತ ಕ್ರಮಾಂಕದ ದಯೋನ್ ಬ್ಯಾಕ್ ಅವರನ್ನು 6-2, 1-6, 6-2ರಿಂದ ಹಿಮ್ಮೆಟ್ಟಿಸಿದರು. ದಯೋನ್ ವಿಶ್ವ ರ‍್ಯಾಂಕಿಂಗ್‌ನಲ್ಲಿ 306ನೇ ಸ್ಥಾನದಲ್ಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 416ನೇ ಸ್ಥಾನದಲ್ಲಿರುವ ಭಾರತದ ಆಟಗಾರ್ತಿ ಮೊದಲ ಸೆಟ್‌ನಲ್ಲಿ ಸುಲಭವಾಗಿ ಮೇಲುಗೈ ಸಾಧಿಸಿದರು. ಆದರೆ, ನಂತರದಲ್ಲಿ ತಿರುಗೇಟು ನೀಡಿದ ದಕ್ಷಿಣ ಕೊರಿಯಾದ ದಯೋನ್ ಸೆಟ್ ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು. ನಿರ್ಣಾಯಕ ಸೆಟ್‌ನಲ್ಲಿ ಚುರುಕಿನ ಆಟ ಪ್ರದರ್ಶಿಸಿದ ಸಹಜಾ ತವರಿನ ಪ್ರೇಕ್ಷಕರ ಮುಂದೆ ಗೆದ್ದು ಬೀಗಿದರು. ಈ ಪಂದ್ಯ ಎರಡು ಗಂಟೆ 18 ನಿಮಿಷ ನಡೆಯಿತು.

ವೈಲ್ಡ್ ಕಾರ್ಡ್ ಪ್ರವೇಶ ಪಡೆದ ಭಾರತದ ವೈಷ್ಣವಿ ಅಡ್ಕರ್ 6-1, 7-6 (6)ರಿಂದ ಸ್ವದೇಶದ ಶ್ರುತಿ ಅಹ್ಲಾವತ್ ಅವರನ್ನು ಸೋಲಿಸಿ ಮುಂದಿನ ಸುತ್ತಿಗೆ ಪ್ರವೇಶ ಪಡೆದರು. ಜಪಾನ್‌ನ ಮೈ ಹೊಂಟಾಮಾ 6-2, 6-1ರಿಂದ ಇಟಲಿಯ ಡಿಲೆಟ್ಟಾ ಚೆರುಬಿನಿ ವಿರುದ್ಧ ಗೆಲುವು ಸಾಧಿಸಿದರು.

ಮತ್ತೊಂದು ಸಿಂಗಲ್ಸ್ ಪಂದ್ಯದಲ್ಲಿ ರಷ್ಯಾದ ಎರಿಕಾ ಆಂಡ್ರೀವಾ 7-6 (12), 1-0 ಮುನ್ನಡೆಯಲ್ಲಿದ್ದಾಗ ಎದುರಾಳಿ ಅರ್ಜೆಂಟೀನಾದ ನಿಕೋಲ್ ಫೋಸಾ ಹುಯೆರ್ಗೊ ಅವರು ಸ್ಪರ್ಧೆಯಿಂದ ಹಿಂದೆ ಸರಿದರು.

ಭಾರತದ ಸಹಜಾ ಯಮಲಪಲ್ಲಿ